# ಕನ್ನಡ ಭಾಷಾ (ರಾಷ್ಟ್ರೀಯ ಶಿಕ್ಷಣ ನೀತಿ) ಪಠ್ಯ

# ನಿರ್ವಹಣಾ ಸೌರಭ – 3

## ಬಿ.ಬಿ.ಎ. ಮೂರು ಮತ್ತು ನಾಲ್ಕನೇ ಸೆಮಿಸ್ಟರ್


ಪ್ರಧಾನ ಸಂಪಾದಕರು

**ಡಾ. ಪ್ರಶಾಂತ ಜಿ. ನಾಯಕ**

ಸಂಪಾದಕರು

**ಡಾ. ಭಾಗ್ಯಲಕ್ಷ್ಮಿ ಎಸ್.**

**ಪ್ರೊ. ಆರ್. ವಸಂತಕುಮಾರ್**

**ಡಾ. ಪೂರ್ಣಿಮಾ ಎಸ್.**



ಬೆಂಗಳೂರು ನಗರ ವಿಶ್ವವಿದ್ಯಾಲಯ

BENGALURU CITY UNIVERSITY

ಆಗು ನೀ ಅನಿಕೇತನ

BE BOUNDLESS

**Kannada Bhasha Pathya Nirvahana Sourabha**

A prescribed NEP text book for B.B.A. Degree Course (Third and Fourth Semester)


Chief Editor :

**Dr. Prashanth G. Nayak**
(Professor of Kannada & Director,
Kannada Bharathi, Kuvempu University,
Shankaraghatta, B.R. Project, Shimoga Dist.)

Edited by **:**

**Dr. Bhagyalakshmi S.**

**Prof. Vasanthkumar R.**

**Dr. Poornima S.**



Published by

**Bengaluru City University**, Bengaluru



© : Bengaluru City University



First Print : 2022



ಪ್ರಧಾನ ಸಂಪಾದಕರು :

**ಡಾ. ಪ್ರಶಾಂತ ಜಿ. ನಾಯಕ**

ಸಲಹಾ ಸಮಿತಿ :

**ಡಾ. ಕೆ. ವೈ. ನಾರಾಯಣಸ್ವಾಮಿ**

**ಡಾ. ಎಂ. ಎಸ್. ಆಶಾದೇವಿ**

ಸಂಯೋಜಕರು :

**ಡಾ. ಬೆಳಕೆರೆ ಲಿಂಗರಾಯ್ಯ**



ಪ್ರಕಾಶಕರು :

**ಬೆಂಗಳೂರು ನಗರ ವಿಶ್ವವಿದ್ಯಾಲಯ**

# ಕುಲಪತಿಗಳ ಆಶಯ ನುಡಿ

ಬೆಂಗಳೂರು ನಗರ ವಿಶ್ವವಿದ್ಯಾಲಯ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅನನ್ಯತೆಯನ್ನು ಯುವಜನತೆಗೆ ಮನವರಿಕೆ ಮಾಡಿಕೊಡಲು ಸನ್ನದ್ಧವಾಗಿದೆ. ಕನ್ನಡ ಭಾಷೆಯನ್ನು ಸರ್ವಾಂಗೀಣವಾಗಿ ಆಧುನಿಕ ಬದುಕಿನ ಅಗತ್ಯಕ್ಕೆ ತಕ್ಕಂತೆ ಅಭಿವೃದ್ಧಿಪಡಿಸಬೇಕಾದ ಹೊಣೆಯನ್ನು ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳು ಹೊರಬೇಕಿದೆ. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನದ ಗರಿಮೆ ಸಿಕ್ಕಿರುವುದು; ಕನ್ನಡ ಭಾಷೆಯ ಅಂತಸ್ಥವಾಗಿರುವ ಜ್ಞಾನಕ್ಕೆ ದೊರೆತಿರುವ ಮನ್ನಣೆಯಾಗಿದೆ. ಕನ್ನಡ ಭಾಷೆಯಲ್ಲಿ ಉಪಲಬ್ಧವಿರುವ ಶ್ರೇಷ್ಠ ಸಾಹಿತ್ಯ ಕೃತಿಗಳು, ಅಪರೂಪದ ಶಾಸನಗಳು, ಜಾನಪದ ವಿವಿಧ ವಾಙ್ಮಯಗಳು ಮತ್ತು ಶಾಸ್ತ್ರ ಗ್ರಂಥಗಳು ಕನ್ನಡವನ್ನು ಜ್ಞಾನದ ಭಾಷೆಯಾಗಿ ರೂಪಿಸಲು ಸಹಾಯ ಮಾಡಿವೆ. ಕಳೆದ ಎರಡು ದಶಕಗಳಿಂದ ಕನ್ನಡಭಾಷೆಯನ್ನು ತಂತ್ರಜ್ಞಾನದ ಭಾಷೆಯಾಗಿಸುವ ಕಾರ್ಯವೂ ಯಶಸ್ವಿಯಾಗಿ ನಡೆಯುತ್ತಿದೆ. ಬದುಕಿನ ಎಲ್ಲಾ ವಲಯಗಳ ಅವಶ್ಯಕತೆಗೆ ತಕ್ಕಂತೆ ಕನ್ನಡವನ್ನು ಅಂತರಾಷ್ಟ್ರೀಯ ವ್ಯವಹಾರದ ಭಾಷೆಯಾಗಿ ಆಧುನಿಕ ವಿಜ್ಞಾನದ ಸಂಶೋಧನೆಗಳನ್ನು ನಿರ್ವಹಿಸುವ ವಿಜ್ಞಾನಭಾಷೆಯಾಗಿ ವಿಸ್ತರಿಸಲು ನಾವು ಬದ್ಧತೆಯಿಂದ ಕೆಲಸಮಾಡುವ ಅಗತ್ಯವಿದೆ. ಕುವೆಂಪು ಅವರ ಮಾತಿನಲ್ಲಿ ಹೇಳುವುದಾದರೆ 'ಕನ್ನಡ ಭಾವೋಪಯೋಗಿ ಭಾಷೆಯಾದರೆ ಮಾತ್ರ ಸಾಲದು ಅದು ಲೋಕೋಪಯೋಗಿ ಭಾಷೆಯಾಗಿ ಬಳಸುವ ಅವಶ್ಯಕತೆ ಇದೆ. ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳ ಜೊತೆಗೆ ಸೆಣೆಸುತ್ತಲೆ ಕನ್ನಡಭಾಷೆಯು ಕನ್ನಡಿಗರ ಆತ್ಮಸಂಗಾತ ಭಾಷೆಯಾಗಿ ಬಾಳಬೇಕಿದೆ'.

ಕರ್ನಾಟಕ ರಾಜ್ಯವು ದೇಶದಲ್ಲಿ ಹೊಸಶಿಕ್ಷಣ ನೀತಿಯನ್ನು ಮೊತ್ತ ಮೊದಲಿಗೆ ಜಾರಿಗೆ ತಂದಿರುವ ರಾಜ್ಯವಾಗಿದೆ. ಪ್ರಸ್ತುತ ಕರ್ನಾಟಕ ಸರ್ಕಾರವು 2020–2021ರ ವರ್ಷವನ್ನು ಕನ್ನಡ ಕಾಯಕವರ್ಷವೆಂದು ಘೋಷಿಸಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಪ್ರಸರಣಕ್ಕೆ ಅಗತ್ಯವಿರುವ ಕಾರ್ಯಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದೆ. ಕಳೆದ ಎಪ್ಪತ್ತೈದು ವರ್ಷಗಳಿಂದಲೂ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು ನಡೆಯುತ್ತಾ ಬಂದಿದ್ದರೂ ಕಲಿಕಾಪ್ರಕ್ರಿಯೆ ವಿದ್ಯಾರ್ಥಿ ಸ್ನೇಹಿಯಾಗಿರಲಿಲ್ಲ ಎಂಬ ಆಪಾದನೆ ಇತ್ತು. ಈಗ ಅನುಷ್ಠಾನಗೊಳ್ಳುತ್ತಿರುವ ಹೊಸ ಶಿಕ್ಷಣ ನೀತಿಯು ಈವರೆಗೆ ಕಲಿಕೆಯಲ್ಲಿ

ಇದ್ದ ಜಡತ್ವವನ್ನು ತೆಗೆದು ಹಾಕಿದೆ. ವಿದ್ಯಾರ್ಥಿಗಳಿಗೆ ತಮ್ಮ ಇಷ್ಟದ ವಿಷಯಗಳನ್ನು ವಿನ್ಯಾಸಗೊಳಿಸಿಕೊಳ್ಳುವ ಅವಕಾಶ ಮತ್ತು ಕಲಿಕಾ ಸ್ವಾತಂತ್ರ್ಯವನ್ನು ಕಲ್ಪಿಸಿದೆ. ಆಧುನಿಕ ಜ್ಞಾನವನ್ನು ಮತ್ತು ತಂತ್ರಜ್ಞಾನವನ್ನು ಪ್ರಾದೇಶಿಕ ಭಾಷೆಗಳಲ್ಲಿ ಕಲಿಸುವುದರ ಮೂಲಕ ಪ್ರಕ್ರಿಯಾತ್ಮಕವಾದ ಶೈಕ್ಷಣಿಕ ವಾತಾವರಣವನ್ನು ನಿರ್ಮಿಸಲು ಶಿಕ್ಷಣ ನೀತಿ ಮುಂದಾಗಿರುವುದು ಸ್ವಾಗತಾರ್ಹ.

ಈ ಹಿನ್ನೆಲೆಯಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾಲಯ ರಾಜ್ಯ ಉನ್ನತ ಶಿಕ್ಷಣ ಪರಿಷತ್ ನೀಡಿರುವ ಮಾದರಿ ಪಠ್ಯವಿನ್ಯಾಸವನ್ನು ಅನುಸರಿಸಿ ಕನ್ನಡ ಭಾಷೆಯ ಪಠ್ಯಪುಸ್ತಕಗಳನ್ನು ರೂಪಿಸಿದೆ. ಪಠ್ಯಗಳು ವಿದ್ಯಾರ್ಥಿಸ್ನೇಹಿಯಾಗಿ ಸಂವಾದ ಸ್ವರೂಪದಲ್ಲಿವೆ ಹಾಗೂ ಕನ್ನಡಭಾಷೆಯನ್ನು ಕಲಿಯುವ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೂ ಮಾರ್ಗದರ್ಶಿಯಾಗಿವೆ. ಈ ಪಠ್ಯಗಳನ್ನು ಪ್ರೀತಿಯಿಂದ ರೂಪಿಸಿದ ಕನ್ನಡ ಅಧ್ಯಯನ ಮಂಡಳಿಯ ಸದಸ್ಯರಿಗೂ, ಎಲ್ಲಾ ಸಂಪಾದಕರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಪ್ರೊ. ಲಿಂಗರಾಜಗಾಂಧಿ**
ಕುಲಪತಿಗಳು
ಬೆಂಗಳೂರು ನಗರ ವಿಶ್ವವಿದ್ಯಾಲಯ

# ಪ್ರಧಾನ ಸಂಪಾದಕರ ಮಾತು

ಆಧುನಿಕತೆ ಎನ್ನುವ ಮಾತು ಎಲ್ಲವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಂತೆ ಬದಲಾವಣೆ ಎನ್ನುವುದನ್ನು ಬಹುಪಾಲು ಎಲ್ಲಾ ನೆಲೆಯಲ್ಲಿಯೂ ಅನಿವಾರ್ಯ ವೆನ್ನುವಂತಾಗಿಸುತ್ತಿರುವುದು ನಮ್ಮ ನಡುವಿನ ಸರಳವೂ ಸಹಜವೂ ಆದ ಅರಿವಿನಂತಿದೆ. ಸೃಜನಶೀಲತೆ ಮತ್ತು ಕ್ರಿಯಾಶೀಲತೆಗಳ ಅರ್ಥವೂ ಹೀಗೆ ಹೊಸತನ್ನು ನಿರಂತರವಾಗಿ ಕೇಂದ್ರೀಕರಿಸಿ ಕೊಂಡಿರುತ್ತದೆ. ಇದು ಕಲಿಕೆಯ ಹೊತ್ತಿಗೂ ಪರಸ್ಪರ ಕಲಿಯುವವರ ಮತ್ತು ಕಲಿಸುವವರ ನಡುವಿನ ಅನುಸಂಧಾನದ ಪ್ರಕ್ರಿಯೆಯೂ ಹೌದು. ಇದರ ಜೊತೆಗೆ ನಿರಂತರವಾದ ಎಚ್ಚರವೂ ಅತ್ಯಗತ್ಯ. ಕನ್ನಡ ಭಾಷೆ ಮತ್ತು ಸಾಹಿತ್ಯವೆನ್ನುವುದು ಹೀಗೆ ಸದಾ ತನ್ನನ್ನು ಸವಾಲಿಗೆ ತೆರೆದುಕೊಂಡಂತೆ ಹೊಸತನಕ್ಕೆ ನಿರಂತರವಾಗಿ ಎದುರಾಗುತ್ತಲೇ ಬಂದಿರುವುದು ಗಮನಾರ್ಹವಾದುದು.

ಹೊಸ ಶಿಕ್ಷಣ ನೀತಿ ನಮ್ಮ ಉನ್ನತ ಶಿಕ್ಷಣದ ಹಲವು ಬಗೆಯ ಬದಲಾವಣೆಗೆ ಕಾರಣವಾಗುತ್ತಿರುವ ಸಂದರ್ಭದಲ್ಲಿ ಪದವಿಯ ವಿದ್ಯಾರ್ಥಿಗಳಿಗೆ ಭಾಷೆ ಮತ್ತು ಸಾಹಿತ್ಯದ ಪಠ್ಯವನ್ನು ವಿಶಿಷ್ಟವಾಗಿ ರೂಪಿಸುವ ಜವಾಬ್ದಾರಿಯೊಂದು ಕನ್ನಡತನವನ್ನು ನಮ್ಮತನ ಎಂದುಕೊಂಡ ನಮ್ಮೆಲ್ಲರ ಮೇಲಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಕನ್ನಡ ಅಧ್ಯಾಪಕ ಬಂಧುಗಳು ಮೊದಲ ದಿನದಿಂದಲೂ ಅತ್ಯಂತ ಉತ್ಸಾಹ, ಶ್ರಮ ಮತ್ತು ಬದ್ಧತೆಯಿಂದ ಕಾರ್ಯ ನಿರ್ವಹಿಸಿದ್ದಾರೆ. ಅದರ ಫಲಿತವಾಗಿ ಉತ್ತಮ ಪಠ್ಯಗಳು ವಿದ್ಯಾರ್ಥಿಗಳ ಕೈಸೇರುವಂತಾಗುತ್ತಿದೆ. ಇದಕ್ಕಾಗಿ ಬೆಂಗಳೂರು ನಗರ ವಿಶ್ವವಿದ್ಯಾಲಯದ ಅಧ್ಯಯನ ಮಂಡಳಿಯ ಸದಸ್ಯರಿಗೆ ಹೃದಯ ಪೂರ್ವಕ ಅಭಿನಂದನೆಗಳು. ಪಠ್ಯಗಳನ್ನು ರೂಪಿಸುವಲ್ಲಿ ಶ್ರಮ ವಹಿಸಿದ ಎಲ್ಲಾ ಪಠ್ಯಗಳ ಸಂಪಾದಕರಿಗೂ ಆತ್ಮೀಯ ಕೃತಜ್ಞತೆಗಳು. ನಿರಂತರವಾಗಿ ಸಂಯೋಜನೆಯ ಕಾರ್ಯ ನಿರ್ವಹಿಸಿದ ಅತ್ಮೀಯರಾದ ಡಾ. ಲಿಂಗರಾಜಯ್ಯ ನವರ ಶ್ರಮವನ್ನು ಸ್ಮರಿಸಲೇ ಬೇಕು.

ಅಧ್ಯಯನ ಮಂಡಳಿಯ ಅಧ್ಯಕ್ಷನನ್ನಾಗಿ ನನಗೆ ಜವಾಬ್ದಾರಿ ನೀಡಿದ ಬೆಂಗಳೂರು ನಗರ ವಿಶ್ವವಿದ್ಯಾಲಯದ ಸನ್ಮಾನ್ಯ ಕುಲಪತಿಗಳಾದ ಪ್ರೊ. ಲಿಂಗರಾಜ ಗಾಂಧಿ ಅವರಿಗೆ ಕೃತಜ್ಞತೆಗಳು. ಪ್ರತೀ ಹಂತದಲ್ಲಿಯೂ

ನಮ್ಮೊಂದಿಗಿದ್ದು ಸಹಕಾರ ನೀಡಿದ ಪ್ರೊ. ರಮೇಶ್. ಬಿ ಮಾನ್ಯ ಕುಲ ಸಚಿವರು ಪರಿಕ್ಷಾಂಗ ಇವರಿಗೆ ನಮ್ಮ ಧನ್ಯವಾದಗಳು ಮತ್ತು ಶ್ರೀಯುತ ಶ್ರೀಧರ್ ಸಿ.ಎಸ್ ಮಾನ್ಯ ಕುಲ ಸಚಿವರು ಇವರಿಗೆ ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಡಾ. ಪ್ರಶಾಂತ ಜಿ. ನಾಯಕ**
ಪ್ರಾಧ್ಯಾಪಕರು

# ಪರಿವಿಡಿ

**ಘಟಕ 1. ಸಮಾಜ :**

1. ನಲವತ್ತೇಳರ ಸ್ವಾತಂತ್ರ್ಯ – ಡಾ. ಸಿದ್ಧಲಿಂಗಯ್ಯ 002
2. ಪೂರ್ಣಾಹುತಿ – ವಸುಧೇಂದ್ರ 004
3. ನಮ್ಮೂರ ನಾಯಕರು – ಮಿರ್ಜಿ ಅಣ್ಣಾರಾಯ 029
4. (ಓದುಪಠ್ಯ) ಸಾಮಾಜಿಕ ಬದ್ಧತೆ – ಗುರುರಾಜ ಕರ್ಜಗಿ 047

**ಘಟಕ 2. ವೈಚಾರಿಕತೆ :**

1. ಭಗವದ್ಗೀತೆ ಹಾಗೂ ಅಪರಾಧ ಮತ್ತು ಶಿಕ್ಷೆ – ಎಸ್. ವೆಂಕಟರಾಂ 051
2. ಯಾವ ಕಾಲದ ಶಾಸ್ತ್ರವೇನು ಹೇಳಿದರೇನು? –ಕುವೆಂಪು 061
3. ಬೆಂಕಿ ಮಳೆ – ಬಾನು ಮುಷ್ತಾಕ 062
4. (ಓದುಪಠ್ಯ) ದೇವರು ಬೇಡ, ಮಾನವೀಯತೆ ಬೇಕು – ವಸುದೇವ ಭೂಪಾಲಂ 084

**ಘಟಕ 3. ಜೀವನ ಮತ್ತು ಕಲೆ :**

1. ಬಿಡುಗಡೆ – ವೀಣಾಶಾಂತೇಶ್ವರ 092
2. ಬೆಳಗಾಗ ನಾನೆದ್ದು – ಜಾನಪದ 104
3. ಮಸಾಲೆ ದೋಸೆ – ಪು.ತಿ.ನ. 106
4. (ಓದುಪಠ್ಯ) ಮುತ್ತುಗಳನ್ನಾಯ್ದುಕೊಡಲೇ? – ಶಾಂತರಸ 116

**ಘಟಕ 4. ಸಂಕೀರ್ಣ :**

1. ವ್ಯವಹಾರ ಮತ್ತು ನೈತಿಕತೆ – ಡಾ. ಜಿ. ಎನ್. ಮಲ್ಲಿಕಾರ್ಜುನಪ್ಪ 127
2. ಕತ್ತೆ ಆದಳು ಅತ್ತೆ – ಜಾನಪದ 132
3. ವಿಕ್ಕಿಪೀಡಿಯ ಎಂದರೇನು? – ಯು. ಬಿ. ಪವನಜ 135
4. (ಓದುಪಠ್ಯ) ಅಯ್ಯೋ ಗಣೇಶ – ಎಚ್. ನರಸಿಂಹಯ್ಯ 138

# ಸಮಾಜ

## ಆಶಯ :

## ಕೋರಿಕೆ (ಕ್ರಿ.ಶ.ಸು. 1930)

– ಈಶ್ವರ ಸಣಕಲ್ಲ

ಜಗವೆಲ್ಲ ನಗುತಿರಲಿ,
ಜಗದಳುವು ನನಗಿರಲಿ,
ನಾನಳಲು ಜಗವೆನ್ನನೆತ್ತಿಕೊಳದೇ?
ನಾ ನಕ್ಕು ಜಗವಳಲು ನೋಡಬಹುದೇ?

ತೆರವಾಗಿ ನನ್ನೆದೆಯು,
ಧರೆಯೆದೆಯು ಉಕ್ಕಿರಲಿ,
ಧರೆಯೊಳಗೆ ತೇಲಿಸುವೆನೆನ್ನೆದೆಯನು।
ಧರೆ ಬತ್ತಿ, ನನ್ನೆದೆಯು ಉಕ್ಕಲೇನು?

ಪೊಡವಿಯೈಸಿರಿವಡೆದು,
ಬಡತನವು ನನಗಿರಲಿ,
ಕೈಯೊಡ್ಡೆ, ಪೊಡವಿ ನನಗಿಕ್ಕದೇನು।
ಮೈಯಳಿಯೆ ಪೊಡವಿ, ಹಾ! ಮಾಳ್ಪುದೇನು?

ವಿಶ್ವವನು ತುಂಬಿರುವ
ಈಶ್ವರನೆ ಅಳತೊಡಗೆ,
ಸೈತಿಡಲು, ಸೈಪಿಡಲು ಬರುವನಾವಂ?
'ಹೇ ತಂದೆ!' ಎನಲೆನನವನೆ ಕಾವಂ!

■

# ನಲವತ್ತೇಳರ ಸ್ವಾತಂತ್ರ್ಯ

– ಡಾ. ಸಿದ್ಧಲಿಂಗಯ್ಯ

ಯಾರಿಗೆ ಬಂತು ಎಲ್ಲಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ
ಟಾಟಾ ಬಿರ್ಲಾ ಜೋಬಿಗೆ ಬಂತು
ಕೋಟ್ಯಾಧೀಶನ ಕೋಣೆಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ

ಬಡವರ ಮನೆಗೆ ಬರಲಿಲ್ಲ
ಬೆಳಕಿನ ಕಿರಣ ತರಲಿಲ್ಲ
ಗೋಳಿನ ಕಡಲನು ಬತ್ತಿಸಲಿಲ್ಲ
ಸಮತೆಯ ಹೂವನು ಅರಳಿಸಲಿಲ್ಲ
ನಲವತ್ತೇಳರ ಸ್ವಾತಂತ್ರ್ಯ

ಹಣವಂತರು ಕೈ ಸನ್ನೆ ಮಾಡಿದರೆ
ಕತ್ತಲೆಯಲ್ಲಿ ಬೆತ್ತಲೆಯಾಯಿತು
ಯಾರು ಕಾಣದ ಸ್ವಾತಂತ್ರ್ಯ
ನಲವತ್ತೇಳರ ಸ್ವಾತಂತ್ರ್ಯ

ಸಾವಿರಾರು ಜನ ಗೋರಿಯಾದರು
ಲಕ್ಷ ಲಕ್ಷ ಜನ ಗಲ್ಲಿಗೇರಿದರು
ರೈತ ಕಾರ್ಮಿಕರು ರಕ್ತವ ಕೊಟ್ಟರು
ಯಾರಿಗೆ ಬಂತು ಸ್ವಾತಂತ್ರ್ಯ
ನಲವತ್ತೇಳರ ಸ್ವಾತಂತ್ರ್ಯ

ಪೋಲೀಸರ ಬೂಟಿಗೆ ಬಂತು
ಮಾಲೀಕರ ಚಾಟಿಗೆ ಬಂತು
ಬಂದೂಕದ ಗುಂಡಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ

ಪಾರ್ಲಿಮೆಂಟಿನ ಕುರ್ಚಿಯ ಮೇಲೆ
ವರ್ಷಗಟ್ಟಲೆ ಚರ್ಚೆಗೆ ಕೂತು
ಬಡವರ ಬೆವರು ರಕ್ತವ ಕುಡಿದು
ಏಳಲೆ ಇಲ್ಲ ಸ್ವಾತಂತ್ರ್ಯ
ನಲವತ್ತೇಳರ ಸ್ವಾತಂತ್ರ್ಯ

ಯಾರಿಗೆ ಬಂತು ಎಲ್ಲಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ

■

# ಪೂರ್ಣಾಹುತಿ

**– ವಸುಧೇಂದ್ರ**

ಬೆಳಗ್ಗೆ ಎಚ್ಚರವಾಗಿ ಕಣ್ಣು ತೆರೆದ ತಕ್ಷಣ ಅಂಕಿತಾ ಮಾಡುವ ಮೊದಲ ಕೆಲಸವೆಂದರೆ, ಪಕ್ಕದಲ್ಲಿಟ್ಟಿದ್ದ ಮೊಬೈಲನ್ನು ಕೈಗೆತ್ತಿಕೊಂಡು, ಹಿಂದಿನ ರಾತ್ರಿ ಮಲಗುವುದಕ್ಕೆ ಮುಂಚೆ ಫೇಸ್‌ಬುಕ್ಕಿನಲ್ಲಿ ಹಾಕಿದ ಸ್ಟೇಟಸ್ ಅಥವಾ ಫೋಟೋವನ್ನು ಎಷ್ಟು ಜನ ಲೈಕ್ ಮಾಡಿದ್ದಾರೆ, ಎಷ್ಟು ಜನ ಕಾಮೆಂಟ್ ಹಾಕಿದ್ದಾರೆ ಎಂದು ನೋಡಿ ಪುಳಕಗೊಳ್ಳುವುದು. ಇತರ ಸ್ನೇಹಿತರು ಯಾವ ಹೊಸದಾದ ಫೋಟೋ ಹಾಕಿದ್ದಾರೆ, ಯಾವ ಸ್ಟೇಟಸ್ ಹಾಕಿದ್ದಾರೆ ಎಂದು ಗಮನಿಸಿ, ಇಷ್ಟವಾದ ಒಂದೆರಡಕ್ಕೆ ಲೈಕ್ ಒತ್ತಿ, ತನಗಿಂತಲೂ ಹೆಚ್ಚು ಲೈಕ್‌ಗಳನ್ನು ಪಡೆದ ಗೆಳತಿಯರ ಬಗ್ಗೆ ಅಸೂಯೆಪಟ್ಟು, 'ಇದಕ್ಕಿಂತಲೂ ಹೆಚ್ಚಿನ ಲೈಕ್ ಬರುವಂತಹ ಫೋಟೋ ಈವೊತ್ತು ಹಾಕುತ್ತೇನೆ' ಎಂದು ನಿರ್ಧರಿಸುತ್ತಾಳೆ. ಹೊಸತಾಗಿ ಯಾರಾದರೂ ಫ್ರೆಂಡ್ ರಿಕ್ವೆಸ್ಟ್ ಕಳುಹಿಸಿದ್ದರೆ, ಅವರ ವೈಯಕ್ತಿಕ ವಿವರಗಳನ್ನು ಜಾಲಾಡಿ, ಯಾವ ಗೆಳೆಯರು ಅವರ ಮ್ಯೂಚುಯಲ್ ಫ್ರೆಂಡ್‌ಗಳಾಗಿದ್ದಾರೆ ಎಂದು ನೋಡಿ, ಅನಂತರ ಸ್ನೇಹಿತರಾಗಿ ಒಪ್ಪಿಕೊಳ್ಳುತ್ತಾಳೆ. ಹುಡುಗರನ್ನು ಅಷ್ಟು ಸುಲಭವಾಗಿ ಒಪ್ಪಿಕೊಳ್ಳುವುದಿಲ್ಲ. ಅವರ ಒಂದೆರಡು ಫೋಟೋಗಳನ್ನು ನೋಡಿ 'ಸ್ಮಾರ್ಟ್' ಅನ್ನಿಸಿದರೆ ಮಾತ್ರ ಗೆಳೆಯುನಾಗಿ ಸ್ವೀಕರಿಸುತ್ತಾಳೆ. ಹುಬ್ಬುಗಳ ಮಧ್ಯದಲ್ಲಿ ಕುಂಕುಮವಿಟ್ಟುಕೊಂಡಂತಹ, ಇಷ್ಟಗಲ ಚೌಕಟ್ಟಿನ ಚಸ್ಮಾ ಧರಿಸಿದಂತಹ, ಈಗಾಗಲೇ ಒಂದಿಷ್ಟು ಬೊಜ್ಜು ಗಳಿಸಿಕೊಂಡುಬಿಟ್ಟಿರುವಂತಹ, ಆಧುನಿಕವೆನ್ನಿಸದ ಉಡುಗೆ ತೊಟ್ಟು 'ಔಟ್‌ಡೇಟೆಡ್' ಹುಡುಗರನ್ನು ಖಂಡಿತವಾಗಿಯೂ ಗೆಳೆಯರಾಗಿ ಸ್ವೀಕರಿಸುವುದಿಲ್ಲ. ಸ್ವಲ್ಪ ವಯಸ್ಸಾದ ಗಂಡಸರನ್ನಂತೂ ತನ್ನ ಸ್ನೇಹವಲಯದಿಂದ ದೂರವಿಡುತ್ತಾಳೆ. ಗೆಳತಿಯರ ವಿಷಯದಲ್ಲಿ ಅಷ್ಟೊಂದು ಕಟ್ಟುನಿಟ್ಟು ನಿಯಮವಿಲ್ಲ. ತನ್ನ ಗೆಳತಿಯರ ಆಂಟಿಗಳೂ ಒಂದಿಬ್ಬರು ಅವಳ ಸ್ನೇಹವಲಯದಲ್ಲಿದ್ದಾರೆ. ಮೊದಮೊದಲು ಅಪರಿಚಿತ ವ್ಯಕ್ತಿಗಳ ಸ್ನೇಹಾಹ್ವಾನವನ್ನು ಸ್ವೀಕರಿಸಿಲು ಹಿಂಜರಿಯುತ್ತಿದ್ದಳು. ಈಗ ಅಷ್ಟೆಲ್ಲಾ ಹೆದರಿಕೊಳ್ಳುವ ಅಗತ್ಯವಿಲ್ಲ, ಅಭ್ಯಾಸವಾಗಿದೆ. ಆದರೆ ಯಾರಾದರೂ ಅತಿರೇಕಕ್ಕೆ ವರ್ತಿಸಲು ಶುರು ಮಾಡಿ, ಅಶ್ಲೀಲ ಕಾಮೆಂಟು, ಫೋಟೋಗಳನ್ನು ಹಾಕಿದರೆ, ಅವರನ್ನು ಮುಲಾಜಿಲ್ಲದೆ ಸ್ನೇಹಿತರ ಪಟ್ಟಿಯಿಂದ

ಕಳಚಿ ಬಿಡುತ್ತಾಳೆ. ಎಲ್ಲಾ ಸ್ನೇಹಿತರಿಗೆ 'ಗುಡ್ ಮಾರ್ನಿಂಗ್' ಅಂತ ಹೇಳಿಯೇ ಹಾಸಿಗೆಯಿಂದ ಮೇಲಕ್ಕೆ ಏಳುತ್ತಾಳೆ. ಇವೆಲ್ಲಾ ಮುಗಿಯುವಷ್ಟರಲ್ಲಿ ಮುಕ್ಕಾಲು ಗಂಟೆಯಾದರೂ ಆಗಿರುತ್ತದೆ. ಅವರಮ್ಮ ಕುಸುಮಾ ಈ ವೇಳೆಗಾಗಲೇ ಹತ್ತಾರು ಬಾರಿ "ಅಂಕಿ, ಎದ್ದೇಳೆ! ಸೂರ್ಯ ನಡುನೆತ್ತಿಗೆ ಬಂದಾಯ್ತು. ನಿಂಗೇ ಆಫೀಸಿಗೆ ತಡ ಆಗ್ತದೆ ನೋಡು" ಅಂಥ ಸಿಟ್ಟಿನಿಂದ ಹೇಳಿಯಾಗಿರುತ್ತದೆ. ಅಲ್ಲಿಗೇ ಸಿಟ್ಟು ನಿಲ್ಲುವುದಿಲ್ಲ. "ಕರಾಗ್ರೇ ವಸತೇ ಲಕ್ಷ್ಮಿ, ಕರಮಧ್ಯೆ ಸರಸ್ವತಿ, ಕರಮೂಲೇ ಸ್ಥಿತೇ ಗೌರಿ ಅಂತ ಎದ್ದ ತಕ್ಷಣ ಅಂಗೈ ನೋಡಿಕೊಂಡು ಹೇಳ್ಬೇಕು. ನೀನು ನೋಡಿದ್ರೆ ಕರಾಗ್ರ, ಕರಮಧ್ಯ, ಕರಮೂಲೆನಾಗೆ ಮೊಬೈಲ್ ಇಟ್ಟುಗೊಂಡಿರ್ತಿ" ಅಂತ ಬೈಯುತ್ತಾಳೆ. ಕುಸುಮಾ ಅತ್ಯಂತ ದ್ವೇಷಿಸುವುದು ಮೊಬೈಲ್ ಎನ್ನುವುದು ಇಬ್ಬರಿಗೂ ಗೊತ್ತು.

ಕುಸುಮಾ ಮೊಬೈಲ್ ಬಳಸುವುದಿಲ್ಲ. "ನಮ್ಮಪ್ಪ-ಅಮ್ಮ ಯಾವತ್ತಾದ್ರೂ ಮೊಬೈಲ್ ಫೋನ್ ಇಟ್ಟುಗೊಂಡಿದ್ರಾ? ಅದಿಲ್ಲದೇನೆ ಒಳ್ಳೆ ಬದುಕು ಮಾಡಿಲ್ಲೇನು? ಈಗಿನವರದೆಲ್ಲಾ ಅತಿರೇಕ. ಬೇಡದ್ದನ್ನೆಲ್ಲಾ ಕೊಂಡುಕೊಳ್ಳೋ ಚಟ" ಅಂತ ವಟಗುಟ್ಟುತ್ತಾಳೆ. ಮನೆಯಲ್ಲಿ ಅವಳ ಗಂಡ ಬದುಕಿದ್ದಾಗ ಕೊಂಡ ಲ್ಯಾಂಡ್‌ಲೈನ್ ಮಾತ್ರ ಅವಶ್ಯಕತೆ ಬಿದ್ದಾಗ ಬಳಸುತ್ತಾಳೆ. ಅವಳಿಗೆ ಆಧುನಿಕವಾದ ಸಂಗತಿಗಳ ಬಗ್ಗೆ ಅಸಡ್ಡೆ. ಈಗಲೂ ಲಕ್ಷಣವಾಗಿ ಬಟ್ಟೆ ಒಗೆಯುತ್ತಾಳೆ. ವಾಷಿಂಗ್ ಮಷಿನ್ ಕೊಂಡಿಲ್ಲ. ಈ ಆಧುನಿಕ ಮನೆಯಲ್ಲಿ ಒರಳು-ಕಲ್ಲು ಇಲ್ಲ ಎಂಬ ಕಾರಣಕ್ಕಾಗಿ ರುಬ್ಬುವ ಯಂತ್ರ ಕೊಂಡಿದ್ದಾಳೆಯೇ ಹೊರತು, ಅದೇನಾದರೂ ಇದ್ದಿದ್ದರೆ ಲಕ್ಷಣವಾಗಿ ದೋಸೆ ಹಿಟ್ಟು ರುಬ್ಬುತ್ತಿದ್ದಳು. ಎಷ್ಟು ಸಾಧ್ಯವೋ ಅಷ್ಟು ಯಂತ್ರಗಳಿಂದ ಕಳಚಿಕೊಳ್ಳುವ ಹೋರಾಟ ಮಾಡುತ್ತಾಳೆ. ಅಂಕಿತಾ ಮೈಗಳ್ಳಿ, ಎಷ್ಟೇ ಅವಲತ್ತುಕೊಂಡರೂ ಕೆಲಸ ಮಾಡುವುದಿಲ್ಲ. ಒಮ್ಮೊಮ್ಮೆ ಕುಸುಮಾ ರಾಶಿ ಬಟ್ಟೆ ಒಗೆದು, ಮೈ ಕೈ ನೋವಾದಾಗ ಯಾರಿಗೆ ಹೇಳಿಕೊಳ್ಳಬೇಕೋ ತೋಚದೆ ಮುಸುಕೆಳೆದು ಮಲಗಿ ಬಿಡುತ್ತಾಳೆ.

ಅಂಕಿತಾಗೆ ಅಮ್ಮನ ಸ್ವಭಾವ ಅರ್ಥವಾಗುವುದಿಲ್ಲ. ತನ್ನ ಮೇಲಿನ ಸಿಟ್ಟನ್ನು ತೋರಿಸಿಕೊಳ್ಳಲಿಕ್ಕಾಗಿಯೇ ಆಕೆ ಮೊಬೈಲ್ ಕೊಂಡಿಲ್ಲವೆಂಬ ಅನುಮಾನ ಅವಳಿಗಿದೆ. ಯಾವಾಗಲೋ ಒಮ್ಮೆ ಕನ್ನಡ ದಿನಪತ್ರಿಕೆಯಲ್ಲಿ ಬಂದ 'ಮೊಬೈಲ್‌ನಿಂದಾಗಿ ಗುಬ್ಬಿಗಳು ಮಾಯವಾದವೆ?' ಎಂಬ ಲೇಖನವನ್ನು

ಮಗಳಿಗೆ ತೋರಿಸಿ, "ಚಿಕ್ಕಂದಿನಲ್ಲಿ ನಮ್ಮ ಮನೆ ಮುಂದೆ ನೂರಾರು ಗುಬ್ಬಚ್ಚಿ ಬಂದು ಕೂಡುತ್ತಿದ್ದವು ಗೊತ್ತಾ? ನಿಮ್ಮಂತಹವರ ಮೊಬೈಲ್ ಹುಚ್ಚಿನಿಂದಾಗಿ ಎಂಥಾ ಅನಾಹುತ ಆಗಿದೆ ನೋಡು" ಎಂದು ಅತ್ಯಂತ ಬೇಸರದ ಧ್ವನಿಯಲ್ಲಿ ಹೇಳಿದ್ದಳು. ಎಲ್ಲಾ ಗುಬ್ಬಿಗಳು ಮಾಯವಾಗುವುದಕ್ಕೆ ತಾನೇ ಕಾರಣವೆನ್ನುವಂತಹ ಧ್ವನಿಯ ಅವಳ ಮಾತು ಅಂಕಿತಾಗೆ ತಟ್ಟಿತ್ತು. "ಇಷ್ಟು ದಿನ ನಿಂಗೆ ಯಾವತ್ತೂ ಗುಬ್ಬಿಗಳು ಕಾಣಿಸ್ತಿಲ್ಲ ಅಂತ ನೆನಪಾಗಿರ್ಲಿಲ್ಲ. ಈಗ ಈ ಲೇಖನ ನೋಡಿದ ತಕ್ಷಣ ಗುಬ್ಬಿಗಳ ಮೇಲೆ ಪ್ರೀತಿ ಉಕ್ಕಿ ಬರ್ತದೆ ನೋಡು! ಈವತ್ತು ಡೈನೋಸರ್‌ಗಳೂ ಈ ಭೂಮಿ ಮೇಲೆ ಇಲ್ಲ. ಆದರೆ ಬದುಕು ನಡೀತಾ ಅದಲ್ಲಾ?" ಎಂದು ಎಡವಟ್ಟಾಗಿ ಮಾತನಾಡುತ್ತಿದ್ದಳು. ಕುಸುಮಾಗೆ ತನ್ನ ಅಸಹಾಯಕತೆಯಿಂದ ದುಃಖವಾಗಿತ್ತು. "ಮೊಂಡು ಮಾತು ಆಡೋರಿಗೆ ಏನು ಹೇಳಿದ್ರೂ ತಿಳಿಯಂಗಿಲ್ಲ" ಅಂತ ಒದರಾಡಿದ್ದಳು.

ಅಂಕಿತಾಗೆ ತನ್ನ ಮೊದಲ ಮೊಬೈಲ್ ಫೋನನ್ನು ಅಮ್ಮನಿಂದ ಕೊಡಿಸಿ ಕೊಳ್ಳುವುದು ಸುಲಭದ ಸಂಗತಿಯಾಗಿರಲಿಲ್ಲ. ಮೊಬೈಲ್ ಕೊಡಿಸಿದರೆ ಮಕ್ಕಳು ಹಾಳಾಗುತ್ತಾರೆಂಬ ವಿಚಾರ ಕುಸುಮಾಳ ತಲೆಯಲ್ಲಿ ಬೇರು ಬಿಟ್ಟಿತ್ತು. "ನೀನು ಏನು ಮಾಡಿದ್ರೂ ಕೊಡಿಸಲ್ಲ" ಅಂತ ಹಠ ಹಿಡಿದುಬಿಟ್ಟಳು. ಆದರೆ ಹಠದ ವಿಚಾರದಲ್ಲಿ ಅಂಕಿತಾ ಯಾವುದಕ್ಕೆ ಕಡಿಮೆ? ಕುಸುಮಾಳ ಮಗಳು ಆಕೆ. ತನ್ನ ಯಾರೆಲ್ಲಾ ಗೆಳೆಯರ ಬಳಿ ಈಗಾಗಲೇ ಮೊಬೈಲ್ ಇದೆ, ಅದರಿಂದ ಎಷ್ಟೆಲ್ಲಾ ಅನುಕೂಲ, ತಾನು ಈ ಮಹಾನಗರದಲ್ಲಿ ಏನಾದರೂ ಕಷ್ಟಕ್ಕೆ ಸಿಕ್ಕಿಬಿದ್ದರೆ ನಿನಗೆ ತಿಳಿಸುವುದು ಹೇಗೆ – ಇತ್ಯಾದಿ ವಿವರಣೆಗಳನ್ನು ಕೊಟ್ಟರೂ ಕುಸುಮಾ ಜಗ್ಗಲಿಲ್ಲ. ಕೊನೆಗೆ ಊಟ–ತಿಂಡಿ ಬಿಟ್ಟು ಉಪವಾಸ ಸತ್ಯಾಗ್ರಹ ಶುರುವಿಟ್ಟಳು. 'ಹೊಟ್ಟೆ ಸುಟ್ಟರೆ ಸೊಟ್ಟಗೆ ಬರ್ತಾಳೆ' ಅಂತ ಕುಸುಮಾ ಕೂಡ ಹಠ ಹಿಡಿದಳು. ಆದರೆ ಎರಡು ದಿನ ಮಾತು ಬಿಟ್ಟು, ಅನ್ನ–ನೀರು ಮುಟ್ಟದೆ ಮಗಳು ಹಾಸಿಗೆ ಹಿಡಿದು ಬಿಟ್ಟಾಗ ಕಂಗಾಲಾದಳು.

ಎಷ್ಟಾದರೂ ತಾಯಿ ಕರುಳು! ಊಟವನ್ನು ತಟ್ಟೆಯಲ್ಲಿ ಹಾಕಿಕೊಂಡು ಮಗಳ ಬಳಿ ಹೋಗಿ ಪ್ರೀತಿಯಿಂದ ಬಲವಂತ ಮಾಡಿದಳು. ಅಂಕಿತಾ ಮುಸುಕ ತೆಗೆಯಲಿಲ್ಲ. ಕೊನೆಗೆ ಸಿಟ್ಟು ಮಾಡಿಕೊಂಡು, ತಾಯಿಯ ಅಧಿಕಾರವನ್ನು ಚಲಾಯಿಸಲು ನೋಡಿದಳು. ಅದಕ್ಕೂ ಅಂಕಿತಾ ಜಗ್ಗಲಿಲ್ಲ. ಗಂಡನನ್ನು ಕಳೆದುಕೊಂಡ ತನಗೆ ಅವಳೊಬ್ಬಳೇ ದಿಕ್ಕು, ಅವಳಿಗೆ ತಾನೊಬ್ಬಳೇ ದಿಕ್ಕು ಎಂಬ ಸತ್ಯ ಯಾವಾಗಲೂ ಕುಸುಮಾಳ ಮನಸ್ಸಿನಲ್ಲಿ ಧ್ವನಿಸುತ್ತಲೇ

ಇರುತ್ತದೆ. ಅದು ಒಮ್ಮೊಮ್ಮೆ ದುಃಖಕ್ಕೆ ತಿರುಗಿ, ಸಿಟ್ಟಿನಲ್ಲಿ ಕೊನೆಗೊಳ್ಳುತ್ತದೆ. ಅದೇ ರೀತಿ ಈ ಬಾರಿಯೂ ನಡೆದು, ಊಟದ ತಟ್ಟೆಯನ್ನು ಮೂಲೆಗೆ ತಳ್ಳಿ, ಮಗಳ ಮೈಕೈಗೆಲ್ಲಾ ದಬದಬನೆ ಗುದ್ದಿ, ತಾನೇ ಅಳುತ್ತಾ ಕುಳಿತು ಬಿಟ್ಟಳು. ಅದಕ್ಕೂ ಮಗಳು ಕರಗಲಿಲ್ಲ. ಅಳುತ್ತಾ ಕುಳಿತ ತಾಯಿಯನ್ನು ಸಮಾಧಾನ ಮಾಡಲು ಹೋಗಲಿಲ್ಲ. ಮೈಕೈ ನೋಯುವಂತೆ ಏಟು ತಿಂದರೂ ಅಳುವನ್ನು ಹತ್ತಿಟ್ಟುಕೊಂಡು ತನ್ನ ಹಠವನ್ನು ಮುಂದುವರಿಸಿದಳು. ವಯಸ್ಸಿಗೆ ಬಂದ ಮಗಳು ಕೊನೆಗೂ ಗೆದ್ದಳು! ಮರುದಿನ ಮೊಬೈಲ್ ಫೋನ್ ಮನೆಗೆ ಬಂತು. ಅಂಕಿತಾ ಖುಷಿಯಲ್ಲಿ ಮುಳುಗಿ ಹೋದಳು. ಆ ಮೊಬೈಲಿನ ಎಲ್ಲ ಸವಲತ್ತನ್ನೂ ಅನುಭವಿಸುತ್ತಾ ಅಂಕಿತಾ ಸಂಭ್ರಮ ಪಡುವುದನ್ನು ಕಂಡಾಗ, ಕುಸುಮಾ ಸಂಕಟದಿಂದ ಕುಸಿದು ಹೋಗುತ್ತಿದ್ದಳು.

ಮೊದಮೊದಲು ಯಾವುದೇ ಕರೆ ಬಂದರೂ, ಯಾವುದೇ ಮೆಸೇಜ್ ಬಂದರೂ “ಯಾರದು? ಎಲ್ಲಿ ನಿಂಗೆ ಅವರ ಪರಿಚಯ ಆಯ್ತು?” ಎಂದು ಮಗಳನ್ನು ಕೇಳಿ, ಅವಳು ಉತ್ತರ ಹೇಳುವ ತನಕ ತಳಮಳಿಸುತ್ತಿದ್ದಳು. ಅಮ್ಮನ ಈ ವಿಚಾರಣೆ ಅಂಕಿತಾಳ ಸಹನೆಯನ್ನು ಕೆಣಕುತ್ತಿತ್ತು. ತನಗೆ ಗೊತ್ತಿರುವವರೆಲ್ಲಾ ಅಮ್ಮನಿಗೇ ಗೊತ್ತೇ ಇರಬೇಕೆಂದರೆ ಹೇಗೆ? ಅದೂ ಹುಡುಗರ ಹೆಸರನ್ನು ಹೇಳಿದರಂತೂ ರಾದ್ಧಾಂತ ಮಾಡಿಬಿಡುತ್ತಿದ್ದಳು. “ಅವನಿಗೂ ನಿನಗೂ ಏನು ಸಂಬಂಧ?” ಅಂತ ಕೆದಕಿ ಕೆದಕಿ ಕೇಳಿ ಕಿರಿ ಕಿರಿ ಮಾಡುತ್ತಿದ್ದಳು. ಅಂಕಿತಾ ನಿಧಾನಕ್ಕೆ ಯಾವುದೇ ಕರೆ ಬಂದರೂ ಅಮ್ಮಗೆ ಗೊತ್ತಿರುವ ಗೆಳೆಯರ ಹೆಸರುಗಳನ್ನು ಮಾತ್ರ ಹೇಳಲು ಶುರುವಿಟ್ಟಳು. ಕುಸುಮಾ ಸಾಮಾನ್ಯದವಳೆ? ಅವಳು ಹೇಳಿದ ಹೆಸರಿನ ಗೆಳೆಯರಿಗೆ ಫೋನ್ ಮಾಡಿ “ಆರೋಗ್ಯ ಏನಮ್ಮ? ಓದು ಹೆಂಗೆ ಸಾಗಿದೆ?” ಅಂತೆಲ್ಲಾ ಹಗೂರಕ್ಕೆ ವಿಚಾರಿಸಿ, ಆಮೇಲೆ “ನಮ್ಮ ಅಂಕಿಗೆ ಫೋನ್ ಮಾಡಿದ್ದಿಯೇನಮ್ಮಾ?” ಎಂದು ಕೇಳಿ, ಅವರು “ಇಲ್ಲ ಆಂಟಿ” ಅಂದರೆ, ಇಡೀ ದಿನ ಮನೆಯಲ್ಲಿ ದೊಡ್ಡ ಜಗಳ, ಉಪವಾಸ, ಅಳು ಎಲ್ಲಾ ನಡೆಯುತ್ತಿತ್ತು. ಇತ್ತೀಚೆಗೆ ಅವೆಲ್ಲಾ ನಿಂತಿವೆ. ಅದೆಷ್ಟು ದಿನ ಕುಸುಮಾ ಹಠ ಸಾಧಿಸಿಯಾಳು? ಆ ವಯಸ್ಸೂ ಇಲ್ಲ, ಆ ಶಕ್ತಿಯೂ ಇಲ್ಲ. ಆದರೂ ಅಂಕಿತಾಳ ಮೊಬೈಲ್ ತಡೆಯಿಲ್ಲದೆ ಹೊತ್ತಲ್ಲದ ಹೊತ್ತಿನಲ್ಲಿ ಕುಂಯ್ ಕುಂಯ್ ಸದ್ದು ಮಾಡುವಾಗ ಕುಸುಮಾಳ ರಕ್ತದೊತ್ತಡ ಹೆಚ್ಚುತ್ತದೆ. ಅವಳಿಲ್ಲದ ಹೊತ್ತಿನಲ್ಲಿ ಅದರಲ್ಲಿ ಏನು ಬಂದಿದೆ ಎಂದು ನೋಡುವ ಕುತೂಹಲವಾದರೂ, ಅದನ್ನು ಹೇಗೆ

ಉಪಯೋಗಿಸಬೇಕೆಂದು ಅವಳಿಗೆ ಗೊತ್ತಿಲ್ಲದ ಕಾರಣ ಸುಮ್ಮನಾಗುತ್ತಾಳೆ. ಇತ್ತೀಚೆಗಂತೂ ಅಂಕಿತಾ ತನ್ನ ಮೊಬೈಲನ್ನು ಬಚ್ಚಲು ಮನೆ, ಶೌಚಾಲಯಕ್ಕೂ ತೆಗೆದುಕೊಂಡು ಹೋಗುತ್ತಾಳೆ. ಕಮೋಡಿನ ಮೇಲೆ ಅವಳು ಶೌಚಕ್ಕೆ ಕುಳಿತು ಮೊಬೈಲ್ ನೋಡುವಾಗ ಕೈ ಜಾರಿ ಅದರಲ್ಲಿ ಬಿದ್ದು ಬಿಡಲಿ ಎಂಬ ಕೆಟ್ಟ ಆಲೋಚನೆಯೂ ಕುಸುಮಾಗೆ ಬರುತ್ತದೆ.

ಅಮ್ಮ ತನಗೆ ಮೊದಲ ಮೊಬೈಲ್ ಕೊಡಿಸಲು ಮಾಡಿದ ರಾದ್ಧಾಂತವನ್ನು ಅಂಕಿತಾ ಅಷ್ಟು ಸುಲಭವಾಗಿ ಮರೆಯುವುದು ಸಾಧ್ಯವಿರಲಿಲ್ಲ. ಆದ್ದರಿಂದ ಬಿ.ಎ. ಮುಗಿಸಿ, ರಿಸೆಪ್ಷನಿಸ್ಟ್ ಉದ್ಯೋಗಕ್ಕೆ ಸೇರಿ, ಮೊದಲ ತಿಂಗಳ ಸಂಬಳ ಬಂದ ತಕ್ಷಣ ಭರ್ಜರಿ ಮೊಬೈಲನ್ನು ಕಂತಿನಲ್ಲಿ ಕೊಂಡು, ಅವರಮ್ಮನಿಗೆ ಹೇಳುವುದಕ್ಕೂ ಹೋಗದೆ ಬಳಸಲಾರಂಭಿಸಿದಳು. ಎರಡು ದಿನದ ನಂತರವೇ ಕುಸುಮಾಗೆ ಗೊತ್ತಾಗಿದ್ದು. ಕೆಂಡಾಮಂಡಲವಾಗಿ ಹೋದಳು. "ಹೇಳದೆ ತೊಗೊಳ್ಳೋ ಅಷ್ಟು ಬೆಳೆದು ಬಿಟ್ಟಿಯೇನೆ?" ಎಂದು ದಬಾಯಿಸಿದ್ದಳು. ಅಂಕಿತಾ ತುಟಿಯಂಚಿನಲ್ಲಿ ನಕ್ಕಿದ್ದಳು. "ಹೇಳಿದ್ರೆ ನೀನು ಬ್ಯಾಡ ಅಂತಿದ್ದಿ" ಎಂದು ಎದುರುತ್ತರಿಸಿದಳು. "ನಾನು ಸಾವಿರಾರು ರೂಪಾಯಿ ಬಡಿದು ಕೊಡಿಸಿದ ಹಳೆ ಮೊಬೈಲ್ ಈಗೇನು ಮಾಡ್ತೀಯೆ? ಉಪ್ಪಿನಕಾಯಿ ಹಾಕಿ ನೆಕ್ತೀಯೇನೆ?" ಎಂದು ಕಿರುಚಿದಳು. ಅದಕ್ಕೆ ಒಂದಿಷ್ಟೂ ಸಿಟ್ಟಾಗದ ಅಂಕಿತಾ ಅತ್ಯಂತ ಶಾಂತ ಸ್ವರದಲ್ಲಿ "ಅಮ್ಮ, ಅದನ್ನ ನೀನು ಇಟ್ಟುಗೋ.... ನೀನು ಹೊರಗೆ ಹೋದಾಗ ಉಪಯೋಗಕ್ಕೆ ಬರ್ತದೆ" ಎಂದು ಹೇಳಿದ್ದಳು. ಕುಸುಮಾ ಒಪ್ಪಿರಲಿಲ್ಲ. "ನನಗೆ ಈ ಸುಡುಗಾಡು ಯಂತ್ರಗಳು ಬೇಡ. ನೀನೇ ಅವನ್ನ ಅನುಭವಿಸಿ ಸುಖಪಡು" ಎಂದು ಅಸಹನೆಯಿಂದ ಹೇಳಿ, ಗಂಡನ ಫೋಟೋದ ಮುಂದೆ ಕುಳಿತು ಮುಸಿ ಮುಸಿ ಅತ್ತಿದ್ದಳು. "ನನ್ನ ಕೈಲೆ ಈಕಿನ್ನ ನಿಭಾಯಿಸೋಕ್ಕೆ ಆಗಲ್ಲ. ನಡುಮಧ್ಯ ನೀರಾಗೆ ಕೈಬಿಟ್ಟು ಹೋಗಿಬಿಟ್ರಿ" ಎಂದು ಗಂಡನಿಗೂ ಒಂದಿಷ್ಟು ಬೈದಳು. "ಇಲ್ಲಿ ನೋಡ್ರಿ, ನನ್ನ 'ವಿಧವೆ' ಅಂತ ಮಂಗಳ ಕಾರ್ಯಗಳಿಂದ ದೂರ ತಳ್ಳಿದ ಎಲ್ಲಾ ಕ್ರೂರ ಮನುಷ್ಯರ ಮೇಲೆ ಆಣೆ ಮಾಡಿ ಹೇಳ್ತೀನಿ, ನಾನು ಸತ್ತರೂ ಈ ಮೊಬೈಲ್ ಕೊಳ್ಳಲ್ಲ" ಎಂದು ಶಪಥ ಮಾಡಿ, ಸಮಾಧಾನ ಮಾಡಿಕೊಂಡು ಎದ್ದಿದ್ದಳು.

ಮರುದಿನ ಅಡಿಗೆ ಪಾತ್ರೆಗಳನ್ನು ತೊಳೆಯಲು ಬಂದ ನಿಂಗಮ್ಮನಿಗೆ ತನ್ನ ಹಳೆಯ ಮೊಬೈಲನ್ನು ಅಂಕಿತಾ ಕೊಟ್ಟುಬಿಟ್ಟಳು. ಅವಳಿಗೆ ವಿಪರೀತ

ಖುಷಿಯಾಗಿ ಬಿಟ್ಟಿತು. “ಕುಸುಮಕ್ಕಾ, ನೀವು ಏನೇ ಹೇಳ್ರಿ.... ನಿಮ್ಮ ಮಗಳ ಕೈ ದೊಡ್ಡದು. ದೇವರು ಆಕಿನ್ನ ಸುಖವಾಗಿ ಇಟ್ಟಿರ್ಲಿ ಕಣ್ರವ್ವಾ” ಎಂದು ಹೇಳಿ ಕುಸುಮಾಳ ಹೊಟ್ಟೆಗೆ ಇನ್ನಷ್ಟು ಬೆಂಕಿ ಸುರಿದಿದ್ದಳು. ಆವತ್ತಿನಿಂದ ನಿಂಗಮ್ಮ, “ಅಂಕವ್ವಾ, ಇದರಾಗೆ ನನ್ನ ಮಗಳ ನಂಬರು ಹಾಕಿ ಕೊಡವ್ವ”, ಬೆಳಿಗ್ಗೆ ಏಳೋದಕ್ಕೆ ಅಲಾರಾಂ ಇಡಬೋದಂತೆ, ಹೌದೇನ್ರವ್ವಾ?” ಎಂದೆಲ್ಲಾ ಅಂಕಿತಾಳನ್ನು ವಿಚಾರಿಸಿಕೊಳ್ಳಲಾರಂಭಿಸಿದ್ದಳು.

* * *

ನಾಲ್ಕು ದಿನಗಳ ರಜೆ ಒಟ್ಟಾಗಿ ಬಂದಿತ್ತು. ಸ್ವಾತಂತ್ರ್ಯ ದಿನಾಚರಣೆ, ವರಮಹಾಲಕ್ಷ್ಮಿ ಹಬ್ಬ, ಶನಿವಾರ ಮತ್ತು ಆದಿತ್ಯವಾರ ಕೂಡಿ ಬಂದಿದ್ದವು. ವಾಹನ ಸಂಚಾರದ ಕರ್ಕಶ ಸದ್ದೆಲ್ಲಾ ಅಡಗಿ, ಹಕ್ಕಿಗಳ ಕೂಗೂ ಕಿವಿಗೆ ಕೇಳಿಸಲಾರಂಭಿಸಿತ್ತು. ಮೋಡಗಟ್ಟಿದ ವಾತಾವರಣ ಇದ್ದುದರಿಂದ ತಣ್ಣಗಿತ್ತು. ರಸ್ತೆಯಲ್ಲಿದ್ದ ಕೆಂಡಸಂಪಿಗೆ ಮರದಲ್ಲಿ ಸಾಕಷ್ಟು ಹೂ ಅರಳಿ, ಅದರ ಪರಿಮಳ ಗಾಳಿಯಲ್ಲಿ ಬೆರೆತಿತ್ತು. ಬೇಗನೆ ಏಳುವುದಕ್ಕೆ ಯಾರಿಗೂ ಮನಸ್ಸಾಗದ ಶುಭ್ರ ದಿನವದು. ಈ ದಿನ ಕುಸುಮಾ ಮಗಳ ವಿಷಯವಾಗಿ ಸ್ವಲ್ಪ ಮೃದುವಾಗಿದ್ದಳು. ಬೆಳಗ್ಗೆ ಅವಳು ಏಳುವ ಹೊತ್ತಿಗೆ ಸರಿಯಾಗಿ ಹಾಸಿಗೆಯ ಪಕ್ಕ ಕುಳಿತು, ಅವಳ ಬೆನ್ನು ಸವರುತ್ತಾ, ಕೂದಲಿನಲ್ಲಿ ನವಿರಾಗಿ ಕೈಯಾಡಿಸುತ್ತಾ, ಆಗೊಮ್ಮೆ ಈಗೊಮ್ಮೆ ಅವಳ ಕೆನ್ನೆಗೆ ಮುತ್ತ ಕೊಡುತ್ತಾ ಏಳುವಂತೆ ಪುಸಲಾಯಿಸುತ್ತಿದ್ದಳು. ಅಂಕಿತಾಗೂ ಅಮ್ಮನ ಮುದ್ದುಗರೆಯುವಿಕೆ ಇಷ್ಟವಾಗಿ ತೊಡೆಗೆ ಆತುಕೊಂಡು ಮಲಗಿ ‘ಊಂ, ಊಂ’ ಅನ್ನುತ್ತಾ ತಾಯಿಯ ಸ್ಪರ್ಶದ ಸುಖವನ್ನು ಸವಿಯುತ್ತಾ ಮಲಗಿದ್ದಳು. ಅವಳಿಗೆ ಇಷ್ಟವಾದ ಉಪ್ಪಾಂಭಾತನ್ನು ಮಾಡುವುದೆಂದು ಕುಸುಮಾ ಆಲೋಚನೆ ಮಾಡಿದ್ದಳು. ಯಾವುದೇ ಕಾರಣಕ್ಕೂ ಈ ದಿನ ಇಬ್ಬರ ಮಧ್ಯೆ ಜಗಳ ಮೂಡುವುದು ಬೇಡವೆಂದು ದೇವರಲ್ಲಿ ಬೇಡಿಕೊಂಡಿದ್ದಳು.

ನಾಲ್ಕು ದಿನದ ರಜೆ ಬಂದಾಗ, ಮೊದಲ ದಿನವೇ ಮಗಳನ್ನು ಬೇಗನೆ ಏಳಿಸುವುದು ಕಷ್ಟವೆಂದು ಕುಸುಮಾಗೆ ಗೊತ್ತು. ಆದರೆ ದೇವಸ್ಥಾನದವರು ಸುದರ್ಶನ ಹೋಮವನ್ನು ಈ ದಿನವೇ ಹಮ್ಮಿಕೊಂಡಿದ್ದರು. ಅದೂ ಬೆಂಗಳೂರಿನ ಉತ್ತರ ದಿಕ್ಕಿನ ಒಂದು ಹೊಸ ಬಡಾವಣೆಯಲ್ಲಿರುವ ದೇವಸ್ಥಾನದಲ್ಲಿ. ಆ ಜಾಗ ಕುಸುಮಾಗೆ ಅಷ್ಟಾಗಿ ಪರಿಚಯವಿಲ್ಲ. ಬೆಂಗಳೂರಿಗೆ ಬಂದು ಮೂವತ್ತು ವರ್ಷವಾಗುತ್ತಾ ಬಂದರೂ, ಈ ದೈತ್ಯ ಊರಿನ ಎಲ್ಲಾ

ಭಾಗಗಳು ಗೊತ್ತೆಂದು ಯಾರಿಗಾದರೂ ಹೇಗೆ ಹೇಳಲು ಸಾಧ್ಯ? ಅಲ್ಲಿಗೆ ಹೋಗುವ ಬಸ್ಸಿನ ವಿವರಗಳನ್ನು ಮುಂಚೆಯೇ ಸಂಗ್ರಹಿಸಿದ್ದಳು. ದೇವಸ್ಥಾನವನ್ನು ಹುಡುಕಲೂ ಒಂದಿಷ್ಟು ಸಮಯ ಬೇಕಾಗುತ್ತದಲ್ಲವೆ? ಆದ್ದರಿಂದ ಇನ್ನಿಲ್ಲದಂತೆ ಮಗಳನ್ನು ಮುದ್ದುಗರೆಯುತ್ತಾ, ಬೇಗನೆ ಏಳುವಂತೆ ಪುಸಲಾಯಿಸುತ್ತಿದ್ದಳು.

ಕುಸುಮಾಗೆ ದೈವಭಕ್ತಿ ಹೆಚ್ಚು. ಆದ್ದರಿಂದ ಸಾಕಷ್ಟು ದೇವಸ್ಥಾನಗಳಿಗೆ ಭೇಟಿ ಕೊಡುತ್ತಿರುತ್ತಾಳೆ. ಮುಖ್ಯವೆನ್ನಿಸಿದ ಧಾರ್ಮಿಕ ಕಾರ್ಯಕ್ರಮಗಳನ್ನು ತಪ್ಪಿಸಿಕೊಳ್ಳುವುದಿಲ್ಲ. ಗಂಡ ಬದುಕಿದ್ದಾಗ ಈ ಬಗ್ಗೆ ಅಷ್ಟೇನೂ ಆಸಕ್ತಿ ಇರದಿದ್ದರೂ, ಇದ್ದಕ್ಕಿದ್ದಂತೆಯೇ ಒಂದು ದಿನ ಆತ ಇಲ್ಲವಾದಾಗ, ಆ ನಿರ್ವಾತವನ್ನು ಹೇಗೆ ತುಂಬುವುದೆಂಬ ಗೊಂದಲದೊಳಗೆ ಈ ಹೊಸ ಪ್ರವೃತ್ತಿ ಸೇರಿಕೊಂಡಿತ್ತು. ಅದು ಅವಳಿಗೆ ಸಾಕಷ್ಟು ಸಮಾಧಾನವನ್ನೂ ಕೊಡುತ್ತಿತ್ತು.

ಬದುಕಿನ ನಿರ್ವಹಣೆಗೆ ತೊಂದರೆಯಾಗದಷ್ಟು ಗಳಿಸಿದ ನಂತರವೇ ಗಂಡ ಸತ್ತಿದ್ದ. ಸಮಸ್ಯೆಯಾದದ್ದು ಹಣಕಾಸಿನ ವಿಷಯದಲ್ಲಿ ಅಲ್ಲ. ಆದರೆ ನಿತ್ಯದಂತೆ ಅವನು ಸಂಜೆ ಮನೆಗೆ ಬರುವುದಿಲ್ಲ ಎಂಬ ಭಾವವೇ ಅವಳನ್ನು ತಲ್ಲಣಕ್ಕೆ ಸಿಕ್ಕಿಸಿ, ಖಿನ್ನತೆಗೆ ನೂಕುತ್ತಿತ್ತು. ಆ ಹೊತ್ತಿನಲ್ಲಿಯೇ ಯಾರೋ ಕೆಲಸಕ್ಕೆ ಸೇರಲು ಸೂಚಿಸಿದ್ದರು. ಗಂಡ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಿದ್ದನಾದ್ದರಿಂದ, ಅಲ್ಲಿಯೇ ಅನುಕಂಪದ ನೆಲೆಯಲ್ಲಿ ಕೆಲಸ ಸಿಕ್ಕುವುದು ಸಾಧ್ಯವಿರಲಿಲ್ಲ. ಜೊತೆಗೆ ಕುಸುಮಾ ಅಷ್ಟೇನೂ ಓದಿದವಳಲ್ಲ. ಬಿ.ಎ. ಮುಗಿಸಿಕೊಂಡಿದ್ದಳು. ಯಾವುದೋ ಕಾನ್ವೆಂಟಿನಲ್ಲಿ ಅವಳನ್ನು ಪರಿಚಯದವರೊಬ್ಬರು ಸೇರಿಸಿದ್ದರು. ಆದರೆ ಕೆಲಸದ ಮೊದಲ ದಿನವೇ ಅವಳಿಗೆ ಕೈಕಾಲಲ್ಲಿ ನಡುಕ ಬಂದಿತ್ತು. ತರಗತಿಯಲ್ಲಿ ಇಂಗ್ಲಿಷಿನಲ್ಲಿ ನಿರರ್ಗಳವಾಗಿ ಮಾತನಾಡುವುದು ಅವಳಿಗೆ ಸಾಧ್ಯವಾಗಲಿಲ್ಲ. ಬಾಣಲೆಯಿಂದ ಬೆಂಕಿಗೆ ಬಿದ್ದಂತೆ ಒದ್ದಾಡಿದಳು. ಮೂರು ದಿನಕ್ಕೆ ಆ ಕೆಲಸ ಕೈ ಬಿಟ್ಟಳು. ಮತ್ತೆ ಮನೆಯಲ್ಲಿ ಒಂಟಿತನ, ಖಿನ್ನತೆ.... ಅವನ ನೆನಪು ಅವಳನ್ನು ಹಣ್ಣು ಮಾಡಲಾರಂಭಿಸಿದವು. ಈ ಹೊತ್ತಿನಲ್ಲಿಯೇ ದೇವಸ್ಥಾನಗಳು, ಧಾರ್ಮಿಕ ಕಾರ್ಯಕ್ರಮಗಳು ಅವಳ ಕೈ ಹಿಡಿದಿದ್ದವು. ಮನಸ್ಸಿಗೆ ಸಾಕಷ್ಟು ನೆಮ್ಮದಿಯನ್ನು ತಂದಿದ್ದವು.

ಆಗಿನ್ನೂ ಮಗಳು ಐದನೆಯ ತರಗತಿಯನ್ನು ಓದುತ್ತಿದ್ದಳು.

ಅಪ್ಪನಿಲ್ಲವೆಂಬ ಭಾವವನ್ನು ಗ್ರಹಿಸುವ ಶಕ್ತಿಯಿನ್ನೂ ಅವಳಿಗೆ ದಕ್ಕಿರಲಿಲ್ಲ. ಭಯದಿಂದ ಅಮ್ಮನಿಗೆ ಆತುಕೊಂಡಿದ್ದಳು. ಅಪ್ಪ-ಅಮ್ಮ ಎರಡೂ ಆಗಿ ತನ್ನ ಮಗಳನ್ನು ಕುಸುಮಾ ದಕ್ಕಿಸಿಕೊಂಡಿದ್ದಳು. ಅವಳಿಗೆ ಯಾವುದೇ ರೀತಿಯಿಂದಲೂ ನೋವಾಗದಂತೆ ನೋಡಿಕೊಂಡಿದ್ದಳು. ಕಷ್ಟಪಟ್ಟರೂ ಆ ದಿನಗಳೇ ಚೆನ್ನಾಗಿದ್ದವೆಂದು ಅವಳಿಗೆ ಅನ್ನಿಸುತ್ತದೆ. ಈಗ ಅಂಕಿತಾ ತನ್ನ ಹಿಡಿತಕ್ಕೆ ಸಿಗುವುದಿಲ್ಲ. ಎಲ್ಲದಕ್ಕೂ ವಾದಿಸುತ್ತಾಳೆ, ಪ್ರೀತಿಯೇ ಇಲ್ಲದವಳಂತೆ ವರ್ತಿಸುತ್ತಾಳೆ. ಕುಸುಮಾಳ ತಲೆನೋವಿಗೆ ಕಾರಣವಾಗುತ್ತಾಳೆ.

ಸುದರ್ಶನ ಹೋಮಕ್ಕೆ ಮಗಳನ್ನು ಕರೆದುಕೊಂಡು ಹೋಗಲೇಬೇಕಾದ್ದಕ್ಕೆ ಎರಡು ಮುಖ್ಯ ಕಾರಣಗಳಿದ್ದವು. ಆಕೆ ಬಹುವಾಗಿ ನಂಬುವ ಸೋಮಯಾಜಿಗಳು ಈ ಹೋಮದ ಹೊಗೆ ಅಂಕಿತಾಗೆ ತಾಕಿದರೆ ಮೃದುವಾಗುತ್ತಾಳೆ ಎಂದು ತಿಳಿಸಿದ್ದರು. ಪೂರ್ಣಾಹುತಿಯ ವೇಳೆ, ಆ ಆಹುತಿಯ ಸ್ಪರ್ಶದಿಂದ ಅವಳನ್ನು ಕಾಡುತ್ತಿರುವ ದುಷ್ಟಗ್ರಹಗಳು ದೂರವಾಗುತ್ತವೆಂದು ತಿಳಿಸಿದ್ದರು. ಸೋಮಯಾಜಿಯವರ ಮಾತು ಹಲವಾರು ಬಾರಿ ಸತ್ಯವಾಗಿದೆ. ತನ್ನ ಕಷ್ಟದ ದಿನಗಳಲ್ಲಿ ಸಾಕಷ್ಟು ಬಾರಿ ಕುಸುಮಾ ಅವರ ಬಳಿ ಹೋಗಿ, ಅವರ ಸಮಾಧಾನದ ಮಾತುಗಳಿಂದ ಬದುಕನ್ನು ಮತ್ತೆ ಕೈಗೆತ್ತಿಕೊಳ್ಳುವ ಆತ್ಮಸ್ಥೈರ್ಯವನ್ನು ಪಡೆದುಕೊಂಡು ಬಂದಿದ್ದಾಳೆ.

ಎರಡನೆಯದಾಗಿ ಕುಸುಮಾ ಈಗ ಮಗಳಿಗೆ ಒಳ್ಳೆಯ ಗಂಡನ್ನು ಹುಡುಕಲು ಶುರುವಿಟ್ಟಿದ್ದಳು. ಮಗಳು ಈಗಾಗಲೇ ನೋಡಿಕೊಂಡು ಬಿಟ್ಟಿದ್ದಾಳೇನೋ ಎಂಬ ಅನುಮಾನವಿತ್ತು. ಯಾವುದೋ ಒಂದು ದಿನ ಧೈರ್ಯ ಮಾಡಿ ಮಗಳಲ್ಲಿ ಕೇಳಿಯೂ ಬಿಟ್ಟಳು. ಎತ್ತಲೋ ಒಂದೆರಡು ಕ್ಷಣ ಕಣ್ಣನ್ನು ನೆಟ್ಟು ನೋಡಿದ ಅಂಕಿತಾ "ಆಯ್ತಮ್ಮ, ನೀನೇ ಹುಡುಕು" ಎಂದು ಬಿಟ್ಟಿದ್ದಳು. ಮಗಳು ಯಾವುದೋ ಹಳೆಯ ಸಂಬಂಧದಲ್ಲಿ ಸೋತಿರಬೇಕು ಎಂದು ಅನ್ನಿಸಿದರೂ, ಅದನ್ನು ಕೆದಕಿ ಕೇಳುವ ಧೈರ್ಯ ಕುಸುಮಾಗಿರಲಿಲ್ಲ. ಕೇಳಿದರೂ ಅವಳು ಹೇಳುವುದಿಲ್ಲವೆಂದು ಗೊತ್ತು. ಈ ಸದ್ಯ ಅವಳು ಹೊಸ ಗಂಡಿಗೆ ಒಪ್ಪಿಗೆ ಕೊಟ್ಟಿದ್ದಳಲ್ಲಾ, ಅದೇ ಸಾಕು, ಕಾಲ ಎಲ್ಲ ಗಾಯಗಳನ್ನು ಮಾಗಿಸುತ್ತದೆ ಎಂಬ ಗೆಲುವಿನಲ್ಲಿ ಅನ್ವೇಷಣೆ ಶುರು ಮಾಡಿಕೊಂಡಳು. ಸಮುದಾಯದವರೆಲ್ಲಾ ಸೇರುವ ಇಂತಹ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಹುಡುಗಿ ನಾಲ್ಕು ಜನರ ಮುಂದೆ ಓಡಾಡಿದರೆ ಯಾವುದೋ

ಒಂದು ಸಂಬಂಧ ಕೂಡಿ ಬರುತ್ತದೆಂಬುದು ಆಕೆಯ ಆಸೆಯಾಗಿತ್ತು. ಅಷ್ಟಕ್ಕೂ ಅಂಕಿತಾಗೆ ಏನು ಕಡಿಮೆಯಾಗಿದೆ? ಅವಳು ಯಾವತ್ತೂ ಧರಿಸುವ ಆಧುನಿಕ ಉಡುಪುಗಳು ಕುಸುಮಾಗೆ ಅಷ್ಟೇನೂ ಇಷ್ಟವಾಗುವುದಿಲ್ಲ. ಯಾವತ್ತೋ ಒಂದು ದಿನ ಮನಸ್ಸು ಬಂದು ಸೀರೆ ಉಟ್ಟರೆ, ಸಿರಿಗೌರಿಯಂತೆ ಕಾಣುತ್ತಾಳೆ. ನನ್ನಂತೆ ಗಿಡ್ಡಿಯೂ ಅಲ್ಲ. ಅವರಪ್ಪನ ಎತ್ತರ. ಕಬ್ಬಿನ ಜಲ್ಲೆಯಂತೆ ರಸವತ್ತಾಗಿ ಬೆಳೆದು ನಿಂತಿದ್ದಾಳೆ. ಈ ದಿನಗಳಲ್ಲಿ ಹುಡುಗಿ ಸಿಗುವುದಿಲ್ಲ ಅಂತ ಗಂಡುಗಳು ಬಾಯಿಬಾಯಿ ಬಿಡುತ್ತವೆ. ಮದುವೆ ಮಾಡಲು ತನಗೆ ಅಂತಹ ಕಷ್ಟವೂ ಆಗಲಿಕ್ಕಿಲ್ಲ.

ಗಂಡ ಸತ್ತರೂ ನನ್ನ ಕೈ ಬಿಡಲಿಲ್ಲ. ಇನ್ಶೂರನ್ಸ್, ಪ್ರಾವಿಡೆಂಟ್ ಫಂಡ್, ಗ್ರಾಚುಟಿ ಅಂತೆಲ್ಲಾ ಸಾಕಷ್ಟು ಹಣ ಕುಸುಮಾಳ ಕೈ ಸೇರಿತ್ತು. ಆದರೆ ಈ ಹಣವೇ ಸಾಕಷ್ಟು ತಲೆನೋವನ್ನೂ ಅವಳಿಗೆ ತಂದು ಕೊಟ್ಟಿತ್ತು. ಬಂಧು ಬಳಗದವರೆಲ್ಲಾ ಏನೋ ಅನುಕಂಪ ಹೇಳುವ ಸೋಗಿನಲ್ಲಿ ಬಂದು ಸಾಲ ಕೇಳಲು ಶುರುವಿಟ್ಟರು. ಅಂತಹ ದುಃಖದ ವೇಳೆಯಲ್ಲಿಯೂ ಕುಸುಮಾ ಹಣದ ವಿಷಯದಲ್ಲಿ ಹುಷಾರಾದಳು. ಬಂಧು–ಬಳಗದವರನ್ನೆಲ್ಲಾ ಸರಿಯಾದ ದೂರದಲ್ಲಿಟ್ಟಳು. ಮುಲಾಜಿಲ್ಲದೆ ಯಾರಿಗೂ ಸಾಲ ಕೊಡುವುದಿಲ್ಲ ಎಂದು ಹೇಳಿಬಿಟ್ಟಳು. ಆ ತರಹದ ಕಠಿಣತೆಯಿಂದಾಗಿ ಸಾಕಷ್ಟು ಬಂಧು–ಬಳಗದವರನ್ನು ಕಳೆದುಕೊಳ್ಳಬೇಕಾಯಿತು. ಆದರೂ ಅಡ್ಡಿಯಿಲ್ಲ. ಮೋಸ ಹೋಗಲಿಲ್ಲ. ಈಗೇನಿದ್ದರೂ ಅಮ್ಮಗೆ ಮಗಳು, ಮಗಳಿಗೆ ಅಮ್ಮ – ಅಷ್ಟೇ!

ಕುಸುಮಾ ಒಳ್ಳೆಯ ಸೀರೆಯನ್ನು ಧರಿಸಿ ಹೊರಡುವ ವೇಳೆಗೆ ಸರಿಯಾಗಿ ಅಂಕಿತಾ ಎದ್ದು ವಾಷ್‌ಬೇಸಿನ್ ಬಳಿ ನಿಧಾನಕ್ಕೆ ಹಲ್ಲುಜ್ಜುತ್ತಾ ನಿಂತಿದ್ದಳು. ತಿಂಡಿ ತಿನ್ನುವುದಕ್ಕೆ ಜ್ಞಾಪಿಸಿ, ಎಲ್ಲಾ ಫ್ಯಾನು–ಲೈಟು ಮತ್ತು ಗೀಜರ್‌ಗಳನ್ನು ಆರಿಸಲು ಎರಡೆರಡು ಬಾರಿ ಎಚ್ಚರಿಸಿ, "ಹುಷಾರೇ ಅಂಕಿ, ಬಡಾನ ಬಂದು ಬಿಡು. ಪೂರ್ಣಾಹುತಿ ಹೊತ್ತಿಗೆ ನೀನು ಇರಲೇಬೇಕು. ಮಧ್ಯ ಒಂದು ಸಲ ಫೋನ್ ಮಾಡ್ತೀನಿ" ಎಂದು ಹೇಳಿ ಹೊರಡಲು ಅಣಿಯಾದಾಗ, ಅಂಕಿತಾ ಅವರಮ್ಮನ ಕಡೆ ನೋಡಿ 'ಒಂದು ನಿಮಿಷ ಇರು' ಎಂಬಂತೆ ಸಂಜ್ಞೆ ಮಾಡಿ ನಿಲ್ಲಿಸಿದಳು. ಬಾಯಿಯಲ್ಲಿ ಬ್ರಷ್ಷು–ನೊರೆ ತುಂಬಿಕೊಂಡಂತೆಯೇ, ಅಮ್ಮನ ಸೀರೆಯ ನಿರಿಗೆಯನ್ನು ಸರಿಯಾಗಿಸಿದಳು. ತನ್ನ ರೂಮಿಗೆ ಹೋಗಿ, ಒಂದು ಸುಗಂಧದ ಬಾಟಲಿಯನ್ನು ತಂದು ಅವರಮ್ಮ ಬೇಡ, ಬೇಡವೆಂದು

ಹೇಳಿದರೂ ಕೇಳದೆ ಆಕೆಯ ಸೀರೆಗೆ ಸಿಂಪಡಿಸಿದಳು. ಆನಂತರ ತುಸು ಲಘು ಬಣ್ಣದ ತುಟಿ ಬಣ್ಣವನ್ನು ಅವರಮ್ಮನ ತುಟಿಗೆ ಹಗೂರಕ್ಕೆ ಬಳಿದು, ಆಕೆಯ ಹುಬ್ಬು, ರೆಪ್ಪೆಯ ಕೂದಲುಗಳನ್ನು ತೀಡಿ, ಒಂದೆರಡು ದಿಕ್ಕಿನಿಂದ ಆಕೆಯನ್ನು ನೋಡಿ ಪರೀಕ್ಷಿಸಿ, ವಾಷ್‌ಬೇಸನ್ನಿಗೆ ಹೋಗಿ ಬಾಯಿ ತೊಳೆದುಕೊಂಡು, "ಹುಷಾರೆ ಕುಸುಮೀ" ಎಂದು ಅವರಮ್ಮನ ಧ್ವನಿಯಲ್ಲಿಯೇ ಉಲಿದು, ನಕ್ಕು ಅಪ್ಪಣೆಯನ್ನು ಕೊಟ್ಟಳು. ಕುಸುಮಾ ಅವಳ ತಲೆಗೊಂದು ಮೊಟಕಿ, "ನಿನ್ನ ತಲೆಹರಟೆ ನಿಲ್ಲಲಿಲ್ಲ ನೋಡು" ಎಂದು ಹೇಳಿದಳು. ನಂತರ ಅನುಮಾನದಿಂದ, "ಇವೆಲ್ಲಾ ಬ್ಯಾಡ ಅಂದ್ರೂ ನೀನು ಕೇಳಲ್ಲ ನೋಡು. ನಿನ್ನ ಹಠ ನಿಂಗೆ. ಹಿರಿಯರು ನಾನು ಹಿಂಗೆ ಅಲಂಕಾರ ಮಾಡಿಕೊಳ್ಳೋದು ನೋಡಿದ್ರೆ ಸಿಟ್ಟಾಗ್ತಾರೆ ಅನ್ನಿಸ್ತದೇ ಅಂಕಿ" ಅಂತ ಹುಸಿಮುನಿಸು ತೋರಿಸಿದಳು. ಅಂಕಿತಾ ಯಾವುದೇ ರೀತಿಯಿಂದಲೂ ತಲೆ ಕೆಡಿಸಿಕೊಳ್ಳದೆ, "ಸಿಟ್ಟು ಮಾಡಿಕೊಂಡರೆ ಮಾಡಿಕೊಳ್ಳಲಿ ಬಿಡು" ಎಂದು ಹೇಳಿದಳು. ಈ ಮಗಳಿಗೆ ಬುದ್ಧಿ ಹೇಳುವುದರಲ್ಲಿ ಅರ್ಥವಿಲ್ಲವೆಂದು ಕುಸುಮಾ ಸಿಟಿ ಬಸ್ಸು ಹಿಡಿಯಲು ಹೊರಟಳು.

ಮಗಳಿಗೆ ಒಂದು ಹೊಂಡಾ ಆಕ್ಟಿವಾ ಕೊಡಿಸಿದ್ದಾಳಾದರೂ, ಅಮ್ಮನನ್ನೂ ಕೂಡಿಸಿಕೊಂಡು ಡಬ್ಬಲ್ ಹೊಡೆಯಲು ಅಂಕಿತಾ ಹಿಂಜರಿಯುತ್ತಾಳೆ. ಕುಸುಮಾ ಒಂದೇ ಕಡೆಗೆ ಎರಡೂ ಕಾಲುಗಳನ್ನು ಹಾಕಿಕೊಂಡು ಕೂತರೆ, ಗಾಡಿ ಓಡಿಸುವಾಗ ಸಮತೋಲನ ಕಾಯ್ದುಕೊಳ್ಳುವುದು ಸಾಧ್ಯವಾಗುವುದಿಲ್ಲ. ಆಕಡೆ, ಈಕಡೆ ಕಾಲು ಹಾಕಿಕೊಂಡು ಕೂಡಲು ಅನುಕೂಲವಾಗುವಂತೆ ಚೂಡಿದಾರ್ ಹಾಕಿಕೊಳ್ಳಲು ಕುಸುಮಾ ಒಪ್ಪಿಲ್ಲ. ಜೊತೆಗೆ ಕುಸುಮಾ ದಢೂತಿ ಹೆಂಗಸು. ಎಷ್ಟೇ ಮನೆಕೆಲಸಗಳನ್ನು ಮಾಡಿಕೊಂಡರೂ ದೇಹದ ಕೊಬ್ಬನ್ನು ಆಕೆಗೆ ಕಡಿಮೆ ಮಾಡಲು ಸಾಧ್ಯವಾಗಿಲ್ಲ. "ನಿಮ್ಮ ವಂಶದ ಗುಣ ಅದು. ನೀವೇನು ಮಾಡೋಕೆ ಆಗುತ್ತೆ?" ಅಂತ ಡಾಕ್ಟರರೂ ತಾರತಮ್ಯ ಮಾಡಿಬಿಟ್ಟಿದ್ದರು. ವಂಶದ ಕಾಣಿಕೆಯಾಗಿ ಸಕ್ಕರೆ ಕಾಯಿಲೆ ಮತ್ತು ರಕ್ತದೊತ್ತಡಗಳೂ ಅವಳಲ್ಲಿ ಸೇರಿಕೊಂಡಿವೆ. "ವಯಸ್ಸು ಆದಂತೆಲ್ಲಾ ಇವೆಲ್ಲಾ ಇದ್ದಿದ್ದೇ. ಗಂಡನೂ ಇಲ್ಲದ ಈ ಹೊತ್ತಿನಲ್ಲಿ ನಾನು ಯಾರನ್ನ ಮೆಚ್ಚಿಸಬೇಕಾಗ್ಯದೆ?" ಎಂದುಕೊಳ್ಳುತ್ತಾಳೆ. "ಅಂಕಿತಾಳಿಗೊಂದು ಒಳ್ಳೆಯ ಗಂಡು ಸಿಕ್ಕು ಮದುವೆಯಾದರೆ ಸಾಕು. ನೆಮ್ಮದಿಯಿಂದ ಕಣ್ಣುಮುಚ್ಚಿ ಬಿಡುತ್ತೇನೆ" ಎಂದು ಸಮಾಧಾನ ಹೊಂದುತ್ತಾಳೆ.

ಅಂಕಿತಾಗೆ ದೇವಸ್ಥಾನಕ್ಕೆ ಹೋಗುವ ಇಷ್ಟವಿರಲಿಲ್ಲ. ಆದರೆ ಅಮ್ಮನ ಯಾವುದೇ ಆಸೆಗಳಿಗೆ ಇಲ್ಲವೆಂದು ಹೇಳಿದರೆ ಸಾಕು, ಅಳಲು ಶುರುವಿಟ್ಟು ಬಿಡುತ್ತಾಳೆ. ಅವಳು ಅಳುವುದು ಕಂಡರೆ ಅಂಕಿತಾಗೆ ಸಹಿಸಲಾಗುವುದಿಲ್ಲ. ಮೊದಲೆಲ್ಲಾ ಅಮ್ಮ ಅಳುವುದನ್ನು ಕಂಡಾಗ ಅಂಕಿತಾಗೆ ಭಯವಾಗುತ್ತಿತ್ತು. ಹೆದರಿಕೆಯಿಂದ ನಡುಗುತ್ತಿದ್ದಳು. ಆದರೆ ಇದೇ ಪ್ರವೃತ್ತಿ ಮತ್ತೆ ಮತ್ತೆ ಪುನರಾವರ್ತನೆಯಾದ ಮೇಲೆ, ಅಂಕಿತಾಗೆ ತನ್ನ ಅಮ್ಮ ಅಳುವನ್ನು ಅಸ್ತ್ರ ಮಾಡಿಕೊಂಡು ಮಣಿಸಲು ಪ್ರಯತ್ನಿಸುತ್ತಾಳೆ ಎಂಬ ಸತ್ಯ ಹೊಳೆದು ಹೆದರುವುದನ್ನು ನಿಲ್ಲಿಸಿದ್ದಾಳೆ. ತಾನು ಅಮ್ಮನ ಅಳುವಿಗೆ ಮಣಿದರೆ, ಯುದ್ಧದಲ್ಲಿ ಆಕೆ ಗೆದ್ದು ಬಿಡುತ್ತಾಳೆ ಎಂಬ ಸತ್ಯ ಮನದಟ್ಟಾಗಿದೆ. ಒಮ್ಮೆ ಮಣಿದೆವೆಂದರೆ ನಷ್ಟ ಮಣಿದವರಿಗೇ ಅಲ್ಲವೆ? ಆದ್ದರಿಂದ ಆಕೆ ಅತ್ತರೂ ಪ್ರತಿಕ್ರಿಯಿಸದೆ ಸುಮ್ಮನೆ ಇದ್ದು ಬಿಡುತ್ತಾಳೆ.

ಆದರೆ ಅಮ್ಮನ ಬಗ್ಗೆ ಪಾಪ ಅನ್ನಿಸುತ್ತದೆ. ಅಪ್ಪ ಸತ್ತ ಮೇಲೆ ಅವಳು ಪಟ್ಟ ಕಷ್ಟ, ಹೋರಾಟವೆಲ್ಲವೂ ಅಂಕಿತಾಳ ಕಣ್ಣ ಮುಂದೆ ಸುಳಿದಾಡುತ್ತದೆ, ನೋವಾಗುತ್ತದೆ. ಅಪ್ಪನ ನೆನಪೇ ಸರಿಯಾಗಿ ಇಲ್ಲದ ಅಂಕಿತಾಗೆ, ಅಮ್ಮನೇ ಸರ್ವಸ್ವ. ಆದ್ದರಿಂದ ಒಮ್ಮೊಮ್ಮೆ ಮಣಿಯುತ್ತಾಳೆ. ಈಗ ಒಂದು ವಾರದಿಂದ ಅಮ್ಮ ಈ ಸುದರ್ಶನ ಹೋಮದ ಬಗ್ಗೆ ಹೇಳುತ್ತಲೇ ಬಂದಿದ್ದಳು. ಆಗೊಮ್ಮೆ ಈಗೊಮ್ಮೆ ಮುದ್ದುಗರೆಯುತ್ತಾ ಹೇಳಿದ್ದಳು. ಆದ್ದರಿಂದಲೇ ಅಂಕಿತಾ ಬರುವುದಕ್ಕೆ ಒಪ್ಪಿದ್ದಳು.

ಆದರೆ ಅಮ್ಮ ದೇವಸ್ಥಾನಕ್ಕೆ ಹೋದ ಮೇಲೆ ಯಾಕೋ ಅಲ್ಲಿಗೆ ಹೋಗುವುದಕ್ಕೆ ಉತ್ಸಾಹವೇ ಮೂಡಲಿಲ್ಲ. ನೆರೆತ ಕೂದಲಿನ ಹಿರಿಯರ ಮಧ್ಯೆ ಕಾಲ ಕಳೆಯುವುದು ನಿಜಕ್ಕೂ ಬೇಸರದ ವಿಷಯ. ಎಲ್ಲರೂ ತಮ್ಮ ಹಕ್ಕೆನ್ನುವಂತೆ ಬಂದು ತನ್ನ ಪೂರ್ವಾಪರ ವಿಚಾರಿಸುತ್ತಾರೆ. ಯಾರೋ ಸೀರೆ ಉಟ್ಟ ಹುಡುಗಿಯೊಬ್ಬಳು ಒಂದು ಭಕ್ತಿಗೀತೆ ಹಾಡಿದರೆ ಸಾಕು, ಎಲ್ಲರೂ ಹೊಗಳಲು ಶುರುವಿಟ್ಟುಕೊಳ್ಳುತ್ತಾರೆ, 'ಶೀಲಾ ಕೆ ಜವಾನಿ' ಹಾಡಿಗೆ ತಾನು ಹೇಗೆ ಮೈಚಳಿ ಬಿಟ್ಟು ಕುಣಿಯಬಲ್ಲೆ ಎಂಬ ವಿಷಯ ಅಲ್ಲಿ ಎಲ್ಲರಿಗೂ ಗೌಣವಾಗುತ್ತದೆ. ತಮ್ಮ ರುಚಿಯೇ ಶ್ರೇಷ್ಠವೆನ್ನುವ ಜನರ ಗುಂಪದು.

ಕಾಫಿ ಕುಡಿಯುವಾಗ ಅಂಕಿತಾಗೆ ಒಂದು ಆಲೋಚನೆ ಬಂತು. ಗೆಳೆಯರ ಸಲಹೆಯನ್ನು ಕೇಳಿ ಬಿಡೋಣ ಅಂತ ನಿರ್ಧರಿಸಿದಳು. ಕಾಫಿ ಪೂರ್ತಿ

ಕುಡಿಯುವುದನ್ನೂ ನಿಲ್ಲಿಸಿ, ಮೊಬೈಲ್ ಕೈಗೆತ್ತಿಕೊಂಡು ಸ್ಟೇಟಸ್ ಹಾಕಿದಳು. "ಅಮ್ಮ ಯಾವುದೋ ದೇವಸ್ಥಾನಕ್ಕೆ ಬರಲೇ ಬೇಕೆಂದು ಹೇಳಿ ಹೋಗಿದ್ದಾಳೆ. ನನಗದು ಮಹಾ ಬೋರಿಂಗ್! ಹೋಗಲೋ, ಬಿಡಲೋ? ಬರೀ ಲೈಕ್ ಒತ್ತ ಬೇಡಿ, ಕಾಮೆಂಟ್ ಹಾಕಿ" ಎಂದು ವಿವರವಾಗಿ ಬರೆದಳು. ಹಾಕಿದ ಮರುಕ್ಷಣವೇ ನಾಲ್ಕು ಲೈಕ್ ಬಂದವು. 'ಸ್ಟುಪಿಡ್' ಎಂದು ಬೈದು, ಮೊಬೈಲನ್ನು ಹಾಸಿಗೆಯ ಮೇಲೆ ಒಗೆದು ಸ್ನಾನಕ್ಕೆ ಹೊರಟಳು. ತುಂಬಾ ತಡ ಮಾಡಿದರೆ ಅಮ್ಮ ಬೈಯುತ್ತಾಳೆಂದು ಅವಳಿಗೆ ಗೊತ್ತು. ಅವಳು ಬೈದರೆ ಹೆದರಿಕೆಯಾಗುವುದಿಲ್ಲ, ಬೇಸರವಾಗುತ್ತದೆ.

ಅಮ್ಮನ ಸ್ವಭಾವ ಅಂಕಿತಾಗೆ ಅರ್ಥವಾಗುವುದಿಲ್ಲ. ಚಿಕ್ಕಪುಟ್ಟ ಸಂಗತಿಗಳಿಗೆಲ್ಲಾ ಹಠ ಹಿಡಿದು ಬಿಡುತ್ತಾಳೆ. ಮೊಬೈಲ್ ಬಳಸಿದರೆ ಆಗುವ ಅನುಕೂಲಗಳು ಅವಳಿಗೆ ಮುಖ್ಯವಾಗುವುದೇ ಇಲ್ಲ. ಅದನ್ನು ಬಳಸಬಾರದೆನ್ನುವ ತನ್ನ ಹಠವೇ ಎಲ್ಲವನ್ನೂ ನುಂಗಿ ಹಾಕಿಬಿಡುತ್ತದೆ. ಅವಳ ಹಠದ ಮುಂದೆ ಯಾವ ವಿವೇಚನೆಯೂ ನಡೆಯುವುದಿಲ್ಲ. ಮುಂಚೆ ಅಮ್ಮ ಹೀಗಿರಲಿಲ್ಲ. ಬರೀ ಪ್ರೀತಿಯನ್ನು ಸುರಿಸುವ ಜಲಪಾತದಂತಿದ್ದಳು. ಯಾವಾಗ ಅಪ್ಪ ಸತ್ತನೋ, ಆಗಿನಿಂದ ಇವಳ ವರ್ತನೆ ಬದಲಾಯ್ತು. ಯಾವುದೋ ದೊಡ್ಡ ಜವಾಬ್ದಾರಿಯೊಂದು ತನ್ನ ತಲೆಯ ಮೇಲೆ ಕೂತುಬಿಟ್ಟಂತೆ ಗಂಭೀರವಾಗಿಬಿಟ್ಟಳು. ಮುಖದಲ್ಲಿನ ನಗೆಯನ್ನೇ ಕಳೆದುಕೊಂಡುಬಿಟ್ಟಳು. ಏನು ಮಾಡಬೇಕೆಂದರೂ ಅನುಮಾನ. ಯಾರನ್ನೂ ನಂಬುವುದಕ್ಕೆ ಸಿದ್ಧವಿಲ್ಲ. ಹೊಸತರ ಬಗ್ಗೆ ಹಿಂಜರಿಕೆ, ಬದಲಾವಣೆಯೆಂದರೆ ಭಯ.

ಸ್ನಾನ ಮಾಡಿ ಹೊರಬಂದಾಗ ಮೊದಲು ಹಾಸಿಗೆಯ ಮೇಲಿದ್ದ ಮೊಬೈಲನ್ನು ಎತ್ತಿಕೊಂಡಳು. ನೂರಾ ಇಪ್ಪತ್ತು ಕಾಮೆಂಟುಗಳು ಮತ್ತು ಇನ್ನೂರೈವತ್ತು ಲೈಕುಗಳು! ಗೆಳೆಯರ ಬಗ್ಗೆ ಖುಷಿಯಿಂದ ಹೃದಯ ತುಂಬಿ ಬಂತು. 'ದೇವಸ್ಥಾನ ಮಹಾ ಬೋರಿಂಗ್! ಹೋಗಬೇಡ'. 'ಶಿವನ ಸಮುದ್ರದಲ್ಲಿ ನೀರು ತುಂಬಿ ಹರಿತಾ ಇದೆ. ಎಲ್ಲರೂ ಬೈಕಿನಲ್ಲಿ ಹೋಗ್ತೀದೀವಿ. ಅಲ್ಲಿಯೇ ಸ್ನಾನ. ನೀನೂ ಬಂದು ಬಿಡು.' 'ರೋಹಿತ್ ಮನೆಯಲ್ಲಿ ದೊಡ್ಡ ಪಾರ್ಟಿ ಮಾಡ್ತಿದೀವಿ. ನೀನೂ ಬಾ. ದೇವಸ್ಥಾನ ಎಲ್ಲಾ ಬೇಡ.' ಇತ್ಯಾದಿ ಹಲವಾರು ಮೆಸೇಜ್‌ಗಳು ಬಂದಿದ್ದವು. ತನ್ನ ಬಗ್ಗೆ ಗೆಳೆಯರಿಗೆ ಎಷ್ಟೊಂದು ಕಾಳಜಿ!

ಎಷ್ಟೊಂದು ಉತ್ಸಾಹ!! ಅವರ ಈ ಸ್ನೇಹಕ್ಕೆ ಬೆಲೆ ಕಟ್ಟಲು ಆದೀತೆ? ದೇವಸ್ಥಾನಕ್ಕೆ ಹೋಗುವುದು ಬೇಡವೆನ್ನುವ ನಿರ್ಧಾರ ಹಗೂರಕ್ಕೆ ಅವಳಲ್ಲಿ ಹರಳುಗಟ್ಟಲು ಶುರುವಿಟ್ಟಿತು.

ಮೈ ಒರೆಸಿಕೊಂಡು, ಕೂದಲನ್ನು ಒಣಗಿಸಿಕೊಳ್ಳುವಾಗ ಅಂಕಿತಾಗೆ ಬೆತ್ತಲೆಯಾಗಿ ತನ್ನ ರೂಪವನ್ನು ನಿಲುವುಗನ್ನಡಿಯಲ್ಲಿ ನೋಡಿಕೊಳ್ಳುವ ಅಭ್ಯಾಸವಿದೆ. ಬೇರೆ ಬೇರೆ ಕೋನಗಳಿಂದ ತನ್ನ ದೇಹವನ್ನು ಪ್ರತಿನಿತ್ಯ ನೋಡಿಕೊಳ್ಳುತ್ತಾಳೆ. ಈವತ್ತೂ ಹಾಗೇ ಕನ್ನಡಿಯ ಮುಂದೆ ನಿಂತಾಗ ಒಂದು ಪೋಲಿ ಆಲೋಚನೆ ಬಂತು. ಮೊಬೈಲ್ ತೆಗೆದುಕೊಂಡು ಮುಖದಿಂದ ಎದೆಯ ಸೀಳಿನ ತನಕ ಕಾಣುವಂತಹ ಒಂದು ಫೋಟೋ ತೆಗೆದಳು. ಮುಖದಲ್ಲಿ ನಗುವಿರಬಾರದು. ಏನೋ ಗಂಭೀರವಾದ ನೋಟದಲ್ಲಿ ಯಾರನ್ನೋ ಕೆಣಕುತ್ತಿರುವಂತಹ ಭಾವವಿರಬೇಕು. ಕೂದಲು ಬೆನ್ನ ಹಿಂದೆ ಹರಡಿರಲಿ. ಹಿನ್ನೆಲೆಯಲ್ಲಿ ಅಸ್ಪಷ್ಟವಾಗಿ ಹಾಸಿಗೆ, ಅದರ ಮೇಲೆ ಮೈ ಒರೆಸಿಕೊಂಡು ಒಗೆದ ಟವಲು ಕಾಣಬೇಕು. ಒಟ್ಟಾರೆ ಏನೋ ಕಂಡಂತಾಗಬೇಕು, ಆದರೆ ಏನೂ ಕಾಣಿಸಬಾರದು. ತನ್ನ ಲ್ಯಾಪ್‌ಟಾಪಿಗೆ ಆ ಫೋಟೋವನ್ನು ಹಾಕಿ ಫೋಟೋಶಾಪಿನಲ್ಲಿ ಎಡಿಟ್ ಮಾಡಿದಳು. ಮೈಯ ಬಣ್ಣವನ್ನು ಒಂದಿಷ್ಟು ಹೆಚ್ಚಿಸಿದಳು. ಸರಿಯಾದ ಸ್ಥಳಕ್ಕೆ ಕ್ರಾಪ್ ಮಾಡಿದಳು. ನೋಡಿದ ಹುಡುಗರಿಗೆ ತಾನು ಬೆತ್ತಲೆಯಾಗಿ ನಿಂತು ತೆಗೆದುಕೊಂಡ ಫೋಟೋ ಅದೆಂದು ಅನ್ನಿಸಿ ಕಿಕ್ ಕೊಡಬೇಕು, ಆದರೆ ಏನನ್ನೂ ತೋರಿಸಬಾರದು. ಒಟ್ಟಾರೆ ಒಂದು ಪುಟ್ಟ ಅಲೆಯನ್ನು ಗೆಳೆಯರ ಮಧ್ಯದಲ್ಲಿ ಈ ಫೋಟೋ ಸೃಷ್ಟಿಸಬೇಕು. ಈವತ್ತು ಅವರೆಲ್ಲರೂ ಅದರ ಬಗ್ಗೆ ಬಿಸಿಬಿಸಿಯಾಗಿ ಮಾತನಾಡಬೇಕು.

"ನಿಮ್ಮೆಲ್ಲರ ಸಲಹೆಗಳಿಗೆ ನನ್ನ ಧನ್ಯವಾದಗಳು. ನನ್ನ ನಿರ್ಧಾರವನ್ನು ಹಗುರಗೊಳಿಸಿಬಿಟ್ಟಿರಿ. ದೇವಸ್ಥಾನಕ್ಕೆ ಹೋಗುವುದು ಬೇಡವೆಂದು ನಿರ್ಧರಿಸಿಬಿಟ್ಟೆ! ಹೊಟ್ಟೆನೋವು ಎಂದು ಅಮ್ಮನಿಗೆ ಸುಳ್ಳು ಹೇಳಿಬಿಡುತ್ತೇನೆ. ಆದ್ದರಿಂದ ಮಧ್ಯಾಹ್ನದ ತನಕ ಮನೆಯಲ್ಲಿ ಒಬ್ಬಳೇ! ನಿಮ್ಮಲ್ಲಿ ಯಾರ ಗುಂಪನ್ನು ಸೇರಿಕೊಳ್ಳಬೇಕೆಂಬ ನಿರ್ಧಾರವನ್ನು ಶೀಘ್ರವೇ ಮಾಡುತ್ತೇನೆ. ನಿಮ್ಮೆಲ್ಲರ ಸಹಾಯಕ್ಕಾಗಿ ಈ ಹೊಸ ಫೋಟೋ ನನ್ನ ಕಾಣಿಕೆ! ಹೇಗಿದೆ?" ಎಂದು ಸ್ಟೇಟಸ್ ಬರೆದು, ಫೋಟೋಶಾಪಿನಲ್ಲಿ ತಿದ್ದಿದ ಹೊಸ

ಫೋಟೋವನ್ನು ಹಾಕಿದಳು. ರಪರಪನೆ ಲೈಕ್‌ಗಳು ಬರಲಾರಂಭಿಸಿದವು. ಜೇನುಗೂಡಿಗೆ ಕಲ್ಲು ಒಗೆದ ಭಾವ ಅಂಕಿತಾಗೆ ಮೂಡಿತು. ತನ್ನ ತುಂಟಾಟಕ್ಕೆ ಹೆಮ್ಮೆಯೆನ್ನಿಸಿ ಹತ್ತಿಕ್ಕಲಾಗದ ನಗೆಯೊಂದು ಅವಳ ಮುಖದಲ್ಲಿ ಮೂಡಿತು. ಅಮ್ಮ ಮಾಡಿದ ಉಪ್ಪಾಬಾತ್ ತಿನ್ನಲು ಅಡಿಗೆ ಮನೆಗೆ ಹೋದಳು.

ಉಪ್ಪಾಬಾತ್ ರುಚಿಯಾಗಿತ್ತು. ಅಮ್ಮ ಮಾಡಿದ ಅಡುಗೆಯ ರುಚಿಗೆ ಸಮಾನವಾದದ್ದು ಯಾವುದೂ ಇಲ್ಲ ಎಂದು ಅಂಕಿತಾಗೆ ಗೊತ್ತು. ಈವತ್ತು ಬರಲ್ಲ ಅಂತ ಹೇಳಿದಾಗ ಅಮ್ಮಗೆ ಬೇಜಾರಾಗುತ್ತೇನೋ? ಒಂದು ವಾರದಿಂದ ಇದರ ಬಗ್ಗೆ ಹೇಳುತ್ತಾ ಬಂದಿದ್ದಾಳೆ. ಮತ್ತೆ ಅಳೋದಕ್ಕೆ ಶುರು ಮಾಡುತ್ತಾಳೆ. ಒಮ್ಮೆ ಹೋಗಿ ಬಂದು ಬಿಟ್ಟರೆ ಖುಷಿಯಾಗ್ತಾಳೆ. ಆದರದು ಇಷ್ಟವಿಲ್ಲ. ಊಹೂಂ! ಅವಳ ಅಳುವಿಗೆ ನಾನು ಬಗ್ಗಬಾರದು. ಅದು ಅವಳು ನನ್ನ ಮೇಲೆ ಪ್ರಯೋಗಿಸುವ ಅಸ್ತ್ರ. ನನ್ನತನವನ್ನು ನಾಶ ಮಾಡುವುದಕ್ಕೆ ಅವಳು ಉಪಯೋಗಿಸುವ ಹತಾರ, ಅದಕ್ಕೆ ಕರಗಬಾರದು. ನಾನು ಗಟ್ಟಿಯಾಗಬೇಕು. ಅಮ್ಮ ಬೇರೆ, ನಾನೇ ಬೇರೆ. ಮೊಬೈಲ್ ಕುಯ್‌ಗುಟ್ಟುತ್ತಲೇ ಇತ್ತು. ಸಿಕ್ಕಾಪಟ್ಟೆ ಲೈಕ್‌ಗಳೂ, ಕಾಮೆಂಟ್‌ಗಳೂ ಬಂದು ಬೀಳುತ್ತಿದ್ದವು. ಉಪ್ಪಾಭಾತು ತಿನ್ನುವ ಕೈಯಿಂದಲೇ ತಟ್ಟೆ ಹಿಡಿದುಕೊಂಡು, ಎಡಗೈಯಲ್ಲಿ ಮೊಬೈಲ್ ತೆಗೆದುಕೊಂಡು ನೋಡಿದಳು. ಮುನ್ನೂರಾ ಹದಿನಾರು ಲೈಕ್‌ಗಳು! ಅಕೋ ಮುನ್ನೂರಾ ಹದಿನೇಳು ಬಂದೇ ಬಿಟ್ಟಿತು!! ಆಗಲೇ ಕಾಮೆಂಟುಗಳು ಐವತ್ತು ದಾಟಿವೆ. ನಲವತ್ಮೂರು ಜನ ಫೋಟೋವನ್ನು ಶೇರ್ ಮಾಡಿಕೊಂಡಿದ್ದಾರೆ. ಅಂಕಿತಾಗೆ ಖುಷಿಯಿಂದ ಮುಖದಲ್ಲಿ ಹತ್ತಿಕ್ಕಲಾರದ ನಗೆಯುರಳಿತು. ಎಲ್ಲಾ ಕಾಮೆಂಟ್‌ಗಳಿಗೆ ಈವತ್ತು ಪ್ರತಿಕ್ರಿಯಿಸಬೇಕು. ಅಕೋ, ಐವತ್ನಾಲ್ಕನೆಯ ಕಾಮೆಂಟೂ ಬಂತು! "ನಮ್ಮ ಪ್ರಿಯಂಕಾ ಛೋಪ್ರಾ!!"

ಅಂಕಿತಾಳ ಒಂಟಿತನವನ್ನು ಕತ್ತರಿಸುವಂತೆ ಕರೆಗಂಟೆ ಅಪಸ್ವರದಲ್ಲಿ ಕಿರುಚಿತು. ಉಪ್ಪಾಭಾತಿನ ತಟ್ಟೆಯನ್ನು ಹಿಡಿದುಕೊಂಡೇ ಬಾಗಿಲಿನ ಬಳಿ ನಡೆದಳು. ಬಾಗಿಲಿದ್ದ ಪುಟ್ಟ ಮಸೂರದ ಮೂಲಕ ಹೊರಗಿನವರು ಯಾರೆಂದು ನೋಡಿದಳು. ತುಂಬಾ ಪರಿಚಿತ ಮುಖ. ಆದರೆ ಯಾರೆಂದು ತಿಳಿಯಲಿಲ್ಲ. ಬಾಗಿಲು ತೆಗೆಯುವುದಕ್ಕೆ ಹಿಂಜರಿದಳು. "ಯಾರು?" ಎಂದು ಕೇಳಿದಳು. "ಉದಯ್, ಉದಯ್ ಸ್ವರೂಪ್" ಎಂದು ಅವನು ಉತ್ತರಿಸಿ ನಕ್ಕ. ಅವನು ನಗುಮುಖದ ಕೆನ್ನೆಯ ಗುಳಿಯನ್ನು ನೋಡಿದ ತಕ್ಷಣಕ್ಕೆ ನೆನಪಿಗೆ ಬಂತು. ಫೇಸ್‌ಬುಕ್ ಗೆಳೆಯ. ಅದೇ ನಗುಮುಖದ ಫೋಟೋ ಅವನ

ಪ್ರೊಫೈಲ್‌ನಲ್ಲಿದೆ. ಸಾಕಷ್ಟು ಬಾರಿ ನನ್ನೊಡನೆ ಚಾಟ್ ಮಾಡಿದ್ದಾನೆ. ತನ್ನ ಹೊಸ ಫೋಟೋ ಹಾಕಿದರೆ ಲೈಕ್ ಒತ್ತುವ ಮೊದಲಿಗ ಅವನೇ! ಹಿಂದೊಮ್ಮೆ ಅವನು ನೀಲಿ ಜೀನ್ಸ್ ಹಾಕಿಕೊಂಡು, ಬೆತ್ತಲೆ ಎದೆಯಲ್ಲಿ ತನ್ನ ಮಜಭೂತಾದ ಮಜಲ್ಸ್ ತೋರಿಸಿಕೊಂಡು, ಹೊಟ್ಟೆಯ ಸಿಕ್ಸ್ ಪ್ಯಾಕ್‌ಗಳನ್ನು ಸ್ಪಷ್ಟವಾಗಿ ತೋರಿಸಿದ ಸಲ್ಮಾನ್‌ಖಾನ್ ಫೋಟೋಕ್ಕೆ ಸೂಪರ್ ಲೈಕ್ ಕಾಮೆಂಟು ಹಾಕಿದ್ದು ನೆನಪಿಗೆ ಬಂತು. ಆದರೆ ಇದೇ ಮೊದಲ ಸಲ ಅವನನ್ನು ಮುಖತಃ ಭೇಟಿಯಾಗುತ್ತಿರುವುದು. ಧೈರ್ಯ ಬಂತು. ನಗುತ್ತಾ ಬಾಗಿಲು ತೆಗೆದಳು. "ಇದೇನು, ಇಲ್ಲಿ?" ಎಂದು ಅಚ್ಚರಿಯಿಂದ ಕೇಳಿದಳು.

ಮುಂದೆ ನಡೆದ ಘಟನೆ ಅವಳ ಕಲ್ಪನೆಗೆ ಮೀರಿದ್ದಾಗಿತ್ತು. ಉದಯ್ ಅವಳ ಬಾಯನ್ನು ಮುಚ್ಚಿದ್ದೇ ಮನೆಯೊಳಕ್ಕೆ ದರದರನೆ ಎಳೆದುಕೊಂಡು ಹೋದ. ಉಪ್ಪಿಟ್ಟಿನ ತಟ್ಟೆ ಅವಳ ಕೈಯಿಂದ ಜಾರಿ ಬಿದ್ದು, ಮನೆಯ ತುಂಬೆಲ್ಲಾ ಚೆಲ್ಲಾಡಿತು. ಅವನ ಹಿಂದೆಯೇ ಮತ್ತಿಬ್ಬರು ಹರೆಯದ ಹುಡುಗರು ಕೈಯಲ್ಲಿ ಹಗ್ಗವನ್ನು ಹಿಡಿದುಕೊಂಡು ಒಳನುಗ್ಗಿ, ಬಾಗಿಲಿನ ಚಿಲಕವನ್ನು ಜಡಿದರು.

* * *

ನಾಲ್ಕು ದಿನ ಸಾಲಾಗಿ ರಜೆಗಳಿದ್ದರಿಂದ ರಸ್ತೆಗಳು ಖಾಲಿ ಹೊಡೆಯುತ್ತಿದ್ದವು. ಸಿಟಿ ಬಸ್ಸುಗಳೂ ಖಾಲಿಯಾಗಿದ್ದವು. ಕುಸುಮಾ ಸ್ವಲ್ಪ ಬೇಗನೆಯೇ ದೇವಸ್ಥಾನವನ್ನು ತಲುಪಿದ್ದಳು. ಬೆಂಗಳೂರಿನ ಈ ಉತ್ತರ ಭಾಗ ಅವಳಿಗೆ ಅಷ್ಟಾಗಿ ಪರಿಚಿತವಲ್ಲ. ಅವರಿವರನ್ನು ಕೇಳಿಕೊಂಡು ಅಲ್ಲಿಗೆ ಹೋಗಬೇಕಾಯ್ತು. ಆದರೆ ದೇವಸ್ಥಾನದಲ್ಲಿ ಸಾಕಷ್ಟು ಪರಿಚಿತರು ಕಂಡ ಮೇಲೆ ಖುಷಿಯಾಯ್ತು. "ಒಬ್ಬರೇ ಬಂದ್ರಾ?" ಎಂದು ಒಂದಿಬ್ಬರು ಕೇಳಿದಾಗ, "ಇಲ್ಲ, ಮಗಳು ಆಮೇಲಕ್ಕೆ ಬರ್ತಾಳೆ" ಎಂದು ಉತ್ತರಿಸಿದಳು. ಆದರೆ ಒಳಗೊಳಗೇ ಅನುಮಾನ – ಬರ್ತಾಳೋ, ಕೈ ಕೊಡ್ತಾಳೋ! ಆದಷ್ಟು ಬೇಗನೆ ಒಮ್ಮೆ ಫೋನ್ ಮಾಡಿ ಎಚ್ಚರಿಸಬೇಕು. ಪೂರ್ಣಾಹುತಿಯ ಹೊತ್ತಿಗೆ ಬಂದರೆ ಸಾಕು. ಹೋಮದ ಹೊಗೆ ಅವಳಿಗೆ ತಾಕಿದರೆ ಸಾಕು. ಎಲ್ಲಾ ಕಷ್ಟಗಳು ಪರಿಹಾರವಾಗುತ್ತವೆಂದು ಸೋಮಯಾಜಿಗಳು ಹೇಳಿದ್ದಾರೆ.

ಹೋಮ ಶುರುವಾಯ್ತು. ಜನರು ಸೇರಲಾರಂಭಿಸಿದರು. ಮಂತ್ರಗಳು ಎಲ್ಲರಿಗೂ ಕೇಳಿಸುವಂತೆ ಸೊಗಸಾದ ಧ್ವನಿವರ್ಧಕಗಳನ್ನು ಅಳವಡಿಸಿದ್ದರು.

ಹೋಮಕುಂಡದ ಮುಂದೆ ಹಾಕಿದ ಬಣ್ಣದ ರಂಗೋಲಿ ಅತ್ಯಂತ ಕಲಾತ್ಮಕವಾಗಿತ್ತು. ವರ್ಣರಂಜಿತವಾಗಿತ್ತು. ಯಾರೋ ಹರೆಯದ ಹುಡುಗನೊಬ್ಬ ಅದರ ಫೋಟೋ ತೆಗೆದುಕೊಳ್ಳುತ್ತಿದ್ದ. ಹುಡುಗ ಲಕ್ಷಣವಾಗಿದ್ದ. ಅಂಕಿತಾಗಿಂತ ಸ್ವಲ್ಪ ಎತ್ತರ. ಇಂತಹ ಹುಡುಗ ಅಂಕಿತಾಗೆ ಒಳ್ಳೆಯ ಜೋಡಿಯಾಗುತ್ತಾನೆಂದು ಕುಸುಮಾಗೆ ಅನ್ನಿಸಿತು. ಯಾರೆಂದು ತಿಳಿದುಕೊಳ್ಳಲು ಅವರಿವರ ಬಳಿ ವಿಚಾರಿಸಲಾರಂಭಿಸಿದಳು.

ಸೋಮಯಾಜಿಗಳು ಭರ್ಜರಿ ಬಣ್ಣದ ಕೆಂಪು ರೇಷ್ಮೆ ಮಡಿಯನ್ನುಟ್ಟುಕೊಂಡು ಬಂದು ಹೋಮ ಮಾಡಿಸುತ್ತಿದ್ದರು. ಎತ್ತರದ ಗಂಟಲಿನಲ್ಲಿ ಶ್ಲೋಕಗಳನ್ನು ಹೇಳುತ್ತಾ, ಒಬ್ಬೊಬ್ಬರಾಗಿ ದೇವರನ್ನು ಕರೆದು 'ಸ್ವಾಹಾ' ಎನ್ನುತ್ತಿದ್ದರು. ಹೋಮಕ್ಕೆ ಹೆಚ್ಚು ಹಣವನ್ನು ನೀಡಿದ ದಂಪತಿ ಮಣೆಯ ಮೇಲೆ ಕುಳಿತಿದ್ದರು. ಅವರಿಬ್ಬರೂ ಕೈಹಿಡಿದುಕೊಂಡು, ಉದ್ದ ಕಟ್ಟಿಗೆಯ ಸೌಟಿನಿಂದ ತುಪ್ಪವನ್ನು ಹೋಮಕುಂಡಕ್ಕೆ ಸುರಿಯುತ್ತಿದ್ದರು. ಹವಿಸ್ಸು ಸ್ವೀಕರಿಸಿದ ದೇವತೆ ತೃಪ್ತಿಯಿಂದ ನಾಲಿಗೆಯನ್ನು ಚಪ್ಪರಿಸುವ ರೀತಿಯಲ್ಲಿ ಬೆಂಕಿಯ ಕೆನ್ನಾಲಿಗೆಗಳು ಮೇಲಕ್ಕೆ ಏಳುತ್ತಿದ್ದವು.

ಸಾಕಷ್ಟು ದೇವರುಗಳು ಬಂದು ಹೋದರೂ ಅಂಕಿತಾ ಬರಲಿಲ್ಲ. ಕುಸುಮಾಳ ಅನುಮಾನ ದಟ್ಟವಾಗಲಾರಂಭಿಸಿತು. ಬರಲ್ಲ ಈ ರಂಡೆ, ನಂಗೊತ್ತು. ಯಾವತ್ತೂ ಹಠ ಸಾಧಿಸುತ್ತಾಳೆ. ಅಮ್ಮ ಯಾವುದಕ್ಕೂ ಬೇಡ. ಕಾಲ ಕಸ. ಇಷ್ಟು ಕಷ್ಟಪಟ್ಟು ಇವಳನ್ನು ಬೆಳೆಸಿದ್ರೂ ಅದರ ಬಗ್ಗೆ ಗೌರವ ಇಲ್ಲ. ಎಲ್ಲಾ ಹೋಮ ಕುಂಡದಲ್ಲಿ ತುಪ್ಪ ಸುರಿದಂತೆ ವ್ಯರ್ಥ! ಚಿಕ್ಕವಳಿದ್ದಾಗ ಎಷ್ಟು ಪ್ರೀತಿ ತೋರಿಸ್ತಾ ಇದ್ದಳು. ನಾನು ಕರೆದ ಕಡೆಯಲ್ಲೆಲ್ಲಾ ಬರೋಳು. ಎಷ್ಟು ಪ್ರೀತಿ ಮಾಡಿದ್ರೂ ಸುಮ್ಮನಿರೋಳು. ಹೆಣ್ಣುಮಕ್ಕಳು ದೊಡ್ಡವರಾಗಬಾರದು. ತಾಯಂದಿರನ್ನ ದ್ವೇಷ ಮಾಡ್ತಾವೆ. ಅವು ದೊಡ್ಡವರಾಗೋದರೊಳಗೆ ಇನ್ನೊಂದು ಮಗು ಮಾಡಿಕೊಂಡು ಬಿಡಬೇಕು. ಪ್ರೀತಿಯನ್ನು ಯಾವುದೇ ತಕರಾರಿಲ್ಲದೆ ಸ್ವೀಕರಿಸುವ ಒಂದು ಪುಟ್ಟ ಮಗು ಹೆಣ್ಣಿನ ಬಳಿ ಯಾವಾಗಲೂ ಇರಬೇಕು.

ಸೋಮಯಾಜಿಗಳ ಮೊಬೈಲ್ ಕರೆ ಸದ್ದು ಮಾಡಿತು. ಆ ಸದ್ದು ಇಡೀ ಧ್ವನಿವರ್ಧಕ ಮೂಲಕ ಎಲ್ಲರಿಗೂ ಕೇಳಿಸಿತ್ತು. ಸರದಿಯಲ್ಲಿ ನಿಂತ ದೇವರುಗಳನ್ನು ಬಿಟ್ಟು, ಫೋನಿನಲ್ಲಿ ಗಟ್ಟಿ ಧ್ವನಿಯಲ್ಲಿ ಮಾತನಾಡಿದರು.

ಮಂತ್ರ ಹೇಳಿದರೂ ಅಷ್ಟೇ, ಬರೀ ಮಾತನಾಡಿದರೂ ಅಷ್ಟೆ. ಅವರದು ಸ್ಪಷ್ಟ ಉಚ್ಚಾರ. ಫೋನ್ ಮುಗಿದ ತಕ್ಷಣ ಮತ್ತೆ ದೇವರುಗಳ ಸರತಿಯ ಕಡೆಗೆ ಗಮನಹರಿಸಿದರು. ಪೂರ್ಣಾಹುತಿಗೆ ಇನ್ನೇನು ಅರ್ಧ ಗಂಟೆ ಉಳಿದಿರಬಹುದು. ಅಂಕಿತಾ ಪತ್ತೆ ಇಲ್ಲ. ಆಗಲೇ ಪೂರ್ಣಾಹುತಿಯ ಇಡುಗಾಯಿಯನ್ನು ಎಲ್ಲರಿಗೂ ಮುಟ್ಟಲು ಕಳುಹಿಸಿ ಕೊಟ್ಟರು.

ಕುಸುಮಾ ಫೋನ್ ಮಾಡಲು ಎದ್ದಳು. ದೇವಸ್ಥಾನದಲ್ಲಿದ್ದ ಎಲ್ಲರ ಬಳಿ ಮೊಬೈಲ್ ಇರುವುದು ಅವಳಿಗೆ ಕಾಣಿಸುತ್ತಿತ್ತು. ಆದರೆ ಅದನ್ನು ಕೇಳಿ ಪಡೆದು ಫೋನ್ ಮಾಡಲು ಅವಳಿಗೆ ಮುಜುಗರ, "ಯಾಕೆ, ನಿಮ್ಮ ಮೊಬೈಲ್ ಮರೆತು ಬಂದೀರಾ?" ಎಂದು ತಕ್ಷಣ ಕೇಳುತ್ತಾರೆ. ಅವರಿಗೆ ತನ್ನ ಬಳಿ ಮೊಬೈಲ್ ಇಲ್ಲ ಎಂದು ಹೇಳಲು ಸಂಕೋಚವಾಗುತ್ತದೆ. ಮರೆತು ಬಂದಿರುವೆನೆಂದು ಸುಳ್ಳು ಹೇಳಲು ಸಾಧ್ಯವಿಲ್ಲ. ಆದ್ದರಿಂದ ಹೊರಗೆ ಹೋಗಿ ಯಾವುದಾದರೂ ಟೆಲಿಫೋನ್ ಬೂತಿನಲ್ಲಿ ಫೋನ್ ಮಾಡುವುದು ಒಳ್ಳೆಯದು.

ಅದು ಬೆಂಗಳೂರಿನ ಹೊರ ಬಡಾವಣೆಯಾಗಿತ್ತು. ಕುಸುಮಾಗೆ ಅಷ್ಟೊಂದು ಪರಿಚಿತವಾದ ಸ್ಥಳವದಲ್ಲ. ಓಣಿಯ ಕೊನೆಯ ತನಕ ಬಂದು ನೋಡಿದಳು. ಯಾವುದೇ ಅಂಗಡಿಗಳು ಕಾಣಿಸಲಿಲ್ಲ. ಯಾರೋ ಹಾದಿಯಲ್ಲಿ ಹೋಗುತ್ತಿದ್ದ ಹೆಣ್ಣು ಮಗಳನ್ನು ತಡೆದು "ಇಲ್ಲಿ ಎಸ್‌ಟಿಡಿ ಬೂತ್ ಎಲ್ಲದಮ್ಮಾ?" ಎಂದು ಕೇಳಿದಳು. ಅಂಕಿತಾಳ ವಯಸ್ಸಿನ ಹುಡುಗಿಯವಳು. "ಆಂಟಿ, ಇಲ್ಲೆಲ್ಲೂ ನೋಡಿದ ನೆನಪಿಲ್ಲ. ಈಗ ಮೊಬೈಲ್ ಬಂದ ಮೇಲೆ ಅಂಥಾ ಅಂಗಡಿಗಳು ಕಡಿಮೆಯಾಗ್ತಿವೆ ಅಲ್ವಾ ಆಂಟಿ?" ಎಂದು ಕೇಳಿದಳು. ಕುಸುಮಾ ಪೆಚ್ಚು ನಗೆಯನ್ನು ಬೀರಿದಳು. "ಅರ್ಜೆಂಟಾಗಿ ಆಗಿ ನನ್ನ ಮಗಳಿಗೆ ಫೋನ್ ಮಾಡ್ಬೇಕಿತ್ತಮ್ಮಾ.... ಅದಕ್ಕೇ ಕೇಳಿದೆ" ಎಂದು ಸಂಕೋಚದಿಂದ ಹೇಳಿದಳು. "ಅಯ್ಯೋ ಅದಕ್ಕೆ ಯಾಕೆ ಸಂಕೋಚ? ನನ್ನ ಫೋನ್ ಬಳಸಿ, ಪರವಾಗಿಲ್ಲ" ಎಂದು ಫೋನ್ ಕೊಡಲು ಬಂದಳು. ಥೇಟ್ ಅಂಕಿತಾಳ ಬಳಿ ಇರುವಂತಹದೇ ಫೋನದು! ತಕ್ಷಣ ಕುಸುಮಾಳ ಸ್ವಾಭಿಮಾನ ಜಾಗೃತಗೊಂಡಿತು. "ಬೇಡಮ್ಮ ಬೇಡ! ಇಲ್ಲೇs ಎಲ್ಲನ್ನಾ ಫೋನ್ ಅಂಗಡಿ ಇದ್ದೇ ಇರ್ತಾದೆ. ನೀನು ಅಂಥಾ ಅಂಗಡಿ ಬಳಸಲ್ಲ ನೋಡು, ಅದಕ್ಕೇ ಗೊತ್ತಿಲ್ಲ" ಎಂದು ಹಮ್ಮಿನಿಂದ ಹೇಳಿದಳು. ಆ ಹುಡುಗಿ ಸುಮ್ಮನಾದಳು. ಪೆಚ್ಚು ನಗೆ ಬೀರಿ ಮುಂದೆ ನಡೆದುಬಿಟ್ಟಳು. ಆದರೆ ಸ್ವಲ್ಪ ದೂರ ಹೋದ ಮೇಲೆ "ಆಂಟೀ...." ಎಂದು ಕೂಗಿದಳು. "ಆ ಮೂರನೇ ಕ್ರಾಸಿನಲ್ಲಿ ಒಂದು

ದೊಡ್ಡ ಬಿಲ್ಡಿಂಗ್ ಅದೆ. ಹಳೇ ಕಾಲದ ಬಿಲ್ಡಿಂಗು. ಆ ಬಿಲ್ಡಿಂಗಿನ ಮೇಲೆ ಒಂದು ದೊಡ್ಡ ಮೊಬೈಲ್ ಟವರ್ ಅದೆ. ಅದರಲ್ಲಿ ನಾಲ್ಕನೇ ಫ್ಲೋರಿನಾಗೆ ಒಂದು ಎಸ್‌ಟಿಡಿ ಬೂತ್ ಅದೆ. ಅದು ಆಕ್ಚುವಲಿ ಜೆರಾಕ್ಸ್ ಅಂಗಡಿ. ಫೋನ್ ಕೂಡಾ ಇಟ್ಟುಗೊಂಡಾರೆ. ಆದರೆ ತೆಗೆದಿರ್ತಾರೋ ಇಲ್ವೋ ಗೊತ್ತಿಲ್ಲ. ನಾಲ್ಕು ದಿನ ರಜೆ ಬಂದದೆ ನೋಡಿ..." ಎಂದು ಹೇಳಿದಳು. ಕುಸುಮಾ "ನೋಡ್ತೀನಮ್ಮ...." ಎಂದು ಅವಳು ಹೇಳಿದ ದಿಕ್ಕಿನೆಡೆಗೆ ನಡೆದಳು.

ಮೂರನೇ ತಿರುವಿನಿಂದ ಸ್ವಲ್ಪದೂರದಲ್ಲಿಯೇ ಹಳೆಯ ಕಾಲದ ದೊಡ್ಡ ಕಟ್ಟಡವಿತ್ತು. ಒಳಗೆ ಸಾಕಷ್ಟು ಕಛೇರಿಗಳು ಇವೆಯೆಂದು ಹೊರಗೆ ನಿಲ್ಲಿಸಿದ ಬೋರ್ಡಿನಿಂದ ತಿಳಿಯುತ್ತಿತ್ತು. ಜನರ ಸಂಚಾರವೇ ಇರಲಿಲ್ಲ. ಆದರೂ ಕುಸುಮಾ ಧೈರ್ಯ ಮಾಡಿ ಅದರೊಳಗೆ ಹೊಕ್ಕಳು. ಇಡೀ ಕಟ್ಟಡ ನಿರ್ಜನವಾಗಿತ್ತು. ಅಂಗಡಿ ತೆರೆದಿರಲಿಕ್ಕಿಲ್ಲ ಎಂದನ್ನಿಸಿತು. ಆದರೂ ಮಗಳಿಗೆ ಫೋನ್ ಮಾಡಲೇ ಬೇಕಿತ್ತು. ನಾಲ್ಕನೆಯ ಮಹಡಿಗೆ ಹೋಗಲು ಲಿಫ್ಟ್ ಇತ್ತು. ಯಂತ್ರ ಬಳಸುವುದು ಬೇಡವೆಂದು ನಿರ್ಧರಿಸಿ, ಮೆಟ್ಟಿಲುಗಳನ್ನು ಹತ್ತಲು ಶುರುವಿಟ್ಟಳು. ಡಾಕ್ಟರರೂ ಆದಷ್ಟು ಲಿಫ್ಟ್ ಬಳಸಬೇಡಿ ಎಂದು ಹೇಳಿದ್ದರು. ದಢೂತಿ ದೇಹ, ಸುಸ್ತಾಯ್ತು. ಎರಡನೆಯ ಮಹಡಿಯಲ್ಲಿ ಕುಳಿತು ಸುಧಾರಿಸಿಕೊಂಡಳು. ಯಾರೋ ಒಂದಿಬ್ಬರು ಮಾತನಾಡುತ್ತಾ ಕೆಳಗೆ ಇಳಿದು ಹೋಗುತ್ತಿದ್ದರು. "ಎಸ್‌ಟಿಡಿ ಬೂತ್ ತೆಗೆದಿದೆನಪ್ಪಾ?" ಎಂದು ಅವರನ್ನು ಕೇಳಿದಳು. ಅವರಿಬ್ಬರಿಗೂ ಅನುಮಾನವಾಯ್ತು, ಒಬ್ಬ ತೆಗೆದಿತ್ತು ಎಂತಲೂ, ಇನ್ನೊಬ್ಬ ಇಲ್ಲವೆಂತಲೂ ಹೇಳಿದರು. ಕುಸುಮಾಗೆ ಅಂಗಡಿ ತೆರೆದಿರಬಹುದೆಂದು ಧೈರ್ಯ ಬಂತು. ಮತ್ತೆ ಮೆಟ್ಟಿಲುಗಳನ್ನು ಹತ್ತಲಾರಂಭಿಸಿದಳು.

ನಾಲ್ಕನೆಯ ಮಹಡಿಗೆ ಬರುವ ವೇಳೆಗೆ ಮೇಲಿನ ಉಸಿರು ಮೇಲೆ, ಕೆಳಗಿನ ಉಸಿರು ಕೆಳಗೆ ಆಯ್ತು. ಆಯಾಸದಿಂದ ದೀರ್ಘವಾಗಿ ಉಸಿರಾಡಲು ಶುರುವಿಟ್ಟಳು. ಎದೆಬಡಿತ ಕಿವಿಗೆ ಕೇಳಿಸುವಷ್ಟು ಜೋರಾಗಿತ್ತು. ರೇಲಿಂಗ್ ಹಿಡಿದುಕೊಂಡು ಸ್ವಲ್ಪ ಸುಧಾರಿಸಿಕೊಂಡಳು. ಆಗ ಜೆರಾಕ್ಸ್ ಅಂಗಡಿ ಕಣ್ಣಿಗೆ ಬಿತ್ತು. ಮುಚ್ಚಿತ್ತು. ಸಿಟ್ಟು ಬಂತು. ಆದರೆ ಸಿಟ್ಟನ್ನು ಯಾರ ಮೇಲೆ ಪ್ರಯೋಗಿಸಬೇಕೆಂದು ತಿಳಿಯಲಿಲ್ಲ. ತನ್ನ ಅಸಹಾಯಕತೆಗೆ ದುಃಖವಾಯ್ತು. ಯಾಕೋ ಕಣ್ಣುಗಳು ಮಂಜಾದವು. ಮಗಳಿಗೆ ನಾನು ಸತ್ತ ಮೇಲೆಯೇ ತನ್ನ ಪ್ರೀತಿ ಅರ್ಥವಾಗೋದು ಅಂತನ್ನಿಸಿ ನೋವಾಯ್ತು ಮತ್ತೆ ನಾಲ್ಕು

ಮಹಡಿಗಳನ್ನು ಇಳಿದು ಹೋಗಬೇಕಾಗಿತ್ತು. ಈ ಬಾರಿ ಮತ್ತೆ ಮೆಟ್ಟಿಲುಗಳ ಮೂಲಕ ಇಳಿಯುವ ಧೈರ್ಯವಾಗಲಿಲ್ಲ. ಲಿಫ್ಟಿನ ಕಡೆಗೆ ತೆರಳಿದಳು.

ಹಳೆಯ ಕಾಲದ ಲಿಫ್ಟ್ ಅದಾಗಿತ್ತು. ಹೊರಗಿನ ಕಟ್ಟಿಗೆಯ ಬಾಗಿಲನ್ನು ತೆರೆದರೆ, ಒಳಗಡೆ ಕಬ್ಬಿಣದ ಕಟಾಂಜನದ ಬಾಗಿಲಿತ್ತು. ಒಳಗೆ ಹೋಗಿ ಬಾಗಿಲನ್ನು ಹಾಕಿಕೊಂಡಳು. ಸೊನ್ನೆ ನಂಬರಿನ ಬಟನ್ನನ್ನು ಒತ್ತಿದಳು. ಯಾಕೋ ಲಿಫ್ಟ್ ಕದಲಲಿಲ್ಲ. "ಕೆಲಸ ಮಾಡ್ತಾ ಇದೆಯೋ ಇಲ್ಲವೋ?" ಎಂಬ ಅನುಮಾನ ಬಂತು. ಇನ್ನೊಮ್ಮೆ ಗಟ್ಟಿಯಾಗಿ ಸೊನ್ನೆ ಎಂದು ಬರೆದ ಮಟನ್ ಒತ್ತಿದಳು. ಈಗದು ಕದಲಿತು. ನಿಂತ ನೆಲ ಹಗೂರಕ್ಕೆ ಕೆಳಗೆ ಇಳಿಯುವಾಗ ಅವಳಿಗೆ ಮೇಲಿನಿಂದ ಎತ್ತಿ ಒಗೆದಂತಹ ಭಯವಾಗುತ್ತದೆ. ಆದರೂ ಲಿಫ್ಟ್ ಕೆಲಸ ಮಾಡುತ್ತಿದೆಯೆಂಬ ವಿಚಾರ ಅವಳಿಧೈರ್ಯ ನೀಡಿ, "ಒಂದೇ ನಿಮಿಷ ಅಷ್ಟೇ, ನೆಲ ಬಂದೇ ಬಿಡ್ತದೆ" ಎಂದು ಸಮಾಧಾನ ಮಾಡಿಕೊಂಡಳು.

ಎರಡು ಕ್ಷಣ ಲಿಫ್ಟ್ ಕೆಳಗೆ ಬಂದಿತ್ತೋ ಇಲ್ಲವೋ, ಅಚಾನಕ್ಕಾಗಿ ನಿಂತುಬಿಟ್ಟಿತು. ಲಿಫ್ಟಿನೊಳಗೆ ದೀಪ ಆರಿ ಹೋಯ್ತು. ನೆಲಮಹಡಿ ಬಂದೇ ಬಿಟ್ಟಿತಾ ಎಂದು ಅಚ್ಚರಿಯಾಗಿ ಕಟಾಂಜನದ ಬಾಗಿಲು ತೆರೆಯಲು ನೋಡಿದಳು. ಮಿಸುಕಾಡಲಿಲ್ಲ. ಅದರ ಹಿಂದೆ ಗೋಡೆಯಿತ್ತು. "ಇದೇನಪ್ಪಾ ಗ್ರಹಚಾರ" ಅಂತ ಭಯವಾಯ್ತು. ಕಳವಳದಿಂದ ಮತ್ತೆ ಅಲ್ಲಿದ್ದ ಎಲ್ಲಾ ಮಹಡಿಯ ಬಟನ್‌ಗಳನ್ನು ಒತ್ತಿದಳು. ಲಿಫ್ಟ್ ಮಿಸುಕಾಡಲಿಲ್ಲ. "ಯಾರಿದೀರ... ಲಿಫ್ಟ್ ಕೆಟ್ಟು ಹೋಗ್ಯದೆ...." ಎಂದು ಜೋರಾಗಿ ಕೂಗಿದಳು. ಯಾವುದೇ ಪ್ರತ್ಯುತ್ತರ ಬರಲಿಲ್ಲ.

* * *

ದೇವಸ್ಥಾನದಲ್ಲಿ ಪೂರ್ಣಾಹುತಿಯ ಸಮಯ ಬಂದೇಬಿಟ್ಟಿತು. ಸೇರಿದ ಸಮಸ್ತರಿಂದಲೂ ಮುಟ್ಟಿಸಿಕೊಂಡು ಪವಿತ್ರವಾದ ಇಡುಗಾಯಿ ಈಗ ಸೋಮಯಾಜಿಯವರ ಕೈಗೆ ಬಂದು ಸೇರಿತು. ಅವರದರ ಮೇಲೆ ಕೈಯಿಟ್ಟು, ಕಣ್ಣುಮುಚ್ಚಿ ಪ್ರಾರ್ಥಿಸಿದರು. ಪೂರ್ಣಾಹುತಿಯ ಮಹತ್ವವನ್ನು ಹೇಳಲಾರಂಭಿಸಿದರು.

"ಈ ಇಡುಗಾಯಿ ನಮ್ಮ ತಲೆಯಿದ್ದಂತೆ. ಇಡೀ ತಲೆಯನ್ನು ನಾವು

ಅಗ್ನಿಗೆ ಅರ್ಪಿಸಲು ಸಿದ್ಧರಾಗುತ್ತಿದ್ದೇವೆ. ತಲೆಯೆಂದರೆ ನಮ್ಮ ಅಹಂಕಾರವೂ ಹೌದು. ನಮ್ಮ ಕಾಮ, ಕ್ರೋಧ, ಮೋಹ, ಲೋಭ, ಮದ, ಮತ್ಸರಗಳು ಹುಟ್ಟುವುದು ಈ ತಲೆಯಿಂದಲೇ ಆಗಿದೆ. ಅಂತಹ ತಲೆಯನ್ನು ನಾವು ನಮ್ಮ ದೇಹದಿಂದ ಬೇರ್ಪಡಿಸಿ ಈ ಅಗ್ನಿಗೆ ಅರ್ಪಿಸೋಣ. ಅದನ್ನು ಎಲ್ಲ ದೇವತೆಗಳೂ ಸ್ವೀಕರಿಸಲಿ. ನಮ್ಮ ಕಾಮ, ಕ್ರೋಧ, ಮೋಹ, ಲೋಭ, ಮದ, ಮತ್ಸರಗಳು ಸಂಹಾರವಾಗಲಿ" ಎಂದು ಹೇಳಿ ಆ ಪೂರ್ಣಾಹುತಿಯನ್ನು ಪುಣ್ಯಾರ್ಚನೆಗೆ ಕುಳಿತ ದಂಪತಿಗೆ ಕೊಟ್ಟರು. ಅದಕ್ಕೆ ಉಳಿದ ತುಪ್ಪವನ್ನೆಲ್ಲಾ ಸುರಿದರು.

"ಓಂ ಪೂರ್ಣಮದಃ ಪೂರ್ಣಮಿದಂ
ಪೂರ್ಣಾತ್ಪೂರ್ಣಮುದಚ್ಯತೇ।
ಪೂರ್ಣಸ್ಯ ಪೂರ್ಣಮಾದಾಯ
ಪೂರ್ಣಮೇವಾವಶಿಷ್ಯತೇ॥"

"ಅದೂ ಪೂರ್ಣ, ಇದೂ ಪೂರ್ಣ, ಪೂರ್ಣದಿಂದಲೇ ಪೂರ್ಣದ ಉದಯವಾಗಿದೆ. ಪೂರ್ಣದಿಂದ ಪೂರ್ಣವನ್ನು ಕಳೆದರೂ ಉಳಿಯುವುದು ಪೂರ್ಣವೇ ಆಗಿದೆ. ಓಂ ಶಾಂತಿಃ ಶಾಂತಿಃ ಶಾಂತಿಃ"

ಪೂರ್ಣಾಹುತಿಯನ್ನು ತೆಗೆದುಕೊಂಡು ಅಗ್ನಿ ಅತ್ಯಂತ ಸಂತೃಪ್ತಿಯಿಂದ ತನ್ನ ಸಹಸ್ರ ನಾಲಿಗೆಗಳನ್ನು ಗಗನಕ್ಕೆ ಮುಟ್ಟುವಂತೆ ಮೇಲಕ್ಕೆ ಎತ್ತಿತು. ನೆರೆದ ಭಕ್ತಾದಿಗಳೆಲ್ಲಾ ಪುಳಕದಿಂದ ಜಯಘೋಷವನ್ನು ಮಾಡಿ ಹೋಮಕುಂಡಕ್ಕೆ ಅಕ್ಷತೆಯನ್ನು ಹಾಕಿದರು. ಮಂಗಳವಾದ್ಯಗಳು ಅತ್ಯಂತ ಉನ್ನತಸ್ವರದಲ್ಲಿ ಮೊಳಗಿದವು.

* * *

ಅಂಕಿತಾಗೆ ಎಚ್ಚರವಾದಾಗ ಹೊರಗಡೆ ಧಾರಾಕಾರವಾಗಿ ಮಳೆ ಸುರಿಯುತ್ತಿತ್ತು. ಮೈಕೈಯೆಲ್ಲಾ ನೋವಿನಿಂದ ನುಲಿಯುತ್ತಿತ್ತು. ಚಳಿಯಾಗುತ್ತಿತ್ತು. ಹೊಟ್ಟೆಯ ಮೇಲೆ ಏನೋ ಹುಳ ಹರಿದಾಡುತ್ತಿರುವ ಅನುಭವವಾಯ್ತು. ಅದನ್ನು ಜಾಡಿಸಲು ಕೈ ಎತ್ತಲು ನೋಡಿದಳು. ಆಗಲಿಲ್ಲ. ಎರಡೂ ಕೈಗಳನ್ನು ಮಂಚಕ್ಕೆ ಕಟ್ಟಲಾಗಿತ್ತು. ಚಳಿ ಹೆಚ್ಚಾಯ್ತು. ತಾನು ಬೆತ್ತಲೆಯಾಗಿರುವ ಸಂಗತಿ ಅವಳಿಗಾಗ ಅರಿವಾಯ್ತು. ಮೈ ಮುದುಡಿಕೊಂಡಳು. ನಡೆದ ಘಟನೆಗಳು

ನೆನಪಾದವು. ಆ ಮೂವರೂ ತನ್ನ ಮೈಮೇಲೆ ಎರಗಿದ ಕ್ರೂರ ದೃಶ್ಯಗಳು ಕಣ್ಣಿನ ಮುಂದೆ ಬಂದವು. ವಿರೋಧಿಸಲು ತಾನು ಪ್ರಯತ್ನಿಸಿದಾಗ, ಎಂತಹದೋ ಕಬ್ಬಿಣದ ರಾಡಿನಿಂದ ಮೈಮೇಲೆ ಹೊಡೆದದ್ದು ಮಾತ್ರ ನೆನಪು. ಕಹಿ ನೆನಪಿನಿಂದ ಬೆಚ್ಚಿ "ಅಮ್ಮಾ".... ಎಂದು ಕಿರುಚಲು ಪ್ರಯತ್ನಿಸಿದಳು. ಸಾಧ್ಯವಾಗಲಿಲ್ಲ. ಬಾಯಿಯಲ್ಲಿ ಏನೋ ತುರುಕಿಬಿಟ್ಟಿದ್ದರು.

ಅವಳ ಬೆತ್ತಲೆ ಹೊಟ್ಟೆಯ ಹೊಕ್ಕಳಿನ ಮೇಲೆ ಮೊಬೈಲ್ ಒಗೆದು ಹೋಗಿದ್ದರು. ಮೆಸೇಜ್‌ಗಳು ಬಂದಾಗ, ಫೇಸ್‌ಬುಕ್ಕಿನ ಲೈಕ್, ಕಾಮೆಂಟ್‌ಗಳು ಬಂದಾಗ ಅದು ಕುಂಯ್‌ಗುಡುತ್ತಿತ್ತು. ಯಾವುದೋ ಕಾಲ್ ಬಂದು ರಿಂಗಣಿಸಿತು. ಅಂಕಿತಾಗೆ ತನ್ನ ಅಸಹಾಯಕತೆಯಿಂದ ದುಃಖವಾಯ್ತು. ಉಸಿರಾಟದಿಂದ ಹೊಟ್ಟೆಯನ್ನು ಮೇಲೆ ಕೆಳಗೆ ಮಾಡಿ ಮೊಬೈಲನ್ನು ಬಾಯಿಯ ಹತ್ತಿರ ತಂದುಕೊಳ್ಳಲು ನೋಡಿದಳು. ಆ ಒದ್ದಾಟದಲ್ಲಿ ಮೊಬೈಲ್ ಕೆಳಕ್ಕೆ ಬಿತ್ತು. ಗೋಡೆಯ ಮೇಲಿದ್ದ ಗಡಿಯಾರವನ್ನು ಗಮನಿಸಿದಳು. ಆಗಲೇ ಮಧ್ಯಾಹ್ನ ಒಂದು ಗಂಟೆ ದಾಟಿತ್ತು. ಅಮ್ಮ ಇನ್ನೇನು ವಾಪಾಸು ಬಂದು ಬಿಡುತ್ತಾಳೆ ಎಂಬ ಧೈರ್ಯ ಬಂತು. ತನ್ನನ್ನು ಕಾಪಾಡುತ್ತಾಳೆ. ಈ ನರಕದಿಂದ ಪಾರು ಮಾಡುತ್ತಾಳೆ. "ಅಮ್ಮಾ, ಬಡಾನ ಬಾರಮ್ಮಾ.... ನನ್ನ ಕಾಪಾಡಮ್ಮಾ... ಹೆಲ್ಪ್ ಮಿ ಪ್ಲೀಜ್..." ಎಂದು ಅವಳು ಮನಸ್ಸಿನಲ್ಲಿ ಅಂದುಕೊಳ್ಳುವಾಗ ಕಣ್ಣಿನಿಂದ ನೀರು ಧಾರಾಕಾರವಾಗಿ ಜಾರಲಾರಂಭಿಸಿತು. ದೇಹದ ನೋವು ಹೆಚ್ಚಾಗಿ ಕೆಲವೇ ಕ್ಷಣಗಳಲ್ಲಿ ಅವಳಿಗೆ ಮತ್ತೆ ಎಚ್ಚರ ತಪ್ಪಿತು.

* * *

ಕುಸುಮಾಗೆ ಎಚ್ಚರವಾದಾಗ ಎಲ್ಲಿರುವನೆಂದು ತಿಳಿಯಲಿಲ್ಲ. ಹಸಿವೆಯಿಂದ ಸಂಕಟವಾಗುತ್ತಿತ್ತು. ಗಂಟಲು ಒಣಗಿ, ನೀರು ಬೇಕೆನ್ನಿಸುತ್ತಿತ್ತು. ಎದ್ದೇಳಲು ನೋಡಿದಳು. ಶಕ್ತಿ ಸಾಲಲಿಲ್ಲ. ಮಲಗಿದಲ್ಲಿಯೇ ಮಗ್ಗಲು ಬದಲಿಸಿದಳು. ಕಟಾಂಜನದ ಬಾಗಿಲುಗಳು ತೋಳಿಗೆ ಬಡಿದವು. ಹಗೂರಕ್ಕೆ ತಾನು ಎಲ್ಲಿರುವೆನೆಂದು ಅರ್ಥವಾಯ್ತು. ಆರಡಿಯ ವಿಸ್ತೀರ್ಣದ ಆ ಲಿಫ್ಟಿನ ಡಬ್ಬಿಯಲ್ಲಿಯೇ ತಾನು ಇನ್ನೂ ಇರುವುದು ಕಂಡು ದುಃಖವಾಯ್ತು. ಸಹಾಯಕ್ಕಾಗಿ ಕೂಗಿ, ಕೂಗಿ ಯಾವಾಗಲೋ ಎಚ್ಚರ ತಪ್ಪಿರಬೇಕು. ಈಗ ಮತ್ತೆ ಕೂಗೋಣವೆಂದು ಬಲವನ್ನೆಲ್ಲಾ ಕ್ರೋಢೀಕರಿಸಿಕೊಂಡಳು. ಆದರೆ ಧ್ವನಿ ಬರಲೇ ಇಲ್ಲ. ಗಂಟಲು ಒಣಗಿ ಹೋಗಿತ್ತು. ಕಣ್ಣುಮುಚ್ಚಿ ಭಗವಂತನನ್ನು

ಧ್ಯಾನಿಸಿದಳು. ಕಣ್ಣ ಮುಂದೆ ಅಂಕಿತಾಳ ಚಿತ್ರ ತೇಲಿ ಬಂತು. ಕೊಂಚ ಧೈರ್ಯ ಮೂಡಿತು. ಅಂಕಿ ಬಂದೇ ಬರ್ತಾಳೆ. ಅಮ್ಮನ್ನ ಹುಡುಕಿಕೊಂಡು ಬರ್ತಾಳೆ. ನನ್ನ ಬಿಡಿಸಿಕೊಳ್ತಾಳೆ ಎಂಬ ಸಮಾಧಾನವನ್ನು ಮಾಡಿಕೊಂಡಳು. "ಅಂಕಿ, ಬಡಾನೆ ಬಾರಮ್ಮಾ.... ನನ್ನ ಈ ಕಷ್ಟದಿಂದ ಕಾಪಾಡಮ್ಮ..." ಎಂದು ಮನಸ್ಸಿನಲ್ಲಿ ಅಂದುಕೊಳ್ಳುವಾಗ, ಸಂಕಟ ಮತ್ತೆ ಹೆಚ್ಚಿದಂತಾಗಿ ಕಣ್ಣುಗಳು ಮುಚ್ಚಿಕೊಂಡವು. ಕಣ್ಣಾಲಿಗಳನ್ನು ತುಂಬಿದ್ದ ನೀರು, ರೆಪ್ಪೆ ಮುಚ್ಚಿಕೊಂಡಿದ್ದರಿಂದ ಹಗೂರಕ್ಕೆ ಗಲ್ಲದ ಮೇಲೆ ಉರುಳಿದವು.

* * *

ನಾಲ್ಕು ದಿನದ ನಂತರವೇ ಎರಡೂ ಹೆಣಗಳು ಪತ್ತೆಯಾದವು.

ಸೋಮವಾರ ಬೆಳಗ್ಗೆ ನಿಧಾನಕ್ಕೆ ಹಳೆಯ ಕಟ್ಟಡ ಜನರಿಂದ ತುಂಬಿಕೊಳ್ಳ ತೊಡಗಿತು. ಜನರು ಲಿಫ್ಟ್ ಬಳಸಲು ಪ್ರಯತ್ನಿಸಿದರಾದರೂ ಅದು ಕೆಲಸ ಮಾಡುತ್ತಿರಲಿಲ್ಲ. ಎಲ್ಲಿಯೋ ಮಧ್ಯದ ಮಹಡಿಯಲ್ಲಿ ಸಿಕ್ಕಿಹಾಕಿಕೊಂಡಿತ್ತು. ಅದು ಯಾವತ್ತಿನ ಸಮಸ್ಯೆಯಾದ್ದರಿಂದ, ಮನಸ್ಸಿನಲ್ಲಿಯೇ ಬೈಯ್ದುಕೊಂಡು ಮೆಟ್ಟಿಲುಗಳನ್ನು ಬಳಸಿದರು. ಜೆರಾಕ್ಸ್ ಅಂಗಡಿ ತೆರೆದುಕೊಂಡಿತು. ಎಲ್ಲರೂ ಕಾಫಿ ಕುಡಿಯುತ್ತಾ ತಾವು ರಜೆಗಳನ್ನು ಕಳೆದ ಬಗೆಯನ್ನು ಹಂಚಿಕೊಳ್ಳಲಾರಂಭಿಸಿದರು. ಯಾರೋ ಒಂದಿಬ್ಬರು ಹಿರಿಯರು ಮಾತ್ರ ಲಿಫ್ಟ್ ಕೆಲಸ ಮಾಡದೇ ಇದ್ದುದರಿಂದ ಮೆಟ್ಟಿಲುಗಳನ್ನು ಹತ್ತಿ ಸುಸ್ತಾಗಿ, ಮೆಂಟೇನನ್ಸ್ ವಿಭಾಗಕ್ಕೆ ಕಂಪ್ಲೇಂಟ್ ಮಾಡಿದರು.

ಲಿಫ್ಟ್ ರಿಪೇರಿಯವರು ಬಂದಾಗ ಆಗಲೇ ಹನ್ನೆರಡು ದಾಟಿತ್ತು. ಅವನೂ ರಜೆಯ ಸಲುವಾಗಿ ತನ್ನೂರಿಗೆ ಹೋಗಿದ್ದ. ಅವನು ಕೆಲಸಕ್ಕೆ ಬರುವುದರೊಳಗೆ ಇಪ್ಪತ್ತು ಕಾಲ್‌ಗಳು ಅವನ ಮೊಬೈಲಿಗೆ ಬಂದು, ತಲೆ ಕೆಟ್ಟಂತಾಗಿ ಕಟ್ಟಡ ಸೇರುವ ತನಕ ಯಾವುದೇ ಕರೆಗಳನ್ನು ಸ್ವೀಕರಿಸಲಿಲ್ಲ. "ಎರಡು ದಿನ ಖುಷಿಯಾಗಿ ಇರೋದಕ್ಕೂ ಜನ ಬಿಡಲ್ಲ" ಎಂದು ಮನಸ್ಸಿನಲ್ಲಿಯೇ ಬೈಯ್ದುಕೊಂಡ. ಆ ಲಿಫ್ಟಿನ ಸಮಸ್ಯೆಗಳು ಅವನಿಗೆ ಚೆನ್ನಾಗಿ ಗೊತ್ತಿತ್ತು. ಹಳೆಯದಾಗಿದೆ, ಹೊಸ ಲಿಫ್ಟ್ ಕೊಳ್ಳಿರಿ ಎಂದು ಬಡಿದುಕೊಂಡರೂ ಕಟ್ಟಡದ ಯಜಮಾನ ಕಿವಿಗೊಟ್ಟಿರಲಿಲ್ಲ. ಎಲ್ಲರನ್ನೂ ಹಳಿದುಕೊಳ್ಳುತ್ತಾ ಲಿಫ್ಟ್ ಸರಿ ಮಾಡಿದ. ಅದರ ಬಾಗಿಲನ್ನು ತೆರೆದಿದ್ದೇ ಹೌಹಾರಿ ಬಿಟ್ಟ. ಯಾರೋ ಅಪರಿಚಿತ

ದಢೂತಿ ಹೆಂಗಸಿನ ಹೆಣವನ್ನು ಕಂಡಿದ್ದೇ ಅವನಿಗೆ ಕೈಕಾಲಲ್ಲೆಲ್ಲಾ ನಡುಕ ಬಂದು ಬಿಟ್ಟಿತು. ಹೆಣ ಅದಾಗಲೇ ಕಪ್ಪು ಬಣ್ಣಕ್ಕೆ ತಿರುಗಿ, ವಾಸನೆ ಹೊಡೆಯುತ್ತಿತ್ತು. ಆ ಕೆಟ್ಟ ವಾಸನೆಯ ಮಧ್ಯದಲ್ಲಿ ಅವಳ ಸೀರೆಯ ಒಂದಿಷ್ಟು ಸುಗಂಧದ ಪರಿಮಳವೂ ವಾತಾವರಣದಲ್ಲಿ ಬೆರೆತಿತ್ತು.

ಅರ್ಧ ಗಂಟೆಯಲ್ಲಿ ಪೊಲೀಸರು ಬಂದರು. ಇನ್ಸ್‌ಪೆಕ್ಟರಿಗೆ ಅದು ನಾಲ್ಕು ದಿನಗಳ ಕೆಳಗೇ ಸಿಕ್ಕು ಬಿದ್ದ ದೇಹವೆಂಬುದು ಅರ್ಥವಾಯ್ತು. ಹಗೂರಕ್ಕೆ ಪರಿಶೀಲನೆ ಮಾಡಿದರು. ಲಿಫ್ಟಿನಲ್ಲಿ ಸಿಕ್ಕಿ ಬಿದ್ದಾಗ ಈ ಹೆಂಗಸು ಯಾರಿಗೂ ಯಾಕೆ ಫೋನ್ ಮಾಡಲಿಲ್ಲ ಎಂದು ಅಚ್ಚರಿಯಾಯ್ತು. ಲಿಫ್ಟಿನಲ್ಲಿ ದೊಡ್ಡದಾಗಿ "ಲಿಫ್ಟ್ ಕೆಟ್ಟು ಹೋದರೆ ಈ ನಂಬರಿಗೆ ಕರೆ ಮಾಡಿ, ಧೈರ್ಯಗೆಡಬೇಡಿ" ಎಂದು ಬರೆಯಲಾಗಿತ್ತು. ಈ ಲಿಫ್ಟಿನಲ್ಲಿ ಸಿಗ್ನಲ್‌ಗಳಿಲ್ಲವೆ ಎಂದು ಪರೀಕ್ಷಿಸಿದರು. ತಮ್ಮ ಮೊಬೈಲಿನಲ್ಲಿ ಸಿಗ್ನಲ್ ಭರಪೂರವಾಗಿತ್ತು. ಸಹೋದ್ಯೋಗಿಗಳೊಡನೆ ಕೇಳಿದರು. ಅವರ ಮೊಬೈಲ್‌ನಲ್ಲಿಯೂ ಸಿಗ್ನಲ್ ಪೂರ್ತಿಯಾಗಿತ್ತು. ಈ ಕಟ್ಟಡದ ಮೇಲೆಯೇ ಮೊಬೈಲ್ ಟವರ್ ಇರುವುದು ನೆನಪಾಯ್ತು. ಅನುಮಾನ ಬಂದು ಆ ಹೆಣದ ಹೆಗಲಲ್ಲಿ ಇದ್ದ ಬ್ಯಾಗನ್ನು ಹಗೂರಕ್ಕೆ ತೆಗೆದು ಪರಿಶೀಲಿಸಿದರು. ಯಾವುದೇ ಮೊಬೈಲ್ ಇರಲಿಲ್ಲ. "ಏನು ದಡ್ಡ ಹೆಣ್ಣ ಮಗಳು ಕಣ್ರಿ ಈಕಿ. ಒಂದು ಮೊಬೈಲ್ ಹಿಡಕೊಂಡು ಓಡಾಡಬೇಕು ಅಂತ ಗೊತ್ತಾಗಲ್ವೇನ್ರಿ" ಎಂದು ತನ್ನ ಸಹದ್ಯೋಗಿಗಳ ಮುಂದೆ ಬೈದರು. ಅದರಲ್ಲಿ ಒಬ್ಬ ಪೇದೆ ಅಮಾಯಕ ಧ್ವನಿಯಲ್ಲಿಯೇ "ಲಿಫ್ಟ್‌ನಲ್ಲೇ ಫೋನ್ ಇದ್ದಿದ್ರೆ ಹಿಂಗೆ ಆಗ್ತಾ ಇರಲಿಲ್ಲ ಅಲ್ವೇನ್ ಸಾರ್? ಫೋನ್ ಇಲ್ಲದೇ ಇರೋ ಲಿಫ್ಟ್‌ನ ಸರಕಾರ ಒಪ್ಪಿಗೋಬಾರದು" ಎಂದು ಕಾನೂನಿನ ಎಡವಟ್ಟು ಮಾತನ್ನಾಡಿದ. ಇನ್ಸ್‌ಪೆಕ್ಟರಿಗೆ ರೇಗಿತು. "ಈಗ ಫೋನ್ ಇಲ್ಲದೇ ಇರೋ ಲಿಫ್ಟ್‌ಗಳು ಸಾವಿರಾರು ಅದಾವಲ್ರೀ? ಅದಕ್ಕೇನು ಮಾಡ್ತೀರಿ?" ಎಂದು ಉಗಿದರು. ಪೇದೆ ತೆಪ್ಪಗಾದ.

ಹೆಣದ ಬ್ಯಾಗಿನಲ್ಲಿದ್ದ ಪುಟ್ಟ ಪುಸ್ತಕದ ಮೂಲಕ ಅವರ ಮನೆಯ ವಿಳಾಸ ಪತ್ತೆಯಾಯ್ತು. ಆ ಪುಟ್ಟ ಪುಸ್ತಕದಲ್ಲಿ ಹಲವಾರು ಟೆಲಿಫೋನ್ ನಂಬರ್‌ಗಳಿದ್ದವು. ಅವರಿಗೆ ಕಾಲ್ ಮಾಡಿದಾಗ ಆ ಹೆಣ್ಣು ಮಗಳ ಹೆಸರು 'ಕುಸುಮಾ' ಎಂದು ತಿಳಿದು ಬಂತು. ಅವಳಿಗೊಬ್ಬ ಮಗಳಿರುವುದು ಪತ್ತೆಯಾಯ್ತು. ಅವರೆಲ್ಲಾ ಖಾತರಿ ಪಡಿಸಿದ ವಿಳಾಸವನ್ನು ನಮೂದಿಸಿಕೊಂಡರು. ಬೆಂಗಳೂರಿನ ದಕ್ಷಿಣ ಭಾಗದ ಪೊಲೀಸ್ ಠಾಣೆಗೆ

ವಿಷಯವನ್ನು ತಿಳಿಸಿ, ಆ ವಿಳಾಸಕ್ಕೆ ಹೋಗಿ ತಕ್ಷಣವೇ ಸುದ್ದಿಯನ್ನು ಮುಟ್ಟಿಸಲು ತಿಳಿಸಿದರು. ಪುಟ್ಟ ಪುಸ್ತಕದಲ್ಲಿದ್ದ ಕೆಲವು ನಂಬರುಗಳಿಗೆ ಕರೆ ಮಾಡಿದಾಗ, ವಿಷಯ ತಿಳಿದು ಆಘಾತಗೊಂಡ ಒಂದಿಬ್ಬರು ತಾವು ತಕ್ಷಣವೇ ಬರುವುದಾಗಿ ಒಪ್ಪಿಕೊಂಡರು.

* * *

ಹರೆಯದ ಹೆಣ್ಣು ಮಗಳ ಬೆತ್ತಲೆ ದೇಹವನ್ನು ಹಾಸಿಗೆಯಲ್ಲಿ ನೋಡಿದಾಗ ಅದು ಸಾಮೂಹಿಕ ಅತ್ಯಾಚಾರವೆಂಬುದು ಇನ್ಸ್‌ಪೆಕ್ಟರಿಗೆ ಅರ್ಥವಾಯ್ತು. ಇನ್ನೂ ಇಪ್ಪತ್ತೈದು ದಾಟದ ಎಳೆಯ ಹುಡುಗಿ. ಮೈತುಂಬಾ ರಕ್ತದ ಕಲೆಗಳು ಮೂಡಿದ್ದವು. ರಕ್ತ ಒಣಗಿ ಕಪ್ಪು ಬಣ್ಣಕ್ಕೆ ತಿರುಗಿತ್ತು. ನೊಣಗಳು ಮುಕ್ಕರಿದಿದ್ದವು. ಹೀಗೆ ಮನೆಯೊಳಗೆ ಬಂದು ಸಾಮೂಹಿಕ ಅತ್ಯಾಚಾರ ಮಾಡುವಷ್ಟು ಕಾಲ ಕೆಟ್ಟು ಹೋಗಿರುವುದರ ಬಗ್ಗೆ ವಿಷಾದವಾಯ್ತು. ಆಟೋಲಾಕ್ ಇರುವ ಮನೆಯದಾದ್ದರಿಂದ ಬಾಗಿಲನ್ನು ಒಡೆದೇ ಪ್ರವೇಶಿಸಬೇಕಾಯ್ತು. ಯಾವತ್ತಿನಂತೆ ಏನಾದರೂ ಕುರುಹುಗಳು ಸಿಗುತ್ತವೇನೋ ಎಂದು ಹಾಸಿಗೆಯ ಸುತ್ತಲೂ ಹುಡುಕಾಡಿದರು. ಮಂಚದ ಕೆಳಗೆ ಬಿದ್ದಿದ್ದ ಮೊಬೈಲ್ ಸಿಕ್ಕಿತು. ಬ್ಯಾಟರಿ ಎಂದೋ ತೀರಿ ಹೋಗಿತ್ತು. ಮನೆಯ ಸುತ್ತಲೂ ಕಣ್ಣಾಡಿಸಿದಾಗ ಚಾರ್ಜರ್ ಕಂಡು ಬಂತು. ಅದಕ್ಕೆ ಜೋಡಿಸಿ, ಮೊಬೈಲ್‌ಗೆ ಜೀವ ತರಿಸಿದಾಗ ಫೇಸ್‌ಬುಕ್ ಐಕಾನಿನಲ್ಲಿ ಎರಡು ಸಾವಿರಕ್ಕೂ ಹೆಚ್ಚು ಲೈಕ್ ಮತ್ತು ಮೆಸೇಜ್‌ಗಳು ಬಂದಿರುವುದು ತಿಳಿಯಿತು. ಫೇಸ್‌ಬುಕ್ ಓಪನ್ ಮಾಡಿದರು. ಕುತ್ತಿಗೆಯಿಂದ ಮೊಣಕಾಲಿನ ತನಕದ ಅವಳ ಪೂರ್ತಿ ಬೆತ್ತಲೆಯ ದೇಹದ ಚಿತ್ರವೊಂದು ಅವಳ ಕವರ್ ಇಮೇಜಾಗಿ ಇಡೀ ಟೈಮ್‌ಲೈನಿನ ತಲೆಚಿತ್ರವಾಗಿ ಆವರಿಸಿರುವುದು ಕಂಡು ಬಂತು. ಅದೇ ಮಂಚ, ಅದೇ ದೇಹ, ಬಹುಶಃ ಅತ್ಯಾಚಾರ ಮಾಡಿದ ನಂತರ ಕಿಡಿಗೇಡಿಗಳು ಅವಳ ಬೆತ್ತಲೆ ಫೋಟೋ ತೆಗೆದು, ಅದನ್ನೇ ಅವಳ ಕವರ್ ಚಿತ್ರವಾಗಿ ಹಾಕಿರಬೇಕೆಂದು ಅರ್ಥ ಮಾಡಿಕೊಂಡರು. ಆದರೆ ಆ ಫೋಟೋಕ್ಕೆ ಎರಡು ಸಾವಿರಕ್ಕೂ ಹೆಚ್ಚು ಲೈಕ್ ಮತ್ತು ಕಾಮೆಂಟುಗಳನ್ನು ನೋಡಿ ಬೇಸರವಾಯ್ತು. ಅದಕ್ಕೂ "ಬೋಲ್ಡ್ ಅಂಡ್ ಬ್ಯೂಟಿಫುಲ್" ಎಂಬ ಅನೇಕ ಕಾಮೆಂಟುಗಳು ಬಂದಿದ್ದವು. ಆ ಚಿತ್ರ ಒಂದು ಸಾವಿರಕ್ಕೂ ಹೆಚ್ಚು ಶೇರ್ ಆಗಿ ಇಡೀ ಜಗತ್ತಿನಾದ್ಯಂತ ಹರಿದಾಡಿತ್ತು. ಅದೇ ದಿನ ಫೇಸ್‌ಬುಕ್ಕಿನಲ್ಲಿ ನಡೆದ ಇತರ ಚಟುವಟಿಕೆಗಳ ಕಡೆಗೆ ಇನ್ಸ್‌ಪೆಕ್ಟರ್ ಕಣ್ಣು ಹಾಯಿಸಿದರು. "ಅಮ್ಮ ವಾಪಾಸಾಗುವ ತನಕ

ತಾನು ಮನೆಯಲ್ಲಿ ಏಕಾಂಗಿ" ಎಂಬರ್ಥದ ಸ್ಟೇಟಸ್ ಮೆಸೇಜ್ ಅವರ ಕಣ್ಣಿಗೆ ಬಿತ್ತು. ಒಂದಿಷ್ಟು ತುಂಟತನದ, ಆದರೆ ಸೊಗಸಾದ ಫೋಟೋವೊಂದನ್ನು ಸ್ಟೇಟಸ್ಸಿನ ಜೊತೆಗೆ ಹಾಕಲಾಗಿತ್ತು. ಆ ಸ್ಟೇಟಸ್ಸಿಗೂ ಸಾವಿರಕ್ಕೂ ಹೆಚ್ಚು ಲೈಕ್‌ಗಳು ಬಂದಿದ್ದವು. ಅಪರಾಧಿ ಜಗತ್ತಿನ ವಿಶೇಷ ಅನುಭವ ಇರುವ ಅವರಿಗೆ, ಕಿಡಿಗೇಡಿಗಳು ಮನೆಗೆ ಬಂದು ಅತ್ಯಾಚಾರವೆಸಗಲು ಆ ಪುಟ್ಟ ವಾಕ್ಯವೇ ಕಾರಣವೆಂಬುದು ತಕ್ಷಣವೇ ಹೊಳೆದು ಹೋಯ್ತು.

"ಹರೆಯದ ಮಕ್ಕಳಿಗೆ ಮೊಬೈಲ್ ಕೊಡಿಸಬ್ಯಾಡ್ರಿ ಅಂದ್ರೂ ಈ ಅಪ್ಪ–ಅಮ್ಮ ಕೇಳಂಗಿಲ್ಲ. ಈ ಮಕ್ಕಳಿಗೆ ಅದನ್ನು ಹೆಂಗೆ ಜ್ವಾಪಾನ ಮಾಡಿಕೊಂಡು ಬಳಸಬೇಕು ಅನ್ನೋದು ಗೊತ್ತಾಗಂಗಿಲ್ಲ. ನೋಡ್ರಿ. ಈಗ ಎಂಥಾ ಅನಾಹುತ ಆಗ್ಯದೆ!" ಎಂದು ಸಹೋದ್ಯೋಗಿಗಳ ಮುಂದೆ ಮೊಬೈಲ್ ತೋರಿಸಿ ಸಿಟ್ಟಿನ ಮಾತುಗಳನ್ನಾಡುವಾಗ, ಅವರ ಮನಸ್ಸಿನಲ್ಲಿ ಯಾವಾಗಲೂ ಮೊಬೈಲ್ ಜೊತೆಯಲ್ಲಿಯೇ ಇರುವ ತಮ್ಮ ಹರೆಯದ ಮಗಳ ಮೇಲೆ ವಿಪರೀತ ಸಿಟ್ಟಾಗುತ್ತಿದ್ದರು.

"ಫ್ರೆಂಡ್ ಲಿಸ್ಟ್‌ನಾಗೆ ಯಾರಿದಾರೆ ಅಂತ ನೋಡಿ, ಇನ್‌ಕ್ವಯರಿ ಮಾಡಿ ಹಿಡಿಯೋಕಾಗಲ್ವಾ ಸಾರ್?" ಎಂದು ಪೇದೆ ಕೇಳಿದ.

"ನಾಲ್ಕು ಸಾವಿರದ ಚಿಲ್ಲರೆ ಫ್ರೆಂಡ್ಸ್‌ಗಳಿದ್ದಾರ್ರೀ ಈ ಹುಡುಗೀಗೆ... ಅವರು ಒಬ್ಬರು ಲೈಕ್ ಮಾಡಿದ್ರೂ ಸಾಕು, ಅವರ ಸಾವಿರ ಜನ ಸ್ನೇಹಿತರಿಗೆ ಈ ಸ್ಟೇಟಸ್ ಕಾಣಿಸ್ತದೆ. ಎಷ್ಟು ಜನನ್ನ ಇನ್‌ಕ್ವಯರಿ ಮಾಡ್ತೀರಿ ಹೇಳ್ರಿ? ಯಾವ ಸೂಳೆಮಗ ಅಂಥಾ ದುಬಾರಿ ಇನ್‌ಕ್ವಯರಿಗೆ ಹಣ ಕೊಡ್ತಾನೆ?" ಎಂದು ಪೇದೆಯ ಅಜ್ಞಾನಕ್ಕೆ ಬೈದರು.

ಮೇಲಧಿಕಾರಿಯ ಅವಹೇಳನದ ಮಾತಿಗೆ ಒಂದಿಷ್ಟೂ ತಲೆಕೆಡಿಸಿಕೊಳ್ಳದ ಪೇದೆ, "ಅಷ್ಟು ಸಾವಿರ ಜನ ಫ್ರೆಂಡ್ಸ್ ಇದ್ದರೂ, ಒಬ್ಬರನ್ನಾ ಈ ನಾಲ್ಕು ದಿನದಾಗೆ ಒಂದು ಸಲ ಈಕಿ ಹಂಗ್ಯಾಕೆ ಬೆತ್ತಲೆ ಫೋಟೋ ಹಾಕ್ಯಾಳೆ ಅಂತ ವಿಚಾರಿಸಿಕೊಂಡು ಹೋಗೋಕೆ ಮನೆಗೆ ಬಂದಿಲ್ಲಲ್ಲಾ ಸಾರ್?" ಎಂದು ಅಚ್ಚರಿ ವ್ಯಕ್ತಪಡಿಸಿದ.

■

# ನಮ್ಮೂರ ನಾಯಕರು

**– ಮಿರ್ಜಿ ಅಣ್ಣಾರಾಯ**

'ಅಪ್ಪಾ! ಅಪ್ಪಾ! ಅಪ್ಪಾ!'

ಶ್ರಾವಣಮಾಸ. ರಾತ್ರಿ ಸುಮಾರು ಹನ್ನೊಂದು ಗಂಟೆಯಾಗಿರಬಹುದು. ಮುಗಿಲ ತುಂಬ ಮೋಡ ಮುಸುಕಿದೆ. ಮಳೆ ನಿಂತು ಒಂದೆರಡು ಗಳಿಗೆಯಾಗಿರಬೇಕು. ಇನ್ನೂ ಬೀದಿಯ ಮೇಲೆ ಅಲ್ಲಲ್ಲಿ ನೀರು ನಿಂತಿದೆ. ಆ ನೀರಿನಲ್ಲಿಯ ಕಪ್ಪೆಗಳು 'ರಾಕ್ ರಾಕ್' ಎಂದು ಒದರಿ, ರಾತ್ರಿ ಗಂಭೀರತೆಯನ್ನು ಭೀಕರತೆಗೆ ಮಾರ್ಪಡಿಸುತ್ತಿವೆ. ಅದಕ್ಕೆ ಸುತ್ತಲೂ ಹಬ್ಬಿದ ಕಗ್ಗತ್ತಲೆಯೂ ನೆರವಾಗುತ್ತಲಿದೆ.

ಇಂತಹ ಸಮಯದಲ್ಲಿ, ಒಂದು ಚಿಕ್ಕ ಮನೆಯ ಮುರುಕು ಬಾಗಿಲನ್ನು ತಟ್ಟಿ ತಟ್ಟಿ ಒಬ್ಬ ಯುವಕನು, ಮೇಲೆ ಹೇಳಿದಂತೆ 'ಅಪ್ಪಾ! ಅಪ್ಪಾ! ಅಪ್ಪಾ!' ಎಂದು ಕರೆಯುತ್ತಲಿದ್ದಾನೆ. ಅವನ ವಯಸ್ಸು ಸುಮಾರು ಇಪ್ಪತ್ತೇಳು ಇರಬಹುದು.

ಸ್ವಲ್ಪ ಹೊತ್ತಿನಲ್ಲಿಯೇ ಬಾಗಿಲು ತೆರೆಯಿತು. ಒಳಗಿನಿಂದ ಒಬ್ಬ ಮುದುಕ ಹೊರಗೆ ಬಂದು ನೋಡಿ 'ಶಿವು ಬಂದ!' ಎಂದು ಉದ್ವೇಗದಿಂದ ಉದ್ಗಾರ ತೆಗೆದು 'ಎಲ್ಲಿ ಹೋಗಿದ್ದೆಪ್ಪಾ ಮಗನs ಇಷ್ಟು ದಿನ?' ಎಂದು ದುಃಖ ಬಿಗಿಹಿಡಿದ ಸ್ವರದಲ್ಲಿ ಕೇಳುತ್ತ ಕೊರಳಿಗೆ ಬಿದ್ದನು. ಇಬ್ಬರೂ ಮನೆಯನ್ನು ಸೇರಿದರು. ಒಳಗಿನ ಮುದುಕಿ–ಶಿವನ ತಾಯಿ – 'ಸುಡುಗಾಡು ಕಡ್ಡೀಪೆಟ್ಟಿಗೆ ಎಲ್ಲಿ ಐತ್ಯೋ!' ಎಂದು ಕತ್ತಲೆಯಲ್ಲಿಯೇ ಕೈಯಾಡಿಸಿ ಹುಡುಕಿದಳು. ಸಿಕ್ಕದಿರಲು ಸ್ವಲ್ಪ ಯೋಚಿಸಿ ಮಲಗುವಾಗ ತನ್ನ ತಲೆದಿಂಬಿನ ಬುಡದಲ್ಲಿ ಇಟ್ಟುಕೊಂಡದನ್ನು ನೆನೆದು ಅದನ್ನು ತಕ್ಕೊಂಡಳು. ಒಂದೆರಡು ಕಡ್ಡಿಗಳನ್ನು ಕೆರೆಯಲು ಅವು ಹೊತ್ತಲಿಲ್ಲ. ಆಗ ಮತ್ತೊಂದು ಕಡ್ಡಿಯನ್ನು ಪೆಟ್ಟಿಗೆಯಿಂದ ತೆಗೆದು, ತನ್ನ ಉಟ್ಟ ಸೀರೆಗೆ ತಿಕ್ಕಿ ಸ್ವಲ್ಪ ಬೆಚ್ಚಗೆ ಮಾಡಿ, ಅನಂತರ ಕೆರೆದಳು. ಕಡ್ಡಿ ಹೊತ್ತಿ ಮನೆತುಂಬ ಮಂದಪ್ರಕಾಶವನ್ನು ಹಬ್ಬಿಸಿತು. ಕೂಡಲೆ ಅವಳು ಒಂದು ಪಣತಿಯೊಳಗಿನ ಬತ್ತಿಗೆ ಹಚ್ಚಿದಳು. ಅದು ಸ್ವಲ್ಪಹೊತ್ತು 'ಚಿಟ್ ಚಿಟ್' ಎಂದು, ಬಳಿಕ ಹೊತ್ತಿತು. ಮುದುಕಿ ಅದೇ ಕಡ್ಡಿಯಿಂದ ದೀಪದ ಮಕ್ಕು ಹೊಡೆದು ಬುತ್ತಿಯನ್ನು ಸ್ವಲ್ಪ ಚಾಚಲು, ಕಮರು ವಾಸನೆಯನ್ನು ಹರಡುತ್ತ ದೀಪವು ಸಾಧಾರಣ ಥಾಳಾಗಿ ಉರಿಯತೊಡಗಿತು.

ಮುದುಕಿಯ ಕಣ್ಣುಗಳಲ್ಲಿ ನೀರೂರಿದ್ದಿತು. ಸೋತ ಕಣ್ಣಿನಿಂದ ಮಗನ ಕಡೆಗೊಮ್ಮೆ ದೃಷ್ಟಿಯನ್ನು ಬೀರಿದಳು. ಶಿವು, ಅವಳು ಹೊತ್ತುಕೊಳ್ಳುವ ಕವುದೆಯನ್ನ ಸ್ವಲ್ಪ ಸರಿಸಿ, ಹಾಸಿದ್ದ ಚಾಪೆಯ ಮೇಲೆ ಕುಳಿತ.... ಕೆಸರಾದ ಕಾಲುಗಳನ್ನು ಹಾಸಿಗೆಯ ಹೊರಕ್ಕೆ ಇಟ್ಟ. ಒಂದೆರಡು ನಿಮಿಷ ಯಾರೂ ಮಾತನಾಡಲಿಲ್ಲ. ಕೊನೆಗೆ ಶಿವಪ್ಪನೇ ಮೌನವನ್ನು ಮುರಿದು 'ತೋರೂ ಎಲ್ಲಿ ಕಾಣಿಸೂದಿಲ್ಲ?' ಎಂದು ಕೇಳಿದ.

ತಾಯಿ ಏನನ್ನೂ ಹೇಳಲಿಲ್ಲ; ಕಣ್ಣೊಳಗಿನ ನೀರನ್ನು ಒರಸಿಕೊಂಡಳು ಮಾತ್ರ. ಶಿವಪ್ಪನ ಎದೆಯು ಜೋರಿನಿಂದ ಹಾರಹತ್ತಿತ್ತು; ತುಟಿಗಳು ಒಣಗಿದವು. ಮುಂದೆ ಏನು ಮಾತನಾಡಬೇಕೆಂದೂ ಅವನಿಗೆ ತಿಳಿಯದಾಯಿತು. ಸುಮ್ಮನೆ ಮೂಕನಂತೆ ತಂದೆಯ ಮುಖದ ಕಡೆಗೆ ನೋಡತೊಡಗಿದ. ಆಗ ತಂದೆಯು ಮೆಲ್ಲಗೆ ನುಡಿದ.

'ಗೌಡರ ಮನ್ಯಾಗ ಕೆಲಸಕ್ಕೆ ಇಟ್ಟೀವಿ. ಹೊಟ್ಟೆ ಆರಿವಿ ನೋಡಿಕೊಂಡು ತಿಂಗಳಿಗೆ ಮೂರು ರೂಪಾಯಿ ಕೊಡತಾರ.... ಅಷ್ಟs ತಂದು ಗಂಜೀ ಕಾಸಿ ಕುಡೀತೀವಿ... ಆಯ್ತು!'

'ಏನೂ ಮಾಡೂದು? ಹಸಿವಿಗಾಗಿ ಹೊಟ್ಟೀ ಕರಳು ಬೇಲೀ ಮ್ಯಾಲ ಹಾಕೋದು! ನಿನ್ನೇ ಹುಡುಗ ಸಿಕ್ಕಿತ್ತು.... ಹಳ್ಳದ ಹಾದ್ಯಾಗ!' ಎಂದು ತಾಯಿ ಅಳುದನಿಯಲ್ಲಿ ಮಾತನ್ನು ಮುಂದುವರಿಸಿದಳು. 'ಗೌಡನ ಹರಕ ಅಂಗಿ ಹಾಕ್ಕೊಂಡಿದ್ದ; ಮೈಯೆಲ್ಲ ಕಾಣಿಸುತ್ತಿತ್ತು.... ಚಳಿ ಹತ್ತಿ ಹಲ್ಲಿಗೆ ಹಲ್ಲು ಬಡೀತಿದ್ದು;... ಸೊರಗಿ ಸೊರಗಿ ಕಡ್ಡಿ ಆಗ್ಯಾನ.... ಹೊಟ್ಟೆಗೆ ಚೆಲುನೋಡೂದಿಲ್ಲ ಅಂತ.... ಮಾತಿನ ಮುಗಿತದೊಡನೆ ಅಳತೊಡಗಿದಳು ಮುದುಕಿ.

'ನಾಳೇ ನೌಕರೀ ಬಿಡಿಸಿ ತರತೀನವ್ವಾ ಅವನ್ನ.... ಚಿಂತೀ ಮಾಡಬ್ಯಾಡ ನೀ!'

'ಏನ್ ತರತೀಯಪ್ಪಾ.... ಒಂದs ಮಾತು ಬಯ್ದದ್ದಕ್ಕ ನೀನೂ ಆರು ತಿಂಗಳಾತ್ಯು, ಮನೀ ಬಿಟ್ಟು ಹೊಂಟು ಹೋದಿ. ಪತ್ತೇ ಇಲ್ಲ.... ಸುದ್ದಿ ಇಲ್ಲ.... ಯಾರೊ ಹೇಳಿದರು..... "ಮಿಲಿಟರಿ ಭರತೀ ಆಗ್ಯಾನ" ಅಂತ ದುಃಖ ಉಕ್ಕಿಬರಲು 'ಅಯ್ಯೋ ನನ್ನ ಮಗನ!' ಎಂದು ಶಿವಪ್ಪನನ್ನು ಅಪ್ಪಿಕೊಂಡು ಅಳತೊಡಗಿದಳು.

‘ಛೇ ಛೇ... ಭರತೀ ಆಗಿಲ್ಲ ಮಿಲ್ಟ್ರೀ ಒಳಗ!’

‘ಆಗಿಲ್ಲ....? ಕುಲಕರ್ಣೇರು ಒಯ್ದು ಭರತೀ ಮಾಡಿದ್ದರಂತಲ್ಲಪ್ಪಾ?’ ಅರ್ಧ ಹರ್ಷ, ಅರ್ಧ ಸಂದೇಹ ಬೆರೆತ ಧ್ವನಿಯಲ್ಲಿ ಮುದುಕ ಕೇಳಿದ.

‘ಹೌದು, ಆ ದಿವಸ ನಾವು ಮನಿಯೊಳಗ ಸ್ವಲ್ಪ ಜಗಳಾಡಿದ್ದನ್ನು ಯಾರೋ ಕುಲಕರ್ಣೇರಿಗೆ ಹೇಳಿದರಂತೆ. ಸಂಜಿಗೆ ಕಟ್ಟೀಮ್ಯಾಲ ಕೂತಾಗ ಕರಿಸಿದರು. ಹೀಂಗs ಆ ಮಾತು ಈ ಮಾತು ಕೇಳತಾ ಮಿಲಿಟರಿಗೆ ಭರತೀ ಆಗತೀಯೇನಂತ ಕೇಳಿದರು. ಚಹಾನೂ ಒಂದು ಕಪ್ಪು ತರಿಸಿಕೊಟ್ಟರು. ‘ಯಾಕ ಮಕಾ ಬಾಡೇದ? ಮಧ್ಯಾಹ್ನದಾಗ ಉಂಡಿದಿಯೋ ಇಲ್ಲೋ’ ಎಂದು ಕೇಳಿ, ರಾತ್ರಿ ತಮ್ಮ ಮನಿಗೆ ಊಟಕ್ಕೆ ಬರಲಿಕ್ಕೂ ಹೇಳಿದರು. ಅಂದು ಅವರಲ್ಲೇ ಊಟಾ ಮಾಡಿದೆ. ಮನೀಗಿನ್ನ ಮಲಗಲಿಕ್ಕೆ ಬರಬೇಕೆಂದರ ಬಿಡಲಿಲ್ಲ. ಮರುದಿನ ಸೂರ್ಯ ಉದಯ ಆಗೂದಕಿಂತಾ ಮುಂಚೆ ಎಬ್ಬಿಸಿ ಸ್ಟೇಶನಕ್ಕೆ ಕರಕೊಂಡು ಹೋದರು; ಹೆಸರು ಬರೆದು ಕೊಟ್ಟು ದಂಡಿಗೇ ಭರತೀ ಮಾಡಿಬಿಟ್ಟರು......’

‘ಆಂ?’ ಎಂದು ಮುದುಕ ಗಾಬರಿಯಾಗಿ ಬಾಯಿ ತೆರೆದ.

‘ಮುಂದ?’ ಎಂದಳು ಮುದುಕಿ.

‘ಮುಂದ ಪುಣೆಗೆ ಒಯ್ದರು..... ಅಲ್ಲಿ ನನ್ನ ಕೈ ಮುರಿದದ್ದನ್ನು ನೋಡಿದರು.... ‘ಅನ್‌ಫಿಟ್’ ಅಂತ ಏನೋ ಹೇಳಿ ಬಿಟ್ಟುಬಿಟ್ಟರು. ನನ್ನ ಜೊತೆ ಇದ್ದವರನ್ನೆಲ್ಲಾ ಬ್ಯಾರೆ ಕಡೆ ಒಯ್ದು ಬಿಟ್ಟರು. ನಾ ಪುಣೆದಾಗ ಎರಡು ದಿನ ತಿರುಗಾಡಿದೆ... ದೊಡ್ಡ ಊರದು; ಯಾರ ಕೇಳಬೇಕು...? ನನ್ನ ಹತ್ತರ ಗಾಡಿ ಖರ್ಚಿಗೂ ರೊಕ್ಕ ಇರಲಿಲ್ಲ.... ತಿರುಗಿ ಊರಿಗೆ ಬರಬೇಕಂದರ! ಅಲ್ಲೇ ಹೋಟೆಲ್ಲಿನೊಳಗೆ ಕೆಲಸಕ್ಕೆ ನಿಲ್ಲಬೇಕಂತ ಅಲ್ಲಿ ಇಲ್ಲಿ ಅಲೆದಾಡಿ, ಒಂದು ಕೆಲಸಾ ಹಿಡದೆ... ಗಾಡೀ ಖರ್ಚಿನ ಪೂರ್ತಿ ಪಗಾರ ಕೂಡಿದ ಕೂಡ್ಲೆ ಊರಿಗೆ ಬರಬೇಕಂದರೆ... ಮಾಲಕರು ಪಗಾರs ಕೊಡವೊಲ್ಲರು... ಕೇಳಲಿಕ್ಕೆ ಹೋದರ ಈಗ್ಯಾತಕ್ಕೆ ಬೇಕು? ಒಮ್ಮೇ ಕೊಡತೀವಂತ! ಅನ್ನೋರು. ಹಾಗೇ ಈ ಆರು ತಿಂಗಳು ಕಳೆದು, ಆ ಮಾಲೆ ಪಗಾರ ಕೊಟ್ಟರು. ಈಗ ಊರಿಗೆ ಬಂದು ಹತ್ತಿದೆ!’ ಎಂದು ತನ್ನ ಆರು ತಿಂಗಳ ಕತೆಯನ್ನು ಸ್ವಲ್ಪದರಲ್ಲಿ ಹೇಳಿ ಮುಗಿಸಿದ ಶಿವಪ್ಪ.

'ಇಲ್ಲಪ್ಪಾ' ಇನ್ನೂ ಯಾವಾಗ ಹಿಡಿದು ಒಯ್ಯುತ್ತಾರೊ ಏನೋ ನೇಮನs ಇಲ್ಲ!.... ಮೊನ್ನೆ ಮೂರು ತಿಂಗಳು ತಿರಗಾಡತಿದ್ದ ಪರಮಾನಟಿ ಪದಮ್ಯಾನ್ನ ಒಮ್ಮೆಲೆ ಬಂದ ಹಿಡಿದು ಒಯ್ದರು....'

'ಅಂವ ಮಿಲಿಟರಿಗೆ ಭರತೀ ಆಗ್ಯಾನ! ಅವನ ಹಾಂಗ ನಾ ಭರತೀ ಆಗಿಲ್ಲ!' ಸ್ವಲ್ಪ ಸಿಟ್ಟಿನ ಸ್ವರದಿಂದ ಹೇಳಿದ ಶಿವಪ್ಪ.

'ಏನ್ ನಿಂದೂ ನೇಮನs ಹೇಳಲಿಕ್ಕೆ ಬರೂದಿಲ್ಲ ಬಿಡು.... ಮೊದಲು 'ಟೇಶನ ಮ್ಯಾಲೆ ಭರತೀ ಮಾಡಿದರು" ಅಂತ ಹೇಳತಿ..... ಮುಂದ... ಪುಣೇಕ ಒಯ್ದು ಬಿಟ್ಟರೂ ಅಂತೀ!' ಎಂದು ಬೇಸರದಿಂದ ಉಸುರಿದ ಮುದುಕ.

'ಹೌದು' ಕೈಮುರಿದವರನ್ನ ಏನ್ ಮಾಡತಾರಲ್ಲೆ ತೊಗೊಂಡು? ಡಾಕ್ಟರ್ ಪರೀಕ್ಷಾ ಮಾಡ್ತಾರ.... ಸ್ವಲ್ಪ ಏನಾದರೂ ಬ್ಯಾನಿ ಇದ್ದರ..... ನೋವು ಇದ್ದರ........ ಡಿಸ್ ಮಿಸ್ ಮಾಡಿಬಿಡತಾರ.... ತಿಳೀತೂ...?'

'ಅಗಸರ ಭೀಮನ ಕಣ್ಣು ಒಂದು ಕಾಣಿಸತಿದ್ದಿಲ್ಲ; ಹಾಂಗs ಒಯ್ದರ...! ಲಷ್ಕರಿನೊಳಗೆ ಹಾಕಲಿಲ್ಲ... ಸಾಹೇಬರ ಅರವೀ ಒಗೀಲಿಕ್ಕೆ ಹಚ್ಚಿದರು... ಕೈಯೊಳಗೆ ಸಿಕ್ಕವರನ್ನು ಮನೀಗೆ ಬಿಡತಾರs ಅವರು? ಹೇಳತೀ ನೀ ಇಲ್ಲದ್ದs ಒಂದು!'

ಆ ದಿನ ಇರುಳೆಲ್ಲ ಆ ಮಾತು ಈ ಮಾತುಗಳಲ್ಲಿಯೇ ಕಳೆಯಿತು. ತಾಯಿಗೆ 'ಎಲ್ಲಿಯೇ ಹೋಗವಲ್ಲನ್ಯಾಕ; ಈಗ ಮನೀಗೆ ಬಂದವನಲ್ಲ' ಎಂಬ ಹಿಗ್ಗು. ತಂದೆಗೆ ಮಾತ್ರ 'ಮನಿಗೆ ಬಂದ ಮಗನನ್ನು ಮತ್ತೆ ಹಿಡಿದು ಒಯ್ದರೆ!' ಎಂಬ ಚಿಂತೆ. ಇನ್ನೂ ನಸುಕು ಇರುವಾಗಲೇ ಭೀಮಪ್ಪ... ಶಿವಪ್ಪನ ತಂದೆಯ ಹೆಸರು... ಎದ್ದು, ಇದೀಗ ಹೊರಗೆ ಬಂದು, ಕೆಮ್ಮುತ್ತ ಅಂಗಳ ಕಸ ಗುಡಿಸುವುದರಲ್ಲಿದ್ದ. ಮನದಲ್ಲಿ 'ನಾಲ್ಕು ದಿನ ಶಿವಪ್ಪನನ್ನು ಎಲ್ಲಿಯಾದರೂ ಅಡವಿಯಲ್ಲಿ ಇಡಬೇಕು; ಊರ ಜನ ಕೆಟ್ಟ; ಮತ್ತೇನಾದರೂ ಮೇಲಿನವರಿಗೆ ತಿಳಿಸಿದರೆ ಹಿಡಿದು ಒಯ್ದಾರು....' ಎಂದು ಮೊದಲಾಗಿ ಯೋಚಿಸುತ್ತಲಿದ್ದ. ಅಷ್ಟರಲ್ಲಿಯೇ ಕಸ ಒಗೆಯಲಿಕ್ಕೆಂದು ಬಂದ ನೆರೆಮನೆಯ ಹೆಂಗಸೊಬ್ಬಳು ಕೇಳಿದಳು:

'ಭೀಮಣ್ಣಾ, ರಾತ್ರಿ ಶಿವೂ ಬಂದಾ?' ಭೀಮಪ್ಪ ಅಂಗಳ ಕಸ ಗುಡಿಸುವುದನ್ನು ಅಷ್ಟಕ್ಕೇ ನಿಲ್ಲಿಸಿ ಉಸುರಗರೆದನು; 'ಎಲ್ಲಿಂದ ಬರತಾನ?

ಹೋಗಿ ಆರು ತಿಂಗಳಾಯಿತು..... ಇನ್ನೂ ಪತ್ತೇನs ಇದ್ದಿಲ್ಲ!' ಎಂದು ಹೇಳಬಾರದೆಂದಿದ್ದ ಸಂಗತಿಯನ್ನು ಅರ್ಧ ಹೇಳಿದಂತೆಯೇ ಮಾಡಿ, ಮಾತನ್ನು ಮುಗಿಸಿದ.

'ಅಲ್ಲ, ರಾತ್ರೀ ಅವನ ಹಾಂಗs ದನಿ ಕೇಳಬಂತು;.... ಅದಕ್ಕಂದೆ.'

'ಇಲ್ಲ... ನಮ್ಮಾಕಿನ... ರಾತ್ರಿ ಮಗನ ನೆನಪು ಮಾಡಿ ಬೆಳ್ಳ ಬೆಳತನಕಾ ಅಳತಿದ್ದಳು!' ಎಂದು ಹೇಳಿ ಕಸಬರಿಕೆಯನ್ನು ತಕೊಂಡು ಒಳ್ಳಕ್ಕೆ ಹೋದ. ಲಗುಬಗೆಯಿಂದ ಶಿವಪ್ಪನನ್ನು ತಟ್ಟಿ ಎಚ್ಚರಿಸಿ, ಕಳ್ಳದನಿಯಿಂದ 'ಶಿವೂ ಬೆಳಗಾಯಿತು... ಏಳು. ಇನ್ನೂ ಯಾರು ಕೇಳ್ಯಾರೋ.... ಎಲ್ಲೋ; ಅಷ್ಟರೊಳಗ ಹೋಗ ನೀ! ಸಿದ್ದಪ್ಪನ ತೋಟಕ್ಕ ನಡೀ! ಹಿಂದಿನಿಂದ ರೊಟ್ಟೀ ತೊಗೊಂಡು ನಾ ಬರತೇನಂತ. ಸಂಜಿಗೆ ಮತ್ತ ಬಂದೀಯಂತ!' ಎಂದು ಹೇಳಿದ.

'ಇಲ್ಲ; ಯಾರು ಏನು ಮಾಡ್ತರಾಪ್ಪಾ? ನಾ ಏನು ಭರತೀ ಆಗಿದೀನೇನು?'

'ಅಲ್ಲೋ ಶಿವೂ, ನಿನಗ ಗೊತ್ತಿಲ್ಲ; ನಮ್ಮೂರು ಬಹಳ ಕೆಟ್ಟ! ಮತ್ತ ಎಲ್ಲಿಯಾದರೂ ಒಯ್ದಾರೂ ಅಂತ ಎದಿ ಹಾರತೈತಿ ನಂದು! ನಾಕು ದಿನಾsರೆ ಹೋಗು, ನಾ ಯಾರಿಗಾದರೂ ಹೇಳಿ ವ್ಯವಸ್ಥಾ ಮಾಡೂತನಕಾ!' ಎಂದು ಏನೇನೋ ಸಮಾಧಾನ ಹೇಳಿ, ಕಳುಹಿಸಿಬಿಟ್ಟನು.

* * *

ಶಿವಪ್ಪ ಸಿದ್ದಪ್ಪನ ತೋಟದಲ್ಲಿ ಹೋಗಿ ನಿಂತ. ಸಿದ್ದಪ್ಪ ನಮ್ಮೂರ ದೊಡ್ಡ ರೈತ. ಅವನ ತೋಟ ಊರು ಬಿಟ್ಟು ನಾಲ್ಕು ಮೈಲು ದೂರದಲ್ಲಿದೆ, ಒಂದು ಮೊರಡಿಯ ಇಳುಕಲಲ್ಲಿ. ಅತ್ತ ಊರ ಜನ ಹೋಗುವುದು ಕಡಿಮೆ. ಅಲ್ಲದೆ ಸಿದ್ದನಿಗೂ ಭೀಮನಿಗೂ ಮೊದಲಿನಿಂದಲೂ ಸ್ವಲ್ಪ ಸಂಬಂಧ. ಸಿದ್ದನೆಂದರೆ ಭೀಮನ ಮನೆಯವರಿಗೆಲ್ಲ ತುಂಬ ವಿಶ್ವಾಸ. ಭೀಮನ ವಿಷಯಕ್ಕೆ ಸಿದ್ಧನ ಮನೆಯವರಿಗೂ ಹಾಗೆಯೇ, ಅದಕ್ಕೆ ಸಿದ್ಧನಲ್ಲಿ ಭೀಮನು ಕೂಲಿಯ ಆಳಿನಂತೆ ದುಡಿಯದೆ ಮನೆಯವನಂತೆ ದುಡಿಯುತ್ತಿದ್ದುದೂ, ಸಿದ್ಧನು ಭೀಮ ಬಡವನೆಂದು ಬಗೆದು ತನ್ನ ತೋಟದಲ್ಲಿರುವ ಕಾಯಿ ಕಸರುಗಳನ್ನು ಸ್ವಲ್ಪ ಕೊಡುತ್ತಿದ್ದುದೂ ಕಾರಣವಾಗಿದ್ದುವು.

ಶಿವಪ್ಪ ಹಗಲು ತೋಟದಲ್ಲಿ ಇರುತ್ತಿದ್ದ; ರಾತ್ರಿಯಾಗಲು ಮನೆಗೆ ಮಲಗಲು ಬರುತ್ತಿದ್ದ. ಒಂದೊಂದು ದಿನ ತೋಟದಲ್ಲಿಯೇ ಮಲಗಿದರೂ ಮಲಗಿದನೆ. ಆಗ ಸಿದ್ಧನಲ್ಲಿಯೇ ಶಿವಪ್ಪನ ಊಟ. ಸಿದ್ಧನಿಗಾದರೂ ಅನಾಯಾಸವಾಗಿ ಹೊಟ್ಟೆಗೆ ಹಾಕಿ ದುಡಿಸಿಕೊಳ್ಳಲು ಒಂದು ಆಳು ಸಿಕ್ಕಿತು. 'ಇರುವಷ್ಟು ದಿನ ಇದ್ದು ಬಿಡಲಿ, ತಲೆ ತಪ್ಪಿಸಿಕೊಂಡು ತಿರುಗುವ ಶಿವಪ್ಪ ಕೂಲಿಯನ್ನು ಬೇರೆ ಬೇಡುವುದಿಲ್ಲವಲ್ಲ!' ಎಂದು ಸಂತೋಷವಾಗಿದ್ದಿತು. ಒಮ್ಮೆ ಭೀಮನನ್ನು ಕರೆದು, 'ಭೀಮಾ, ಶಿವಪ್ಪನ ವಿಷಯಕ್ಕೆ ನೀ ಏನೂ ಕಾಳಜೀ ಮಾಡೂ ಜರೂರಿಲ್ಲs.... ನಮ್ಮ ತೋಟದ ಕಡೆ ಯಾವ ಮಗಾನೂ ಹಾಯುಹಾಂಗಯಿಲ್ಲ... ಒಮ್ಮೆ ಊರಾಗಿನ ಸುದ್ದಿ ಅಡಗೂ ತನಕಾ... ಕುಶಾಲ... ಹಗಲು ರಾತ್ರಿ ಇರಲಿ... ಇಲ್ಲೇ!' ಎಂದು ಭೀಮನ ಮೇಲೆ ಮಹದುಪಕಾರ ಮಾಡುವವನಂತೆ ಹೇಳಿಬಿಟ್ಟ.

ಭೀಮನ ಮುಖ ಈಗ ನಾಲ್ಕಾರು ದಿನಗಳಿಂದ ಸ್ವಲ್ಪ ಕಳೆಗೊಂಡಿದೆ. ಆದರೂ ಅವನ ಮನಸ್ಸಿನಲ್ಲಿ 'ಮಗನನ್ನು ಇನ್ನೂ ಮಿಲಿಟರಿಯವರು ಬಂದು ಹಿಡಿದು ಒಯ್ದರೆ....?' ಎಂಬ ಚಿಂತೆಯೊಂದು ಮನೆಮಾಡಿಕೊಂಡಿತ್ತು. ಅದು ಸಹಜವಾಗಿ ಊರ ಜನರು 'ಇನ್ನೂ ಎಲ್ಲೆ ಮಗನ ಸುದ್ದಿ ಹತ್ತಲಿಲ್ಲs... ಭೀಮಣ್ಣಾ.....' 'ಮೊನ್ನೆ ಯಾರಿಗೋ ಸ್ಟೇಶನ್ ಮ್ಯಾಲೆ ದೊರಕ್ಕಿದ್ದನಂತ ಅಲ್ಲಾ?...' ಎಂದು ಮೊದಲಾಗಿ ಕೇಳುವ ವಿವಿಧ ಪ್ರಶ್ನೆಗಳಿಂದ ಚಿಂತೆ ಮತ್ತಿಷ್ಟು ಹೆಚ್ಚುತ್ತಲಿತ್ತು. ದೂರದಲ್ಲಿ ಯಾರು ಏನೇನು ಮಾತನಾಡಿದರೂ ಅವರು ತನ್ನ ಮಗನ ವಿಷಯಕ್ಕೆ ಮಾತನಾಡುತ್ತಿರುವರೇನೋ ಎಂದು ಬೆದರಿದ ಭೀಮಪ್ಪನ ಮನಸ್ಸಿಗೆ ಭಾಸವಾಗುತ್ತಲಿದ್ದಿತು. ಈಗೀಗ ಜನರು ಅವನ ಕಡೆಗೆ ನೋಡಿದರೆ ಸಾಕು. ಕೇವಲ ಸಂಶಯ ದೃಷ್ಟಿಯಿಂದಲೇ ತನ್ನನ್ನು ನೋಡುವರೆಂದು ತಿಳಿಯುವನಾತ. ಊರಲ್ಲಿ, ರಜೆ ಪಡೆದು ಬಂದ ಮಿಲಿಟರಿಯಲ್ಲಿ ಸೇರಿದ ತರುಣರು ಡ್ರೆಸ್ಸು ಮಾಡಿಕೊಂಡು ಸಹಜವಾಗಿ ಭೀಮನ ಮನೆಯ ಮುಂದಿನಿಂದ ಹಾಯ್ದರೂ ಸಾಕು; ಇವನ ಎದೆ ದಡದಡ ಹೊಡೆದುಕೊಳ್ಳತೊಡಗುವುದು. ಅಕಸ್ಮಾತ್ ಅವರು ಹೊರಳಿ ಇವನ ಮನೆಯ ಕಡೆಗೆ ನೋಡಿದರಂತೂ ತೀರಿಯೆ ಹೋಯಿತು; ಭೀಮನ ಕೈಕಾಲುಗಳೇ ತಣ್ಣಗಾಗುವುವು. ಮೊನ್ನೆ ಒಬ್ಬ... ಮಿಲಿಟರಿಯಲ್ಲಿ ಹೋಗಿ ಬಂದ ಹುಡುಗ 'ನಿನ್ನ ಮಗಾ ಈಗೆಲ್ಲಿ ಇದ್ದಾನ? ತಿಂಗಳಾ ರೂಪಾಯಿ ಎಷ್ಟು ಕಳಸ್ತಾನ? ಪತ್ರ ಬರ್ತಾವೇನು ಮ್ಯಾಲಿಂದ ಮ್ಯಾಲ?' ಎಂದು ಸ್ವಾಭಾವಿಕವಾಗಿ ಕೇಳಲು,

ಭೀಮನು ಒಮ್ಮೆಲೆ ಅವನ ಪಾದಗಳನ್ನು ಮುಟ್ಟಿ ಕಣ್ಣೀರು ಸುರಿಸುತ್ತಾ.... 'ಯಾರಿಗೂ ಹೇಳಬ್ಯಾಡಪ್ಪಾ; ಬಡವರ ಮ್ಯಾಲೆ ದಯಮಾಡು... ನಿಮ್ಮಂತೆ ನಾಲ್ಕು ಮಂದಿ ಇಲ್ಲ... ಮನ್ಯಾಗ!... ಕೈ ಬಾಯಿಗೆ ಬಂದಾಂವ ಒಬ್ಬನs ಮಗಾ...' ಎಂದು ಅಂಗಲಾಚಿ ಬೇಡಿಕೊಂಡ. ಅಷ್ಟಕ್ಕೆ ಹೊರಗೆ ನಗರದಲ್ಲಿ ಅಲೆದಾಡಿ ಬಂದ ಆ ತರುಣ, ಇದರಲ್ಲೇನಾದರು ಗುಟ್ಟು ಇದೆ ಎಂದರಿತು, ಭೀಮನನ್ನು ಸ್ವಲ್ಪ ಹೆದರಿಸಿ, ಸ್ವಲ್ಪ ರಮಿಸಿ, ಎಲ್ಲ ಸಂಗತಿಯನ್ನು ಕೇಳಿ ತಿಳಿದುಕೊಂಡೇ ಬಿಟ್ಟ...... ಹೀಗೆ ಶಿವಪ್ಪನು ಬಂದ ಸುದ್ದಿಯು ಭೀಮಪ್ಪನಿಂದಲೇ ಊರಲ್ಲಿ ಕೆಲವು ಜನರಿಗೆ ಗೊತ್ತಾಗಿಹೋಯಿತು.

ಭೀಮನಿಗೆ ಮಗನು ಮನೆಗೆ ಬಂದಿರುವನೆಂದು ಅಷ್ಟು ಸಂತಸವಿಲ್ಲ. 'ಇನ್ನು ಮೇಲೆ ಮಗನು ಮಿಲಿಟರಿಯುವರ ಕೈಗೆ ಸಿಕ್ಕದಂತೆ ಉಳಿಸಿಕೊಳ್ಳುವದೆಂತು?' ಎಂಬ ಚಿಂತೆಯು ಹಗಲಿರುಳೂ ಅವನ ಮನಸ್ಸನ್ನು ತಿನ್ನುತ್ತಲಿದ್ದಿತು. ಇಂದು ಭೀಮ ಊಟ ಮಾಡಿ ಎದ್ದ ಕೂಡಲೆ, ಮಗನ ಚಿಂತೆ ಅವನ ಮನವನ್ನಾವರಿಸಿತು. ಆಗ ಒಮ್ಮೆಲೆ ಅವನಿಗೊಂದು ವಿಚಾರ ಹೊಳೆಯಿತು. 'ಮೂಲೀಮನಿ ಗುಂಡಪ್ಪಂದರ ಊರ ಕಾರಭಾರಿ; ಗೌಡ–ಕುಲಕರ್ಣೇರ ಮನಿಗೂ ಹೋಗಿ ಬರುವ ರೂಢಿಯವನದು! ಯಾವಾಗಲೂ ಗೌಡರ ಹತ್ತಿರಾನs ಬಿದ್ದುಕೊಂಡು ಇರತಾನ... ಊರಾಗಿನ ಮದಿವೀ ಮುಂಜೀ ಹಿಡಕೊಂಡು... ಹೊಲಾ ಮನೀ ಪಾಲುಗಾರಿಕೀ ತನಕಾ ಎಲ್ಲಾ ಕೆಲಸಗಳೂ ಅವನ ಕೈವಾಡ ಇಲ್ಲದ ಆಗೂಹಾಂಗಿಲ್ಲ.... ಅಂದಮ್ಯಾಲ, ಅವನ ಕಿಂವೀಮ್ಯಾಲ ಒಂದು ಮಾತು ಹಾಕಿ ಇಡಬೇಕು... ಅಂದರ ಒಳ್ಳೇದಾಗತೈತಿ....' ಎಂದು ವಿಚಾರ ಬರುವುದೇ ತಡ ಗುಂಡಪ್ಪನ ಮನೆಯ ಹಾದಿಯನ್ನೇ ಹಿಡಿದ ಭೀಮಪ್ಪ.

* * *

'ಯಾಕ ಭೀಮಣ್ಣನ ಸ್ವಾರಿ ಬಹಳ ದಿವಸಕ್ಕ ಬಂತು?' ಎಂದು ಗುಂಡಪ್ಪ ಕಂಬಳಿ ಹಾಸುತ್ತ ಕೇಳಿದ.

'ಏನೋ ಸುಮ್ಮನ ಸ್ವಲ್ಪ ಕೆಲಸ ಇತ್ತರೀ....' ಎಂದು ಬಾಯಲ್ಲಿಯೇ.... ಪುಟಪುಟಿಸಿದ ಭೀಮಪ್ಪ ಮತ್ತು ಸ್ವಲ್ಪ ತಡೆದು 'ಊಟಕ್ಕೆ ವ್ಯಾಳೇ ಆಯತ್ರೀ?' ಎಂದ.

ಗುಂಡಪ್ಪನು ಕಂಬಳಿಯ ಮೇಲೆ ಕುಳಿತು ಎಲೆ ತಿನ್ನುವ ಚೀಲ ಬಿಚ್ಚುತ್ತ ಹೇಳತೊಡಗಿದ... 'ಮುಂಜಾನೆ ಸಹಜ ಗೌಡನ ವಾಡೇದ ಕಡೆಗೆ ಹೋದನೇನಪ್ಪಾ! ಎಲ್ಲಿ..ಆ...ಸೂ.. ಮಕ್ಕಳ ಕುರುಬರು, ಸತ್ಯಪ್ಪನ ಹತ್ತೀ ಹಕ್ಕಲದಾಗ ಕೇಳಿದs ಕುರಿ ಹಾಯಿಸಿದರಂತ ಬ್ಯಾಸಿಗ್ಯಾಗ!.... ಸತ್ಯಪ್ಪ ಸುಮ್ನನs ಬಿಡೊಬಂಟನ? ಅವರ ಒಂದು ಕುರೀsನ ಎಳೆದು ತಂದಿದ್ದ ಆಗ ಮಗನಿಗೆ. ಆ ನ್ಯಾಯ ನನ್ನ ತನಕಾ ಬಂತು ನಾ ಹೇಳಿದ್ದೆ: ಎರಡು ದಿವಸ ಹೊಲದಾಗ ಕುರೀ ಕೂಡ್ರಿಸಿ ಕೂಡಿರಿ; ನಿಮ್ಮ ಕುರಿ ಒಯ್ಯೋಗರಿ; ನಮಗೇನು ಮಾಡೂದು" ಅಂತ. ಆದರ ಅವರ ಹೇಳತs ಕೇಳತs ಕುರುಬರು! "ಇಂದs ನಾಳೇ" ಅನ್ನತ, ಈಗ ಹಾರಿಸೇಬಿಟ್ಟರು! ನಿನ್ನೆ ಸತ್ತ್ಯಾ ಅಳತs ಮತ್ತ ನನ್ನ ಕಡೆ ಬಂದ. ನನಗೂ ಸಿಟ್ಟು ಬಂತು. ಕುರುಬರು ಸೊಕ್ಕಿಗೆ ಬಂದಾರಂತ ಒಯ್ದು ಗೂಟಕ್ಕ ಹಾಕಿಬಿಟ್ಟೆ.... ಒದ್ದಾಡಲಿನ್ನ, ಗೌಡ ಏನೂ ತೊಗೊಳ್ಳದs ಬಿಡತನಾs? ಕಷ್ಟ ಇಲ್ಲದ ಬ್ಯಾಟಿ ಕೈಯಾಗ ಬಂದೈತಿ... ಮುಂಜಾನೆ ಹಿಡಿದೂ ಗೌಡನ ಮನ್ಯಾಗ ಅದs.... ನ್ಯಾಯ ನಡದಿತ್ತು.... ತೀರಿಸಿ ಬರಬೇಕಾದರ ಒಂದಿಷ್ಟು ಊಟಕ್ಕೆ ವ್ಯಾಳೇ ಆಯ್ತು!' ಎಂದು ಊಟಕ್ಕೆ ವೇಳೆಯಾದುದರ ಕಾರಣ ಹೇಳಿದನು ಗುಂಡಪ್ಪ.

'ಈಗೀಗ ಕುರುಬರೂ ಸೊಕ್ಕಿಗೆ ಬಂದಾರರೀ!' ಎಂದು ಗುಂಡಪ್ಪನ ಮನಸ್ಸಿನ ಹೊಲಬನ್ನರಿತೇ ನುಡಿದ ಭೀಮಪ್ಪ.

ಗುಂಡಪ್ಪ ಎಲೆಯಡಿಕೆ ಹಾಕಿಕೊಳ್ಳುತ್ತಾ; 'ಭೀಮಣ್ಣಾ, ಹಲ್ಲು ಅದಾವೇನು? ಮೊದಲ ತಂಬಾಕ ತಿಂತಿದ್ದೆಲ್ಲ?' ಎಂದ.

ಮಾತು ತೆಗೆಯಲು ಇದೆ ಸಮಯವೆಂದರಿತು ಭೀಮಪ್ಪ 'ತಂಬಾಕ ಹಾಕೋ ತಿದ್ದೆನಪ್ಪಾ! ಹಿರೀ ಮಗಾ, ಹೋದಾಗಿಂದs ಎಲ್ಲಾನೂ ಬಿಟ್ಟುಬಿಟ್ಟೆ! ಈಗ ಹಲ್ಲೂ ಅಗಳಾಡಲಾಕ ಹತ್ಯಾವ....' ಎಂದು ಹೇಳುತ್ತ, ಎದ್ದು ಗುಂಡಪ್ಪನ ಸಮೀಪಕ್ಕೆ ಹೋಗಿ, ಅವನ ಪಾದಗಳ ಮೇಲೆ ತಲೆಯಿಟ್ಟುಕೊಂಡು ಕುಳಿತುಬಿಟ್ಟ.

'ಇದೇನಪ್ಪಾ? ಶಿವ್ಯಾ ಬಂದಾನ ಏನು? ಎಲ್ಲಿ ನನಗ ಭೇಟ್ಟೀನs ಆಗಿಲ್ಲಲ್ಲಾ? ಎಲ್ಲಿ ಹೋಗಿದ್ದನಂತ ಇಷ್ಟ ದಿನಾ?' ಎಂದು ಗುಂಡಪ್ಪ ಕೇಳಿದ.

'ಇಲ್ಲರೀ! ನಿನ್ನೇ ಬಂದಾನ.... ಇನ್ನೂ ತೋಟದೊಳಗs ಇದ್ದಾನ, ನೀವು ಊರಾಗ ಬರಲಿಕ್ಕೆ ಅಪ್ಪಣೀ ಕೊಟ್ಟರ ಬರತಾನ... ನಿಮ್ಮ ಕಿವಿಗೆ

ಹಾಕದ ಹ್ಯಾಂಗ ಬರೋದು? ನೀವು ಊರಾಗ ತಿರುಗಾಡತೀರಿ... ಗೌಡರ ಮನೆಗೂ ಚಾವಡೀ ಬೀದಿಗೂ ಹಾಯ್ದಾಡತೀರ... ಅಪ್ಪಾ... ನಾವೇನು ಕಣ್ಣಿದ್ದೂ ಕುರುಡರ್ಹಾಂಗ! ಮ್ಯಾಲಿಂದ ಏನಾದರೂ ಸ್ವಲ್ಪ ಬಂದರ ನೋಡಿಕೋರಿ... ಶಿವೂನ್ನ... ನಿಮ್ಮ ಉಡ್ಯಾಗನs ಹಾಕಿಬಿಟ್ಟಿದ್ದೀನಿ... ಇಂದ ಅಂವ ನನ್ನ ಮಗ ಅಲ್ಲ; ನಿಮ್ಮ ಮಗಾನs ಅಂತ ತಿಳಿಕೋರಿ!' ಎಂದು ಅಂಗಲಾಚಿ ಬೇಡಿದ ಭೀಮಪ್ಪ.

'ಅವನ ಚಿಂತೀ ಬಿಟ್ಟುಬಿಡು. ಏನು, ಬಂದದ್ದು ನೋಡಿಕೊಳ್ಳಾಕ ನಾ ಇದ್ದೀನಿ!' ಎಂದು ಆಶ್ವಾಸನ ಕೊಟ್ಟ ಗುಂಡಪ್ಪ.

* * *

ಈಗ ಭೀಮಪ್ಪ ನಿಶ್ಚಿಂತನಾದ. ಗುಂಡಪ್ಪನ ಮುಖಾಂತರ ಊರವರನ್ನೇ ಕಟ್ಟಿಕೊಂಡ ಮೇಲೆ ಬೇರೆ ಏನು ಬೆದರಿಕೆ ಅವನಿಗೆ? ಶಿವಪ್ಪನೂ ಈಗ ಬೇಕಾದಂತೆ ಊರಲ್ಲಿ ತಿರುಗಾಡತೊಡಗಿದ. ದಿನಾಲು ಕೆಲಸಕ್ಕೆ ಹೋಗಿ ಸಂಪಾದಿಸಿ, ತಂದೆ ತಾಯಿಗಳ ಹೊಟ್ಟೆಗೆ ಹಾಕಹತ್ತಿದ್ದ. ಇನ್ನೊಂದು ತಿಂಗಳಲ್ಲಿ ಗೌಡರ ಮನೆಯಿಂದ ತನ್ನ ತಮ್ಮನನ್ನು ಕೆಲಸದಿಂದ ಬಿಡಿಸಿ ತಂದು, ಮೊದಲಿನಂತೆ ಶಾಲೆಗೆ ಕಳುಹಬೇಕೆಂಬ ಆಲೋಚನೆಯಲ್ಲಿದ್ದ. ಮೊನ್ನೆ ಹಾದಿಯಲ್ಲಿ ಶಾಲೆಯ ಮಾಸ್ತರರು ದೊರಕಿದಾಗ 'ನಮ್ಮ ಹುಡಗನಿಗಷ್ಟು ಚಲೊ ಪಾಠಾ ಹೇಳಿಕೊಡ್ರೀ' ಅಂತ ಈಗಾಗಲೇ ಸೂಚಿಸಿದ್ದ.

ಭೀಮಣ್ಣ ಈಗ ಸಂಜೆಗೆ ಮಗನನ್ನು ಬಿಟ್ಟು ಎಂದೂ ಊಟ ಮಾಡುವದಿಲ್ಲ. ಮಧ್ಯಾಹ್ನ ಮಾತ್ರ ಕೆಲಸಕ್ಕೆ ಹೋದಾಗ ಶಿವಪ್ಪ ಹೊಲದಲ್ಲಿ ಉಣ್ಣುತ್ತಿದ್ದುದರಿಂದ ಒಬ್ಬನೇ ಉಣ್ಣುತ್ತಿದ್ದ. ಸಂಜೆಗೆ ಮಗನು ಕೆಲಸದಿಂದ ಬಂದ ಮೇಲೆ, ಇಬ್ಬರೂ ಕೂಡಿಯೇ ಊಟಕ್ಕೆ ಕೂಡುವರು. ಅದೇ ಕಾಲಕ್ಕೆ ಶಿವಪ್ಪನ ತಾಯಿಯೂ ಅವರ ಜೊತೆಯಲ್ಲಿಯೇ ಊಟಕ್ಕೆ ಕೂಡುವಳು. ಅದೇನು ಈಗಿನ ಹೊಸ ಪದ್ಧತಿಯ ಪರಿಣಾಮವಲ್ಲ. ಹಿಂದು ಮುಂದೆ ಊಟಮಾಡಿದರೆ, ಮೊದಲುಣ್ಣುವವರು ಹೊಟ್ಟೆ ತುಂಬ ತಿಂದರೆ, ಹಿಂದಿನಿವರಿಗೆ ಉಳಿಯುವುದೋ ಇಲ್ಲವೊ ಎಂಬ ಶಂಕೆ ಬೇರೆ ಇರುವುದಿಲ್ಲ.... ಒಮ್ಮೆಲೇ ಕುಳಿತರೆ ಹೆಚ್ಚು ಕಡಿಮೆ ಎಲ್ಲರೂ ಸ್ವಲ್ಪ ಸ್ವಲ್ಪ ಹರಿದು ಹಂಚಿ ತಿನ್ನಲು ಬರುತ್ತದೆ. ಅಲ್ಲದೆ ಇಂತಹ ದಿವಸಗಳಲ್ಲಿ ದೀಪವನ್ನೂ ಬಹು ಹೊತ್ತು ಉರಿಸಬೇಕಾಗುವುದಿಲ್ಲ... ಎಂಬುದೇ ಅದರ ಕಾರಣಗಳು.

ಇಂದು ಅದೇಕೋ ರಾತ್ರಿ ಎಂಟು ಗಂಟೆಯಾದರೂ ಶಿವಪ್ಪ ಕೆಲಸದಿಂದ ಬರಲಿಲ್ಲ. ಭೀಮಪ್ಪ ಗುಬ್ಬಿ ಮರಿಯಂತೆ ದಾರಿ ಕಾಯುತ್ತಲಿದ್ದಾನೆ; ಹೊಟ್ಟೆ ಹಸಿದಿದೆ. ಇನ್ನೂ ಶಿವಪ್ಪನ ಸುಳಿವಿಲ್ಲ. ವೇಳೆಯಾಗಿ ಹೋಯಿತು. 'ಯಾಕ ಬರಲಿಲ್ಲೊ! ಎಲ್ಲಿಯಾದರೂ ಹೋದನೇನು ಮೊದಲಿನಾಂಕ? ಛೇ ಎಂದೂ ಹೋಗಲಿಕ್ಕಿಲ್ಲ! ಅಂದಾದರೂ ಅಂವ ಹೋಗತಕ್ಕವನಲ್ಲ. ಕುಲಕರ್ಣೇರು ಎರಡು ದಿವಸ ಸವಿಸವಿ ತಿನ್ನಾಕ ಹಾಕಿ, ಒಯ್ದು ಭರತಿ ಮಾಡಿಬಿಟ್ಟರು!

ಅವರೇನೂ ತಮ್ಮ ಸಾವಿಗೆ ಅಂಜತಾರ; ಯಾರನ್ನರ ಬಡವರ ಮಕ್ಕಳನ್ನ ಭರತಿ ಮಾಡಿಕೊಟ್ಟು ತಾವು ಸರಕಾರದಾಗ ಮುಂದ ಆಗತಾರ!' ಎಂದು ಏನೇನೋ ವಿಚಾರಗಳೆಲ್ಲ ಭೀಮಪ್ಪನ ಮನಸ್ಸಿನಲ್ಲಿ ಬರತೊಡಗಿದವು. ಅಷ್ಟರಲ್ಲಿ ಹೊರಗೆ ಯಾರೋ ಬಂದ ಸದ್ದಾಯಿತು. ಶಿವಪ್ಪನೇ ಬಂದನೆಂದು ಮುದುಕನ ಮುಖ ಅರಳಿತು. ಆದರೆ ಬಂದವನು ಶಿವಪ್ಪನಾಗಿರಲಿಲ್ಲ. ಮತ್ತೊಬ್ಬ ಯಾವನೋ ತರುಣನಾಗಿದ್ದ–ಅರ್ಧಮರ್ಧ ಮಿಲಿಟರಿ ಅರಿವೆಗಳೇ ಅವನ ಮೈಮೇಲಿದ್ದುವು. ಭೀಮಪ್ಪ ದಿಟ್ಟಿಸಿ ನೋಡಿದ, ಕತ್ತಲೆಯಲ್ಲಿ ಬಂದವನ ಗುರುತು ಹತ್ತದಾಯಿತು. ಅಷ್ಟರಲ್ಲಿ ಬಂದವನೇ ಗದ್ದರಿಸುವ ಧ್ವನಿಯಲ್ಲಿ, 'ಭೀಮ ಇಲ್ಲೇನು ಮನಿಯೊಳಗೆ?...' ಎಂದು ಕೇಳಿದ.

'ಯಾಕೋ ಯಪ್ಪಾ ಇದ್ದೀನಿ!...' ನಿಟ್ಟುಸಿರೊಡನೆ ಮಾತು ಬಂತು ಭೀಮನ ಮುಖದಿಂದ.

'ನಡಿ ಅಲ್ಲಿ... ನಿನ್ನ ಮಗ.... ಮಿಲಿಟರಿಯಿಂದ ಓಡಿ ಬಂದಾನಂತ ಪೋಲೀಸರು ಹಿಡಿದು ಒಯ್ಯಲಿಕ್ಕೆ ಹತ್ಯಾರ. ಈಗ ಬಂದರ ಭೆಟ್ಟಿ ಆಗತಾನ... ಇಲ್ಲದಿದ್ದರ ಅವನ ಮುಖ ಮತ್ತೊಮ್ಮೆ ಸಿಗೂಹಾಂಗಿಲ್ಲ.... ರಾತ್ರೀ ಮೇಲ್‌ಗಾಡಿಗೆ ಒಯ್ಯತಾರ ಅವನ್ನ! "ನಮ್ಮ ಅಪ್ಪಗಷ್ಟು ತಿಳಿಸು" ಅನ್ನೋಣಾ... ನಾ ಬಂದೆ..." ಎಂದು ಸಿಡಿಲೆರಗಿದಂತೆ ನುಡಿದುಬಿಟ್ಟ.

'ಈಗ ಎಲ್ಲಿ ಅದಾನೋಪ್ಪಾ!' ನಡುಗುವ ದನಿಯಿಂದ ಕೇಳಿದ ಭೀಮಪ್ಪ.

'ಎಲ್ಲಿಯೋ ಕೆಲಸಕ್ಕೆ ಹೋಗುತ್ತಿದ್ದನಂತ.... ಅಲ್ಲೇ ಹೋಗಿ ಹಿಡಿದಾರ. ಈಗ ಊರ ಹೊರಗ ತಗೊಂಡು ಬಂದಾರ... ಸ್ಟೇಶನಕ್ಕ ಒಯ್ಯಬೇಕಂತ...! ಹೋಗಿ ಭೆಟ್ಟಿ ಆಗೋದಿದ್ದರ ಆಗು!' ಎಂದು ಹೇಳಿ, ಹೋಗಿ ಬಿಟ್ಟ ಆತ.

‘ಅಯ್ಯೋ ನನ್ನ ಮಗನ್ನ.. ಮತ್ತ ಒಯ್ಯತಾರಪ್ಪಾ! ಇನ್ನ.... ಏನ್ ಮಾಡಲ್ಯೋ ಮಗನ.... ಮುಪ್ಪಿನ ಕಾಲದಾಗ ನಮ್ಮನ್ನ ಯಾರ ಜೋಕಿ ಮಾಡವರೋ...! ಶಿವನs ನಮ್ಮನ್ನ ನೋಡಿಯಾದರೂ ದಯಾ ಬರಲಾರದೇನಪ್ಪಾ ನಿನಗೆ?’ ಎಂದು ಭೀಮಪ್ಪ ಹಲುಬತ್ತು ಎದ್ದು ಹೊರಹೊರಟ.

‘ನಾನೂ ಕೈತೊಳಕೊಂಡು ಬರತೀನಿ... ಒಂದಿಟ್ಟ ನಿಂದರ್ರಿ!’ ಎಂದು ಶಿವಪ್ಪನ ತಾಯಿ ರೊಟ್ಟಿ ಮಾಡುವುದನ್ನು ಬಿಟ್ಟು ಎದ್ದಳು.

* * *

ಶಿವಪ್ಪನನ್ನು ನಡುವೆ ಕೂಡಿಸಿಕೊಂಡು ಸುತ್ತಲೂ ನಾಲ್ಕಾರು ಜನರು ಕುಳಿತಿದ್ದಾರೆ. ಅವರ ನಡುವೆ ಶಿವಪ್ಪನು ಏನೂ ಚಿಂತೆಯಿಲ್ಲದೆ ಸ್ವಸ್ಥ ಕುಳಿತಿದ್ದಾನೆ. ಅವನಿಗೆ ಇವರೆಲ್ಲಿಯೂ ಒಯ್ಯುವುದಿಲ್ಲವೆಂಬುದು ಮನದಟ್ಟಾಗಿದೆ. ಮಧ್ಯಾಹ್ನದಿಂದಲೂ ‘ಆ ಗಾಡಿಗೆ ಒಯ್ಯತ್ತೇವೆ, ಈ ಗಾಡಿಗೆ ಒಯ್ಯತ್ತೇವೆ’ ಎಂದು ಬೆದರಿಸಿ, ಸ್ಟೇಶನ್ನಿಗೆ ಕರೆದೊಯ್ದರು. ಪೋಲೀಸ್ ಇನ್‌ಸ್ಪೆಕ್ಟರು ಬರುವರೆಂದು ಅಂಜಿಕೆ ಹಾಕಿದರು, ನಾಲ್ಕು ರೂಪಾಯಿ ಸಿಕ್ಕಬಹುದೆಂದು. ಅದು ಸಾಧ್ಯವಾಗದಿರಲು ಈಗ ನಮ್ಮಪ್ಪನನ್ನು ಕರೆಯಿಸಿ, ಹೇಗಾದರೂ ನಾಲ್ಕು ದುಡ್ಡು ಉಚ್ಚಬೇಕೆಂದು ಮಾಡಿದ್ದಾರೆ ಎಂದು ಏನೇನೋ ಯೋಚಿಸುವಷ್ಟರಲ್ಲಿ ಅವರೊಳಗಿನವನೊಬ್ಬನು:

‘ಏ ಶಿವ್ಯಾ... ನಿನಗ ಮಧ್ಯಾಹ್ನದಿಂದಲೂ ಹೇಳಲಿಕ್ಕೆ ಹತ್ತೇವಿ, ಬುದ್ಧಿ ಬರುವಲ್ದು... ಮಗನs... ನಾವು ನಿನ್ನ ಹಿತಕ್ಕಾಗಿ ಮಾಡಲಿಕ್ಕೆ ಹೋದರ ನಿನಗದರ ಸುದ್ದೀನs ಇಲ್ಲ...! ಸುಮ್ಮನ ಆ ಮೂಲೀಮನೀ ಗುಂಡಪ್ಪನ ಹತ್ತರ ನಿಮ್ಮಪ್ಪಗನ ಹೋಗೂ ಅನ್ನು. ಅವನದೂ ಫೌಜದಾರನದೂ ನೆಟ್ಟಗೈತಿ ಏನಾದರೂ ಮಾಡತಾನ ಹೋಗಿ ಅವನ ಕಾಲು ಹಿಡಿ ಅನ್ನು... ನಿಮ್ಮಪ್ಪಗ....’ ಎಂದು ಬುದ್ದೀಮಾತು ಹೇಳುತ್ತಿದ್ದನು.

ಅಷ್ಟರಲ್ಲಿ ಭೀಮಪ್ಪ ಅಲ್ಲಿಗೆ ಹೋದ. ಭೀಮಪ್ಪ ಬಂದುದನ್ನು ನೋಡಿ ಮತ್ತಿಷ್ಟು ಜೋರಿನಿಂದ... ‘ನೋಡಿದಿ.... ನಿನ್ನ ಮಗನ ಕಾರಭಾರ....? ಮೊದಲ ಭರತೀ ಆಗಬಾರದೂ... ಆದ ಮ್ಯಾಲ... ಹೀಂಗ ತಪ್ಪಸ್ಯಾಡಬಾರದು... ತಪ್ಪಿದರ ಬಿಡ್ತದs....?....’

‘ನಾ ಭರತೀ ಆಗಿಲ್ಲ! ಸುಮ್ಮನ ನೀವs ಕಾಡಲಿಕ್ಕೆ ಹತ್ತೀರಿ. ಫೌಜದಾರ್ರು ಬರಲಿ, ನಾ ಹೇಳತೀನಿ. ಇಲ್ಲ ಆದರೆ, ನೀವು ಎಲ್ಲಿ ನಡೀ ಅಂತೀರಿ ಅಲ್ಲಿ ನಡೀರಿ....! ಬೇಕಾದಲ್ಲಿ ಬರತೀನಿ’. ನಡುವೆಯೇ ಬಾಯಿ ಹಾಕಿ ಶಿವಪ್ಪ ಹೇಳಿದ.

‘ಇನ್ನೂ ಇವನ ಸೊಕ್ಕು ಮುರದಿಲ್ಲರೊ...? ತಗೊಳ್ಳಿರಿ... ನಾಲ್ಕು ಏಟು!’ ಎಂದ ಮತ್ತೊಬ್ಬ.

ಇನ್ನೊಬ್ಬ ಶಿವಪ್ಪನನ್ನು ಹೊಡೆಯಲು ಸಿದ್ಧನಾದ. ಅದನ್ನೆಲ್ಲ ಕಂಡು ಭೀಮಪ್ಪನು, ‘ಬಿಡರೆಪ್ಪಾ! ಬಡಿಬ್ಯಾಡ್ರಿ; ಆ ಅಲ್ಲದ ಹುಡುಗನ್ನ ಏನ್ ಮಾಡತೀರಿ? ಏನ್ ಹೇಳೋದು ನನಗೆ ಹೇಳಿರಿ... ಮಾಡ್ತೀನಿ!.. ನಾಲ್ಕು ದುಡ್ಡು ಖರ್ಚು ಆದರೂ ಜೀವ ಒತ್ತೀ ಇಟ್ಟು ತರತೀನಿ...’ ಎಂದು ಅವರಿಗೆ ನಮಸ್ಕಾರ ಮಾಡಲು ಓಡಾಡತೊಡಗಿದ.

ಅವರಲ್ಲಿಯ ಒಬ್ಬ ಧೂರ್ತನು ‘ಇಲ್ಲಿ ಬಾ, ಮುದುಕಾ’ ಎಂದು ಭೀಮಪ್ಪನನ್ನು ದೂರ ಅಡವಿಯಲ್ಲಿ ಕರೆದೊಯ್ದು, ಅವಗ ಕಿವಿಯಲ್ಲಿ ಏನೇನೋ ಬಹಳ ಹೊತ್ತಿನವರೆಗೆ ಹೇಳಿದ. ಅದಕ್ಕೆಲ್ಲ ಮುದುಕನು ಒಪ್ಪಲು, ಅವರೊಳಗಿನವನೊಬ್ಬ ಮುದುಕನ ಬೆನ್ನು ಹತ್ತಿ ಊರೊಳಗೆ ನಡೆದು ಹೋಗುವಾಗ... ‘ಈಗ ಬರತೀನಿ;...’ ನಾ ಬರುವವರೆಗೆ ಬಿಟ್ಟೀರಿ ಮತ್ತ ಇವನ್ನ! ಜಿಗದ ಹೋದಾನು ಎಲ್ಲಾದರೂ;.... ಪೋಲೀಸರು... ನಮ್ಮನ್ನ ಒಯ್ದು ಕೂಡಿಸ್ಯಾರು... ತುರಂಗದೊಳಗ!...’ ಎಂದು ನಸುನಗೆಯೊಡನೆ ಕೂಗಿ ಹೇಳಿದ.

* * *

ಇಂದು ಮುಂಜಾವಿನಿಂದಲೂ ಗುಂಡಪ್ಪನ ಮನೆಯ ಆಳು ಭೀಮಪ್ಪನ ಕಡೆಗೆ ನಾಲ್ಕಾರು ಸಲ ಬಂದುಹೋದ. ಮಧ್ಯಾಹ್ನ ನಾಲ್ಕರ ಗಾಡಿಗೆ ಫೌಜದಾರ ಬರುತ್ತಾನಂತೆ... ಮೊನ್ನೆ ರಾತ್ರಿ ಹೇಳಿದಂತೆ ಇಂದು ಇಪ್ಪತ್ತೈದು ರೂಪಾಯಿ ಕೊಟ್ಟು ತೀರಿಸಬೇಕಂತೆ; ಏನಾದರೂ ಮಾಡಿ ಕೊಟ್ಟುಬಿಡಬೇಕೆಂದರೆ ಹತ್ತಿರ ರೂಪಾಯಿ ಇಲ್ಲ. ಭೀಮ ಯೋಚಿಸತೊಡಗಿದ; ಮನೆಯೊಳಗೆ ಸಂಜೀ ಕೂಳಿಗೆ ಗತಿಯಿಲ್ಲ. ಇಪ್ಪತ್ತೈದು ರೂಪಾಯಿ ಎಲ್ಲಿಂದ ತರಬೇಕು? ಕೇಳಿಲಿಕ್ಕೆ ಹೋದರ ಯಾರೂ ಒಂದು ಕಾಸನ್ನೂ ಕೊಡುವಂತಿಲ್ಲ. ಸಿದ್ಧನನ್ನು ಕೇಳಿದರೆ ‘ನಿನ್ನ ಮಗನ್ನ ನನ್ನಲ್ಲಿ ಚಾಕರೀ ಇಟ್ಟರ ಕೊಡತೀನಿ’ ಅನ್ನುವ. ‘ಆರು

ತಿಂಗಳು ಚಾಕರಿಗೆ ಇರು ಏನಾದರೊಮ್ಮೆ ಈ ಕತ್ತರಿಯೊಳಗಿಂದ ಪಾರಾಗೋಣ' ಎಂದು ಹೇಳಿದರ ಶಿವಪ್ಪ 'ನಾ ಮೊದಲ ಭರತೀನs ಆಗಿಲ್ಲ; ಸುಮ್ಮನs ನಾಲ್ಕು ಮಂದಿ ಬೆದರಿಸಿ ನಿನ್ನ ಕಡಿಂದ ರೂಪಾಯಿ ಎತ್ತಬೇಕಂತ ಮಾಡ್ತಾರ; ನೀ ಅಂಜುಬುರುಕ ಇದ್ದೀದೀ, ಅದಕ್ಕ ಹೀಂಗ ಮಾಡತಾರವರು.... ಸ್ಪಷ್ಟ ಹೇಳು, ಕೊಡುದುಲ್ಲಂತ, ಇದೆಲ್ಲಾ ಆ ಗುಂಡಪ್ಪನ ಆಟ ಐತಿ! ಊರಾಗ ರಜೇದ ಮೇಲೆ ಬಂದ ನಾಲ್ಕು ಮಿಲಿಟರೀ ಹುಡುಗರನ್ನು ಕೂಡಿಕೊಂಡು, ಒಬ್ಬ ಪೋಲೀಸನ್ನ ಕಟ್ಟಿಕೊಂಡು, ಈ ಕೆಲಸ ನಡಸ್ಯಾನ' ಅಂತಾನ. ಯಾರ ಆಟ ಇದ್ದರೇನಾಯಿತು...?? ಊರಾಗ ನಾವು ಜನ್ಮಾ ಮಾಡಬೇಕಾಗೇತಿ. ದೊಡ್ಡವರಿಗೆ ವಿರುದ್ಧ ಆದರ ಹ್ಯಾಂಗ ಬಾಳ್ವೇ ಆದೀತು? ಏನಾದರೂ ಮಾಡಿ ಗೌಡನ ಕಿವೀ ಮ್ಯಾಲ ಒಂದು ಮಾತು ಇಡಬೇಕು.... ಅವನಾದರೂ ಏನ್ ಅಂತಾರ ಕೇಳೋಣ..... ಎಂದು ವಿಚಾರಿಸುತ್ತಲೇ ಗೌಡರ ಮನೆಗೆ ಹೋದ.

'ನಮಸ್ಕಾರರೀ' ಎಂದ ಭೀಮಪ್ಪ.

'ಗೌಡರು ಉಂಡು ಇದೀಗ ಪಡಸಾಲೆಗೆ ಬಂದಿದ್ದರು. ಭೀಮನು ಬಂದುದನ್ನು ಕಂಡೂ ಕಾಣದವರಂತೆ ಇದ್ದರು. ನಮಸ್ಕಾರಕ್ಕೆ ಪ್ರತಿ ನಮಸ್ಕಾರ ಗೌಡರಿಂದ ಸಿಕ್ಕದಿರಲು, ಭೀಮನ ಮುಖ ಇಳಿಯಿತು. ಹಾಗೆಯೇ ಸ್ವಲ್ಪ ಹೊತ್ತು ಕಟ್ಟೆಯ ಮೇಲೆ ಕುಳಿತ. ಸುಮಾರು ಅರ್ಧ ತಾಸು ಕಳೆದಿರಬಹುದು. ಗೌಡರು ಹಾಗೆಯೇ ಅಡ್ಡಾಡುತ್ತಲಿದ್ದಾರೆ. ನಡುವೆ ಒಮ್ಮೆ ಭೀಮನ ಕಡೆಗೆ ದೃಷ್ಟಿಯನ್ನು ಬೀರಿದರಷ್ಟೇ. ಅದೇ ಕಾಲಕ್ಕೆ ಮಾತನ್ನು ತೆಗೆಯಬೇಕೆಂದು ಭೀಮ ಬಾಯಿ ಚಪ್ಪರಿಸಿದನಾದರೂ ಬಾಗಿಲ ಕಡೆಗೆ ಏನೇನೋ ಕಂಡು ಅಲ್ಲಿಯೇ ಇದ್ದ ಗೌಡರ ನಾಯಿಯು 'ಓವ್' ಗುಡುತ್ತ ಓಡಿತು. ಅದಕ್ಕೆಂತಲೇ ಗೌಡರು ಸ್ವಾಭಾವಿಕವಾಗಿ 'ಏನೋ?' ಎಂದು ಕೇಳಿದರು.

ಭೀಮನು ಬಾಗಿಲ ಕಡೆಗೆ ನೋಡಿ – 'ಏನಿಲ್ಲರೀ.... ಹಾದಿಯಿಂದ ಹೋಗುವ ಎಮ್ಮೀ ಮಣಕಾ ನೋಡಿ.... ಓಡಿತು!' ಎಂದು ಹೇಳಿ ಸುಮ್ಮನಾದ. ಮತ್ತೆ ಮೌನ ಆವರಿಸಿತು. ಹತ್ತೆಂಟು ನಿಮಿಷಗಳು ಕಳೆದಿರಬೇಕು 'ಭೀಮಾ, ಹುಡುಗನ್ನ ಚಾಕರಿಯಿಂದ ಬಿಡಿಸಬೇಕಂತ ಮಾಡಿದೀ ಅಂತ...? ಎಂದು ಗೌಡರು ತಮ್ಮ ಸ್ವಾಭಾವಿಕವಾದ ಚೀರು ದನಿಯಲ್ಲಿ ಆ ಮೌನವನ್ನು ಭೇದಿಸಿದರು. ಮನೆಯಲ್ಲಿ ಹುಡುಗನನ್ನು ಚಾಕರಿಯಿಂದ ಬಿಡಿಸುವುದೆಂದು

ನಿಶ್ಚಯವಾಗಿದ್ದಿತ್ತಾದರೂ, ಈಗ ಅದರ ಪ್ರಸ್ತಾವನೆ ಮಾಡುವುದು.... ಅದೇಕೆ... ಅದನ್ನು ತಿಳಿಸುವುದು ಒಳಿತಲ್ಲವೆಂದು ಭಾವಿಸಿ 'ಇಲ್ಲರೀ.... ಇಂತಾ ದಿನದೊಳಗ ಚಾಕರೀ ಬಿಡಿಸಿ ಏನ್ ಮಾಡೂನು?... ಇಲ್ಲಿ ಇದ್ದಾನ ಅಂತ ತುತ್ತು ರೊಟ್ಟೀನರs ಕಾಣತಾನ!' ಎಂದು ನುಡಿದ ಭೀಮಣ್ಣ.

'ಅದೇ, ಮೊನ್ನೆ ನಿನ್ನ ಮಗಾ ಮಾಸ್ತರ ಮುಂದ ಅಂತಿದ್ದನಂತ "ನೌಕರೀ ಬಿಡಿಸಿ ಸಾಲಿಗೆ ಕಳಿಸ್ತೀನಿs" ಅಂತ, ಅದಕ್ಕs... ಕೇಳಿದೆ...'

'ಎಲ್ಲೀದ ಏನರಿ....?' ಕೂತ ಸ್ಥಳದಿಂದ ಎದ್ದು ಗೌಡರ ಸಮೀಪಕ್ಕೆ ಹೋಗುತ್ತ "ಸಾಲಿ–ಸಮದಾ ನಮ್ಮಂತವರಿಗೆ ಏನ್ ಮಾಡೋದು? ಅವರs... ಮಾಸ್ತರು ಅಂದರು: ಈಗ ಮೂರು ಎತ್ತೆ ಆಗೇತಿ, ಇನ್ನೊಂದು ಎರಡು ಎತ್ತೆ ಆಗಲಿ, ಅಂದರ ಕಾಗದ ಪತ್ರ ಓದಿಕೊಳ್ಳಲಿಕ್ಕೆ ಬರತೈತಿ" ಅಂತ...

'ಕೂತ ಹೇಳಲಿಕ್ಕೆ ಮಾಸ್ತರದು ಏನ ಹೋಗತೈತಿ....? ಹೊಟ್ಟೆಗೆ ತಿನ್ನು ಅಂತಾರ ಸಾಲಿಗೆ ಕಳಿಸಿ?' ಎಂದು ಗೌಡರು ನಡುವೆಯೆ ಗುಡುಗಿದರು.

ಭೀಮ ಮನಸ್ಸಿಲ್ಲದಿದ್ದರೂ 'ಹೌದು ಗೌಡರ! ಅವರಿಗೆ ಏನ ತಿಳೀತೈತಿ....' ಎನ್ನುತ್ತ ಗೌಡರ ಸಮೀಪಕ್ಕೆ ಹೋಗಿ, ಮೊನ್ನೆ ಗುಂಡಪ್ಪನಿಗೆ ಇಪ್ಪತ್ತೈದು ರೂಪಾಯಿಗಳನ್ನು ಕೊಡುವುದನ್ನು ಗೊತ್ತುಮಾಡಿ ಮಗನನ್ನು ಬಿಡಿಸಿ ತಂದ ಸಂಗತಿಯನ್ನೆಲ್ಲವನ್ನೂ ವಿವರವಾಗಿ ಅಂಜುತ್ತ ಅಂಜುತ್ತ ಹೇಳಿದನು. ಗೌಡರು ಎಲ್ಲವನ್ನೂ ಕೇಳಿಕೊಂಡು ಮನದಲ್ಲಿ.... 'ಗುಂಡಪ್ಪನೂ ಇಂಥವನೇ; ನನಗೆ ಒಂದು ಮಾತನ್ನೂ ತಿಳಿಸಿಲ್ಲ. ನನ್ನ ಕಡೆಗೆ ಬಂದ ಕುಳಗಳಲ್ಲೂ ಪಾಲು ಹೊಡೆದs ಹೊಡೀತಾನ.... ಹೀಂಗ ನಡುವನೂ ಸಿಕ್ಕಷ್ಟು ಎತ್ತತಾನ.... ಇದರೊಳಗೆ ಅವನಿಗೆ ಬುದ್ಧೀಕಲಿಸಿಬಿಡಬೇಕು....' ಎಂದು ವಿಚಾರಿಸಿ, ಭೀಮನ ಕಡೆಗೆ ಸಿಟ್ಟಿನಿಂದ ನೋಡಿ, 'ನಿಮಗ ಅಕಲೇ ಇಲ್ಲ; ಮಗಾ ಬಂದಾನಂತ ನನಗ ತಿಳಿಸಿ ಹೋದೀ? ನಿಮ್ಮ ಮೈಯಾಗ ಸೊಕ್ಕ ಐತಿ, ಏನ ಮಾಡೀರಿ ನೀವು... ಹೋಗಲಿ ಹೋಗು, ಹಿಡಿದು ಒಯ್ಯಲಿ ಅಂದರ ಅಳತಾ ಕೂಡ್ರತಿ...' ಎಂದು ಭಯಂಕರ ದನಿಯಿಂದ ಗರ್ಜಿಸಿ, ಒಳಕ್ಕೆ ಹೋಗಿಬಿಟ್ಟರು ಗೌಡರು.

'ಬಾಬಾ!.... ಬಾಬಾ!' ಎಂದು ಕರೆಯುತ್ತ, ಗೌಡರ ಮನೆಯಲ್ಲಿ ಎಲ್ಲಿಯವರೆಗೆ ತನಗೆ ಹೋಗಲು ಶಕ್ಯವಿದೆಯೋ ಅಲ್ಲಿಯವರೆಗೆ ಮುಂದೆ ಹೋಗಿ, ಬಾಯಿ ತೆರೆದ ಭೀಮಪ್ಪ.

'ಹೋಗು; ಮನೀಗೆ ಒಬ್ಬರು ಮುಂಡರಾಗೀರಿ... ಊರವರಿಗಂದರ ಕಿಮ್ಮತ್ತನs ಇಲ್ಲ!' ಎಂದು ನಡುಮನೆಯಿಂದಲೇ ಗೌಡರು ಗುಡುಗಿದರು.

ಭೀಮಪ್ಪನ ಕಿವಿಯಲ್ಲಿ ಕಬ್ಬಿಣ ಕಾಯಿಸಿ ಸುರಿದಂತಾಯಿತು. ಕಣ್ಣಿಗೆ ಕತ್ತಲೆ ಕವಿದು ಅಲ್ಲೇ ಕಟ್ಟೆಯ ಕೆಳಗೆ ಕುಳಿತ. ಅದೆಷ್ಟು ಹೊತ್ತು ಕುಳಿತನೊ! ಗೌಡರ ಮನೆಯೊಳಗಿನ ಐದಾರು ವರ್ಷದ ಹುಡುಗನು ಆಡುತ್ತ ಆಡುತ್ತ ಬಂದು, ಕಟ್ಟೆಯ ಮೇಲಿರುವ ಜೋಡುಗಳನ್ನು ಒಂದೊಂದಾಗಿ ಭೀಮನ ಬೆನ್ನಿನ ಮೇಲೆ.... ಮುಖದ ಮೇಲೆ... ಒಗೆಯ ಹತ್ತಿದನು.... ಆಗ ಎದ್ದ ಭೀಮ.... ಎದುರಿಗೆ ಗೌಡರ ಅಕ್ಕ ಹುಡುಗನ ಆಟವನ್ನು ನೋಡುತ್ತ ನಿಂತಿದ್ದಾಳೆ!

'ಬಾಬಾಗೋಳು ಏನಮಾಡಲಿಕ್ಕ ಹತ್ಯಾರರೀ?' ಎಂದು ನಮ್ರತೆಯಿಂದ ಮುಖ ಒರೆಸಿಕೊಳ್ಳುತ್ತ, ಕೇಳಿದ ಭೀಮ.

'ಏನ.... ನೀರ ಕುಡಿಲೀಕ್ಕೆ ಹತ್ತಿದಾರ ಏನೋ....! ಮೊದಲs ಒಂದು ಮಾತು ಕಿವೀ ಮ್ಯಾಲ ಹಾಕಿ ಇಡಬೇಕಪ್ಪಾ... ಕುತ್ತಿಗಿಗೆ ಬರೋಣ ಬರ್ತೀರಿ... ಅರರs ಏನ ಮಾಡಬೇಕು? ಕೈಮೀರಿ ಹೋದ ಮೇಲೆ? ಇನ್ನ ನೋಡು.... ಫೌಜದಾರರನ್ನ ಕಟ್ಟಿಕೊಳ್ಳಬೇಕು.... ಅದೇನು ಖರ್ಚು ಇಲ್ಲದs ಆಗತೈತಿ ಖರ್ಚು ಮಾಡೋದು ಮಾಡಿ.... ಹನ್ನೆರಡು ಮಂದಿ ಹತ್ತರ... ಬಾಯಿ ತೆರಿಬೇಕು ನಿಮ್ಮ ಸಲುವಾಗಿ ಗೌಡರು...!' ಎಂದು ಗೌಡರ ಉದ್ದೇಶಕ್ಕೆ ಭೂಮಿಯನ್ನು ಹದಗೊಳಿಸಿದಳು ಅವರ ಹಿರಿಯಕ್ಕ.

'ಅವರೇನು ನಮ್ಮ ಮನಿಯವರs ಅವ್ವಾ, ಏನೂ ಇಲ್ಲದ ಮಾಡಲಾಕ..? ಗೌಡರೊಂದು ನಮ್ಮವರಂದರ....'

'ಅದೇ ಏನಾರs ಕೊಡತೀನಂತ....'

ಅಷ್ಟರಲ್ಲಿ ಗೌಡರು ಹೊರಗೆ ಬಂದರು. ಅವರ ಅಕ್ಕನ ಮಾತು ಅಷ್ಟಕ್ಕೇ ನಿಂತಿತು. ಹೆದರಿದವಳಂತೆ ನಟಿಸಿ ನಡುಮನೆಗೆ ಹೋದಳು. ಗೌಡರ ಅಕ್ಕನೇ ಅವರಿಗೆ ಅಷ್ಟು ಹೆದರಿದ ಮೇಲೆ ಭೀಮಪ್ಪನೆಷ್ಟು ಹೆದರಬೇಡ? ನಡುಗುವ ಕೈಗಳಿಂದ ಗೌಡರ ಕಾಲನ್ನು ಹಿಡಿದ.

'ಈ ಹೊತ್ತು ಫೌಜದಾರ್ರು ಬರಾವರು ಇದ್ದಾರ, ಏನಾರs ಮಾಡೋಣ; ಹೋಗು ಹದಿನೈದು ರೂಪಾಯಿ ತಗೊಂಡು ಬಾ... ಕೆಲಸ ಅದರ ನಿನ್ನ ನಸೀಬ....' ಎಂದರು ಗೌಡರು.

'ಕೈ ಜೋಡಸತೀನಿ.... ಏನಾದರೂ ಮಾಡಿ ಇದೊಂದು ಕೆಲಸಾ ಮಾಡಲಾಕs ಬೇಕು!'

'ನೋಡೋಣು ಹೋಗು.... ಏನ ಆಗತೈತಿ.....! ಬರೋಗು ಅಲ್ಲೀತನಕ.....'

ಭೀಮ ತಲೆಬಾಗಿಲವರೆಗೆ ಹೋಗಿರಬೇಕು. ಗೌಡರು 'ಭೀಮಾ' ಎಂದು ಕೂಗಿದರು. ಭೀಮ ಗೌಡರ ಸಮೀಪಕ್ಕೆ ಬರಲು 'ನೋಡು, ಆಗೂ ಹಾಂಗ ಇದ್ದರ ಹೇಳು.... ಸಂಜಿಗೆಂದರ ಫೌಜದಾರ ಸಾಹೇಬರು ಬರಾವರು... ಬಂದ ಕೂಡಲೇ ನಿಮ್ಮದs ಪ್ರಕರಣ. ಇಲ್ಲಾದರ ಸುಳ್ಳs ಮಾರೀ ಕೆಡಿಸಿ ಇಟ್ಟೀ ಅವರ ಮುಂದ....'

ದೊಡ್ಡ ಬಾಯಿ ಗೌಡರದು, ಹದಿನೈದು ರೂಪಾಯಿಗಳಲ್ಲೇ ಕೆಲಸ ಆಗುವುದು... ಎಂಬ ಉಬ್ಬಿನಲ್ಲಿ, ರೂಪಾಯಿ ಎಲ್ಲಿಂದ ತರುವುದೆಂಬುದನ್ನೂ ವಿಚಾರಿಸದೆ, ಮನೆಯಲ್ಲಿ ಇಟ್ಟು ಬಂದವರಂತೆ ಭೀಮ ತರಲಿಕ್ಕೆ ಹೊರಟಿದ್ದ. ಈಗ ಗೌಡರ ಮಾತಿನಿಂದ ಅವನು ವಿಚಾರಕ್ಕೊಳಗಾದ; ಬೆಪ್ಪನಂತೆ ಸುಮ್ಮನೇ ನಿಂತುಬಿಟ್ಟ.

'ಸಣ್ಣ ಹುಡುಗನನ್ನು ಮುಂದಿನ ವರ್ಷ ಬಂದು ನಮ್ಮಲ್ಲೇನs ದನಗಳನ್ನು ಕಾಯಲಿಕ್ಕೆ ಇಟ್ಟುಬಿಡು.... ನಾ ಎಲ್ಲಾನೂ ನೋಡಿಕೋತೀನಿ!' ಎಂದು ಗೌಡರೇ ಉಪಾಯವನ್ನು ಸೂಚಿಸಿದರು.

'ಹೂಂ! ಹಾಂಗs ಏನಾರೇ ಮಾಡಿ ಪುಣ್ಯ ಕಟ್ಟಿಕೊಳ್ಳಿರಿ.....! ಶಿವ್ಯಾನ ನಿಮ್ಮ ಉಡ್ಯಾಗs ಹಾಕಿದೀನಿ. ಇಂದ ಶಿವ್ಯಾ ನನ್ನ ಮಗಾ ಅಲ್ಲ, ನಿಮ್ಮ ಮಗಾ ಅಂತ ತಿಳಿಕೊಳ್ಳಿರಿ.... ನಾನಾರೇ ರೂಪಾಯಿ ಎಲ್ಲಿಂದ ತರಲಿ....? ಏನೋ ಮನೀಮ್ಯಾಗ ನಾಲ್ಕು ಪತ್ರೆ (ತಗಡು) ಅದಾವು... ಅವನ್ನs ಎಲ್ಲಿಯಾದರೂ ಒತ್ತಿ ಇಟ್ಟು ತರಬೇಕು; ಅದರ ಹೊರತಾಗಿ ನಮ್ಮ ಮನಿಯೊಳಗ ಏನ ಐತಿ?...'

'ಛೇ, ಹಾಂಗೇನೂ ಮಾಡಬ್ಯಾಡ.... ಮಳೀ.... ಮಳಿಗಾಲ ದಿನಾ. ಮೋಡ ಬ್ಯಾರೆ ದನಿಗುಡತೈತಿ....; ಮಳೀ ಬಂತೂ ಅಂದರ ಎಲ್ಲಿ ಹೋಗಾವರು....? ಇರಲಿಕ್ಕೆ ಮನೀ ಬ್ಯಾಡ?...' ಎಂದು ಗೌಡರು ದಯೆತೋರಿದರು. ದನ ಕಾಯಲು ಮತ್ತೊಬ್ಬ ಹುಡುಗ ಸಿಕ್ಕುವುದಿಲ್ಲವೆಂದು.

ಭೀಮಪ್ಪ ಮನಸ್ಸಿನಲ್ಲಿ ಮಗನಿಗೆ ಇನ್ನೊಂದೆರಡು ವರ್ಷ ಓದುಬರೆಹ ಕಲಿಸಬೇಕೆಂದಿದ್ದರೂ ಅನಿವಾರ್ಯವಾಗಿ ಗೌಡರ ಮಾತಿಗೆ ಒಪ್ಪಬೇಕಾಗಿದ್ದಿತು. 'ಹುಡುಗ ಇನ್ನೂ ಒಂದು ವರ್ಷ ಗೌಡರಲ್ಲಿ ದನಕಾಯ್ದರೂ ಅಡ್ಡಿಯಿಲ್ಲ, ಒಮ್ಮೆ ಈ ಸಂಕಟದೊಳಗಿಂದ ಶಿವಪ್ಪನನ್ನು ಗೌಡರು ಉಳಿಸಿದರೆ ಸಾಕು, ಎನ್ನುವಷ್ಟು ಅವನ ಸುತ್ತಲಿನ ಪರಿಸ್ಥಿತಿಯು ಭೀಕರವಾಗಿ ತೋರುತ್ತಿದ್ದಿತು. ಅದರಿಂದ ಗೌಡರು ಶಿವಪ್ಪನನ್ನು ಉಳಿಸುವೆನೆಂದರೆಂಬುದೇ ದೈವಕೃಪೆಯೆಂದು ಭಾವಿಸಿ, ಅವನು ಸಂತೋಷದಿಂದ ಮನೆಗೆ ನಡೆದ.

'ನೀನೇನೂ ಶಿವಪ್ಪನ ವಿಷಯಕ್ಕೆ ಕಾಳಜೀ ಮಾಡಬೇಕಿಲ್ಲ. ಎಲ್ಲಾನೂ ಗೌಡರು ನೋಡಕೋತೀವಿ ಅಂದರು...' ಎಂಬ ಸಂಗತಿಯನ್ನು ಹೆಂಡತಿಗೆ ತಿಳಿಸಬೇಕೆಂಬ ಉತ್ಸಾಹದಲ್ಲಿ, ಸ್ವಲ್ಪ ಲಗುಬಗೆಯಿಂದಲೇ ಮನೆಯ ಕಡೆಗೆ ಸಾಗಿದ್ದ ಭೀಮಪ್ಪ... ಮನೆಯನ್ನು ಸಮೀಪಿಸುವಷ್ಟರಲ್ಲಿ ಅವನ ನಡಿಗೆಯ ವೇಗವನ್ನು ಮತ್ತಿಷ್ಟು ಹೆಚ್ಚಿಸಲಿಕ್ಕೆಂದೋ ಏನೋ... ಜೋರಿನಿಂದ ಮಳೆಯೂ ಬಂದಿತು. ನಾಲ್ಕು ಹೆಜ್ಜೆ ಓಡಿಹೋಗಿ, ಮನೆಯನ್ನು ಬೇಗ ಸೇರಬೇಕೆಂದರೆ ಭೀಮನು ಕಂಡುದೇನು ಗೊತ್ತೆ? ಮನೆಯೊಳಗಿನ ಸಾಮಾನುಗಳೆಲ್ಲ ಮಳೆಯಿಂದ ತೊಯ್ಯುತ್ತಲಿವೆ. ಮುದುಕಿಯ ಕಣ್ಣೀರು ಸುರಿಸುತ್ತ ನೆರೆಹೊರೆಯವರ ಮನೆಯಲ್ಲಿ ಕೆಲವು ಸಾಮಾನುಗಳನ್ನು ಒಯ್ದು ಇಡುತ್ತಿದ್ದಾಳೆ! ಅದನ್ನು ಕಂಡು ನಿಲ್ಲಲಾಗದೆ ಭೀಮಪ್ಪ ಅಲ್ಲೇ ನೆಲಕ್ಕೆ ಕುಸಿದು ಬಿದ್ದ....

* * *

ಇಂದು ಗೌಡರು ಕಟ್ಟಿಸಿದ ಗುಡಿಯಲ್ಲಿ ಮೂರ್ತಿಯನ್ನು ಕೂಡಿಸಬೇಕಾಗಿದೆ. ಜಯಪುರದಿಂದ ಬಿಳಿಯ ಶಿಲೆಯಲ್ಲಿ ಕೆತ್ತಿದ ಸುಂದರ ಮೂರ್ತಿಯನ್ನು ತರಿಸಿದ್ದಾರೆ. ಸುತ್ತಲಿನ ನಾಲ್ಕೆಂಟು ಊರುಗಳಿಂದ ವಾದ್ಯಗಳ ಮೇಳದವರೂ ಗೌಡರ ಆಮಂತ್ರಣದ ಪ್ರಕಾರ ಉತ್ಸವಕ್ಕೆ ಬಂದಿದ್ದಾರೆ. ನಮ್ಮೂರ ಜನಕ್ಕೆ ಇದೊಂದು ಹೊಸ ಹಬ್ಬವಾದಂತಿದೆ. ಮುಂಜಾನೆಯಿಂದಲೂ

ಗುಡಿಯ ಮುಂದೆ ಜನ ಜಾತ್ರೆಯಂತೆ ನೆರೆದಿದೆ. ಗೌಡರು ವಾದ್ಯಗಳ ಸಂಭ್ರಮದೊಡನೆ ಗುಡಿಗೆ ಬರುತ್ತ ತಮ್ಮ ಹಸ್ತಕನಾದ ಗುಂಡಪ್ಪನ ಕಡೆಗೆ ಹೊರಳಿ: 'ಎಲ್ಲಿಂದಲೋ ತಗಡು ತಂದು ಮಂಟಪ ಪೂರ್ತಿಮಾಡಿ ಬಿಟ್ಟಿರುವಿಯಲ್ಲ!" ಎಂದು ಸ್ವಲ್ಪ ಸಂತಸದ ಸ್ವರದಲ್ಲಿ ಕೇಳಿದರು.

'ನಿಮ್ಮಂತಾ ಗೌಡರು ಇರೂತನಕಾ... ನಮಗೇನು ಕೊರತಿ? ಆ ಭೀಮ್ಯಾನ ಕಡಿಂದ ಇಪ್ಪತ್ತೈದು ರೂಪಾಯಿ ಬರಬೇಕಾಗಿದ್ದವು.... ನಾಲ್ಕೆಂಟು ದಿನಾ ಕೇಳಿದರೂ ಕೊಡಲಿಲ್ಲ. ಸೂ... ಮಗಾ....! ನಿನ್ನೆ ಅವನ ಮನೆಯ ಮ್ಯಾಲಿಂದ ಪತ್ರೇ ತಗಿಸಿ ತರಿಸಿದೆ; ಗುಡಿಗೂ ನಾಲ್ಕು ಪತ್ರೇ ಕಡಿಮೆ ಬಿದ್ದಂತಿದ್ದವು...' ಎಂದು ಆಢ್ಯತೆಯಿಂದ ಹೇಳತೊಡಗಿದ ಗುಂಡಪ್ಪ.

'ಒಳ್ಳೇ ಹಂಚಿಕೆ ನಿಂದೂ....'

'ಏನಾರೇ ಮಾಡಲಿಕ್ಕೆ ಬೇಕಲ್ಲ; ಮಂದಿರದ ಕೆಲಸ ಲಗೂನs ಮುಗೀಲಿಕ್ಕೆ ಬೇಕಂತೆ... ಹಗಲಿರುಳು ಚಿಂತೆ ಮಾಡುತ್ತಿದ್ದಿರಿ ನೀವು....!'

'ಹೌದು, ಈ ಶ್ರಾವಣ ಮಾಸಕ್ಕೆಂದರೆ ಗುಡಿ ಕೆಲಸ ಮುಗೀಲಿಕ್ಕೆ ಬೇಕಾಗಿತ್ತು. ತಾಯಿ ತೀರಿಕೊಂಡು ಒಂದು ವರ್ಷದೊಳಗ ಗುಡಿ ಕಟ್ಟಿಸಿ, ಅವರ ಕೊನೆಯ ಇಚ್ಛೆಯನ್ನು ಪೂರ್ತಿಗೊಳಿಸಬೇಕಾದದ್ದು ನಿಮ್ಮೆಲ್ಲರ ನೆರವಿನಿಂದ.... ಸಾಧ್ಯವಾಯಿತು.'

'ನಮ್ಮದೇನು ದೊಡ್ಡ ನೆರವು... ಬಿಡ್ರಿ!'

ಹೀಗೆ ಮಾತನಾಡುತ್ತ ತಮ್ಮ ಸಂಗಡಿಗರೊಡನೆ ಗೌಡರು ಆನಂದದಿಂದ ಮಂಟಪವನ್ನು ಪ್ರವೇಶಿಸುತ್ತಿದ್ದರು. ಅಲ್ಲಿಯೆ ಒಂದು ಬದಿಗೆ ಅನಾಥರಿಬ್ಬರು, 'ಅಯ್ಯೋ....! ಅಯ್ಯೋ....! ಇವರು ನಮ್ಮ ಮನಿಯ ಪತ್ರೆಗಳನ್ನೇ ತಂದು... ಗುಡಿಗೆ ಹಾಕಿದ್ದಾರಲ್ಲ? ಮಗನನ್ನ ಉಳಿಸಿಕೊಡತೀನಂತ ಹೇಳಿ... ಹುಡುಗನನ್ನ... ಅತ್ತ... ಚಾಕರಿಗೂ ಇಟ್ಟುಕೊಂಡ ಗೌಡ...! ಇತ್ತ ಮನೀ ಮ್ಯಾಲಿಂದ ಪತ್ರೇನೂ.... ಗುಂಡಪ್ಪ ಒಯ್ದನಲ್ಲ....' ಎಂಬ ಆರ್ತಸ್ವರದಿಂದ ಮರುಗುವ ಕೂಗು, ಆ ಮಹೋತ್ಸವದ ವಾದ್ಯಗಳ ಗೊಂದಲದಲ್ಲಿ ಯಾರಿಗೆ ಕೇಳಿಸೀತು?

■

# ಸಾಮಾಜಿಕ ಬದ್ಧತೆ

**– ಗುರುರಾಜ ಕರ್ಜಗಿ**

ಸರ್. ಎಂ. ವಿಶ್ವೇಶ್ವರಯ್ಯನವರು ನಿಃಸ್ಪೃಹರು. ಯಾರಿಂದಲೂ ತಮಗಾಗಿ ಏನನ್ನೂ ಅಪೇಕ್ಷಿಸಿದವರಲ್ಲ. ಸರಕಾರೀ ಕೆಲಸದಲ್ಲಿದ್ದಾಗ ಮಾತ್ರ ಸರಕಾರೀ ಕಾರನ್ನು ಉಪಯೋಗಿಸುವರು. ಸ್ವಂತದ ಕೆಲಸಕ್ಕೆ ತಪ್ಪಿಕೂಡ ಸರಕಾರದ ವಸ್ತುಗಳನ್ನು ಬಳಸುವವರಲ್ಲ. 1917ರಲ್ಲಿ ರಜೆಯ ಮೇಲೆ ಜಪಾನ್ ಮತ್ತು ಇತರ ದೇಶಗಳ ಪ್ರಯಾಣಕ್ಕೆ ಹೊರಟಿದ್ದರು. ಸ್ಟೇಶನ್ನಿಗೆ ಸ್ವಂತ ಕಾರಿನಲ್ಲಿ ಬಂದರು. ಕಾರಿನಿಂದ ಇಳಿದು ತಮ್ಮ ಸೂಟ್‌ಕೇಸನ್ನು ತಾವೇ ಹೊತ್ತು ಪ್ಲಾಟ್‌ಫಾರಂಗೆ ತಂದರು. ಅವರ ಸೆಕ್ರೆಟರಿ ಮತ್ತು ಅವರ ಸೇವಕ ವಿಶ್ವೇಶ್ವರಯ್ಯನವರ ಕೈಯಲ್ಲಿಯ ಪೆಟ್ಟಿಗೆ ತೆಗೆದುಕೊಳ್ಳಲು ಮುಂದಾದರು. ಆಗ ಅವರು ಹೇಳಿದ್ದೇನು ಗೊತ್ತೇ?" ಈ ಪೆಟ್ಟಿಗೆ ನನ್ನ ಸ್ವಂತದ್ದು. ಈಗ ನಾನು ದಿವಾನನಲ್ಲ. ರಜೆಯಲ್ಲಿರುವ ಖಾಸಗೀ ಮನುಷ್ಯ. ನನ್ನ ವಸ್ತುವನ್ನು ನಾನೇ ಹೊರಬೇಕಾದದ್ದು ಸರಿ" ಎಂದು ನಡೆದೇಬಿಟ್ಟರು.

ಅವರು ದಿವಾನರಾಗಿದ್ದಾಗ ಬಾಲಬ್ರೂಇ ಬಂಗಲೆಯಲ್ಲಿ ವಾಸವಾಗಿದ್ದರು. ನಿವೃತ್ತರಾದ ಮೇಲೆ ಗಾಲ್ಫ ಗ್ರೌಂಡ ಹತ್ತಿರವಿದ್ದ ಅಪ್‌ಲೆಂಡ್ಸ್ ಬಂಗಲೆಯಲ್ಲಿ ಇರುತ್ತಿದ್ದರು. ಆ ಮನೆಯ ವಾಯಿದೆ ಮುಗಿದ ನಂತರ ಅವರು ಬೇರೆ ಮನೆ ನೋಡಬೇಕಿತ್ತು. ಆಗ ಸರ್ಕಾರದ ಹಿರಿಯ ಅಧಿಕಾರಿಗಳು ಇವರ ಬಳಿಗೆ ಬಂದು, "ಸರ್, ನೀವು ಬದಲಾಯಿಸಲೇ ಬೇಕಾಗಿದ್ದರೆ ತಾವು ಮತ್ತೆ ಬಾಲಬ್ರೂಇ ಬಂಗಲೆಗೆ ಹೋಗಬಹುದು. ತಾವು ಈಗಾಗಲೇ ಆ ಮನೆಯಲ್ಲಿ ವಾಸವಾಗಿದ್ದರಿಂದ ನಿಮಗೆ ಹೊಂದಿಕೊಳ್ಳುವ ತೊಂದರೆ ಇಲ್ಲ. ಅದಲ್ಲದೇ ತಾವು ದಿವಾನರಾಗಿದ್ದಾಗ ತಮ್ಮ ಅನುಕೂಲಗಳನ್ನು ನೋಡಿಕೊಂಡು ಬದಲಾವಣೆ ಮಾಡಿರುವುದರಿಂದ ತಮಗೆ ಅನುಕೂಲವೇ ಆಗುತ್ತದೆ."

ವಿಶ್ವೇಶ್ವರಯ್ಯನವರು ಪ್ರತಿಯಾಗಿ, "ಅದು ಸರಿ. ಕೃತಜ್ಞತೆಗಳು. ಆದರೆ ಬಾಲಬ್ರೂಇ ತುಂಬ ವಿಶಾಲವಾದ ಬಂಗಲೆ. ನಾನು ನೂರೈವತ್ತು ರೂಪಾಯಿಗಳಿಗಿಂತ ಹೆಚ್ಚು ಬಾಡಿಗೆ ಕೊಡಲು ಶಕ್ತನಲ್ಲ" ಎಂದರು. ಸರ್ಕಾರದ ಅಧಿಕಾರಿ, "ಸರ್, ಈಗ ಬಾಲಬ್ರೂಇ ಬಂಗಲೆ ಖಾಲಿಯಾಗಿದೆ. ಹೀಗಾಗಿ ಸರಕಾರಕ್ಕೆ ಅದರಿಂದ ಯಾವ ಬಾಡಿಗೆಯೂ ಬರುತ್ತಿಲ್ಲ. ತಾವು ಅಲ್ಲಿಯೇ

ಇದ್ದು ನೂರೈವತ್ತು ರೂಪಾಯಿ ಕೊಟ್ಟರೆ ಅಲ್ಲಿಯ ತೋಟದ ಹಾಗೂ ಕಟ್ಟಡದ ಖರ್ಚಾದರೂ ಬಂದಂತಾಗಿ ಸರಕಾರಕ್ಕೆ ಹುಟ್ಟುವಳಿಯಾಗುತ್ತದೆ. ಇಲ್ಲದಿದ್ದರೆ ಅಷ್ಟು ಆದಾಯವೂ ತಪ್ಪಿ ಹೋಗುತ್ತದೆ. ತಾವು ಮನಸ್ಸು ಮಾಡಬೇಕು" ಎಂದು ಕೇಳಿಕೊಂಡರು. ಅದಕ್ಕೆ ವಿಶ್ವೇಶ್ವರಯ್ಯನವರು ತಲೆ ಅಲ್ಲಾಡಿಸಿ, "ಆ ಬಂಗಲೆಗೆ ಹೆಚ್ಚು ಬಾಡಿಗೆ ಯುಕ್ತವಾಗಿದೆ. ನಾನು ಕಡಿಮೆ ಬಾಡಿಗೆ ಕೊಟ್ಟರೆ ಸರಕಾರಕ್ಕೆ ಅನ್ಯಾಯ ಮಾಡಿದಂತಾಗುತ್ತದೆ. ಈಗೇನೋ ಬಂಗಲೆ ಖಾಲಿ ಇರಬಹುದು. ನಾಳೆ ಈ ಬಂಗೆಲೆಗೆ ಮತ್ತೊಬ್ಬ ಅಧಿಕಾರಿ ಬಂದಾಗ ಹೆಚ್ಚಿನ ಬಾಡಿಗೆ ಬರುವುದಿಲ್ಲವೆ? ನಾನು ಅಲ್ಲಿ ಸೇರಿಕೊಂಡಿರುವುದರಿಂದ ನನ್ನನ್ನೂ ಬಿಡಿಸಲೂ ಆಗದೇ, ಹೆಚ್ಚಿನ ಆದಾಯವನ್ನೂ ಕಳೆದುಕೊಂಡು ಸರಕಾರ ಮುಜುಗರಕ್ಕೀಡಾಗುತ್ತದೆ. ನನ್ನಿಂದ ಯಾವ ತೊಂದರೆಯೂ ಮುಜುಗರವೂ ಸರಕಾರಕ್ಕೆ ಆಗಕೂಡದು" ಎಂದು ಬಂಗೆಲೆಗೆ ಹೋಗುವುದನ್ನು ವಿನಯದಿಂದ ನಿರಾಕರಿಸಿದರು.

ಇದು ವಿಶ್ವೇಶ್ವರಯ್ಯನವರ ನಿಃಸ್ಪೃಹತೆ. ಈ ಸಾಮಾಜಿಕ ಬದ್ಧತೆಯ ಒಂದಂಶವಾದರೂ ನಮ್ಮ ಎಲ್ಲ ಅಧಿಕಾರಿಗಳಿಗೆ ಬಂದಿದ್ದಾದರೆ ನಮ್ಮ ದೇಶ ಬಹುಶಃ 2020ಕ್ಕಿಂತ ಮೊದಲೇ ಮುಂದುವರೆದ ದೇಶವಾಗಿಯೇ ತೀರುತ್ತಿತ್ತೇನೋ.

■

## ವೈಚಾರಿಕತೆ

### ಆಶಯ :

### ನಿಂಬೆ ಹಣ್ಣಿನ ಶರಬತ್ ಏನು ಮಾಡಬಹುದು?

**– ಎಸ್ ಷಡಕ್ಷರಿ (ಕ್ಷಣ ಹೊತ್ತು ಆಣಿ ಮುತ್ತು : ಭಾಗ–3)**

ಆ ಏಳು ವರ್ಷದ ಬಾಲಕಿ ಒಂದು ದಿನವೂ ಆಡಲು ಹೋಗಲಿಲ್ಲ. ಏಕೆಂದರೆ 1997ರಲ್ಲಿ ಹುಟ್ಟಿದ ಆಕೆಗೆ ಒಂದು ವರ್ಷವಾಗುವಷ್ಟರಲ್ಲಿ ಮೆದುಳಿನ ಕ್ಯಾನ್ಸರ್ ರೋಗ ಬಂದಪ್ಪಳಿಸಿತು. ನೋವು ಹೆಚ್ಚಾದಾಗ ಆಸ್ಪತ್ರೆ, ಕಡಿಮೆಯಾದಾಗ ಮನೆ, ಮತ್ತೆ ನೋವು ಹೆಚ್ಚಾದಾಗ ಆಸ್ಪತ್ರೆ ಹೀಗೆ ಆಕೆಯ ಬದುಕು ಸಾಗಿತ್ತು.

ತನ್ನ ಓರಗೆಯ ಮಕ್ಕಳೆಲ್ಲ ಕುಣಿದು ಕುಪ್ಪಳಿಸುತ್ತಿರುವಾಗ ತಾನೇಕೆ ಮಲಗಿರಬೇಕೆಂಬ, ಅವರೆಲ್ಲ ನಕ್ಕು ನಲಿಯುತ್ತಿರುವಾಗ ತಾನೇಕೆ ನೋವಿನಿಂದ ನರಳಬೇಕೆಂಬ ಆಕೆಯ ಮುಗ್ಧ ಪ್ರಶ್ನೆಗೆ ವೈದ್ಯರ ಬಳಿಯಿದ್ದದ್ದು ಒಂದೇ ಉತ್ತರ.

'ನಿನಗೆ ಕ್ಯಾನ್ಸರ್ ಕಾಯಿಲೆ' ಕಾಯಿಲೆ ಏಕೆ ಬರುತ್ತದೆಂದೂ, ಔಷಧೋಪಚಾರ ಕೆಲಸ ಮಾಡುತ್ತದೆಂದೂ ಯಾರೂ ಹೇಳುತ್ತಿರಲಿಲ್ಲ. ಆದರೆ ಕ್ಯಾನ್ಸರಿಗೆ ಬಗ್ಗೆ ಆಳವಾದ ಸಂಶೋಧನೆ ನಡೆಯುತ್ತಿದೆ. ಅದಕ್ಕಾಗಿ ಕೋಟ್ಯಂತರ ಡಾಲರುಗಳು ಬೇಕಾಗುತ್ತದೆಯೆಂಬ ಮಾತನ್ನು ಎಲ್ಲರೂ ಹೇಳುತ್ತಿದ್ದರು. ಅಷ್ಟುಹೊತ್ತಿಗೆ ಆಕೆಗೆ ನಾಲ್ಕು ವರ್ಷ. ಒಂದು ದಿನ ತಾಯಿಗೆ 'ಅಮ್ಮಾ! ನಾನು ನನ್ನ ಮನೆಯ ಮುಂದೆ ಒಂದು ನಿಂಬೆಹಣ್ಣಿನ ಶರಬತ್ ಅಂಗಡಿ ತೆರೆಯುತ್ತೇನೆ. ಅರ್ಧ ಡಾಲರಿಗೆ ಒಂದು ಲೋಟ ಶರಬತ್ ಮಾರುತ್ತೇನೆ. ಬಂದ ಲಾಭವನ್ನು ಕ್ಯಾನ್ಸರ್ ಸಂಶೋಧನೆಗೆ ನೀಡುತ್ತೇನೆ' ಎಂದಾಗ ತಾಯಿಗೆ ನಗು ಬಂತು.

'ಅರ್ಧ ಡಾಲರಿಗೆ ಶರಬತ್ ಮಾರಿ ಎಷ್ಟು ಉಳಿಸಲು ಸಾಧ್ಯ?' ಎಂದರು. ಆದರೆ ಆಕೆ ನಿರುತ್ಸಾಹಗೊಳ್ಳಲಿಲ್ಲ. ಪುಣ್ಯಕ್ಕೆ ಅವಳ ಅಣ್ಣ ಪ್ರೋತ್ಸಾಹಿಸಿದ. ಒಂದು ದಿನ ಮನೆಯ ಮುಂದೆ ಚಪ್ಪರ ಹಾಕಿದರು. ಎಲ್ಲರಿಗೂ ಪ್ರಚಾರ ಮಾಡಿದರು. ಸ್ಥಳೀಯ ಪತ್ರಿಕೆಗಳವರು ಒಳ್ಳೆಯ ಪ್ರಚಾರ ನೀಡಿದರು.

ಬೆಳಗ್ಗೆಯಿಂದ ಸಂಜೆಯವರೆಗೆ ಅಂಗಡಿಗೆ ನೂರಾರು ಜನ ಬಂದು ಶರಬತ್ ಖರೀದಿಸಿದರು. ತಾಯಿಯ ಮಾತು ಸುಳ್ಳಾಗಿತ್ತು. ಮಗಳ ಆತ್ಮವಿಶ್ವಾಸ ಗೆದ್ದಿತ್ತು. ಆಕೆಯ ಕ್ಯಾನ್ಸರ್ ಸಂಶೋಧನಾ ನಿಧಿಗೆ ಸುಮಾರು ಎರಡು ಸಾವಿರ ಡಾಲರು ಸಂಗ್ರಹವಾಗಿತ್ತು.

ಆಕೆಯ ನಿಂಬೆ ಶರಬತ್ ಹೋರಾಟಕ್ಕೆ ಎಲ್ಲೆಡೆಯಿಂದ ಒಳ್ಳೆಯ ಪ್ರತಿಕ್ರಿಯೆ ಬಂತು. ಆಕೆ ಮುಂದಿನ ವರ್ಷ ಫಿಲಿಡೆಲ್ಫಿಯಾಕ್ಕೆ ಬಂದಾಗ ಅಲ್ಲಿ ಮತ್ತೊಂದು ಅಂಗಡಿ ತೆರೆದಳು. ಮುಂದಿನ ಅಂಗಡಿ ಹದಿನೆಂಟು ಸಾವಿರ ಡಾಲರ್ ಸಂಗ್ರಹಿಸಿತು. ಸುದ್ದಿ ಅಮೆರಿಕ, ಕೆನಡಾ, ಫ್ರಾನ್ಸ್‌ಗಳಲ್ಲೆಲ್ಲ ಪ್ರಚಾರವಾಯಿತು. ಜನರಿಗೆ ಶರಬತ್ ಕುಡಿಯುವುದಕ್ಕಿಂತ ಬಾಲಕಿಯ ಹೋರಾಟದಲ್ಲಿ ತಾವೂ ಸಹಾಯ ಮಾಡುವುದು ಬೇಕಿತ್ತು. ಎಲ್ಲಾ ಕಡೆಯಲ್ಲೂ ಆಕೆಯ ಹೆಸರಿನಲ್ಲಿ ಒಂದು ದಿನದ ಶರಬತ್ ಅಂಗಡಿಗಳು ಸ್ಥಾಪನೆಗೊಳ್ಳುತ್ತಿದ್ದವು. ಹಣ ಸಂಗ್ರಹಿಸಿ ಕಳುಹಿಸುತ್ತಿದ್ದರು.

ದುರದೃಷ್ಟವಶಾತ್ ಕ್ಯಾನ್ಸರ್ ಗೆದ್ದಿತು. ಬಾಲಕಿ 2004ರಲ್ಲಿ ತೀರಿಕೊಂಡಳು. ಆದರೆ ಆಕೆಯ ತಂದೆ–ತಾಯಿ ಮತ್ತು ಗೆಳೆಯ ಗೆಳತಿಯರು ಆಕೆಯ ಸ್ಮರಣಾರ್ಥ ಸಾವಿರಾರು ಅಂಗಡಿಗಳನ್ನು ಒಂದೊಂದು ದಿನದ ಮಟ್ಟಿಗೆ ತೆರೆದರು. ಶರಬತ್ ಮಾರಿದರು. 2005ರಲ್ಲಿ ಹದಿನೈದು ಲಕ್ಷ ಡಾಲರ್ ಸಂಗ್ರಹಿಸಿದರು. ಇದೀಗ ಆ ಬಾಲಕಿ ಅಲೆಕ್ಸಾಂಡ್ರಾಳ ಹೆಸರಿನಲ್ಲಿ ಒಂದು ದತ್ತಿ ಸ್ಥಾಪನೆಯಾಗಿದೆ. ಅದು ಇದುವರೆವಿಗೆ ಹದಿನೆಂಟು ಕೋಟಿ ಡಾಲರು ಸಂಗ್ರಹಿಸಿ ವಿವಿಧ ಆಸ್ಪತ್ರೆಗಳಿಗೆ ದಾನವಾಗಿ ನೀಡಿದೆ.

ಕೇವಲ ಏಳು ವರ್ಷ ಬದುಕಿದ ಅಲೆಕ್ಸಾಂಡ್ರ ಬದುಕಿನುದ್ದಕ್ಕು ಕ್ಯಾನ್ಸರಿನೊಂದಿಗೆ ಹೋರಾಡಿ ಸತ್ತಳು. ಆದರೆ ಆಕೆಯ ಹೆಸರಿನ ಅಲೆಕ್ಸ್ ಲೆಮೊನೇಡ್ ಫೌಂಡೇಶನ್ ಜೀವಂತವಾಗಿದೆ. ಆಕೆ ನಡೆಸಿದ ಹೋರಾಟವನ್ನು ಮುಂದುವರಿಸಿದೆ.

■

# ಭಗವದ್ಗೀತೆ ಹಾಗೂ ಅಪರಾಧ ಮತ್ತು ಶಿಕ್ಷೆ

– ಎಸ್. ವೆಂಕಟರಾಂ

ವ್ಯಾಸ ರಚಿಸಿದನೆಂದು ನಂಬಲಾಗಿರುವ ಭಗವದ್ಗೀತೆ ಒಂದು ಪ್ರವಚನ. ದೋಸ್ತೋವಸ್ಕಿಯ ಅಪರಾಧ ಮತ್ತು ಶಿಕ್ಷೆ ಒಂದು ಕಾದಂಬರಿ. ಒಂದು, ಎರಡು ಸಾವಿರದ ಐನೂರು ವರುಷದಷ್ಟು ಪ್ರಾಚೀನ ಭಾರತೀಯ ದಾರ್ಶನಿಕ ಗ್ರಂಥ. ಇನ್ನೊಂದು, ನೂರು ವರುಷದಷ್ಟು ಈಚೆಗಿನ ರಷ್ಯನ್ ಸಾಹಿತ್ಯ ಕೃತಿ. ಈ ಎರಡರ ಕಥಾ ಸಂದರ್ಭಗಳೂ ಸಂಪೂರ್ಣವಾಗಿ ಬೇರೆ ಬೇರೆ. ಆದರೆ ಈ ಎರಡೂ ಕೃತಿಗಳೂ ಶೋಧಿಸುವ ಮೂಲ ಸಾಮಗ್ರಿ ಒಂದು ಆಧ್ಯಾತ್ಮಿಕ ತರ್ಕ.

ಭಗವದ್ಗೀತೆ ಕುರುಕ್ಷೇತ್ರದಲ್ಲಿ ಕಿಂಕರ್ತವ್ಯ ಮೂಢನಾದ ಕ್ಷತ್ರಿಯನೊಬ್ಬನಿಗೆ ಆ ಯುದ್ಧದ ಸೂತ್ರಧಾರ ಮಾಡಿದ ಉಪದೇಶ. ಸಂತೆಯ ನಡುವೆ ನಿಂತು ಹೇಳಿದ ತತ್ವ. ಯುದ್ಧ ಸನ್ನದ್ಧರಾದ ಯೋಧರು, ಅವರು ಕೈಯಲ್ಲಿ ಹಿಡಿದ ಮಾರಕ ಶಸ್ತ್ರಾಸ್ತ್ರಗಳು. ಯೋಧರ ಶಂಖನಾದ, ಕೊಂಬು, ಡೋಲು, ಮದ್ದಲೆಗಳ ನಿನಾದ, ಕುದುರೆಗಳ ಹೇಷಾರವ, ಇಂತಹ ಸನ್ನಿವೇಶದಲ್ಲಿ ಯುದ್ಧ ಆರಂಭವಾಗಲಿರುವ ಮುನ್ನ ಅರ್ಜುನ ಸಾರಥಿ ಕೃಷ್ಣನಿಗೆ ಹೀಗೆ ಹೇಳಿಕೊಳ್ಳುತ್ತಾನೆ.

> ಧೃತರಾಷ್ಟ್ರನ ದುಷ್ಟ ಸಂತಾನದ ಅಣತಿಯತೆ ಯುದ್ಧಮಾಡಲು
> ಸನ್ನದ್ಧರಾಗಿ ನಿಂತಿರುವ, ನಾನು ಯಾರೊಡನೆ ಹೋರಾಡ
> ಬೇಕಾಗಿದೆಯೋ ಅಂಥ ನನ್ನ ಶತ್ರುಗಳನ್ನು ನಾನು ನೋಡಬೇಕು.
> ನನ್ನ ರಥವನ್ನು ಅಲ್ಲಿಗೆ ಒಯ್ದು ನಿಲ್ಲಿಸು.

ಕೃಷ್ಣ ಎರಡು ಪಾಳಯಗಳ ನಡುವೆ ರಥವನ್ನು ನಿಲ್ಲಿಸುತ್ತಾನೆ. ಅರ್ಜುನ ಅಲ್ಲಿ ಉಭಯ ಶಿಬಿರಗಳಲ್ಲಿಯೂ ಹಂಚಿಹೋಗಿ ಪರಸ್ಪರ ಕೊಲ್ಲಲು ಸಿದ್ಧರಾಗಿ ನಿಂತಿದ್ದ ಬಂಧು ಬಾಂಧವರು, ಮಿತ್ರರು, ಗುರುಗಳನ್ನು ಪರಮ ವಿಷಾದದಿಂದ, ಕರುಣೆಯಿಂದ ನೋಡುತ್ತಾನೆ. ಇದು ಭಗವದ್ಗೀತೆಯ ದೃಶ್ಯ ಶ್ರಾವ್ಯ ಸಂದರ್ಭ.

ಚಿಕ್ಕಂದಿನಿಂದಲೂ ಯುದ್ಧದ ಸಂಸ್ಕಾರ ಪಡೆದಿದ್ದ ಕ್ಷತ್ರಿಯನಾದ ಅರ್ಜುನನಿಗೆ ಧರ್ಮ ಸಂದಿಗ್ಧ ಹುಟ್ಟುತ್ತದೆ. ಅಲ್ಲಿಂದ ಮುಂದೆ ಮಹಾಭಾರತದ

ಯುದ್ಧದ ವರದಿಗಾರನಾದ ಸಂಜಯನ ಮುಖಾಂತರ ಪ್ರಸಿದ್ಧ ಕೃಷ್ಣಾರ್ಜುನ ಸಂವಾದ ಬಿಚ್ಚಿಕೊಳ್ಳುತ್ತದೆ. ಅರ್ಜುನ ತನ್ನ ಅಳಲನ್ನು ಹೀಗೆ ತೋಡಿಕೊಳ್ಳುತ್ತಾನೆ.

ನನ್ನ ಬಂಧು ಬಾಂಧವರನ್ನು ಇಲ್ಲಿ ಕಂಡಾಗ ನನ್ನ ಕೈಕಾಲು ಸೋಲುತ್ತವೆ. ಬಾಯಿ ಒಣಗುತ್ತದೆ.

ಮೈ ನಡುಗುತ್ತದೆ, ಕೂದಲು ನಿಮಿರುತ್ತದೆ, ಚರ್ಮ ಉರಿಯುತ್ತದೆ. ಗಾಂಢೀವ ಕೈಯಿಂದ ಜಾರುತ್ತದೆ.....

ಹೀಗೆ ಬಂಧು ಬಾಂಧವರನ್ನು ಕೊಲ್ಲುವುದರಿಂದ ಏನನ್ನು ತಾನೇ ಆಶಿಸಬಹುದು?..... ಇದು ಸೋತವರನ್ನು

ಅಧೋಗತಿಗಿಳಿಸಿ, ಗೆದ್ದವರನ್ನು ಶಾಪಗ್ರಸ್ತರನ್ನಾಗಿ ಮಾಡುತ್ತದೆ.... ನಾನು ಮಾಡಹೊರಟಿರುವುದು ಏನು? ಮಹಾ ಪಾಪಕರವಾದ ಸ್ವಜನ ಹತ್ಯೆ. ನಾನಷ್ಟು ಸ್ವಾರ್ಥಿಯೇ? ನಾನು ಅವರನ್ನು ಕೊಲ್ಲುವುದಿಲ್ಲ. ಅವರೇ ನನ್ನನ್ನು ಕೊಲ್ಲಲಿ, ಅದೇ ಉತ್ತಮ. ಈ ಲೋಕದ ರಾಜ್ಯವಾಗಲೀ, ದೇವಲೋಕದ ಸಿಂಹಾಸನವಾಗಲೀ ಈ ವ್ಯಥೆಯನ್ನು ನಿವಾರಿಸಲಾರದು.

ಇಷ್ಟು ಹೇಳಿ ಹೃದಯದಲ್ಲಿ ವ್ಯಥೆ ತುಂಬಿ ಕಣ್ಣಿನಲ್ಲಿ ನೀರು ತುಂಬಿ ತನ್ನ ಬಿಲ್ಲು ಬಾಣಗಳನ್ನು ಕೆಳಗೆಸೆದು ರಥದ ಪೀಠದ ಮೇಲೆ ಅರ್ಜುನ ಕುಳಿತು ಬಿಟ್ಟ. ಈ ಸನ್ನಿವೇಶದಲ್ಲಿ ಅರ್ಜುನ ಏನು ಮಾಡಬೇಕು? ಅಥವಾ ಇಂಥ ಯಾವುದೇ ಸನ್ನಿವೇಶದಲ್ಲಿ ಯಾರಾದರೂ ಏನು ಮಾಡಬೇಕು?

ಇಲ್ಲಿಂದ ಮುಂದೆ ಶ್ರೀಕೃಷ್ಣನ ವ್ಯಕ್ತಿತ್ವ ಪೂರ್ಣವಾಗಿ ಪರಿಸ್ಥಿತಿಯನ್ನೂ ಸಂವಾದವನ್ನೂ ತನ್ನ ಹತೋಟಿಗೆ ತೆಗೆದುಕೊಳ್ಳುತ್ತದೆ. ಅವನ ವಾಕ್ಪ್ರವಾಹ ವ್ಯಕ್ತಿತ್ವದ ಅಧಿಕಾರಿಯುತ ಶೈಲಿ, ದಾರ್ಶನಿಕ ಪಾಂಡಿತ್ಯದೆದುರಿಗೆ ಅರ್ಜುನನ ತರ್ಕ ಶಕ್ತಿ ಚಿಂತನ ಸಾಮರ್ಥ್ಯ ನಿಧಾನವಾಗಿ ಕರಗಿ ಹೋಗುತ್ತದೆ. ಅತ್ಯಂತ ಮಾನವೀಯ ಸಂದಿಗ್ಧಕ್ಕೆ ಖುದ್ದು ಭೂಮಿಗಿಳಿದು ಬಂದ ಭಗವಂತ ಅಧಿಕಾರವಾಣಿಯಿಂದ ಸಮಾಧಾನ ಸೂಚಿಸುತ್ತಾನೆ. ಅವನ ಸಮಾಧಾನ ಧಾಟಿ :

ನಿನಗೆ ಇಂಥ ಹೃದಯ ದೌರ್ಬಲ್ಯ ಸಲ್ಲದು. ನಾನು ಅಜರಾಮರ, ಎಲ್ಲ ಜೀವರಾಶಿಗಳ

ಪ್ರಭು. ಧರ್ಮಗ್ಲಾನಿಯಾದಾಗಲೆಲ್ಲ ನಾನು ಬಂದು ದುಷ್ಟ ಶಿಕ್ಷಣ, ಶಿಷ್ಟ ರಕ್ಷಣೆ ಮಾಡುತ್ತೇನೆ.

ನನ್ನ ಪ್ರಕೃತಿಯ ಮೂಲಕವೇ ನಾನು ಜಗತ್ತಿನ ಸೃಷ್ಟಿ. ಪ್ರಳಯಗಳ ಕರ್ತ, ನನ್ನ ರೂಪ ಸ್ವಭಾವ ಅರಿತವನು ಜೀವನ್ಮುಕ್ತ. ನನ್ನನ್ನು ಆರಾಧಿಸುವವನ ಇಷ್ಟಾರ್ಥಗಳನ್ನು ನಾನು ಪೂರೈಸುತ್ತೇನೆ.

ಚಾತುರ್ವರ್ಣ್ಯದ ಕರ್ತನಾದ ನಾನು ಎಲ್ಲ ಕತ್ತಲನ್ನೂ ನಿವಾರಿಸುವ ಜ್ಯೋತಿಯಂತಹ ಅರಿವು.

ಈ ಜನರೆಲ್ಲ ನನ್ನಿಂದಲೇ ಹತರಾಗಿದ್ದಾರೆ. ನೀನು ನಿಮಿತ್ತ ಮಾತ್ರ. ಕ್ಷತ್ರಿಯನಾದ ನಿನಗೆ ಈ ಯುದ್ಧ ಧರ್ಮ ಸಮ್ಮತ.

ಮನುಷ್ಯನ ಚಿಂತನೆ. ಸಾರಾಸಾರ ವಿಚಾರ, ನಿರ್ಧಾರಕ್ಕೆ ಇಲ್ಲಿ ಏನೇನೂ ಮಹತ್ವವಿಲ್ಲ. ಅವನು ನಿಮಿತ್ತ ಮಾತ್ರ. ಪ್ರವಚನದ ಎಲ್ಲ ತಿರುವು ಮುರುವುಗಳ ಮುಖ್ಯ ಧಾರೆ, ನಾನು ಎಂಬ ಈ ಧ್ವನಿ. ಆಧುನಿಕ ಕಾಲದಲ್ಲಿ ಈ ಧಾಟಿಯಲ್ಲಿ ಯಾರಾದರೂ ಮಾತನಾಡಿದರೆ ಆತನಿಗೆ ಮ್ಯಾಗಲೋಮ್ಯಾನಿಯ ಇದೆ – ಎನ್ನುತ್ತಾರೆ. ಕಡೆಗೆ ಈ ರಭಸದಿಂದ ಬಚಾವಾಗಿ ಏನಾದರೂ ಕೋಮಲವಾದ ಹೂವಿನಂತೆಯೊ, ಮೊಳಕೆಯಂತೆಯೋ ಕಿಂಚಿತ್ತಾದರೂ ಮಾನವ ಸಹಜವಾದ ವಿಚಾರಶಕ್ತಿ ಉಳಿದಿದ್ದರೆ ಅದನ್ನು ನಿರ್ನಾಮಗೊಳಿಸಿದ್ದು 'ವಿಶ್ವರೂಪ' ದರ್ಶನದ ದಳ್ಳುರಿ.

ಕೋಟಿ ಸೂರ್ಯ ಸಮಪ್ರಭವಾದ ಅಸಂಖ್ಯ ಮುಖಗಳ ಅಂಗಾಂಗಗಳ ಸಹಿತವಾದ ಆಭರಣ ಖಚಿತವಾದ ವಿಶ್ವರೂಪವನ್ನು ಅರ್ಜುನ ಕಂಡ. ಅದನ್ನು ಕಾಣಲು ದಿವ್ಯದೃಷ್ಟಿ ಬೇಕಾಯಿತು. ಅದನ್ನು ಶ್ರೀ ಕೃಷ್ಣ ಅರ್ಜುನನಿಗೆ ನೀಡಿದ.

ಅಲ್ಲಿಗೆ ಮಾನವ ದೃಷ್ಟಿ, ಮಾನವ ಸಂವಾದ ಅಂತ್ಯ. ವ್ಯಕ್ತಿಯ ವಿಚಾರ ಶಕ್ತಿಗೆ ಇದು ಕಡೆಯ ಪ್ರಹಾರ, ತಾರ್ಕಿಕವಾಗಿ ಮಾತು ಪ್ರಾರಂಭಿಸಿದ ಕೃಷ್ಣ ಇಲ್ಲಿ ಸರ್ವಶಕ್ತನಾಗಿ ಮಾತು ಮುಗಿಸುತ್ತಾನೆ. ಅರ್ಜುನ ಹೀಗೆನ್ನುತ್ತಾನೆ :

ಅಜಾಗೃತನಾಗಿ ನಿನ್ನನ್ನು ಕೃಷ್ಣ ಸಂಗಾತಿ ಎಂದು ಕರೆದೆ. ಅಮರನಾದ ದೇವನನ್ನು ಮಿತ್ರ, ನರನೆಂದು ಬಗೆದು ಕ್ಷಮಿಸು, ಪ್ರಭು ನಿನ್ನ ದಯೆಯಿಂದ

ನನ್ನ ಭ್ರಾಂತಿ ನಿರ್ಮೂಲವಾಯಿತು. ನನ್ನ ಮನಸ್ಸು ನಿರಾಳವಾಗಿದೆ. ಅದರ ಅನುಮಾನಗಳು ತೀರಿವೆ. ನಿನ್ನ ಆಜ್ಞೆ ನಾನು ಪಾಲಿಸುತ್ತೇನೆ.

ಧರ್ಮಸಂದಿಗ್ಧದಿಂದ ವಿಷಣ್ಣನಾಗಿದ್ದ ಅರ್ಜುನ ಈ ಸ್ಪಷ್ಟ ಮನಸ್ಸಿನಿಂದ ಕ್ರಿಯೆಗೆ ತೊಡಗುತ್ತಾನೆ. ಅವನ ವಿಷಾದ ಹಾಗೂ ಕರುಣೆ ಕರಗಿಹೋಗಿದೆ. ಒಂದು ಮಹದೋದ್ದೇಶಕ್ಕಾಗಿ ಅವನಿಗೆ ಕೊಲೆ ಮಾಡುವ ಹಕ್ಕು ಇದೆ ಎಂಬ ನಂಬಿಕೆ ಬಂದಿದೆ. ಆದುದರಿಂದ ಈ ಕ್ರಿಯೆ ಪ್ರಜ್ಞಾಪೂರ್ವಕವಾದ, ಪೂರ್ವ ನಿಯೋಜಿತವಾದ ಯುದ್ಧವೆಂಬ ಹೆಸರಿನ ಸಾಮೂಹಿಕ ಕೊಲೆ. ಇದರ ಉದ್ದೇಶ ರಾಜ್ಯ ಸಂಪತ್ತು ಬಂಧು ಬಾಂಧವರ ಕೊಲೆ ಸಹಿತ ಯುದ್ಧದ ಅನಂತ ಅಪರಾಧಗಳೂ ನೈತಿಕವಾಗಿ ಸಿಂಧು, ಸಮರ್ಥನೀಯ – ಹಾಗೆಂದು ಎಲ್ಲ ತಿಳಿದವನಾದ ಎಲ್ಲಕ್ಕೂ ಕಾರಣಕರ್ತನಾದ ಅತಿ ಮಾನವನಾದ ಕೃಷ್ಣ ಹೇಳುತ್ತಾನೆ. ಅರ್ಜುನ ಕೃಷ್ಣನ ಉದ್ದೇಶಗಳ ಸಾಧನೆ, ನಿಮಿತ್ತ ಮಾತ್ರ. ಅರ್ಜುನ ಈ ಹೊಸ ದೃಷ್ಟಿಯನ್ನು ಮನಸಾರೆ ಒಪ್ಪಿದ್ದಾನೆ. ಉದ್ದೇಶ ಶುದ್ಧವಾದುದಾದರೆ, ಕಳಬಹುದು, ಕೊಲಬಹುದು, ಹುಸಿಯ ನುಡಿಯಲುಬಹುದು, ತನ್ನ ಬಣ್ಣಿಸಬಹುದು, ತುಂಬಾ ಪರಿಚಿತ ಸಿದ್ಧಾಂತ.

ಮೂಲತಃ ಇದಕ್ಕೆ ತದ್ವಿರುದ್ಧವಾದ ಘಟನಾಚಕ್ರ ಹಾಗೂ ತರ್ಕಚಕ್ರ ದೋಸ್ತೋವಸ್ಕಿಯ 'ಅಪರಾಧ ಮತ್ತು ಶಿಕ್ಷೆ'ಯದು. ಅದರ ಕಥಾನಾಯಕ ರಾಸ್ಕೋಲ್ನಿಕೋವ್ ಸಾಮಂತ ವರ್ಗಮೂಲದ ಆದರೆ ಇಂದು ಅಹನ್ಯ ಹನಿ ಕಾಲಕ್ಷೇಪ ಮಾಡುತ್ತಿರುವ ನಿರ್ಗತಿಕ ವಿದ್ಯಾರ್ಥಿ. ಮದುವೆಯಾಗಲು ಪ್ರಾಪ್ತ ವಯಸ್ಕಳಾದ, ಆದರೆ ಬಡತನದ ಕಾರಣದಿಂದ ಅನುರೂಪನಾದ ವರನನ್ನು ಪಡೆಯಲಾರದ, ರಾಸ್ಕೋಲ್ನಿಕೋವ್‌ನ ಅಭ್ಯುದಯದ ಸಲುವಾಗಿ ಅಪರವಯಸ್ಸಿನ ಉದ್ಧಟ ಶ್ರೀಮಂತನೊಬ್ಬನನ್ನು ಮದುವೆಯಾಗಲೊಪ್ಪಿರುವ ಅವನ ಸೋದರಿ, ಅವನಿಗಾಗಿ ಏನು ತ್ಯಾಗ ಮಾಡಲೂ ಸಿದ್ಧವಿರುವ, ಆದರೆ ಅಸಹಾಯಕಳಾದ ವಾತ್ಸಲ್ಯಮಯಿ ತಾಯಿ ಅವನ ಆಪ್ತರು.

ರಾಸ್ಕೋಲ್ನಿಕೋವನ ಪ್ರಖರ ಆದರ್ಶಶೀಲ ಬುದ್ಧಿ ಒಂದು ಸಿದ್ಧಾಂತವನ್ನು ಕುರಿತು ಚಿಂತಿಸುತ್ತಿರುತ್ತದೆ. ಅವನು ಇದರ ಬಗ್ಗೆ ಒಂದು ಲೇಖನವನ್ನು ಬರೆದಿರುತ್ತಾನೆ ಕೂಡ.

> "ಜಗತ್ತಿನಲ್ಲಿ ಎರಡು ವರ್ಗದ ಜನ : ನಿಯಮಾತೀತರಾದ ಅತಿಮಾನವರು. ನಿಯಮ ಪಾಲಕರಾದ ಮಾನವರು. ಮಹಾಪುರುಷರು

ಮಹತೋದ್ದೇಶಕ್ಕಾಗಿ ಏನಾದರೂ ಮಾಡಬಹುದು, ಕಳಬಹುದು, ಕೊಲಬಹುದು, ಅದು ಅವರು ಜಗತ್ತನ್ನು ಮುನ್ನಡೆಸುವ ದಾರಿ."

ಅಕಸ್ಮಾತ್ತಾಗಿ ಈ ಸಿದ್ಧಾಂತದ ಒಂದು ವ್ಯವಹಾರ್ಯ ಸಲಹೆ ಒಬ್ಬ ವಿದ್ಯಾರ್ಥಿ ಬೇರೆ ಯಾರೊಡನೆಯೋ

ಮಾಡುತ್ತಿದ್ದ ಒಣ ಚರ್ಚೆಯ ಮಧ್ಯದಲ್ಲಿ ಅವನ ಕಿವಿಯ ಮೇಲೆ ಬಿದ್ದಿರುತ್ತದೆ:

"ಗಿರವಿಯ ವ್ಯಾಪಾರ ನಡೆಸಿ ಸುಲಿಗೆ ಮಾಡುತ್ತಿರುವ ಒಬ್ಬ ದುಷ್ಟ ಮುದುಕಿಯನ್ನು ಕೊಲ್ಲು. ಅವಳ ಹಣ ತೆಗೆದುಕೋ, ಅದರ ನೆರವಿನಿಂದ ಮಾನವತೆಯ ಸೇವೆ ಎಲ್ಲರ ಕಲ್ಯಾಣ ಸಾಧಿಸು. ಸಾವಿರಾರು ಸತ್ಕಾರ್ಯಗಳಿಂದ ಒಂದು ಅಪರಾಧ ತೊಡೆದು ಹೋಗುವುದಿಲ್ಲವೇ? ಒಂದು ಸಾವಿನಿಂದ ಸಾವಿರಾರು ಬದುಕುಗಳು ಭ್ರಷ್ಟತೆಯಿಂದ, ಅವನತಿಯಿಂದ ಉಳಿಯುವುವು. ಒಂದು ಸಾವು ನೂರು ಜನರ ಬದುಕಿಗೆ ಸಮ. ಗಣಿತದಷ್ಟೇ ಸರಳ. ಜಗತ್ತಿನ ಜೀವರಾಶಿಯ ತಕ್ಕಡಿಯಲ್ಲಿ ಆ ಒಂದು ರೋಗಗ್ರಸ್ಥ, ಮೂರ್ಖ, ದುಷ್ಟಸ್ವಭಾವದ ಮುದುಕಿಯ ಜೀವನದ ಬೆಲೆ ಏನು?"

ಆ ಮುದುಕಿಯನ್ನು ಇವನೂ ಬಲ್ಲ. ಬೀಜರೂಪವಾದ ಈ ಸಲಹೆ ಇದೇ ಸಿದ್ಧಾಂತದಿಂದ ಸಿದ್ಧವಾಗಿದ್ದ ಮನೋಭೂಮಿಯಲ್ಲಿ ಬಿದ್ದು, ಮೊಳೆತು ಅವನ ಎಲ್ಲ ಸಮಸ್ಯೆಗಳಿಗೆ ನೇರ ಪರಿಹಾರವಾಗಿ ತೋರುತ್ತದೆ. ಒಂದು ದಿನ ಅವಳ ಮನೆಗೆ ಹೋಗಿ ಗಿರವಿ ಮಾಲು ಒಂದನ್ನು ಅವಳಿಗೆ ತೋರಿಸುವ ನೆಪದಲ್ಲಿ ತಾನು ಕೊಂಡೊಯ್ದಿದ್ದ ಒಂದು ಕೊಡಲಿಯಿಂದ ಅವಳನ್ನು ತಲೆಯೊಡೆದು ಕೊಂದ. ಆಗ ಅವನು ಎಚ್ಚರದಿಂದ, ಸಂಯಮದಿಂದ ಇದ್ದ. ಅವನ ಮನಸ್ಸಿನಲ್ಲಿ ಏನೂ ಗಡಿಬಿಡಿ ಇರಲಿಲ್ಲ. ಅವಳ ಕುತ್ತಿಗೆಯಲ್ಲಿದ್ದ ಹಣದ ಚೀಲವನ್ನು ಗಿರವಿಯ ವಿವಿಧ ಚಿನ್ನದ ಮಾಲುಗಳನ್ನು ದೋಚಿದ. ಅಷ್ಟು ಹೊತ್ತಿಗೆ ಸತ್ತ ಮುದುಕಿಯ ತಂಗಿ ಹೊರಗಿನಿಂದ ಮನೆಗೆ ಬರುತ್ತಾಳೆ. ಅವಳನ್ನೂ ಕೊಲ್ಲುತ್ತಾನೆ. ಹೀಗೆ ಸದುದ್ದೇಶಕ್ಕಾಗಿ ಕೊಲ್ಲುವ, ದೋಚುವ ಹಕ್ಕನ್ನು ಚಲಾಯಿಸುತ್ತಾನೆ. ಆಶ್ಚರ್ಯಕರ ರೀತಿಯಲ್ಲಿ ಯಾರಿಗೂ ಸುಳಿವು ಕೊಡದೆ ಮನೆಗೆ ಹಿಂತಿರುಗುತ್ತಾನೆ. ಕಳವು ಮಾಡಿದ್ದ ಸಾಮಾನುಗಳನ್ನು ಯಾರೂ ಕಾಣದಂತೆ ಮುಚ್ಚಿಡುತ್ತಾನೆ. ಜೋಡಿ ಕೊಲೆಮಾಡಿದ್ದನ್ನು ಯಾರೂ

ಕಂಡಿರಲಿಲ್ಲ. ಚೀಲದ ತುಂಬ ಹಣ, ಚಿನ್ನದ ಆಭರಣಗಳನ್ನು ದೋಚಿ ತಂದಿದ್ದ. ಇನ್ನು ಅವನು ತನ್ನ ತಾಯಿಯ, ಸೋದರಿಯ ಸಮಸ್ಯೆಗಳನ್ನು ಬಗೆಹರಿಸಬಹುದು, ತಾನು ಮಹಾತ್ಕಾರ್ಯದಲ್ಲೂ ತೊಡಗಬಹುದು.

ಆದರೆ ಆ ಕ್ಷಣದಿಂದ ಅವನಲ್ಲಿ ಕ್ಷೀಣವಾಗಿ ಇದ್ದೂ ಇಲ್ಲದಂತಿದ್ದ ಅಂತಃಸಾಕ್ಷಿಯು ಕಿಡಿ ನಿಧಾನವಾಗಿ ಹತ್ತಿಕೊಂಡು ಕೊಳ್ಳಿಯಾಗಿ ಉರಿಯತೊಡಗುತ್ತದೆ. ಎಲ್ಲಿಗೆ ಹೋದರೂ, ಏನು ಮಾಡಿದರೂ ಅವನಿಗೆ ಮೊದಮೊದಲು ತನ್ನ ಅಪರಾಧದ ಪತ್ತೆಯ ಭೂತಸ್ವಪ್ನ ಕಾಡತೊಡಗುತ್ತದೆ. ಒಳಗುದಿ, ಜ್ವರ, ಬಡಬಡಿಕೆ, ಸನ್ನಿ, ಭ್ರಮೆ, ಇಂತಹ ಮನೋವಿಕಾರಗಳು ಅವನ ವ್ಯಕ್ತಿತ್ವವನ್ನು ಆಕ್ರಮಿಸಿ ದೇಹವನ್ನು ಜರ್ಝರಗೊಳಿಸಿ ಹುಚ್ಚಿನ ಅಂಚಿಗೆ ಎಳೆದೊಯ್ಯುತ್ತವೆ. ಮನಃಶಾಂತಿ ಸಂಪೂರ್ಣ ನಾಶವಾಗಿ ಕರ್ತವ್ಯದ ಬೆಳಕು ಕಾಣದೆ ಅವನ ಅಂತರಂಗ ಅಲ್ಲೋಲ ಕಲ್ಲೋಲವಾಗಿದೆ. ಹಲವು ಕಾಕತಾಳೀಯಗಳು ಘಟಿಸಿದರೂ ಎಷ್ಟೇ ಗುಮಾನಿಬಂದರೂ ಅವನ ಅಪರಾಧ ಪೋಲೀಸರಿಂದ ಪತ್ತೆ ಆಗುವುದಿಲ್ಲ. ಹೀಗೆ ರಾಜ್ಯ ಶಕ್ತಿಯಿಂದ ನಿರಾತಂಕವಾದರೂ ಈಗ ಪೂರ್ಣ ಎಚ್ಚೆತ್ತ ಅಂತಃಶಕ್ತಿ ಅವನ ಮೇಲೆ ದಂಗೆ ಸಾರಿ ಆದಿ ಅಂತ್ಯವಿಲ್ಲದ ಬೇಗುದಿ ಎಬ್ಬಿಸಿದೆ. ಅದರಿಂದ ಹೊರ ಬರುವ ಮಾರ್ಗಕ್ಕಾಗಿ ತೊಳಲಾಟ ನಿರಂತರವಾಗಿ ನಡೆದಿದೆ. ಈ ಎಲ್ಲ ಹೋರಾಟ ಅವನ ಹೃದಯ ಕ್ಷೇತ್ರದಲ್ಲಿ ನಡೆಯುತ್ತದೆ.

ಈ ಸನ್ನಿವೇಶದಲ್ಲಿ ಅವನಿಗೆ ತನ್ನ ಮಲತಾಯಿಯನ್ನು ಸಾಕುವುದಕ್ಕಾಗಿ ಬೀದಿ ಗಿತ್ತಿಯಾಗಿದ್ದ ಸೋನಿಯಾ ಎಂಬ ಹೆಣ್ಣಿನ ಪರಿಚಯವಾಗುತ್ತದೆ. ಯಾವುದೋ ಅಗೋಚರ ಬಿರುಗಾಳಿ ಸಮಾನವಾಗಿ ಧರ್ಮಭ್ರಷ್ಟರಾದ ಅವರಿಬ್ಬರನ್ನೂ ಒಂದು ನಿರ್ಜನವಾದ ನಡುಗಡ್ಡೆಗೆ ತಂದು ಒಟ್ಟಿಗೆ ಎಸೆದಿದೆ. ಅವನು ಕೊಲೆಗಾರನಾದರೆ, ಅವಳು ಬಸವಿ. ಆದರೆ ಅವಳ ಈ ಹೊರ ಬದುಕಿಗೆ ವಿರುದ್ಧವಾದ, ವಿಶುದ್ಧವಾದ ಒಳ ಬದುಕು ಅವಳದು. ಅಬಲೆಯಾದ ಅವಳ ಅಂಗಾಂಗಗಳಲ್ಲೂ ಕರುಣೆ ಸ್ರವಿಸುತ್ತದೆ. ನಿಧಾನವಾಗಿ ಅವನು ಅವಳ ಪ್ರಭಾವವಲಯಕ್ಕೆ ಒಳಗಾಗಿ, ಅವಳು ತನ್ನ ಸಹಧರ್ಮಿಣಿ ಎಂದು ಅವನಿಗೆ ಎನಿಸುತ್ತದೆ. ಅವನು ಅವಳನ್ನು ಕುರಿತು ಹೀಗೆ ಹೇಳುತ್ತಾನೆ :

“ನೀನೂ ಒಂದು ಬದುಕನ್ನು ನಾಶ ಮಾಡಿರುವೆ – ನಿನ್ನದೇ ಬದುಕನ್ನು ನೀನೊಬ್ಬಳೇ ಇದ್ದರೆ ನನ್ನಂತೆ ನಿನಗೂ ಹುಚ್ಚು ಹಿಡಿಯುತ್ತದೆ. ಆದ್ದರಿಂದ

ನಾವಿಬ್ಬರೂ ಒಂದೇ ಮಾರ್ಗದಲ್ಲಿ ಹೋಗಬೇಕಾಗಿದೆ, ಹೋಗೋಣ."

ದುಸ್ಸಹವಾದ ಆತ್ಮಗ್ಲಾನಿಗೊಳಗಾದ ಅವನಿಗೆ ಅವನ ಸ್ವಾನುಭವ ಪಕ್ವವಾಗಿ ಧರ್ಮಪ್ರಜ್ಞೆ ಜಾಗೃತವಾಗಿ ಅಂತರ್ಬೋಧೆ ಮನಸ್ಸಿನಲ್ಲಿ ಮಿಡಿಯುತ್ತಿದ್ದಾಗ ಅವಳ ಉಪದೇಶ :

"ಈಗಲೇ, ಈ ಕ್ಷಣ ಹೋಗು. ಅಡ್ಡರಸ್ತೆಯಲ್ಲಿ ನಿಲ್ಲು. ತಲೆಬಾಗಿ ನೀನು ಅಪವಿತ್ರಗೊಳಿಸಿರುವ ನೆಲಕ್ಕೆ ಮುತ್ತಿಡು. ಅನಂತರ ಜಗತ್ತಿಗೆಲ್ಲ ತಲೆಬಾಗಿ, ಎಲ್ಲ ಜನರಿಗೂ ಹೇಳ 'ನಾನು ಕೊಲೆಗಡುಕ', ಆಗ ದೇವರು ನಿನಗೆ ಹೊಸ ಬದುಕನ್ನು ನೀಡುವನು."

ಅವಳು ಅವನಿಗೆ ಒಂದು ಶಿಲುಬೆಯನ್ನು ನೀಡಿ, ಹೊಸ ಒಡಂಬಡಿಕೆಯ ಒಂದು ಹೃದಯಸ್ಪರ್ಶಿ ಅಖ್ಯಾಯಿಕೆಯನ್ನು ಅವನ ಕೋರಿಕೆಯಂತೆ ಓದುತ್ತಾಳೆ–ಮೃತನಾದ 'ಲಾಜರಸ್' ಏಸುವಿನ ಕೃಪೆಯಿಂದ ಮತ್ತೆ ಎದ್ದು ಬಂದದ್ದು. ಹಾಗೆಯೇ ಅವನಿಗೆ ಅವಳು ಒಟ್ಟಿಗೆ ನರಳುವ, ಒಟ್ಟಿಗೆ ಶಿಲುಬೆ ಧರಿಸುವ, ಒಟ್ಟಿಗೆ ಪಾಪವನ್ನು ಕಳೆದುಕೊಳ್ಳುವ ದೀಕ್ಷೆಯ, ಪ್ರೇಮಮಯ ಸಾಹಚರ್ಯದ ಬಲವನ್ನೂ ನೀಡುತ್ತಾಳೆ. ಕಡೆಗೆ ಅವನು ತನ್ನ ಅಪರಾಧವನ್ನು ಸಾಬೀತು ಮಾಡಲಾರದ ಪೋಲಿಸರಲ್ಲಿಗೆ ತಾನೇ ಹೋಗಿ ತಪ್ಪೊಪ್ಪಿ ಕೊಳ್ಳುತ್ತಾನೆ.

ದೂರದ ಸೈಬೀರಿಯಾದಲ್ಲಿ ಎಂಟು ವರುಷ ಗಡೀಪಾರಾಗಿ ದುಡಿಯುವ ಶಿಕ್ಷೆ ದೊರೆಯುತ್ತದೆ. ಅವನ ನೆರಳಿನಂತೆ ಅವಳೂ ಅವನನ್ನು ಹಿಂಬಾಲಿಸಿ ಅಲ್ಲಿ ವ್ರತಿಯಂತೆ ಅವನ ಬಿಡುಗಡೆಗಾಗಿ ಕಾಯುತ್ತಾಳೆ. ನಿವೇದನೆ ಹಾಗೂ ಶಿಕ್ಷೆಯ ಸ್ವೀಕಾರ ಮತ್ತು ಅವಳೊಂದಿಗೆ ಸಾಧಿಸಿದ ಏಕಾತ್ಮಕತೆಯಿಂದ ಅವನ ಮನಶ್ಶಾಂತಿ ನಿಧಾನವಾಗಿ ಮರಳುತ್ತದೆ. ಅವನ ಅಪರಾಧ, ಸೆರೆವಾಸ – ಇವು ಅವನಿಗೆ ಈಗ ಹೊರಗಿನ ವ್ಯಾಪಾರಗಳು. ಅವನ ಒಳಗನ್ನು ಅವು ಮುಟ್ಟವು. ಅವನ ಆತ್ಮ ಸಂಸ್ಕರಣ ಆರಂಭವಾಗಿದೆ. ಅವನ ಹೊಸ ಬದುಕಿನ ಹೊಂಗಿರಣ ಉದಯಿಸಿದೆ.

ಭಗವದ್ಗೀತೆ ಹಾಗೂ ಅಪರಾಧ ಮತ್ತು ಶಿಕ್ಷೆ ಎರಡೂ ಕೃತಿಗಳು ಶೋಧಿಸುವುದು ಸಾಧನ ಮತ್ತು ಉದ್ದೇಶಗಳ ಸಂಕೀರ್ಣ ಸಂಬಂಧವನ್ನು. ಭಗವದ್ಗೀತೆ ಸದುದ್ದೇಶಕ್ಕಾಗಿ ಯುದ್ಧದ – ಸಾಮೂಹಿಕ ಕೊಲೆಯ –

ನೈತಿಕತೆಯನ್ನು ಪ್ರಶ್ನಿಸುವ ಒಳಗುದಿಯಿಂದ ಆರಂಭವಾಗಿ ಅಂಥ ' ನೈತಿಕತೆಯನ್ನು ಒಪ್ಪತೊಡುಗುವುದರಲ್ಲಿ ಪರ್ಯವಸಾನವಾಗಿದೆ. 'ಅಪರಾಧ ಮತ್ತು ಶಿಕ್ಷೆ' ಸದುದೇಶಕ್ಕಾಗಿ ಕೊಲೆಯ ನೈತಿಕತೆಯನ್ನು ಒಪ್ಪತೊಡಗುವುದರಿಂದ ಆರಂಭವಾಗಿ ಅದನ್ನು ತಿರಸ್ಕರಿಸುವ ಧರ್ಮದಲ್ಲಿ ಪರ್ಯವಸಾನವಾಗುತ್ತದೆ. ಭಗವದ್ಗೀತೆಯಲ್ಲಿ ಅಪೌರುಷೇಯ ಶಕ್ತಿಯ ತರ್ಕ ವೈಭವ ಮೆರೆದರೆ "ಅಪರಾಧ ಮತ್ತು ಶಿಕ್ಷೆ"ಯಲ್ಲಿ ರಾಸ್ಕೋಲ್ನಿಕೋವ್ – ಸೋನಿಯಾರ ಮಾನವೀಯ ಅರಸಿಕೆಯ ಭಾವ ವೈಭವ ಮರೆಯುತ್ತದೆ. ಭಗವದ್ಗೀತೆಯಲ್ಲಿ ಅರ್ಜುನನ ವಿಷಾದಯೋಗ ಗೌಣವಾಗಿದ್ದರೆ 'ಅಪರಾಧ ಮತ್ತು ಶಿಕ್ಷೆ'ಯಲ್ಲಿ ರಾಸ್ಕೋಲ್ನಿಕೋವನ ವಿಷಾದವೇ ಪ್ರಧಾನ. ಭಗವದ್ಗೀತೆ ಹೆಚ್ಚು ದಾರ್ಶನಿಕ ಗ್ರಂಥವಾದರೆ, ಅಪರಾಧ ಮತ್ತು ಶಿಕ್ಷೆ ಹೆಚ್ಚು ಮಾನವೀಯ ಕೃತಿ. ಒಂದು ರೀತಿಯಲ್ಲಿ ಅಪರಾಧ ಮತ್ತು ಶಿಕ್ಷೆ ಭಗವದ್ಗೀತೆಯ ಉತ್ತರ ಭಾಗ. ಗೀತೆಯಲ್ಲಿ ಕೃಷ್ಣನ ಉಪದೇಶ ಹಾಗೂ ಅರ್ಜುನನ ವಿಷಾದದ ಒಂದೇ ಭಿತ್ತಿಚಿತ್ರ ಮೊದಲಿನಿಂದ ಕೊನೆಯವರೆಗೂ ಮೂಡಿದ್ದರೆ, ಅಪರಾಧ ಹಾಗೂ ಶಿಕ್ಷೆಯಲ್ಲಿ ಒಂದು ಬದುಕಿನ ಮೆರವಣಿಗೆಯೆ ಕಣ್ಣೆದುರು ಸಾಗಿ ಅತ್ಯಂತ ಮಾರ್ಮಿಕವಾಗಿ ಹಾಗೂ ಕೋಮಲವಾದ ಹಲವು ಭಾವ ಸನ್ನಿವೇಶಗಳು ನಿರ್ಮಿತವಾಗಿ ಜೀವನದ ನಕಲಾದ ಹಲವು ವ್ಯಕ್ತಿಗಳು ರಂಗದ ಮೇಲೆ ಓಡಾಡುತ್ತಾರೆ. ಆದರೆ ಈ ಎರಡರಲ್ಲೂ ರಚನೆಯ ಅಡ್ಡಾದಿಡ್ಡಿತನ ಇದೆ.

ಈ ಎರಡೂ ಕೃತಿಗಳೂ ಹಲವು ಹತ್ತು ಸ್ವಾರಸ್ಯಕರ ವಿಷಯಗಳನ್ನು ಪ್ರಾಸಂಗಿಕವಾಗಿ ಮುಟ್ಟುತ್ತವೆ, ಒಳಹೋಗುತ್ತವೆ, ಬಳಸುತ್ತವೆ. ಅವುಗಳನ್ನೆಲ್ಲ ಇಲ್ಲಿ ಚರ್ಚಿಸುವ ಅಥವಾ ಗುರುತಿಸುವ ಉದ್ದೇಶ ಇಲ್ಲ. ಉದಾಹರಣೆಗೆ, ಗೀತೆ ಪ್ರತಿಪಾದಿಸುವ ನಿಷ್ಕಾಮಕರ್ಮ ಮನೋಭಾವ, ಚಾತುರ್ವರ್ಣ್ಯ ವಿಭಜನೆ ಹಾಗೂ 'ಅಪರಾಧ ಮತ್ತು ಶಿಕ್ಷೆ'ಯಲ್ಲಿ ಚಿತ್ರಿತವಾಗಿರುವ ಗಿಲ್ಟ್ ಕಾಂಪ್ಲೆಕ್ಸ್, ಮಾನವ, ಅತಿ ಮಾನವ ವರ್ಗೀಕರಣ. ಆದರೆ ಒಟ್ಟಾರೆ ನೋಡುವುದಾದರೆ ಶ್ರೀಕೃಷ್ಣನಿಗಿಂತ ದೊಸ್ತೋವಸ್ಕಯೇ ಹೆಚ್ಚು ಆಧ್ಯಾತ್ಮಿಕತೆಯನ್ನು ಪ್ರತಿಧ್ವನಿಸುತ್ತಾನೆ. ಕೃಷ್ಣನ ಗುರಿ ಬಾಹ್ಯ ರಾಜ್ಯ. ದೊಸ್ತೋವಸ್ಕಿಯ ಗುರಿ ಆಂತರಿಕ ರಾಜ್ಯ. ಇದು ಸಹಜವೂ ಕೂಡ. ಎರಡೂವರೆ ಮೂರು ಸಾವಿರ ವರುಷಗಳ ಹಿಂದೆ ಭಾರತದಲ್ಲಿ ಆಗತಾನೆ ತಲೆ ಎತ್ತಿ ರೂಪು ಧಾರಣೆ ಮಾಡುತ್ತಿದ್ದ ಹಲವಾರು ಸಣ್ಣಪುಟ್ಟ ರಾಜ್ಯಗಳನ್ನು ತನ್ನಲ್ಲಿ ಅಳವಡಿಸಿಕೊಂಡು ಒಂದು ಭಾರತದ ಸಾಮ್ರಾಜ್ಯ ಸ್ಥಾಪಿಸುವ ಹುಮ್ಮಸ್ಸಿನಲ್ಲಿ ಯಾವ ಅಡೆತಡೆಯನ್ನೂ ಬದಿಗೆ

ಸರಿಸುವ ಕಾಲದ ಆತ್ಮವಿಶ್ವಾಸದ ಐಹಿಕ ಸಿದ್ಧಾಂತ ಗೀತೆಯ ತಿರುಳು. ಮಧ್ಯಯುಗದ ಸಾಮಂತಶಾಹಿ ವ್ಯವಸ್ಥೆ ರಷ್ಯಾದಲ್ಲಿ ಕುಸಿದು ಬಿದ್ದು ಸಾಮಂತ ಕುಲೀನರು, ನಿರ್ಗತಿಕರು, ನೀತಿಭ್ರಷ್ಟರು, ರೋಗಿಷ್ಟರು, ದಿಶಾಹೀನರು ಆಗಿದ್ದ ಅವನತಿಯ ಕಾಲದ ಪಾರಮಾರ್ಥಿಕ ಸಿದ್ಧಾಂತ ಅಪರಾಧ ಮತ್ತು ಶಿಕ್ಷೆಯ ಪಲ್ಲವಿ. ಪ್ರಾಸಂಗಿಕವಾಗಿ ದೋಸ್ತೋವಸ್ಕಿಯನ್ನು ಕುರಿತು ಸ್ಟಾಲಿನ್ನಿನ ಮಾತನ್ನು ಇಲ್ಲಿ ಉದ್ಧರಿಸಬಹುದು "ದೊಸ್ತೋವಸ್ಕಿ ಬಲು ದೊಡ್ಡ ಲೇಖಕ. ಆದರೆ ಬಲು ದೊಡ್ಡ ಪ್ರತಿಗಾಮಿ... ಆದರೆ ಬಲು ದೊಡ್ಡ ಲೇಖಕ."

ಈ ಎರಡೂ ಪ್ರಸಂಗಗಳನ್ನೂ ನಾವು ಆಧುನಿಕ ಪರಿಸರದಲ್ಲಿಟ್ಟು ಹೀಗೆ ವೃತ್ತಾಂತೀಕರಿಸಬಹುದು. ಕೃಷ್ಣನಂಥ ಒಬ್ಬಾತ ತುಂಬ ಕಷ್ಟ ಕಾರ್ಪಣ್ಯ, ಹತಾಶೆಗೊಳಗಾಗಿದ್ದ ತನ್ನ ಒಬ್ಬ ಆಪ್ತನಿಗೆ ಹೀಗೆ ಹುರಿದುಂಬಿಸಬಹುದು : "ನಿನ್ನ ಪಾಲಿನ ಆಸ್ತಿಗೆ ಯಜಮಾನನಾಗಿರುವ ನಿನ್ನ ಅಣ್ಣ ಮೋಸಗಾರ, ದುಂದುಗಾರ, ಅಧರ್ಮಿ, ನೀನಾದರೋ ಹೆಂಡತಿ, ಮಕ್ಕಳು ಮರಿ ಇರುವ ಸಂಸಾರಿ. ಆದರೆ ವ್ಯವಹಾರದಲ್ಲಿ ಅಮಾಯಕ. ನಿನ್ನ ಆಸ್ತಿಯ ಪಾಲನ್ನು ಅವನು ಅನ್ಯಾಯದಿಂದ ಒಳಹಾಕಿಕೊಂಡಿದ್ದಾನೆ. ಅವನನ್ನು ಉಪಾಯಾಂತರದಿಂದ ನೀನು ಕೊಲ್ಲು, ಅದು ಅಧರ್ಮವಾಗದು, ಅಲ್ಲದೆ, ನಾನು ಸುಪ್ರಸಿದ್ಧ ವಕೀಲ. ನಿನ್ನನ್ನು ಕಾನೂನಿನ ನೇಣುಗಂಬದಿಂದ ಉಳಿಸಬಲ್ಲೆ. ಅನುಮಾನವಿದ್ದರೆ ನಾನು ನ್ಯಾಯಾಲಯದಲ್ಲಿ ಗೆದ್ದಿರುವ ಇಂಥ ಮೊಕದ್ದಮೆಗಳ ಪಟ್ಟಿಯನ್ನೇ ನೋಡು." ಇದು ಭಗವದ್ಗೀತೆಯ ಪ್ರಸಂಗದ ಇಂದಿನ ಅವತರಣಿಕೆ. ಹಾಗೆಯೇ ಸಮಾಜಕಂಟಕನಾದ ದುಷ್ಟನೊಬ್ಬನನ್ನು ಸದುದ್ದೇಶಕ್ಕಾಗಿ ಕೊಂದು ಪೋಲೀಸರ ಎಲ್ಲ ವಿಧದ ತನಿಖೆಯಲ್ಲೂ ಪತ್ತೆಯಾಗದೆ ತನ್ನ ಒಳತೋಟಿಯ ಮೂಲಕ ಅಂತಃಪ್ರೇರಣೆಯಿಂದ ನಿವೇದನೆ ಮಾಡಿಕೊಂಡು ಶಿಕ್ಷೆಯನ್ನು ಸ್ವೀಕರಿಸುವ ಆಧುನಿಕ ಯುವಕನನ್ನೂ ಕಲ್ಪಿಸಿಕೊಳ್ಳಬಹುದು. ಈ ಎರಡು ಅವತರಣಿಕೆಗಳೂ ಅಷ್ಟೇನೂ ಅಪರೂಪವಲ್ಲ. ಅಂತೆಯೇ ಈ ಎರಡೂ ಕೃತಿಗಳ ದೇಶ ಕಾಲಾತೀತ ಮಹತ್ವ.

ಈ ಸಂದರ್ಭದಲ್ಲಿ ಥಿಯೋಡರ್ ದ್ರೇಜರನ 'ಆನ್ ಅಮೆರಿಕನ್ ಟ್ರಾಜೆಡಿ' ನೆನಪಿಗೆ ಬರುವುದು ಸಹಜ. ಅಲ್ಲಿನ ಹೀರೋ ತನ್ನ ಪ್ರೇಯಸಿಯನ್ನು ತನ್ನ ಪ್ರಾಪಂಚಿಕ ಪ್ರಗತಿಗಾಗಿ ಕೊಲೆ ಮಾಡಿದನೇ ಎಂಬುದು ಅನುಮಾನಾಸ್ಪದ. ಆದರೆ ಮಾಡಲು ಆಲೋಚಿಸಿರುತ್ತಾನೆ. ಅವಳು ಸತ್ತಿರುತ್ತಾಳೆ. ಅವನಿಗೆ

ಶಿಕ್ಷೆಯಾಗುತ್ತದೆ. ದ್ರೇಜರನ ತಾತ್ಪರ್ಯ, ಅಪರಾಧಿ ಸಮಾಜ; ವ್ಯಕ್ತಿ ಯಜ್ಞಪಶು. ಇದು ಅಮೆರಿಕದ ಬಂಡವಾಳಶಾಹಿ ಸಮಾಜದ ಭರ್ತ್ಸನೆ.

ಹಿಂಸೆಯನ್ನು ಸ್ಫಟಿಕ ಸ್ಪಷ್ಟವಾಗಿ ಸಮರ್ಥಿಸುವ ಭಗವದ್ಗೀತೆಯಲ್ಲಿ ಅಹಿಂಸೆಯ ಸಂದೇಶವನ್ನು ಕಂಡುಕೊಂಡು ಗಾಂಧೀಜಿಯ ವ್ಯಾಖ್ಯಾನದ ವಕೀಲಿ ಚಾತುರ್ಯವನ್ನು ಕಂಡು ನಾವು ಕೌತುಕಪಡಬಹುದಷ್ಟೇ!

■

# ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?

–ಕುವೆಂಪು

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?
ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?
ಎಂದೊ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು?
ನಿನ್ನೆದೆಯ ದನಿಯೆ ಋಷಿ! ಮನು ನಿನಗೆ ನೀನು!

ನೀರಡಸಿ ಬಂದ ಸೋದರಗೆ ನೀರನು ಕೊಡಲು
ಮನುಧರ್ಮಶಾಸ್ತ್ರವೆನಗೊರೆಯಬೇಕೇನು?
ನೊಂದವನ ಕಂಬನಿಯನೊರಸಿ ಸಂತೈಸುವೊಡೆ
ಶಾಸ್ತ್ರ ಪ್ರಮಾಣವದಕಿರಲೆ ಬೇಕೇನು?

ಪಂಚಮರ ಶಿಶುವೊಂದು ಕೆರೆಯಲ್ಲಿ ಮುಳುಗುತಿರೆ
ದಡದಲ್ಲಿ ಮೀಯುತ್ತ ನಿಂತಿರುವ ನಾನು
ಮುಟ್ಟಿದರೆ ಬ್ರಹ್ಮತ್ವ ಕೆಟ್ಟುಹೋಗುವುದೆಂದು
ಸುಮ್ಮನಿದ್ದರೆ ಶಾಸ್ತ್ರಸಮ್ಮತದೇನು?

ಅಂತು ಮನು ತಾನು ಹೇಳಿರಲಾರನಯ್ಯಯ್ಯೋ!
ಹೇಳಿದ್ದರವನನೂ ಶಾಸ್ತ್ರದೊಳೆ ಸುತ್ತಿ,
ಸ್ವರ್ಗ ಹೋಗಲಿ, ಮತ್ತೆ ನರಕ ಬಂದರು ಬರಲಿ,
ಎದೆಯ ಧೈರ್ಯವ ಮಾಡಿ ಬಿಸುಡಾಚೆಗೆತ್ತಿ

ಸ್ವರ್ಗ ಹೋಗುವುದಿಲ್ಲ, ನರಕ ಬರುವುದು ಇಲ್ಲ;
ಸ್ವರ್ಗ ನರಕಗಳೇನು ಶಾಸ್ತ್ರಸ್ಥವಲ್ಲ.
ಎದೆಯ ದನಿ ಧರ್ಮನಿಧಿ! ಕರ್ತವ್ಯವದುವೆ ವಿಧಿ!
ನಂಬದನು; ಅದನುಳಿದು ಋಷಿಯು ಬೇರಿಲ್ಲ!

ಹಿಂದಿನಾ ಋಷಿಗಳೂ ಮಾನವರೆ ನಮ್ಮಂತೆ,
ಅವರ ಶಾಸ್ತ್ರವು ಅವರ ಕಾಲಕ್ಕೆ ಮಾತ್ರ;
ಕಾಲಕ್ಕೆ ತಕ್ಕಂತೆ, ದೇಶಕ್ಕೆ ತಕ್ಕಂತೆ,
ನಮ್ಮ ಹೃದಯವೆ ನಮಗೆ ಶ್ರೀಧರ್ಮಸೂತ್ರ!

■

# ಬೆಂಕಿ ಮಳೆ

– ಬಾನು ಮುಷ್ತಾಕ

ಬೆಳಗಿನ ಆಜಾನ್‌ದ ಕರೆ ಮಸೀದಿಯಿಂದ ಬರುತ್ತಿದ್ದಂತೆಯೇ ಮುತವಲ್ಲಿ ಉಸ್ಮಾನ್ ಸಾಹೇಬರು ಹಾಸಿಗೆಯಿಂದ ಎದ್ದು ಕುಳಿತು. ಪಕ್ಕದಲ್ಲಿ ಮಡದಿ ಆರಿಫ ಇಲ್ಲದಿರುವುದನ್ನು ಗಮನಿಸುತ್ತಾ ಹೊರಗಡೆಯ ಹಜಾರಕ್ಕೆ ಕಾಲಿಟ್ಟರು. ಹಜಾರದ ಮ್ಯಾಟ್‌ನ ಮೇಲೆ ಆಕೆಯೂ ಅವರ ಮಗ ಅನ್ಸರ್ ಇಬ್ಬರೂ ಅಸ್ತವ್ಯಸ್ತ ಸ್ಥಿತಿಯಲ್ಲಿ ಗಾಢ ನಿದ್ರೆಯಲ್ಲಿ ಮುಳುಗಿದ್ದರು. ಮೂರು ವರ್ಷದ ಪುಟ್ಟ ಅನ್ಸರ್‌ನ ಉಸಿರಾಟದ ಗತಿ ಸರಿ ಇಲ್ಲವೆಂದು ಮೇಲು ನೋಟಕ್ಕೆ ಕಾಣುತ್ತಿತ್ತು. ಅವನ ಹಣೆಯ ಮೇಲಿದ್ದ ತಣ್ಣೀರಿನ ಬಟ್ಟೆ, ಪಕ್ಕದಲ್ಲೇ ಚದುರಿದ್ದ ಹಾಲಿನ ಪಾತ್ರೆ, ಲೋಟ, ಚಮಚ, ನೀರಿನ ಜಗ್, ಬಿಸಿ ನೀರಿಟ್ಟಿದ್ದ ಫ್ಲಾಸ್ಕ್ ಎಲ್ಲವೂ ಅವರಿಗೆ ಅರ್ಥವಾಯಿತು. ರಾತ್ರಿಯಿಡೀ ಜಾಗರಣೆ ಮಾಡಿದ್ದ ಆರಿಫ ಮೈಮೇಲಿನ ಪ್ರಜ್ಞೆ ಇಲ್ಲದೆ ಮಲಗಿರುವುದು.... ಅದೂ ಹಾಲ್‌ನಲ್ಲಿ... ಅವರಿಗೆ ಚುಚ್ಚಿದಂತಾಯಿತು. ಒಮ್ಮೆಲೇ ಜಾಗೃತವಾದ ಪ್ರಜ್ಞೆಯಲ್ಲಿ ಪಕ್ಕದ ಕೋಣೆಯಲ್ಲಿ ಅವರ ಕೊನೆಯ ತಂಗಿ ಜಮೀಲಾ ಮತ್ತು ಅವಳ ಪತಿ ಮಲಗಿರುವುದು ನೆನಪಾಗಿ ಆತಂಕವಾಯಿತು. ಒಂದು ಚಾದರವನ್ನು ತಂದು ಈಕೆಗೆ ಹೊದಿಸಲೇ ಎಂದುಕೊಂಡವರು ಜಮೀಲಾಳ ಗಂಡನನ್ನು ನೆನೆಸಿಕೊಂಡು ಮೈ ಮುಖವನ್ನೆಲ್ಲಾ ಗಂಟು ಹಾಕಿಕೊಂಡು ಒರಟಾಗಿ ಅವಳನ್ನು ಅಲುಗಿಸಿದರು. ಆ ಅಲುಗಾಟಕ್ಕೂ ಏಳದ ದಣಿವಿನ ನಿದ್ರೆ ಅವಳದ್ದು. ಸರ್ರನೆ ಅವರ ಕೋಪವೇರಿತು.

....ಅವರ ಮನದ ಮೂಲದಲ್ಲಿ ಫಕೀರನೊಬ್ಬ ಹಾಡುತ್ತಿದ್ದ ತತ್ವಪದ ಮೊಳೆಯಿತು.

ಹಂದಿಯೆಂದೇಕೆ ಹೀಗಳೆಯುವೆ
ಮನದಲ್ಲಿ ಹಂದಿ, ಮನೆಯಲ್ಲಿ ಹಂದಿ
ಮೈಯಲ್ಲಿ ಹಂದಿ ಹೊತ್ತವನೇ....

ಹಂದಿಯ ಮಾಂಸವು ಮುಸ್ಲಿಮರಿಗೆ ಹರಾಮ್. ಅದರಂತೆಯೇ ಕೋಪವೂ ಕೂಡ. ಹರಾಮ್ ಹಂದಿಯನ್ನ ಕಂಡ ಮಾತ್ರದಿಂದಲೇ ಅಪವಿತ್ರರಾದಂತೆ ಎಗರಾಡುವ ಮುಸ್ಲಿಮರ ಮನದಲ್ಲಿ, ಮೈಯಲ್ಲಿ, ಮನೆಯಲ್ಲಿ

ಸರಿದಾಡುವ ಕೋಪವನ್ನು ಹಂದಿಯೊಡನೆ ಸಮೀಕರಿಸುವ ಈ ತತ್ವಪದವನ್ನು ಅನೇಕ ಬಾರಿ ಅವರು ಕೂಡ ಹಾಡಿಕೊಂಡಿದ್ದುಂಟು. ಆದರೆ ಈವತ್ತು ಅವರಿಗೆ ವಿನಾಕಾರಣ ಬಂದ ಕೋಪದೆದುರು, ಆ ತತ್ವ ಪದವು ಮರೆಯಾಯಿತು. ತೊಣಚಿ ಹೊಕ್ಕಂತೆ ಒಂದೆರಡು ಬಾರಿ ಎಗರಾಡಿದ ಅವರು ಏನೋ ಹೊಳೆದಂತೆ ಆರಿಫಳ ಕಾಲುಗಳನ್ನು ಬಲವಾಗಿ, ಒರಟಾಗಿ ತುಳಿದರು..... ಆರಿಫಳ ನಿದ್ರೆ ಹರಿಯಿತು. ಅವಳು ಸಟಕ್ಕನೆ ಎದ್ದು ಕುಳಿತಳು.

'ಒಳಗೆ ಮಲಗಿಕೊಳ್ಳೋದಿಕ್ಕೇನು ನಿನಗೆ?' ಎಂದು ಕರ್ಕಶವಾಗಿ, ಝಾಡಿಸಿ, ಅವಳ ಉತ್ತರಕ್ಕೂ ಕಾಯದೆ ಬೀದಿಗಿಳಿದರು.

ಅವರ ಮನೆಯಿಂದ ಮಸೀದಿ ಒಂದು ಫರ್ಲಾಂಗ್ ದೂರವಿದ್ದಿತು. ಬೆಳಗಿನ ಜಾವದ ಇಬ್ಬನಿಯ ತೆರೆಗಳನ್ನು ಭೇದಿಸುತ್ತ ಅವರು ಮುಂದಡಿಯಿಟ್ಟರು. ಮಸೀದಿಯುತ್ತ ದೇಹ ಚಲಿಸುತ್ತಿದ್ದರೂ ಮನಸ್ಸು ಮಾತ್ರ ಮನೆಯತ್ತಲೇ ಅದೂ ರಾತ್ರಿಯ ಘಟನೆಯತ್ತಲೇ ತೊಯ್ದಾಡುತ್ತಿತ್ತು.

ಅವರ ಅತ್ಯಂತ ಪ್ರೀತಿಯ ಕೊನೆ ತಂಗಿ.... ಯಾವಾಕೆಗೆ ಅವರು ಅತ್ಯಂತ ಪ್ರೀತಿಯಿಂದ ಎಸ್ಸೆಸ್ಸೆಲ್ಸಿವರೆಗೆ ಓದಿಸಿದ್ದರೋ.... ಯಾವಾಕೆಗೆ ಹದಿನೆಂಟು ರೇಷ್ಮೆ ಮತ್ತು ಜರಿ ಸೀರೆ ನೀಡಿ, ಬಂಗಾರದ ಒಡವೆ ಇಟ್ಟು ಆಕೆಯ ಗಂಡನಿಗೆ ಮೋಟಾರ್ ಬೈಕ್ ಕೊಟ್ಟು ಈಗೆ, ಐದು ವರ್ಷದ ಹಿಂದೆ ಮದುವೆ ಮಾಡಿದ್ದರೋ ಆ ತಂಗಿ, ನೆನ್ನೆ ಬಂದುದಷ್ಟೇ ಅಲ್ಲದೆ ಬಿರ್ಯಾನಿ, ಶಾವಿಗೆಯೆಲ್ಲಾ ಕಹಿಯಾಗುವಂತೆ ಆಸ್ತಿಪಾಲು ಕೇಳಿದ್ದಳಲ್ಲ.... ಆಂ....? ಇದೆಂಥ ನಡವಳಿಕೆ, ಅವರ ಮೈ ಮತ್ತೊಮ್ಮೆ ಕೋಪದಿಂದ ಉರಿದು ಹೋಯಿತು.

ಅದರ ಮೇಲೆ ಮಾತಿಗೆಂಥ ಮಾತು ಜೋಡಿಸಿದಳು...! 'ಅಣ್ಣ.. ಇದು ಅಲ್ಲಾಹ್ ಮತ್ತು ಪ್ರವಾದಿಯವರ ಶರೀಯತ್‌ನಿಂದ ನನಗೆ ಬಂದಿರುವ ಹಕ್ಕು. ನೀವು ದುಡಿದಿರುವ ಆಸ್ತಿಯಲ್ಲಿ ನಾನು ಪಾಲು ಕೇಳ್ತಿಲ್ಲ...' ತಾನು ದುಡಿದಿರುವುದಾದರೂ ಏನು? ಅಪ್ಪ ಮಾಡಿದ ಆಸ್ತಿಯನ್ನು ಬರೀ ರೂಢಿಸುತ್ತಿರುವುದು ತಾನೆ?

'ನಮ್ಮ ತಂದೆಯ ಆಸ್ತಿಯಲ್ಲಿ ಆರನೆ ಒಂದು ಭಾಗ ನನ್ನದಾಗುತ್ತದೆ.' ಓಹೋ!... ಎಲ್ಲಾ ಲೆಕ್ಕಾಚಾರ ಹಾಕಿಕೊಂಡೆ ಬಂದಿದ್ದಾಳೆ. 'ತಗೋ....

ನಿನ್ನ ಆರನೆ ಒಂದು ಭಾಗ' ಎಂದು ಕಪಾಳಕ್ಕೆ ಬಿಗಿಯಬೇಕೆನ್ನಿಸತು. ಆದರೆ ದೇಹವಿಡೀ ವ್ಯಾಪಿಸಿ ಎಗರಾಡುತ್ತಿದ್ದ ಹಂದಿಯ ಆಟಾಟೋಪವನ್ನು ಅವರು ಪ್ರಯತ್ನಪಟ್ಟು ಬಿಗಿಯಾಗಿ ತಡೆದರು. ಇಲ್ಲವಾದಲ್ಲಿ ಇಷ್ಟೆಲ್ಲಾ ಹಚ್ಚಿಕೊಟ್ಟು ಅವಳ ಅಂಗರಕ್ಷಕನಾಗಿ ಆರಡಿ ಎತ್ತರದ ಬಲಿಷ್ಠನಾದ ಅವಳ ಗಂಡ ಪಕ್ಕದಲ್ಲಿಯೇ ಕುರ್ಚಿಯಲ್ಲಿ ಕುಳಿತಿದ್ದಾನಲ್ಲ...

ನೀವು ಇಷ್ಟೆಲ್ಲಾ ಮೊಹಲ್ಲದ ಪಂಚಾಯ್ತಿ ತೀರ್ಮಾನಗಳನ್ನು ಮಾಡುವವರು. ನೀವೇ ನಮ್ಮನ್ನು ಕರೆದು.... 'ತಗೋ ನಿನ್ನ ಪಾಲನ್ನು' ಅಂತ ಅನ್ಬೇಕಾಗಿತ್ತು. ನನ್ನ ವಿಚಾರವಂತೂ ಹೋಗ್ಲಿ... ಸಕೀನ ಅಕ್ಕನದ್ದೇಳಿ... ಇತ್ತ ಗಂಡನೂ ಇಲ್ಲ.... ಅತ್ತ ದುಡಿಯುವ ಗಂಡು ಮಕ್ಕಳೂ ಇಲ್ಲ. ಬೆಳೆದು ನಿಂತಿರುವ ಇಬ್ಬರು ಹೆಣ್ಣು ಮಕ್ಕಳ ಮದುವೆಯನ್ನಾದರೂ ಅವಳೂ ಹೇಗೆ ಮಾಡಬೇಕು?

ಮುತವಲ್ಲಿ ಸಾಹೇಬರು ನೆಲವನ್ನೇ ಗಮನವಿಟ್ಟು ನೋಡುತ್ತಿದ್ದರು. ಇದೇನಾಶ್ಚರ್ಯ ಜಮೀಲ ಇಷ್ಟೊಂದು ಮಾತಾಡುತ್ತಿದ್ದಾಳೆ. ತಾನು ಮಾತಾಡದೆ ಕುಳಿತದ್ದಾದರೂ ಹೇಗೆ....? ಅವರ ಕಣ್ಣ ಮುಂದೆ ಮಾವಿನ ತೋಟ, ತೆಂಗಿನ ತೋಟ, ಗದ್ದೆ... ರೇಷ್ಮೆ ಬೆಳೆಸಿದ್ದ ಹೊಲಗಳು ನಗರದಲ್ಲಿ ರಾರಾಜಿಸುತ್ತಿದ್ದ ಮನೆಗಳು ಇವಿಷ್ಟು ಹಾದು ಹೋದವು. ಇವುಗಳಲ್ಲಿ ಯಾವುದನ್ನು ತಮ್ಮ ನಾಲ್ವರು ತಂಗಿಯರೊಡನೆ ಹಂಚಿಕೊಳ್ಳುವುದು?

ಜಮೀಲ ಒಂದೇ ಸಮನೆ ಕಪ್ಪೆಯಂತೆ ಒಟಗುಟ್ಟುತ್ತಿದ್ದಳು. 'ಅಣ್ಣಾ... ನೀವು ನನ್ನ ಮದುವೆ ಒಳ್ಳೇ ಕಡೇನೇ ಮಾಡಿದೀರಿ... ನಾನು ಇಲ್ಲಾ ಅನ್ನೋಲ್ಲಾ... ಆದರೆ ನೀವೇ ಆಲೋಚಿಸಿ! ಅಪ್ಪ ಸತ್ತು ಹತ್ತು ವರ್ಷ ಆಗಿ ಹೋಯಿತಲ್ಲ... ಆವಾಗಲೇ ನನ್ನ ಪಾಲನ್ನು ನೀಡಿದ್ದರೆ ಈ ವೇಳೆಗಾಗಲೇ ನನ್ನ ಮದುವೆಗೆ ಆದ ಖರ್ಚಿನ ಹತ್ತು ಪಾಲಿನಷ್ಟು ಸಂಪಾದನೆ ನನಗೆ ಆಗುತ್ತಿತ್ತು. ನಾನು ಅದೆಲ್ಲಾ ಲೆಕ್ಕ ಕೇಳುತ್ತಿಲ್ಲ. ಆದರೆ...."

ಮುತವಲ್ಲಿ ಸಾಹೇಬರ ಸಹನೆಯ ಕಟ್ಟೆಯೊಡೆಯಿತು. ಆರಿಫ ಬಾಗಿಲ ಮರೆಯಲ್ಲಿ ನಿಂತು, ಆತಂಕದಿಂದ ಎಲ್ಲವನ್ನೂ ಕೇಳಿಸಿಕೊಳ್ಳುತ್ತಿದ್ದಳು. ಜಮೀಲಾಳ ಮಾತು, ಧ್ವನಿ, ವಾದ ಎಲ್ಲವೂ ಅವಳಿಗೆ ಕೆಟ್ಟದೆನಿಸುತ್ತಿತ್ತು. ಆದರೆ, ಅವಳ ಬೇಡಿಕೆಯಲ್ಲಿ ನ್ಯಾಯವಿತ್ತಲ್ಲಾ.... ಅದನ್ನು ಯಾರು ತಾನೆ ನಿರಾಕರಿಸಲು ಸಾಧ್ಯ? ಮುತವಲ್ಲಿ ಸಾಹೇಬರಿಗೆ ತಿಂಗಳಿಗೆ ನಾಲ್ಕು ಸಾವಿರ

ರೂಪಾಯಿ ಬಾಡಿಗೆ ತರುವ ಮನೆ ಮತ್ತು ಕಾಫಿ ತೋಟವು ಅವಳ ತವರಿನವರು ಅವಳಿಗೆ ನೀಡಿದ ಪಾಲಿನಿಂದ ಬಂದದ್ದೇ ಅಲ್ಲವೇ? ಅದನ್ನು ಆರಿಫ ಬೇಡದೆ ಪಡೆದದ್ದು. ಅವಳ ತವರಿನವರು ಅವಳನ್ನೂ ಮುತವಲ್ಲಿ ಸಾಹೇಬರನ್ನೂ ಕರೆಸಿ, ಒಳ್ಳೆಯ ಊಟಹಾಕಿ, ಅವಳಿಗೆ ಹೊಸ ಸೀರೆ ರವಿಕೆಯನ್ನು ಉಡಿಸಿ, ಆಸ್ತಿಯನ್ನು ಅವಳ ಹೆಸರಿಗೆ ನೋಂದಾಯಿಸಿದ ಪತ್ರವನ್ನು ನೀಡಿ ವಿಶ್ವಾಸದಿಂದ ಬೀಳ್ಕೊಂಡಿದ್ದರು. ಅದನ್ನೇ .... ಜಮೀಲಾ ಈಗ ಹೋರಾಡಿ ಪಡೆಯಬೇಕು.

ಮುತವಲ್ಲಿ ಸಾಹೇಬರು ಏನನ್ನೂ ಮಾತಾಡದೆ ಹೂಂಕರಿಸಿ ಎದ್ದು ನಿಂತರು, ಜಮೀಲಾಳನ್ನೊಮ್ಮೆ ದುರುಗುಟ್ಟಿ ನೋಡಿದರು. ಅಣ್ಣನ ಈ ಅವತಾರವನ್ನು ನೋಡಿ ಅವಳು ಕೂಡ ಸ್ವಲ್ಪ ಬೆದರಿದಳು. ಗಂಡನನ್ನೊಮ್ಮೆ ನೋಡಿ, ಅಲ್ಪಸ್ವಲ್ಪ ಧೈರ್ಯವನ್ನು ಕೂಡಿಸಿಕೊಂಡು, ಬಾಯಿಪಾಠ ಮಾಡಿದವಳಂತೆ, 'ನೀವು ನನ್ನ ನ್ಯಾಯಬದ್ಧ ಪಾಲನ್ನು ನೀಡದಿದ್ದರೆ, ನಾನು ಕೋರ್ಟಿನ ಮೂಲಕ ಪಡೆದುಕೊಳ್ಳಬೇಕಾಗುತ್ತದೆ' ಎಂದು ಕೊನೆಯದಾಗಿ ಒದರಿಬಿಟ್ಟಳು. ಅವಕ್ಕಾದರೂ ಒಂದೇ ಒಂದು ಮಾತನಾಡದೆ ಮುತವಲ್ಲಿ ಸಾಹೇಬರು ದಾಪುಗಾಲಿಡುತ್ತ ತಮ್ಮ ಮಲಗುವ ಕೋಣೆಯನ್ನು ಸೇರಿ ಬಿಟ್ಟರು. ಪರದೆಯ ಹಿಂದೆ ನಿಂತಿದ್ದ ಆರಿಫ ಅವರ ಅಘಾತದ ನಡಿಗೆಗೆ ಬೆದರಿ, ಕೂಡಲೇ ಸರಿದು ಜಾಗ ಮಾಡಿಕೊಟ್ಟಳು.

ಮುತವಲ್ಲಿ ಸಾಹೇಬರು ಟೋಪಿಯನ್ನು ಕೂಡ ತಲೆಯಿಂದ ಸರಿಸದೆ ಮಂಚದ ಮೇಲೆ ವಿಗ್ರಹದಂತೆ ಕುಳಿತರು. ಹಣೆಯ ಮೇಲೆ ಬೆವರಿನ ಹನಿಗಳು ಮೂಡಿದವು. ಅವಳು ಕೂಡಲೇ ಫ್ಯಾನಿನ ಸ್ವಿಚ್ಚನ್ನು ಒತ್ತಿದಳು.

.....ಈ ಘಟನೆಯ ಎಲ್ಲಾ ವಿವರಗಳು ಒಡನೆ ಅವರ ಮನದೆದುರು ಸುಳಿದು ಮಾಯವಾಯಿತು. ಚಳಿಗಾಲವಾಗಿದ್ದರಿಂದ ಮಸೀದಿಯ ಹಿಂದಿನ ಬಚ್ಚಲು ಮನೆಯಲ್ಲಿ ನೀರು ಕುದಿಯುತ್ತಿತ್ತು. ಅಭ್ಯಾಸ ಬಲದಿಂದ ಅವರು ಯಾಂತ್ರಿಕವಾಗಿ ಎಲ್ಲಾ ಕ್ರಿಯೆಗಳನ್ನು ಮುಗಿಸಿದರು. ಕೊನೆಗೆ ನಮಾಜ್ ಕೂಡ... ದೇಹಶುದ್ಧಿ ಮಾಡಿಕೊಂಡಿದ್ದರೂ ಮನಃಕ್ಲೇಶ ಮಾತ್ರ ಹಾಗೆಯೇ ಉಳಿದಿತ್ತು. ಜಮೀಲಾಳ ಉದ್ಧಟತನ ಅತಿರೇಕ ಒಂದೆಡೆಯಾದರೆ ಆಸ್ತಿಯನ್ನು ಹಂಚಿಕೊಳ್ಳುವ ಖೇದ ಇನ್ನೊಂದೆಡೆ ಅವರನ್ನು ಕಾಡುತ್ತಿತ್ತು. ಅವಳನ್ನು ಶಿಕ್ಷಿಸಿ ಆಸ್ತಿಯನ್ನು ಇಡಿಯಾಗಿ ಹೇಗೆ ಉಳಿಸಿಕೊಳ್ಳಬೇಕೆಂಬುದೇ ಅವರ ಮುಖ್ಯ ಸಮಸ್ಯೆಯಾಗಿತ್ತು. ಮಸೀದಿ ವಿಶಾಲವಾಗಿತ್ತು. ಬೆಳಗಿನ ಜಾವದಲ್ಲಿ

ನಮಾಜಿಗೆ ಬಂದಂತಹವರು ಬೆರಳಿಕೆಯಷ್ಟು ಜನ ಮಾತ್ರ. ಅದರಲ್ಲಿ ಆಪ್ತ ವಲಯಕ್ಕೆ ಸೇರಿದವರು ಯಾರೂ ಇರಲಿಲ್ಲ. ಹೀಗಾಗಿ ಅನಿವಾರ್ಯವಾಗಿ ಮನೆಯತ್ತ ಹೊರಟರು.

ಆದರೂ ಯಾಕೋ ಮನೆಯತ್ತ ಹೆಜ್ಜೆ ಹಾಕಲು ಅವರಿಗೆ ಮನಸ್ಸು ಬರಲಿಲ್ಲ. ಬಲು ನಿಧಾನವಾಗಿ ನಡೆದು ಅವರು ಸರ್ಕಲ್ಲಿನ ಬಳಿಗೆ ಬರುವಷ್ಟು ಹೊತ್ತಿಗೆ ಮದೀನ ಹೋಟೆಲ್ಲು ಬಾಗಿಲು ತೆರೆದಿತ್ತು. ಒಳಹೊಕ್ಕು ಚಹ ಸೇವಿಸಿದರೂ ಅವರಿಗೆ ಹಾಯೆನಿಸಲಿಲ್ಲ. ಹೋಟೆಲಿನಿಂದ ಹೊರಬಿದ್ದ ಅವರು ಅತ್ಯಂತ ನಿರುತ್ಸಾಹಕ ಭಂಗಿಯಲ್ಲಿ ಸರ್ಕಲ್ಲಿನ ಮಧ್ಯಭಾಗಕ್ಕೆ ಬಂದು ಪೋಲೀಸಿನವನ ಸ್ಥಾನದಲ್ಲಿ ನಿಂತರು. ಟ್ರಾಫಿಕ್ ನಿಯಂತ್ರಿಸಲು ಶೀಟಿ ಊದಿ ಬೆರಳು ತೋರಲಿಲ್ಲ. ಅಷ್ಟೇ! ಅಲ್ಲಿ ನಿಂತು ನಾಲ್ಕು ಕಡೆಯೂ ಒಮ್ಮೆ ದೃಷ್ಟಿ ಹಾಯಿಸಿದರು. ಯಾವ ದಿಕ್ಕಿಗೆ ಹೋಗಬೇಕೆಂದು ನಿಶ್ಚಯಿಸಲಾರದ ಅವರ ಭಂಗಿಯ ಕರುಣಾಜನಕವಾಗಿತ್ತು. ಅಷ್ಟರಲ್ಲಿ ಅಘಟಿತ ಘಟನೆಯೊಂದು ನಡೆದು ಹೋಯಿತು. ಡಬ್ ಎಂಬ ಶಬ್ದ ಕೇಳಿ ತಿಳಿಯುವಷ್ಟರಲ್ಲಿಯೇ.... ಅವರು ಬಂದ ಹಾದಿಯಲ್ಲಿದ್ದ ಎಲೆಕ್ಟ್ರಿಕ್ ತಂತಿಗಳ ಮೇಲಿನಿಂದ ಒಂದು ಕಾಗೆಯು ಮರದಿಂದ ಒಣ ಎಲೆ ಉದುರುವಂತೆ ಕೆಳಗೆ ಬಿದ್ದಿತು. ಕೆಲವೇ ಮಾರುಗಳ ದೂರದಲ್ಲಿ ನಡೆದ ಘಟನೆಯನ್ನು ನೋಡಿದ ಮುತವಲ್ಲಿ ಸಾಹೇಬರು ಅಲ್ಲಿಂದ ಹೊರಡಲು ಸಿದ್ಧರಾಗುತ್ತಿದ್ದಂತೆಯೇ ಅದೆಲ್ಲಿಂದ ಬಂದಿತೋ ಒಂದು ಕಾಗೆಯು 'ಕಾ... ಕಾ....' ಎಂದಿತು. ಅಷ್ಟೇ! ಆ ದನಿ ಮಾರ್ದನಿಯಾಗತೊಡಗಿತು. ಅದ್ಯಾವ ಮಾಯೆಯಲ್ಲಿ ಅಷ್ಟೊಂದು ಕಾಗೆಗಳು ಕೂಡಿದವೋ... ಕೆಲವೊಂದು ಧ್ವನಿಗಳು ಅತ್ಯಂತ ಕರುಣಾಜನಕವಾಗಿವೆಯೆಂದು ಅವರಿಗೆ ಅನ್ನಿಸತೊಡಗಿತು. ಕೆಲವೊಂದು ಆಕ್ರೋಶದಿಂದ ಕೂಡಿರುವಂತೆ ದೂರನಿಂತು... ಉದಾಸೀನವಾಗಿ ಕರ್ತವ್ಯ ನಿರ್ವಹಿಸುತ್ತಿರುವಂತೆ ಇನ್ನೂ ಕೆಲವು ಶಾಪದ ನಿಟ್ಟುಸಿರಿನಂತೆ.... ಬಿಡುಗಡೆಯ ಕಹಳೆಯಂತೆ... ಅದುಮಿಟ್ಟ ಸಂತಸದ ಉಲಿಯಂತೆ ಹೀಗೆ ಏನೇನೋ ಅನ್ನಿಸತೊಡಗಿ ಇಲ್ಲಿಂದ ಪಾರಾಗಬೇಕು ಎಂದು ಅವರು ನಿಶ್ಚಯಿಸುವಷ್ಟರಲ್ಲಿಯೇ ಇನ್ನೂ ಕೆಲವು ಕುಕ್ಕುವಂತೆ ಅವರ ಮೇಲಿಂದ ಎರಗತೊಡಗಿದವು. ಗಾಬರಿಯಿಂದ ಅವರು ಮುಂದಡಿಯಿಟ್ಟರು. ಹಾಗೆಯೇ ಕಡೆಗಣ್ಣಿನಿಂದ ನೋಟವೊಂದು ಹರಿಸಿದಾಗ ನಿಶ್ಚೇಷ್ಟಿತವಾದ ಕಾಗೆ.... ಅರೆ!.... ಕಡುಗಪ್ಪಿನಲ್ಲೂ ಇಷ್ಟೊಂದು ಕಾಮನಬಿಲ್ಲಿನ ಬಣ್ಣಗಳಿವೆಯೇ...

ಅನ್ಯಮನಸ್ಕರಾಗಿಯೇ ಮನೆ ತುಂಬಿದ ಮುತವಲ್ಲಿ ಸಾಹೇಬರು ತಮ್ಮ ಕೋಣೆಯನ್ನು ಸೇರಿದಾಕ್ಷಣ ಅವರಿಗೆ ನಿದ್ರೆಯಾವರಿಸಿತು. ಆರಿಫ ಮನೆಕೆಲಸದಲ್ಲಿ ನಿರತಳಾಗಿದ್ದಳು ಇತ್ತ. ಕಾಯಿಲೆಯ ಮಗನನ್ನೊಮ್ಮೆ ಉಪಚರಿಸಿದರೆ ಇನ್ನೊಂದೆಡೆ ಶಾಲೆಗೆ ಹೋಗುವ ಮಕ್ಕಳಿಗೆ ತಿಂಡಿ, ಊಟ, ಸ್ಕೂಲ್ ಬ್ಯಾಗ್, ಶೂ ಸಾಕ್ಸ್ ಎಂದು ಹೋರಾಡುತ್ತ, ಮತ್ತೊಂದೆಡೆ ಜಮೀಲ ಮತ್ತವಳ ಗಂಡನಿಗಾಗಿಯೂ ವಿಶೇಷ ಅಡಿಗೆಗಾಗಿ ಸಿದ್ಧತೆಯನ್ನೂ ನಡೆಸುತ್ತಿದ್ದಳು. ಒಟ್ಟಿನಲ್ಲಿ ಮನೆಯ ಮಗಳು ಬೇಸರಪಟ್ಟುಕೊಂಡು ಶಪಿಸಿ ಹೋಗುವುದು ಅವಳಿಗೆ ಬೇಕಿರಲಿಲ್ಲ. ಅವಳಿಗೆ ತನ್ನ ತಾಯಿಯ ಮಾತು ನೆನಪಿಗೆ ಬಂದಿತು. 'ಹಕ್‌ದಾರ ತರ್‌ಸೆತೂ ಅಂಗಾರ್ ಕಾ ನ್ಹೂ ಬರ್‌ಸೆ' (ಹಕ್ಕುದಾರ ಮೊರೆ ಇಟ್ಟಲ್ಲಿ ಬೆಂಕಿ ಮಳೆ ಬಂದೀತು).

ಹಿಂದಿನ ರಾತ್ರೆ ಅವಳು ಅತ್ಯಂತ ಕೆಲದನಿಯಲ್ಲಿ ಮುತವಲ್ಲಿ ಸಾಹೇಬರಿಗೆ ತಿಳಿಸಿದ್ದಳು ಕೂಡ. 'ರೀ.... ಮನೆಮಗಳನ್ನು ನೋಯಿಸಬೇಡಿ. ಕುರಾನ್‌ನಲ್ಲಿ ಸ್ಪಷ್ಟವಾಗಿಯೇ ಹೆಣ್ಣು ಮಕ್ಕಳ ಪಾಲು ಇಂತಿಷ್ಟು ಕೊಡಬೇಕು ಅಂತ ಇದೆಯಲ್ಲಾ ನಿಮ್ಮ ನಾಲ್ವರು ತಂಗಿಯರೂ ಕರೆಸಿಕೊಂಡು ಅದೇನು ಕೊಡಬೇಕೋ ಕೊಟ್ಟು ಕೈ ತೊಳೆದುಕೊಳ್ಳಿ ನಮಗೆ ಇರುವಷ್ಟರಲ್ಲಿ ಅಲ್ಲಾಹ್ ಬರಕತ್ ಕೊಡ್ತಾನೆ.' ಆರಿಫ ಸಾಮಾನ್ಯವಾಗಿ ಅವರಿಗೆ ಸಲಹೆ ನೀಡುತ್ತಿರಲಿಲ್ಲ. ಒಳಗೊಳಗೇ ಆಕೆಗೆ ಅಧೈರ್ಯವೆನಿಸಿದ್ದರೂ... ಇಷ್ಟೊಂದು ಮಾತನಾಡಿ ಬಿಟ್ಟಿದ್ದಳು ಮುತವಲ್ಲಿ ಸಾಹೇಬರು ನೂರಾರು ತೀರ್ಮಾನಗಳನ್ನು ಮಾಡಿದ್ದವರು. ಅವರಿಗೆ ತಿಳಿಯದ ಹೊಸ ವಿಚಾರವನ್ನೇನಾದರೂ ಇವಳು ಹೇಳುತ್ತಿದ್ದಾಳೆಯೇ....? ಹೆಣ್ಣು ಹೆಂಗಸಿನ, ಬುರ್ಖಾದಲ್ಲಿರುವ ಯಃಕಶ್ಚಿತ್ ಹೆಣ್ಣಿನ ಮಾತು ಅವರಿಗೆ ಹೇಗೆ ತಾನೇ ರುಚಿಸೀತು? 'ನೀನು ತೆಪ್ಪಗೆ ನಿನ್ನ ಕೆಲಸ ನೋಡು' ಎಂದು ಗುರುಗುಟ್ಟಿ ಅವರು ಗೊರಕೆ ಹೊಡೆದಿದ್ದರು.

ಚಪಾತಿ ಲಟ್ಟಿಸುತ್ತಿದ್ದ ಆರಿಫ ಅತ್ಯಂತ ಚಿಂತಾಕ್ರಾಂತಳಾಗಿದ್ದಳು. ಯಾ... ಪರ್‌ವರ್‌ದಿಗಾರ್. ಇವರಿಗೆ ಸದ್ಬುದ್ಧಿಯನ್ನು ನೀಡು...' ಎಂಬ ಮೊರೆಯೊಂದು ಅವಳ ಹೃದಯದಿಂದ ಹೊರಟಿತು. ಅನ್ಸರ್‌ಗೆ ಅವಳು ಆಗ ತಾನೇ ಹಣೆಯ ಮೇಲೆ ಒದ್ದೆ ಬಟ್ಟೆಯನ್ನಿಟ್ಟು ಬಂದಿದ್ದಳು. ಆಕೆ ಯಾಂತ್ರಿಕವಾಗಿ ಚಪಾತಿ ಲಟ್ಟಿಸುತ್ತ ಆಗಾಗ್ಗೆ ಕಾವಲಿಯ ಮೇಲಿದ್ದ ಚಪಾತಿಯನ್ನು ಹೊರಳಿಸಿತ್ತಾ ಇದ್ದರೂ ಯಾಕೋ ಒಮ್ಮೆಲೆ ಅನ್ಸರ್ ನರಳಿದಂತೆನ್ನಿಸಿ ಅವಳು ದಿಗ್ಗನೆದ್ದು ಅವನನ್ನು ಮಲಗಿಸಿದ್ದ ಹಜಾರಕ್ಕೆ ಬಂದಳು.

ಆಗಲೇ ಆರಿಫಳ ಕಣ್ಣಿಗೆ ಬಿದ್ದದ್ದು.... ಆ ಹೆಂಗಸು. ಆಕೆ ಬುರ್ಕಾ ಹಾಕಿಕೊಂಡಿತು ಮುಖದ ಮೇಲೆ ನಿಕಾಬ್ ಇಳಿಬಿಟ್ಟಿದ್ದರೂ ಆರಿಫಗೆ ಕೂಡಲೇ ಅವಳ ಗುರುತು ಸಿಕ್ಕಿತು. ಅಲ್ಲಲ್ಲೇ ತೂತುಗಳಿದ್ದ ಕಪ್ಪು ಬಣ್ಣ ಹೋಗಿ ಕಂದು ಬಣ್ಣಕ್ಕೆ ತಿರುಗಿದ್ದ ಬುರ್ಕಾದೊಳಗಿನಿಂದ ಕೊಳೆಯಾದ ಸೀರೆಯೊಂದು ಇಣುಕುತ್ತಿತ್ತು. ಒಡೆದ ಹಿಮ್ಮಡಿ, ಬಣ್ಣ ಕಳೆದುಕೊಂಡ ಚರ್ಮ ಸೇಫ್ಟಿಪಿನ್ ಚುಚ್ಚಿ ರಿಪೇರಿ ಮಾಡಿದ್ದ ಹವಾಯಿ ಚಪ್ಪಲಿ ಎಲ್ಲವನ್ನೂ ಒಂದೇ ನೋಟದಲ್ಲಿ ಗ್ರಹಿಸಿದ ಆರಿಫ ಆ ಹೆಂಗಸಿನ ದೈನ್ಯಾವಸ್ಥೆಯಿಂದ ಸ್ವತಃ ನಾಚಿ ಹೋದಳು. ಅಷ್ಟೇ ಅಲ್ಲದೇ.... ಬಂದಾಕೆ ಒಳಗೆ ಕೂಡಬಾರದೆ ವರಾಂಡದಲ್ಲಿಯೇ.. ಅದೂ ಮುತವಲ್ಲಿ ಸಾಹೇಬರನ್ನು ಕಾಣಲು ಬರುವ ಅನೇಕ ಗಂಡಸರ ನಡುವೆ ಮೂಲೆಯುಲ್ಲಿ ನಿಂತದ್ದನ್ನು ಕಂಡು ಅವಳ ಗಂಟಲು ಉಬ್ಬಿ ಬಂದಿತು. ವರಾಂಡಕ್ಕೂ ಹಜಾರಕ್ಕೂ ನಡುವೆ ಇಳಿಬಿದ್ದ ಪರದೆಯ ಹಿಂದೆ ನಿಂತು, ಬಂದಾಕೆಗೆ ಮಾತ್ರ ಕೇಳಿಸುವಷ್ಟು ಕೆಳದನಿಯಲ್ಲಿ ಉಸುರಿದಳು. 'ಸಕೀನ ಅಕ್ಕ.... ನಿಮ್ಮದಮ್ಮಯ್ಯ! ಅಲ್ಲೇಕೆ ನಿಂತುಕೊಂಡಿದೀರಿ.... ಒಳಗೆ ಬನ್ನಿ'

ಅವಳಿಗೆ ಕೇಳಿಸಿತೋ... ಇಲ್ಲವೋ ಬುರ್ಕಾದ ತೆರೆ ಅವಳ ಮೇಲಿದ್ದುದರಿಂದ ಮುಖದ ಭಾವ ಆರಿಫಗೆ ಗೊತ್ತಾಗಲಿಲ್ಲ. ಆದರೆ ಅವಳ ಪಕ್ಕದಲ್ಲಿದ್ದ ಯುವಕ ಮಾತ್ರ 'ಪರವಾಗಿಲ್ಲ....ಮಾಮಿ, ನಿಮ್ಮ ಕೆಲಸ ಮಾಡಿ ಹೋಗಿ, ಮಾಮ ಬಂದರೆ ನಾವು ಮಾತಾಡಿ ಹೋಗ್ತೀವಿ....' ಎಂದು ನಿರ್ದಯವಾಗಿ ನುಡಿದ.

ಸಕೀನ... ಅವಳ ಹಿರಿಯ ನಾದಿನಿ, ಅತ್ಯಂತ ಸ್ವಾಭಿಮಾನಿ. ವಿಧವೆಯಾದ ಮೇಲೆ ಕೂಡ ತನ್ನ ಮೂರು ಮಕ್ಕಳನ್ನು ಕಟ್ಟಿಕೊಂಡು ಟೈಲರಿಂಗ್ ಮಾಡುತ್ತ ಸಂಸಾರ ನಡೆಸಿದವಳು. ತವರು ಮನೆಯ ಒಂದು ಹನಿ ನೀರಿನ ಆಸೆಯನ್ನೂ ಇಟ್ಟವಳಲ್ಲ. ಯಾವಾಗಲಾದರೂ ಹಬ್ಬಕ್ಕೆ ಬಂದು ಅಣ್ಣನ ಕಾಲಿಗೆ ನಮಸ್ಕರಿಸಿ ಹೋಗುವಳು ಇಂದು.... ಇಷ್ಟೊಂದು ಪರಕೀಯಳಾಗಿ ನಾಲ್ಕು ಜನರಂತೆ ಅವರ ಸಾಲಿನಲ್ಲಿ ನಿಂತಿದ್ದಾಳೆ. ಇವಳೂ ಕೂಡ ಜಮೀಲಾಳೊಡನೆ ಮಸಲತ್ತು ನಡೆಸಿ ಪಾಲು ಕೇಳಲು ಬಂದಿರುವಳೇ" ಎಂದೆನಿಸಿದರೂ ಆರಿಫ ಕೂಡಲೇ ಆ ವಿಚಾರವನ್ನು ಬದಿಗೊತ್ತಿ, ಸಕೀನಳನ್ನು ಮತ್ತೊಮ್ಮೆ ಒಳಗೆ ಕರೆದಳು. ಹೇಗಾದರಾಗಲೀ... ಗಂಡ ಎದ್ದು ಹೊರ ಬರುವ ವೇಳೆಗಾದರೂ ಸಕೀನಾಳನ್ನು ಹಜಾರದೊಳಗಾದರೂ ಕರೆದು ಕೂರಿಸಬೇಕೆಂಬ ಅವಳ ಸನ್ನಾಹ ವಿಫಲವಾಯಿತು.

ಮೈ ಸ್ವಲ್ಪ ಭಾರವೆನಿಸಿದರೂ ಸುಖನಿದ್ರೆ ತಿಳಿದೆದ್ದು ಬಂದ ಮುತವಲ್ಲಿ ಸಾಹೇಬರು. ಎಂದೂ ಇಲ್ಲದೆ ಇಂದು ಆರೀಫ ವರಾಂಡದಲ್ಲಿರುವ ಜನರನ್ನು ಇಣಿಕಿ ನೋಡಿ. ಸನ್ನೆ ಮಾಡುತ್ತಿರುವುದನ್ನು ಕಂಡು ಅಪ್ರತಿಭರಾದರು. ಅವರಿಗರಿವಿಲ್ಲದಂತೆಯೇ ಅವರ ದನಿ ಏರಿತು.

'ಆರೀಫ....?'

ಅವಳು ತಬ್ಬಿಬಾಗಿ ಪರದೆ ಇಳಿಬಿಟ್ಟು ಸರಿದಳು. ತನ್ನಲ್ಲಿ ತಾನೇ ಎಂಬಂತೆ ಗೊಣಗಿಕೊಂಡಳು.

'ಅಲ್ಲಿ ಗಂಡಸರ ಜೊತೇಲಿ ಸಕೀನ ಅಕ್ಕ ಹೊರಗಿನವರಂತೆ ನಿಂತ್ಕೊಂಡಿದ್ದಾರೆ. ಒಳಗೆ ಬನ್ನಿ ಅಂತ ಕರೀತಾ ಇದ್ದೆ.

'ಏನೂ....?' ಎಂದು ಪ್ರಶ್ನಿಸಿದ ಮುತವಲ್ಲಿ ಸಾಹೇಬರು ಹೊರಗಡಿ ಇಟ್ಟು ಸಕೀನಾಳನ್ನು ಅವಳ ಮಗನನ್ನೂ ನೋಡಿದವರೇ ಕೆಂಪೇರಿ ಹೋದರು.

ಆದರೆ ಸಕೀನ ಮಾತ್ರ ಅತ್ಯಂತ ಅಪರಿಚಿತ ದನಿಯಲ್ಲಿ ಕೈ ಮುಗಿದು ಬೇಡಿಕೊಳ್ಳುತ್ತಾ ನುಡಿದಳು 'ಬಾಯಿಸಾಬ್ ನನ್ನಂಥ ನಿರ್ಗತಿಕ ವಿಧವೆಗೆ ಸಹಾಯ ಮಾಡಿ. ಅಲ್ಲಾಹ್ ನಿಮಗೆ ಮತ್ತು ನಿಮ್ಮ ಕುಟುಂಬಕ್ಕೆ ಸುಖ ಸಮೃದ್ಧಿಯನ್ನು ನೀಡುತ್ತಾನೆ. ನನ್ನ ಮಗ ಈಗ ಬಿ.ಎ. ಮೊದಲನೆ ವರ್ಷದಲ್ಲಿದ್ದಾನೆ. ಇಂಜಿನಿಯರಿಂಗ್ ಕಾಲೇಜಿನಲ್ಲಿ ಅವನಿಗೆ ಈ ದಿನ ಅಟೆಂಡರ್ ಕೆಲಸದ ಇಂಟರ್‌ವ್ಯೂ ಇದೆ. ತಾವು ಕೂಡ ಆ ಕಮಿಟಿಯ ಸದಸ್ಯರು ಅಂತ ತಿಳೀತು. ನನ್ನ ಮಗನ ಹೆಸರು ಸಯ್ಯದ್ ಅಬ್ರಾರ್, ಅಂತ ದಯವಿಟ್ಟು ತಾವು ನೆನಪಿನಿಂದ ಈ ಕೆಲಸ ಮಾಡಿಸಿಕೊಡಿ. ಅರ್ಜಿ... ಇಲ್ಲಿದೆ ನೋಡಿ ನನ್ನ ಮಗನಿಗೆ ಈ ಕೆಲಸ ಸಿಕ್ಕಿದರೆ... ನನ್ನಂಥ ನತದೃಷ್ಟೆಯ ಮಗನಾಗಿದ್ದಕ್ಕೆ ನಮ್ಮ ಕುಟುಂಬಕ್ಕೆ ದಿಕ್ಕಾಗುತ್ತಾನೆ. ಎಲ್ಲರೂ ಹೇಳ್ತಾರೆ... ತಾವೊಂದು ಮಾತು ಹೇಳಿದರೆ ಈ ಕೆಲಸ ಖಂಡಿತವಾಗಿಯೂ ಸಿಗುತ್ತೇಂತ. ನಾವು ಬಡವರ ಕಷ್ಟ ಸುಖವನ್ನು ಹಂಚಿಕೊಳ್ಳುವವರು. ನನ್ನ ಮೇಲೆ ತಾವು ಕೃಪೆ ಮಾಡಬೇಕು...' ಎಂದು ಮುತವಲ್ಲಿ ಸಾಹೇಬರು ಸಾವರಿಸಿಕೊಳ್ಳುವುದಕ್ಕೆ ಮೊದಲೇ ಅವರ ಕೈಗೆ ಅರ್ಜಿಯನ್ನು ಕೊಟ್ಟು, ಅವರ ಕಾಲಿಗೆ ನಮಸ್ಕರಿಸಿ ಹೊರಟೇಬಿಟ್ಟಳು.

ಮುತವಲ್ಲಿ ಸಾಹೇಬರ ಮನಸ್ಸಿನಲ್ಲಿ ಕಾಗೆಗಳು ಅರಚಾಡತೊಡಗಿದವು. ಮೋರೆ ಇನ್ನಷ್ಟು ಕೆಂಪಾಯಿತು. ಚಳಿಯಲ್ಲೂ ಹಣೆಯ ಮೇಲೆ ಬೆವರಹನಿಗಳು ಮೂಡಿದವು. ದೊಪ್ಪನೆ ಕುರ್ಚಿಯೊಂದರ ಮೇಲೆ ಕುಸಿದು ಕುಳಿತರು. ಪರದೆಯ ಹಿಂದೆ ನಿಂತಿದ್ದ ಆರಿಫಳ ಕಣ್ಣುಗಳು ಹನಿಗೂಡಿದವು.

ಬಾಗಿಲ ಬಳಿ ನಿಂತಿದ್ದ ಹೆಣ್ಣು ಮಗಳೊಬ್ಬಳು, ಎಳೆಯ ಕೂಸನ್ನು ಎದೆಗವಚಿ ನಿಂತಿದ್ದಳು. ತಲೆಯ ಮೇಲೆ ಸೆರಗನ್ನು ಸರಿಪಡಿಸಿಕೊಂಡು ಅವರಿಂದ ಸ್ವಲ್ಪ ದೂರ ಸರಿದು ನಿಂತು ಹೇಳಿದಳು.

'ಅಣ್ಣಾವ್ರೇ... ಈ ಮಗುವಿನ ತಂದೆ.... ಎತ್ತಿನಗಾಡಿ ಇಟ್ಟಿದ್ದರು. ಹದಿನೈದು ದಿನಗಳ ಹಿಂದೆ ಆಪರೇಷನ್ ಆಯಿತು ಅವರಿಗೆ.... ಎತ್ತು ಗಾಡಿ ಎರಡನ್ನೂ ಮಾರಿ ಆಪರೇಷನ್ ಮಾಡಿಸಿದೆ. ಈಗ ಮತ್ತೊಂದು ಅರ್ಜೆಂಟ್ ಆಪರೇಷನ್ ಆಗಬೇಕಂತೆ! ಹಾಗಂತ ಡಾಕ್ಟ್ರು ಹೇಳಿದರು. ಈವಾಗ ನನ್ನ ಹತ್ತಿರ ಏನೂ ಇಲ್ಲ. ನೀವು .....ನೀವು' ಅವಳ ಕಂಠ ಬಿಗಿಯಿತು. ಕಣ್ಣು ಮಂಜಾಯಿತು. ತಡೆದು ತಡೆದು ಬಿಕ್ಕಲಾರಂಭಿಸಿದಳು.

ಆಸ್ಪತ್ರೆಯ... ವೈದ್ಯರು... ಹೆಸರು ವಿವರಗಳನ್ನು ಕೇಳಿ ಪಡೆದ ಮುತವಲ್ಲಿ ಸಾಹೇಬರು ಆಕೆಯ ಗಂಡನ ಆಪರೇಷನ್ನಿಗೆ ವ್ಯವಸ್ಥೆ ಮಾಡುವುದಾಗಿ ಹೇಳಿ ಸಾಗಹಾಕಿದರು. ಕೃತಜ್ಞತೆಯನ್ನು ಸೂಚಿಸುತ್ತಾ ಹೃದಯದಾಳದಿಂದ ಹರಸಿ ಹೋದಳು.

ಶಾಲೆಯ ಹುಡುಗನೊಬ್ಬ ನೋಟ್ ಬುಕ್ಕನ್ನು ಅವರೆದುರಿಗೆ ಚಾಚಿದ. ಹೈಯರ್ ಪ್ರೈಮರಿ ಶಾಲೆಯ ಮುಖ್ಯೋಪಾಧ್ಯಾಯಿನಿ ತಮ್ಮ ದುಂಡನೆಯ ಬರವಣಿಗೆಯಲ್ಲಿ ಆ ದಿನ ಮಧ್ಯಾಹ್ನ ಮೂರು ಗಂಟೆಗೆ ಶಾಲಾಭಿವೃದ್ಧಿ ಸಮಿತಿಯ ಸಭೆಗೆ ಅಧ್ಯಕ್ಷರಾದ ಮುತವಲ್ಲಿ ಸಾಹೇಬರು ಆಗಮಿಸಿ ಕೃತಾರ್ಥರನ್ನಾಗಿಸಬೇಕೆಂದು ಕೋರಿದ್ದರು. ಅದಕ್ಕೆ ಸಹಿ ಹಾಕಿ ಕಳುಹಿಸಿದ ಅವರು, ಇನ್ನೇನು ಅಲ್ಲಿದ್ದ ನಾಲ್ಕೈದು ಗಂಡಸರತ್ತ ತಿರುಗಿ. ಅವರ ಅಹವಾಲನ್ನು ಕೇಳಬೇಕೆನ್ನುವಷ್ಟರಲ್ಲಿಯೇ ಬಿರುಗಾಳಿಯಂತೆ ಬಂದೆರಗಿದ... ದಾವೂದ್.

ದಾವೂದ್... ಅವರ ಬಲಗೈ ಬಂಟ. ಅವರ ಉಸಿರಾಟದಷ್ಟೇ ಅಗತ್ಯವಾದ ಅವರ ದೇಹದ ಅನೈಚ್ಛಿಕ ಕ್ರಿಯೆಯಂತಾಗಿದ್ದ ಅವ. ಅವರಿಬ್ಬರ ಮನೋಲೋಕದ ತರಾಂಗಾಂತರಂಗಗಳು ಒಂದೇ ದಿಕ್ಕಿನತ್ತ ಓಡುತ್ತಿದ್ದುದು

ಅವರ ಬೆಸುಗೆಗೆ ಸಾಕ್ಷಿ. ಮುತವಲ್ಲಿ ಸಾಹೇಬರ ಮುಖದ ಏರಿಳಿತ, ಅವರ ಹುಬ್ಬಿನ ರೇಖಾಂಶ, ಅಕ್ಷಾಂಶಗಳೂ, ಮೀಸೆಯ ಕೂದಲಿನ ನಿಮಿರುವಿಕೆ. ಮೂಗಿನ ಹೊಳ್ಳೆಗಳು, ತುಟಿಗಳ ಮೂಲೆಗಳ ಬಿರಿತ ಇವಿಷ್ಟರಿಂದಲೇ ಅವರ ಇಂಗಿತವನ್ನು ಅವರ ಮೂಲೋದ್ದೇಶವನ್ನು ಅರಿಯುವ ಪ್ರಾವಿಣ್ಯತೆ ಅವನಲ್ಲಿತ್ತು. ಅದಕ್ಕೆ ತಕ್ಕಂತೆ ಬೇಕಾದ ಮಾತು, ವಿನಯ, ನಡುಬಗ್ಗಿಸುವಿಕೆ. ಕಬಳಿಸುವಿಕೆ, ನಿರ್ಲಜ್ಜತನ, ಅಭಿಮಾನ ಶೂನ್ಯತೆ ಎಲ್ಲವೂ ಇದ್ದವು. ಎಂದ ಮೇಲೆ.....

'ಬೆಳಗಿನ ನಮಾಜ್‌ಗೂ ಬಂದಿರಲಿಲ್ಲ. ಹಾಳಾದವ ಈಗ ಬಂದಿದ್ದಾನೆ. ಎಲ್ಲಿ ಸತ್ತು ಬಿದ್ದಿದ್ದನೋ...' ಎಂದು ಹಲ್ಲುಕಡಿದರೂ ತೋರಿಕೆಯ ಶಾಂತತೆಯಿಂದ ಪ್ರಶ್ನಿಸಿದರು.

'ಎಲ್ಲಿ ಹೋಗಿದ್ದೀರಿ ದಾವೂದ್ ಸಾಹೇಬರೇ.... ನಿಮ್ಮ ಪತ್ತೆಯೇ ಇರಲಿಲ್ಲವಲ್ಲ...!'

ದಾವೂದ್‌ಗೆ ಅವರ ಪ್ರಶ್ನೆ, ಭಾವ ಎರಡೂ ಅರ್ಥವಾಯಿತು. ಅವನು ಒಳಗೊಳಗೇ ನಗುತ್ತಾ ಮೇಲೆ ವಿನಯವನ್ನು ನಟಿಸುತ್ತ. "ಅಸ್ಸಲಾಮ್-ವ-ಅಲೈಕುಮ್ ಮುತವಲ್ಲಿ ಸಾಹೇಬರೇ...' ಎಂದು ನಮಸ್ಕರಿಸಿ ಕುಳಿತ.

ಮುತವಲ್ಲಿ ಸಾಹೇಬರು ಮಸೀದಿ ಕಮಿಟಿಯ ಅಧ್ಯಕ್ಷರಾಗಿದ್ದರಷ್ಟೇ ಅಲ್ಲದೆ ರಾಜಕೀಯದಲ್ಲೂ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಮುಸ್ಲಿಮರ ಓಟನ್ನು ಸಾರಾ-ಸಗಟಾಗಿ ಕೊಡಿಸುವ ಸಾಮರ್ಥ್ಯ ಅವರಿಗಿದೆ ಎಂಬ ಭ್ರಮೆಯನ್ನು ಅವರು ಹೊಂದಿದ್ದು, ಆ ನಂಬಿಕೆಗೇ ಆತುಕೊಂಡಿದ್ದ ಅನೇಕ ಮತಾಕಾಂಕ್ಷಿಗಳು ಅವರ ಮನೆಯನ್ನು ತಪ್ಪದೆ ಭೇಟಿ ಮಾಡುತ್ತಿದ್ದರು. ಹೀಗಾಗಿ ಬೆಳಗಿನ ಹೊತ್ತು ಅನೇಕ ಜನರು ಅವರ ಮನೆಯ ಬಾಗಿಲಲ್ಲಿ ಹಾಜರಿರುತ್ತಿದ್ದರು. ಇಂದು ಸಕೀನಾ ಕೂಡಾ ಅವರನ್ನು 'ಅಣ್ಣಾ' ಎಂದು ಬಾಂಧವ್ಯ ಗುರುತಿಸುವ ಬದಲು, ರಾಜಕೀಯ ವ್ಯಕ್ತಿ ಎಂದು ಸಹಾಯ ಬೇಡಿದ್ದಳು; ಹಾಗೂ ಅಷ್ಟೇ ಪರಕೀಯಳಾಗಿ ವರ್ತಿಸಿ ಅವರ ಮನಸ್ಸನ್ನು ಘಾಸಿಗೊಳಿಸಿದ್ದಳು. ಮುತವಲ್ಲಿ ಸಾಹೇಬರು ಕುಳಿತಿದ್ದವರತ್ತ ಒಂದು ನೋಟವನ್ನು ಹರಿಸಿದರು.

ಇನ್ನೂ ಅನೇಕ ಜನರು ತಮ್ಮ ಸರದಿಗಾಗಿ ಕಾಯುತ್ತಿದ್ದರು. ಆದರೆ ಮುತವಲ್ಲಿ ಸಾಹೇಬರಿಗೆ ದಾವೂದ್‌ನೊಂದಿಗೆ ತುರ್ತು ಕೆಲಸವಿದ್ದಿತು. ಹೀಗಾಗಿ

ಅವರು ಚಡಪಡಿಕೆಯಿಂದ ಬೆಂಚಿನ ಮೇಲೆ ಕುಳಿತಿದ್ದ ನಾಲ್ಕಾರು ಜನರತ್ತ ನೋಡಿ ಏಳಲುದ್ಯುಕ್ತರಾದರು. ವಯಸ್ಸಾಗಿದ್ದ ಸಾಬ್ಜಾನ್ ಬೆಳ್ಳಗಾಗಿದ್ದ ಹುಬ್ಬುಗಳಡಿಯಿಂದ ಪೊರೆ ಬಂದಿದ್ದ ಕಣ್ಣುಗಳ ಮಂದ ದೃಷ್ಟಿಯಿಂದ ಎಡತಾಕುತ್ತ ಮುಂದೆ ಬಂದ 'ಸಾಬ್... ಸಾಬ್... ನನ್ನ ಕೊನೇ ಮಗಳಿಗೆ ಮದುವೆ... ಮುಂದಿನ ವಾರವೇ ಇದೆ. ನನ್ನಲ್ಲಿ ಕಾಸಿಲ್ಲ. ನೀವು ದೊಡ್ಡ ಮನಸ್ಸು ಮಾಡ್ಬೇಕು. ಅವಳ ಮದುವೆಯೊಂದಾಗಿ ಬಿಟ್ರೆ ನಾನು ಸಮಾಧಾನದಿಂದ ಕಣ್ಮುಚ್ತೀನಿ... ಮಾಯಿ ಚಾಪ್!.... ನನ್ನಂಥ ಮುದುಕನಿಗೆ ನೀವೇ ದಯೆ ತೋರ್ಬೇಕು..." ಎಂದು ಮುತವಲ್ಲಿ ಸಾಹೇಬರ ಕಾಲಿಗೆ ಬೀಳಲು ಬಂದ.

'ಆಹ! ಮಗನೆ.... ಅದೆಷ್ಟೊಂದು ಮಕ್ಕಳ್ನ ಹುಟ್ಟಿಸಿದೀಯ.. ಕೊನೇ ಮಗಳಂತೆ!.... ಏನು ಅರವತ್ತನೇ ವಯಸ್ಸಿಗೆ ಹುಟ್ಟಿಸಿದೀಯಾ!... ಅಂತೂ ಕೊನೆಗೆ ಬಂದೆ ನೀನು ದಾರಿಗೆ...' ಎಂದು ಮನದ ಮೂಲೆಯ ಸೈತಾನ ಅಟ್ಟಹಾಸ ಬೀರಿದ. ಅವರ ಮನೋನೇತ್ರದೆದುರು ವಿಶಾಲವಾದ ಸೈಟು ಮತ್ತು ಅದರ ಮಧ್ಯದಲ್ಲಿದ್ದ ಮುರುಕಲು ಮನೆ ಗೋಚರಿಸಿದವು. ಅವರು ಆ ಸೈಟಿನ ಮುಂದೆ ಹಾದು ಹೋದಾಗಲ್ಲೆಲ್ಲಾ ಅಲ್ಲಿ ಕಟ್ಟಬಹುದಾದ ಷಾಪಿಂಗ್ ಕಾಂಪ್ಲೆಕ್ಸಿನ ಯೋಜನೆಯೊಂದು ಅವರ ಮನಸ್ಸಿನಲ್ಲಿ ಹಾದು ಹೋಗುತ್ತಿತ್ತು.

"ಈಗ ನನ್ನಿಂದ ಏನಾಗಬೇಕು ಸಾಬ್ಜಾನ್ ಚಿಕ್ಕಪ್ಪ...?" ಎಂದು ಅಮಾಯಕರಾಗಿ ಕೇಳಿದರು.

'ಏನೂ... ಇಲ್ಲ..." ಅನುಮಾನಿಸುತ್ತ ಒಂದು ಕ್ಷಣ ತಡೆದು ಸಾಬ್ಜಾನ್ ಮುಂದುವರೆಸಿದ, "ಅಲ್ಲಾಹ್‌ನ ಅನುಗ್ರಹ ತಮ್ಮ ಮೇಲಿರಲಿ... ನನಗೆ... ನನಗೆ..., ಈ ಮದುವೆಗೆ ಕಡಿಮೆ ಎಂದರೆ ನಲವತ್ತು ಸಾವಿರ ರೂಪಾಯಿ ಬೇಕು..."

ಮುತವಲ್ಲಿ ಸಾಹೇಬರು ಬೆಚ್ಚಿಬಿದ್ದಂತೆ ನಟಿಸಿದರು.

"ಅಂ... ನಲವತ್ತು ಸಾವಿರ ರೂಪಾಯಿ... ಏನು ಮಾಡೋದು... ಎಲ್ಲಿಂದ ತರೋದು..."

ಮುತುವಲ್ಲಿ ಸಾಹೇಬರು ಧೀರ್ಘಾಲೋಚನೆಯಲ್ಲಿ ತೊಡಗಿದರು. ದಾವೂದ್ ಮೆಲ್ಲನೆ ಕೆಮ್ಮಿದ.

“ಅಣ್ಣಾವ್ರೆ... ಒದ್ವಿಚಾರ... ನಿಮ್ಮ ಗಮನಕ್ಕೆ ತರೋಣಾಂತ... ನಿಮಗೆ ಸ್ವಲ್ಪ ಬಿಡುವಾದ್ರೆ... ಅಲ್ಲಾ, ಪ್ರಪಂಚ ಎಲ್ಲಿಗೆ ಬಂತು... ನ್ಯಾಯ, ನೀತಿ, ಧರ್ಮ ಏನಾದರೂ ಉಳೀತಿದ್ಯಾ?...”

“ಅಂ... ಏನಾಯಿತು... ದಾವೂದ್...?”

“ನಿಮಗೆ ಗೊತ್ತೇ ಇಲ್ವ... ಈ ವಿಚಾರ... ಖಂಡಿತವಾಗಿಯೂ...?”

ಯಾರಿಂದಲೂ ಉತ್ತರ ಬಾರದೆ ಇದ್ದುದನ್ನು ಗಮನಿಸಿ ಅವನೇ ಮುಂದುವರಿಸಿದ.

“ಇಸ್ಲಾಮ್‌ನ ನಾಸ ಆಗಿ ಹೋಗ್ತಿದೆ ಅಣ್ಣಾವ್ರೇ... ಒಂಚೂರು ಕೂಡಾ ಮುಸಲ್ಮಾನರ ಗೌರವ ಉಳೀಲಿಲ್ಲ...”

ಅವನ ಪೀಠಿಕಯೇ ದೀರ್ಘವಾಗಿತ್ತು.

“ಅದೇನು ಹೇಳಬಾರ್ದೇ...? ಎಂದರು ಮುತವಲ್ಲಿ ಸಾಹೇಬರು ಅಸಹನೆಯಿಂದ.

“ಅಣ್ಣಾವ್ರೇ... ಲಾಳ ಹೊಡೀತಾನಲ್ಲ ಉಮರ್... ಅವನ ಎರಡನೇ ಮಗಳನ್ನು ನೆಲಮಂಗಲಕ್ಕೆ ಕೊಟ್ಟಿದ್ದಾರಲ್ಲ... ಆ ಹುಡುಗ ಇನ್ನೊಬ್ಬಳನ್ನು ಮದುವೆಯಾಗಿದ್ದ ನೋಡಿ... ಅವಳ ಅಣ್ಣ...”

“ಯಾವನ್ಲೇ... ಅವನು...?” ಎಂದರು ಮುತವಲ್ಲಿ ಸಾಹೇಬರು ಅಸಹನೆಯಿಂದ...

ಈ ಸಂಬಂಧಗಳ ಗೋಜಲನ್ನು ಬಿಡಿಸುವಷ್ಟು ತಾಳ್ಮೆ ಅವರಲ್ಲಿ ಉಳಿದಿರಲಿಲ್ಲ.

“ಅವನು ನಿಸಾರ್ ಅಂತ ಪೇಂಟರ್... ಮಸೀದಿಗೆ ಪೇಂಟ್ ಮಾಡ್ತೀನೀ ಅಂತ... ಇನ್ನೂರು ರೂಪಾಯಿ ಹೊಡ್ಕೊಂಡು ಹೋಗ್ಬಟ್ಟಿದ್ದ ನೋಡಿ... ಕಳೆದ ರಮಜಾನಿನಲ್ಲಿ...”

“ಹಾಂ!... ಹಾಂ...! ಗೊತ್ತಾಯ್ತುಬಿಡು...”

ಮುತವಲ್ಲಿ ಸಾಹೇಬರಿಗೆ ಎಲ್ಲಾ ನೆನಪಾಯ್ತು. ಮಸೀದಿಯ ದುಡ್ಡು ತಿಂದು ಹಾಕಿದ್ದಕ್ಕೆ ಅವನನ್ನು ಮರಕ್ಕೆ ಕಟ್ಟಿಸಿ ಬಾರುಕೋಲಿನಿಂದ ಬಡಿದದ್ದು ನೆನಪಾಯಿತು.

"ಅವ್ನು ಕೆರೇಲಿ ಬಿದ್ದು ಸತ್ಹೋಗಿದ್ದ.... ಆಗ್ಲೇ... ಒಂದೂವರೆ ತಿಂಗಳ ಹಿಂದೆ ಒಂದು ಶವ ಸಿಗ್ತು... ನೋಡಿ.. ಪೋಲೀಸಿನವರು ತೆಗೆದ್ರು..."

ಹಾಂ!... ಏನಾಯ್ತು ಅದರ ವಿಷಯ...?"

ಆಗೋದೇನು ಸರ್ವನಾಶವಾಗಿ ಹೋಯಿತು.

"ನಿಸಾರ್‌ನ ಶವವನ್ನು ಪೋಲೀಸಿನವರು ತಗೊಂಡ್ಹೋಗಿ ಹಿಂದೂಗಳ ಸ್ಮಶಾನದಲ್ಲಿ ಹೂತು ಹಾಕಿದ್ದಾರೆ..."

ಎದೆಗೆ ಗುಂಡು ಬಡಿದಂತೆ ದಾವೂದ್ ಮೆಲ್ಲನೆ ಉಸುರಿದ. ಎಲ್ಲಿಯಾದರೂ ಉಂಟೆ... ಇದುವರೆಗೂ ಎಲ್ಲಿಯಾದರೂ ಈ ತರದ ಘಟನೇ ಕೇಳಿದ್ದುಂಟೆ... ಮುತುವಲ್ಲಿ ಸಾಹೇಬರ ಎದೆ ಬಡಿತ ಒಂದು ಕ್ಷಣ ನಿಂತಂತಾಯಿತು. ಹಣೆಯ ಮೇಲೆ ನಿರಿಗೆಗಳು ಮೂಡಿದವು. ಅವರು ಬೆವರಲಾರಂಭಿಸಿದರು. ಬಂದಿದ್ದವರೆಲ್ಲಾ ತಮ್ಮ ತಮ್ಮ ಕೆಲಸಗಳನ್ನು ಮರೆತರು. ಸ್ವತಃ ಸಾಬ್ಜಾನ್ ಕೂಡ.... ಎದೆಯಾಳದಲ್ಲಿ ಎಷ್ಟೇ ಕೊರೆಯುತ್ತಿದ್ದರೂ ಮಗಳು ಮದುವೆಯ ವಿಷಯದ ಪ್ರಸ್ತಾಪವನ್ನೇ ಮಾಡಲಿಲ್ಲ. ಹಠಾತ್ತಾಗಿ ಬಂದೆರಗಿದ ಈ ಸುದ್ದಿ ಎಲ್ಲರನ್ನೂ ತತ್ತರಿಸುವಂತೆ ಮಾಡಿತ್ತು.

ಒಬ್ಬ ಮುಸ್ಲಿಮನ ಹೆಣ.... ಕಫನ್ ಇಲ್ಲದೆ ಗುಸುಲ್ ಇಲ್ಲದೆ, ಜನಾಜೆ ಕೀ ನಮಾಜ್ (ಹೆಣಕ್ಕೆ ಸದ್ಗತಿಯನ್ನು ಕೋರಿ ನಡೆಸುವ ಪ್ರಾರ್ಥನೆ) ಇಲ್ಲದಂತೆ ಖಬರಸ್ತಾನ್ ಬಿಟ್ಟು ಸ್ಮಶಾನದಲ್ಲಿ ಅತಂತ್ರವಾಗಿ ಹೂಳಲ್ಪಟ್ಟಿದೆಯೆಂದರೆ... ಮುತವಲ್ಲಿ ಸಾಹೇಬರ ಬುದ್ದಿಗೂ ಒಂದು ಪ್ರಶ್ನೆ ಹೊಳೆಯಿತು.

"ಏನೋ... ದಾವೂದ್... ನಿಸಾರ್‌ಗೆ ಖತ್ನ ಆಗಿರಲಿಲ್ಲ...?

ಸ್ವಲ್ಪ ಟೆಕ್ನಿಕಲ್ ಅಗಿ ಬಂದ ಈ ಪ್ರಶ್ನೆಗೆ ದಾವೂದ್ ಬಳಿ ಉತ್ತರ ಇರಲಿಲ್ಲ.

"ಛೇ...ಛೇ... ಆಗದೇ ಇರುತ್ತದೆಯೇ... ಈ ಪೋಲೀಸಿನವರಿಗೆ ಅಷ್ಟೆಲ್ಲಾ

ತಲೆ ಭಾರ ಯಾಕೆ ಬೇಕು? ಏನೂ ಒಂದು ಮುಗಿಸಿಬಿಟ್ಟು... ಕೈತೊಳೆದುಕೊಂಡರು... ಅಷ್ಟೇ..."

ಈಗ ಇನ್ನಷ್ಟು ಪ್ರಶ್ನೆಗಳು... ಕುತೂಹಲಗಳು... 'ಅದು ನಿಸಾರ್‌ದೇ ಹೆಣ ಎಂದು ಹೇಗೆ ಗೊತ್ತಾಯಿತು...."

"ಸುಮಾರು ದಿನಗಳವರೆಗೆ ಅವನು ನಾಪತ್ತೆಯಾದ ಮೇಲೆ ಅವನ ಹೆಂಡತಿ ಕಂಪ್ಲೇಂಟ್ ಕೊಡೋದಿಕ್ಕೆ ಹೋದಳು. ಆವಾಗ ಪೋಲೀಸ್ ಸ್ಟೇಷನ್ನಿನಲ್ಲಿ ಪೋಲೀಸ್ನೋರು ಬಟ್ಟೆ ತೋರಿಸಿದರು ಅದನ್ನು ಅವಳು ಗುರುತಿಸಿದಳು. ಆ ಮೇಲೆ ಫೋಟೋ ತೋರಿಸಿದರು... ಶವದ್ದು... ಅದು ಊದಿಕೊಂಡಿತ್ತು. ಆದರೂ ಅದೂ ಕೂಡ ನಿಸಾರ್‌ದೇ..."

"ಅಥವಾ...?"

"ಪೋಲೀಸ್ನೋರು ಬೇಕೂಂತ್ಲೇ ಮಾಡಿರಬಹುದು. ಅವರ್‌ಗೇನ್ ಗೊತ್ತಿಲ್ವ... ಈ ನಮ್ ಮಸೀದಿಗೆ ಬಂದು... ನಿಮ್ದೊಂದು ಹೆಣ ಬಿದ್ದೈತೆ ಅಂದ್ರೆ ಒಂದ್ ಕ್ಷಣದಲ್ಲಿ ಎತ್ಕೊಂಡ್ ಬಂದು ನಾವೇ ದಫನ್ ಮಾಡ್ತೌದಾಗಿತ್ತು..."

ಅನುಮಾನಿಸುತ್ತಾ ದಾವೂದ್ ನುಡಿದ.

ನನ್ಗೆ ಗೊತ್ತಾಗಿರೋ ಹಂಗೆ... ಆ ಶಂಕ್ರ ಖುದ್ದು ನಿಂತ್ಕೊಂಡು ಪೋಲೀಸ್ನೋರಿಗೆ ಹೇಳಿ ಮಶಾಣದಲ್ಲಿ ದಫನ್ ಮಾಡ್ತೌನಂತೆ..."

ಅಲ್ಲಿದ್ದವರಿಗೆಲ್ಲಾ ಆಘಾತವಾದಂತಾಯಿತು. "ಛೇ! ಇದೆಂತಹ ಕೇಡುಗಾಲ... ಕೆಲವರು ಸತ್ತಾಗ ಸಾವಿರಾರು ಮಂದಿ ಹೆಗಲು ಕೊಡೋಕೆ ತಯಾರಾಗಿರುತ್ತಾರೆ. ಅಂಥದ್ರಲ್ಲಿ... ಈ ನತದೃಷ್ಟ ಸತ್ತ ಮೇಲೆ ಕೂಡಾ ಒಂದು ಸರಿಯಾದ ಕಫನ್-ದಫನ್ ಕೂಡಾ ಇಲ್ಲವೆಂದ್ರೆ..."

ವರ್ಷಕ್ಕೆರಡು ಬಾರಿ ರಂಜಾನ್ ಮತ್ತು ಬಕ್ರೀದ್ ಹಬ್ಬದ ನಮಾಜ್‌ಗಳನ್ನು ಬಿಟ್ಟರೆ... ಇನ್ನೂ ಯಾವತ್ತೂ ಮಸೀದಿಗೆ ಕಾಲಿಡದ... ಮನೆಗಳಿಗೆ ಪೇಂಟ್ ಮಾಡ್ತೀನಿ ಎಂದು ಅಡ್ವಾನ್ಸ್ ಹಣ ಪಡೆದು ನೂರಾರು ಜನರಿಗೆ ವಂಚಿಸುತ್ತಿದ್ದ. ಸಿಕ್ಕಷ್ಟು ಹಣದಲ್ಲಿ ಸದಾ ಕುಡಿದು ತೂರಾಡುತ್ತಿದ್ದ... ಒಮ್ಮೆಯಂತೂ ಮಸೀದಿಗೆ

ಪೇಂಟ್ ಮಾಡ್ತೀನಿ ಎಂದು ಜಮಾತಿನ ಹಣವನ್ನು ತಿಂದಿದ್ದ ನಿಸಾರ್‌ನ ಹೆಣದ ವಿಧಿಬದ್ಧ ಅಂತ್ಯಕ್ರಿಯೆ ಈಗ ಅವರಿಗೆ ಅತ್ಯಂತ ಪವಿತ್ರ ಕರ್ತವ್ಯವಾಗಿ ಕಾಣತೊಡಗಿತು. ಅವನ ಹೆಣ ಹುತಾತ್ಮನಂತಹ ಮೆರಗು ಪಡೆಯಲಾರಂಭಿಸಿತು. (********************* ಸಾಹೇಬರಿಗೆ

ನಿಸಾರ್‌ನ ಹೆಣದ ************** ನಿವಾರಣೋಪಾಯವಾಗಿ ಕಂಡುಬಂದಿತು. ಆದರೂ *******)

"ಏನ್ಮಾಡೋಕಾಗುತ್ತಪ್ಪಾ... ಅವರವರು ಮಾಡಿದ್ದನ್ನ ಅವರವರು ಅನುಭವಿಸಲೇಬೇಕು..." ಎಂದರು. ದಾವೂದ್ ಆದಿಯಾಗಿ ಅಲ್ಲಿ ಸೇರಿದ್ದ ಎಲ್ಲಾ ಜನರೂ ಕೂಡ ಆಗಿ ಹೋಗಿರುವ ದುರಂತವನ್ನು ನೆನೆದು ತಲ್ಲಣಿಸುತ್ತಾ ಕಂಗೆಟ್ಟರು.

"ತೌಬೌ... ತೌಬೌ..." ಕೆನ್ನಗೆ ಬಡಿದುಕೊಳ್ಳುತ್ತಾ ಸಾಬ್ಜಾನ್ ಸಾಹೇಬರು ಹೇಳಿದರು. "ಸಾವು... ಎಲ್ಲರಿಗೂ ನಿಶ್ಚಿತ. ಆದರೆ ಯಾರಿಗೂ ಈ ರೀತಿಯ ಕೆಟ್ಟ ಸಾವು ಬರಬಾರದು. ಒಂದು ದರೂ ಇಲ್ಲ... ಸಲಾಮ್ ಇಲ್ಲ.. ನಾಳೆ ನಮ್ಮ ಹೆಣಾನೂ ಹೀಗೇನೇ ಯಾರು ಎಲ್ಲಿ ಬೇಕೋ ಅಲ್ಲಿ... ಅವರ ಮನಸ್ಸಿಗೆ ಬಂದ ಹಾಗೆ ಎಸೀಬಹುದಲ್ಲಾ..."

ದಾವೂದ್ ಕೂಡಾ ತನ್ನ ಪಾಲಿನದನ್ನು ಸೇರಿಸಲು ಮರೆಯಲಿಲ್ಲ. "ಮುತವಲ್ಲಿ ಸಾಹೇಬರೇ... ಏನೋ... ನೀವು ನಮಗೆ ದಿಕ್ಕು ದೆಸೆಯಾಗಿದ್ದೀರಿ ಅಂತ ನಾವೂ ಮನುಷ್ಯರಾಗಿ ಉಳ್ಕೊಂಡಿದೀವಿ... ಒಂದು ದಿನ ಬೆಳಗೆದ್ದರೆ ಕುರಾನ್ ಬಗ್ಗೆ ಕೋರ್ಟಿಗೆ ಹೋಗ್ತಾರೆ... ಅಯಮ್ಮ... ಶಾಬಾನು ವಿಚಾರನೇ ದೊಡ್ಡದಾಗಿ ಮಾಡಿ ನಮ್ಮನ್ನು ಕುಕ್ಕಿ... ಕುಕ್ಕಿ ಇಟ್ಟರು. ಈಗ ನೋಡಿದ್ರೆ... ಸಾಬರ್ ಹೆಣಾನೆಲ್ಲ ತಗೊಂಡ್ ಹೋಗಿ ಮಶಾಣದಲ್ಲಿ ಹೂಳ್ತಾರೆ.... ಇದ್ದಿಂತ ಇನ್ನಾವ ಅನ್ಯಾಯ ಬೇಕು...?

ದಾವೂದ್‌ನ ನೋಟಕ್ಕಂತೂ ಇದೊಂದು ದೊಡ್ಡ ಮಸಲತ್ತಾಗಿಯೇ ಕಾಣತೊಡಗಿತು!

ಎಲ್ಲರೂ ದುಃಖಿತರಾದರು. ಮುತವಲ್ಲಿ ಸಾಹೇಬರು ಕೂಡ... ಗಡ್ಡದ ಕೂದಲನ್ನು ಒಂದೊಂದಾಗಿ ಕೀಳುತ್ತಾ... ಆಗಾಗ್ಗೆ ಮೂಗಿನಲ್ಲಿ ಬೆರಳು

ತೂರಿಸುತ್ತಾ ದೀರ್ಘಾಲೋಚನೆಯಲ್ಲಿ ತೊಡಗಿದ್ದು ಒಮ್ಮೆಲೇ ಎಚ್ಚತ್ತವರಂತೆ ಜನಗಳತ್ತ ನೋಡಿದರು. ತೀವ್ರ ದುಃಖದಿಂದ ಕೂಡಿರುವಂತೆ ಮುಖವನ್ನು ಕಿವಿಚಿಕೊಂಡು, ಅರೆಗಣ್ಣು ತೆರೆದು ಒಮ್ಮೆ ಕೆಮ್ಮಿ ಗಂಟಲನ್ನು ಸರಿಪಡಿಸಿಕೊಂಡರು.

ವಿಷಯದ ಗಹನತೆ ಎಷ್ಟು ತೀವ್ರವಾಗಿತ್ತೆಂದರೆ... ಆರಿಫಾ ಕೂಡ ಮಕ್ಕಳನ್ನು ಶಾಲೆಗೆ ಸಿದ್ಧಗೊಳಿಸುವುದನ್ನು ಬಿಟ್ಟು ಪಡಸಾಲೆಯ ಪರದೆಯ ಹಿಂದೆ ಬಂದು ನಿಂತಿದ್ದಳು. ಸ್ವಲ್ಪ ತಡವಾಗಿ ಎದ್ದಿದ್ದ ಜಮೀಲಾ ಕೂಡ ಆರಿಫಳಿಂದ ಪಿಸುಮಾತಿನಲ್ಲಿಯೇ ವಿಷಯವನ್ನು ತಿಳಿದುಕೊಂಡು, ಅವಳೂ ಕೂಡ ಪಡಸಾಲೆಯತ್ತ ಕಿವಿಯಾನಿಸಿ ಪರದೆಯ ಹಿಂದೆ ಸೇರಿಕೊಂಡಿದ್ದಳು. ಅವರಿಬ್ಬರ ಹೆಣ್ಣು ಹೃದಯಗಳು ಕೂಡ ಮಿಟುಕುತ್ತಿದ್ದವು.

"ಯಾ ಅಲ್ಲಾ!... ಯಾರೇ ಆಗಿರಲಿ... ಆ ಬಡವನಿಗೆ ಸದ್ಗತಿಯನ್ನು ನೀಡಪ್ಪಾ... ಒಬ್ಬ ಮುಸಲ್ಮಾನನ ಹೆಣಕ್ಕೆ ಸಲ್ಲಬೇಕಾದ ಸಕಲ ಸಂಸ್ಕಾರದೊಡನೆ... ಅವನಿಗೆ ಖಬರಸ್ತಾನ್‌ನಲ್ಲಿ ಮೂರು ಗಜ ನೆಲ ದೊರಕಲಿ... ದೇವರೇ!"

ಜಮೀಲಾಳ ಗಂಡ ಕೂಡಾ ಎದ್ದು ಬಂದವನ್ನೇ ವಿಷಯ ತಿಳಿದು ಪಡಸಾಲೆಗೆ ಬಂದು ನಿಂತಿದ್ದ. ಎಲ್ಲರಲ್ಲೂ ವಿಚಿತ್ರ ಉದ್ವೇಗ... ಕಾತುರ... ಇಸ್ಲಾಮ್‌ನ ಉಳಿವಿಗಾಗಿ ನಡೆಸುವ ಧರ್ಮ ಯುದ್ಧದ ಹುಮ್ಮಸ್ಸು ಕೂಡಿತ್ತು. ಕೊನೆಗೂ ಮುತವಲ್ಲಿ ಸಾಹೇಬರು ಬಾಯ್ತೆರೆದರು.

"ಈಗ ನಾವು ನಮ್ಮ ಎಲ್ಲಾ ರೀತಿಯ ಪ್ರಯತ್ನಗಳಿಂದಲೂ ನಿಸಾರ್ ಹೆಣವನ್ನು ಅಲ್ಲಿಂದ ತೆಗೆಸಿ ಇಲ್ಲಿ ಮಣ್ಣು ಮಾಡಬೇಕು. ಏನೇ ಅಡ್ಡಿ ಆತಮುಖ ಬಂದ್ರೂ ಸಹ ಎದುರಿಸೋಕ್ಕೆ ಸಿದ್ಧವಾಗಿರಬೇಕು... ತಿಳೀತಾ...?" ಎಂದರು.

"ದಾವೂದ್.... ಹಾಗೇನೇ... ನಮ್ ಯುವಕರ ಕಮಿಟಿಗೆ ಒಂದ್ ಸೊಲ್ಪ ತಿಳಿಸಿ ಬಿಡಪ್ಪಾ... ಅವರೂ ಬಂದ್ಮೇಲೆ ಎಲ್ಲಾ ಸೇರ್ಕೊಂಡು ಸ್ವಲ್ಪ ಡಿ.ಸಿ. ಸಾಹೇಬ್ರನ್ನೂ... ಎಸ್ಪಿಯವರನ್ನೂ ನೋಡಿ.... ಅದೇನಿದೆಯೋ ಇವತ್ನಿಂದನೇ ಕೆಲ್ಸ ಶುರು ಮಾಡ್ಬಿಡೋಣ..." ಎಂದವರೇ "ಬಾಕಿದೇನೂ ಯೋಚಿಸ್ಬೇಡಿಂತ ಹೇಳ್ಬಿಡು... ಜಮಾತ್‌ನಲ್ಲೇನೂ ಸದ್ಯಕ್ಕೆ ದುಡ್ಡಿಲ್ಲ... ಅದೆಷ್ಟು ಖರ್ಚಾದ್ರೂ ನಾನೇ ಹಾಕ್ಕೋತೀನಿ ಅಂತಾನೂ ಹೇಳ್ಬಿಡು ಎಂದರು.

ಈ ಪ್ರಕರಣದಿಂದ ತಮಗೆ ಸಿಗಬಹುದಾದ ಜನಪ್ರಿಯತೆ ಮತ್ತು ಬೆಂಬಲದ ಮುಂದೆ... ಹಣವೇನೂ ದೊಡ್ಡದಲ್ಲಾ... ಅಲ್ಲದೆ ಮುತುವಲ್ಲಿಯಾಗಿ ಹಾಗೆ ಹೇಳುವುದೇ ಘನತೆ... ಅಂದ್ಹಾಗೆ ದುಡ್ಡು ಕೂಡ ಎಲ್ಲಿ ಹೋಗುತ್ತೆ.... ಈ ವಿಚಾರಕ್ಕೆ ಜನ ಮೇಲೆ ಬಿದ್ದು ಹಣ ಕೊಡ್ತಾರೆ ಎನ್ನುವುದು ಅವರ ಅನುಭವ. ಈಗಂತೂ ತಮ್ಮ ಬಗ್ಗೆ ಇಲ್ಲದ ಅಪಾದನೆ ಹೊರಿಸಿಕೊಂಡು ದೂರ ಸರಿದಿರುವ ಯುವಕರ ಕಮೀಟಿಯನ್ನು ಹತ್ತಿರ ಬರಮಾಡಿಕೊಳ್ಳಲು ಒಂದು ಸುಸಂದರ್ಭ.

ಅವರು ಅಂದುಕೊಂಡಂತೆಯೇ ಆಯಿತು. ಅವರು ಇನ್ನೂ ತಮ್ಮ ಯೋಚನಾ ಲಹರಿಯಿಂದ ಹೊರಬರುವ ಮುಂಚೆಯೇ.... ಜಮೀಲಾಳ ಗಂಡ ಕಿಸೆಯಿಂದ ಇನ್ನೂರೈವತ್ತು ರೂಪಾಯಿಗಳನ್ನು ತೆಗೆದವನೇ ಮುತುವಲ್ಲಿ ಸಾಹೇಬರ ಎದುರಿನ ಟೇಬಲ್ಲಿನ ಮೇಲೆ ಇಟ್ಟ.

"ಭಯ್ಯ.... ಇದನ್ನು ನಿಮ್ಮ ಕೆಲ್ಸಕ್ಕೆ ಬಳಸಿಕೊಂಡ್ರೆ ನನ್ಗೂ ಸ್ವಲ್ಪ ಪುಣ್ಯ ಬರುತ್ತೆ. ನಿಮ್ಮಂತವ್ರಿಗೆ ಅಲ್ಲಾ ಹೆಚ್ಚಿನ ಶಕ್ತಿ, ಆರೋಗ್ಯ, ಹಣ ಎಲ್ಲಾ ದಯಪಾಲಿಸಬೇಕು." ಎಂದು ಹೃದಯ ತುಂಬಿ ನುಡಿದ. ಸದ್ಯಕ್ಕೆ ಇಂತಹ ಮಹತ್ವವಾದ ಕೆಲಸದೆದುರು ಪಾಲು ಕೇಳುವಂತೆ ಹೆಂಡತಿಯನ್ನು ಒತ್ತಾಯಿಸುವುದು ಸಲ್ಲದು ಎಂದು ಅವನಿಗೇ ಅನಿಸಿತು. ಪರದೆಯ ಹಿಂದಿನಿಂದಲೇ ಗಂಡನ ಈ ಚರ್ಚೆಯನ್ನೂ ಮುಖಭಾವವನ್ನು ಗ್ರಹಿಸಿದ ಜಮೀಲಾ ಬಿಡುಗಡೆಯ ನಿಟ್ಟುಸಿರನ್ನು ಬಿಟ್ಟಳು.

ಗಂಡನ ಬಲವಂತಕ್ಕೆ ಮಾತ್ರ ಅವನು ಹೇಳಿದಂತೆ ಅಣ್ಣನ ಬಳಿ ಪಾಲಿನ ಬಗ್ಗೆ ಪ್ರಸ್ತಾಪಿಸಿದ್ದಳೇ ಹೊರತು ಅವಳು ಮನಃ ಪೂರ್ವಕವಾಗಿ ಅಣ್ಣನೆದುರಿಗೆ ಪಾಲು ಕೇಳಲು ಸಿದ್ಧಳಿರಲಿಲ್ಲ. 'ಬೀಸೋ ದೊಣ್ಣೆ ತಪ್ಪಿದರೆ ಸಾವಿರ ವರ್ಷ ಆಯಸ್ಸು' ಎಂಬಂತೆ ಅವಳಿಗೆ ನಿರಾಳವಾಯಿತು. ಆರಿಫಗೆ ಕೂಡ ಗಂಡನ ಬಗ್ಗೆ ತುಂಬಾ ಅಭಿಮಾನ ಉಕ್ಕಿ ಬಂದಿತು. ಹಿಮಾಲಯದಂತಹ ಕೆಲಸವನ್ನು ಅವನೊಬ್ಬನೇ ನಿಭಾಯಿಸ ಬೇಕಾಗಿರುವುದರಿಂದ ತಿಂಡಿ ಮಾಡದೆ ಎಲ್ಲಿ ಹೊರಹೋಗುವನೋ ಎಂಬ ಆತಂಕದಿಂದ ಅವನಿಗಾಗಿ ಹೂವಿನಷ್ಟು ಹಗುರವಾದ ಪರೋಟ ಮಾಡಲು ಅವಳು ಒಳಗೆ ಓಡಿದಳು. ತಂಗಿಯ ಮತ್ತವಳ ಗಂಡನ ವರ್ತನೆಯಲ್ಲಿ ಬದಲಾವಣೆಯನ್ನು ಗಮನಿಸಿದ ಮುತವಲ್ಲಿ ಸಾಹೇಬರು ಒಮ್ಮೆಲೇ

ಗೆಲುವಾದರೂ ತೋರಿಸಿಕೊಳ್ಳದೆ ಘನತೆವೆತ್ತರಂತೆ ಮೆಲುವಾಗಿ ಹೆಜ್ಜೆಗಳನ್ನಿಡುತ್ತಾ ಒಳ ಬಂದರು.

....ಮೊದಲು ಅವರು ಭೇಟಿ ಮಾಡಿದ್ದು ಜಿಲ್ಲಾಧಿಕಾರಿಯನ್ನು, ಸಾಕಷ್ಟು ಯುವಕರ ಗುಂಪಿನೊಡನೆ ಹೋಗಿ ಜಿಲ್ಲಾಧಿಕಾರಿಯನ್ನು ಭೇಟಿ ಮಾಡುವುದು ಅವರಿಗೆ ಆನಂದದಾಯಕವಾದ ವಿಷಯವಾಗಿತ್ತು. ಜಿಲ್ಲಾಧಿಕಾರಿ ಯುವಕ; ಬಂಗಾಲಿ ಬ್ರಾಹ್ಮಣ ಜವಹರಲಾಲ್ ವಿಶ್ವವಿದ್ಯಾಲಯದ ಪದವೀಧರ. ಸಾಮಾಜಿಕ ಸಂಬಂಧಗಳ ಗೋಜಲುಗಳನ್ನು ಅವುಗಳ ಭಾವನಾತ್ಮಕ ಆಸ್ಫೋಟಗಳನ್ನೂ ಬಲ್ಲವನಾಗಿದ್ದ. ಮುತವಲ್ಲಿ ಸಾಹೇಬರು ಸಲ್ಲಿಸಿದ ಅರ್ಜಿಯನ್ನು ಪರಿಶೀಲಿಸಿದ ಆತನಿಗೆ ಪ್ರಕರಣದ ಹಿನ್ನೆಲೆಯ ಅರಿವಾಯಿತು. ಮನದಾಳದಲ್ಲಿ ನಗೆಯುಕ್ಕಿ ಬಂದರೂ ಆತ ಗಂಭೀರ ಮುಖ ಮುದ್ರೆಯಲ್ಲೇ ಕುಳಿತಿದ್ದ ಮುತವಲ್ಲಿ ಸಾಹೇಬರ ದುಃಖಪೂರ್ಣ ಆವೇದನೆಯನ್ನು ಆಲಿಸಿ ಆ ಬಗ್ಗೆ ಚಕಾರವೆತ್ತದೆ ಉರ್ದುವಿನಲ್ಲಿಯೇ ಪ್ರಶ್ನಿಸಿದ.

"ಮತ್ತೇನೂ ವಿಷಯ ಮುತವಲ್ಲಿ ಸಾಹೇಬರೆ.... ನಿಮ್ಮ ಏರಿಯಾಗೆ ಬೇಕಾದ ಬೋರ್‌ವೆಲ್‌ಗಳ ಬಗ್ಗೆಯಾಗಲೀ, ಶಾಲೆ ರಿಪೇರಿ ಬಗ್ಗೆಯಾಗಲೀ ಅಥವಾ ಇನ್ನು ಬೇರೆ ಯಾವುದೇ ಕೆಲಸಗಳ ಬಗ್ಗೆಯಾಗಲೀ ನೀವು ಒಮ್ಮೆಯಾದರೂ ನನ್ನ ಬಳಿ ಬಂದಿಲ್ಲ..."

ಮುತವಲ್ಲಿ ಸಾಹೇಬರು ಮಧ್ಯದಲ್ಲಿಯೇ ತಡೆದು ವೇಗವಾಗಿ ನುಡಿದರು. "ಅದೆಲ್ಲಾ ಒಂದು ಲಿಸ್ಟ್ ಮಾಡಿಕೊಂಡು ಮುಂದಿನ ಸಾರಿ ಬರ್ತೀವಿ ಸ್ವಾಮಿ; ಈಗ ಸಧ್ಯಕ್ಕೆ ಇದೊಂದು ವಿಷಯದ ಬಗ್ಗೆ ತಾವು ಅಪ್ಪಣೆ ಮಾಡಿಬಿಟ್ಟರೆ ಸಾಕು...." ಎಂದು ನುಡಿದರು.

"ಆದರೂ ಮುತುವಲ್ಲಿ ಸಾಹೇಬರೇ... ಮಣ್ಣು ಎಲ್ಲೆಡೆಯೂ ಒಂದೇ ಅಲ್ಲವೆ.... ಮಣ್ಣಿನಲ್ಲಿ ಭೇದವೇನಿದೆ..." ಎಂದು ತೀರ ಕಾಷುಯಲ್ ಆಗಿ ಪ್ರಶ್ನಿಸಿದರು.

ಮುತವಲ್ಲಿ ಸಾಹೇಬರ ಬಳಿ ಅದಕ್ಕೆ ಅಪ್ರಸ್ತುತವಾದ ಹಲವಾರು ಉತ್ತರಗಳು ತಯಾರಿದ್ದವು. ಹೆಚ್ಚು ಮಾತು ಬೆಳೆಸದೆ ಜಿಲ್ಲಾಧಿಕಾರಿಯು ಒಂದು ಕ್ಷಣ ಆಲೋಚಿಸಿ ಅಸಿಸ್ಟೆಂಟ್ ಕಮೀಷನರ್‌ಗೆ ಒಂದು ಆದೇಶ ಹೊರಡಿಸಿದರು.

....ಹದಿನೈದು ದಿನಗಳು ಕಳೆದು ಹೋದವು. ಅಧಿಕಾರಿಯಿಂದ ಅಧಿಕಾರಿಗೆ, ಇಲಾಖೆಯಿಂದ ಇಲಾಖೆಗೆ ಸುತ್ತಿದರೂ ಮುತವಲ್ಲಿ ಸಾಹೇಬರು ಬೇಸರಪಡಲಿಲ್ಲ. ಜನರಿದ್ದರಲ್ಲ ಜೊತೆಯಲ್ಲಿ.... ಸಂಗಡಿಗರಿಗೆ ಆಗಾಗ್ಗೆ ಒಂದಿಷ್ಟು ಕಾಫಿ ತಿಂಡಿ ಕೊಡಿಸಲು ಕೂಡಾ ಅವರು ಹಿಂಜರಿಯಲಿಲ್ಲ. ಶಂಕರನ ಕಡೆಯಿಂದ ಈ ಪ್ರಕರಣದಲ್ಲಿ ಅಂತಹ ತೀವ್ರ ವಿರೋಧವೇನೂ ಕಂಡುಬರಲಿಲ್ಲವೆಂಬುದು ಅವರಿಗೆ ನಿರಾಸೆಯಾಯಿತಷ್ಟೇ.... ಆದಾಗ್ಯೂ... ಅಧಿಕಾರಿಗಳ ಮತ್ತು ಪೋಲೀಸಿನವರ ಕೊಕ್ಕೆಗಳೇ ಧಾರಾಳವಾಗಿದ್ದವಲ್ಲ...

ಮುತವಲ್ಲಿ ಸಾಹೇಬರು ಹಗಲೆಲ್ಲಾ ಆಫೀಸುಗಳಿಗೆ ಅಲೆದರು. ಸರಿರಾತ್ರಿಯವರೆಗೂ ಮಸೀದಿಯ ಅಂಗಳದಲ್ಲಿ ಅಥವಾ ಮದೀನ ಹೋಟೆಲ್‌ನ ವಿಶಾಲವಾದ ಹಜಾರದಲ್ಲಿ ಇಲ್ಲವೇ ತಮ್ಮ ಮನೆಯ ಪಡಸಾಲೆಯಲ್ಲಿ ಚರ್ಚೆ ನಡೆಸುತ್ತಿದ್ದರು. ತಾವು ಪಡುತ್ತಿರುವ ಪರಿಶ್ರಮದ ವರ್ಣನೆಯನ್ನು ಮಾಡುತ್ತಿದ್ದರು. ಯಾವ ಯಾವ ಅಧಿಕಾರಿಯ ಬಾಲವನ್ನು ಎಲ್ಲೆಲ್ಲಿ ಕತ್ತರಿಸಬೇಕೆಂಬ ಯೋಜನೆಯನ್ನು ಹಾಕುತ್ತಿದ್ದರು. ಇಸ್ಲಾಮಿಗೆ ಎಲ್ಲೆಲ್ಲಿಂದ ಗಂಡಾಂತರವೊದಗುತ್ತಿದೆ ಮತ್ತು ಅವುಗಳನ್ನು ಹೇಗೆ ಯುಕ್ತಿಯಿಂದ ಪರಿಹರಿಸಿಕೊಳ್ಳಬೇಕೆಂಬುದರ ಬಗ್ಗೆ ಯುವಕರಿಗೆ ಬೋಧಿಸುತ್ತಿದ್ದರು. ಹೇಗೂ ಹದಿನೈದು ದಿನ ಜಾರಿದ್ದೇ ಅವರಿಗೆ ಗೊತ್ತಾಗಲಿಲ್ಲ. ಇಡೀ ಜಮಾತಿನ ನಡುವೆ ಚರ್ಚೆಗೆ ಗ್ರಾಸವಾಗಿದ್ದ ವಿಷಯವೆಂದರೆ ನಿಸಾರ್‌ನ ಹೆಣ ಮತ್ತು ಮುತುವಲ್ಲಿ ಸಾಹೇಬರ ಪರಿಶ್ರಮ. ಬಹಳಷ್ಟು ಹೆಂಗಸರು ತಲೆತುಂಬಾ ಮೇಲುವಸ್ತ್ರವನ್ನು ಹೊದ್ದು ನಮಾಜ್ ಮಾಡಿದ ನಂತರ ನಿಸಾರ್‌ನ ಹೆಣಕ್ಕೆ ಮುಸ್ಲಿಮರ ಸ್ಮಶಾನದಲ್ಲೇ ದಫನ್ ಆಗುವ ಯೋಗ ಸಿಗಲಿ ಎಂತಲೂ, ಅವನಿಗೆ ಸದ್ಗತಿ ದೊರಕಲಿ ಎಂತಲೂ ಮನದುಂಬಿ ಪ್ರಾರ್ಥಿಸಿದರು.

ಈ ಪವಿತ್ರ ಕಾರ್ಯಕ್ಕೆ ಸಾಕಾದಷ್ಟು ಹಣ ಕೂಡಾ ಶೇಖರವಾಗಿತ್ತು. ಅಂತೂ ಇಂತೂ ಕೊನೆಗೆ ನಿಸಾರ್‌ನ ಹೂತ ಶವವನ್ನು ಮತ್ತೆ ತೆಗೆಯಲಾಯಿತು. ಮುತುವಲ್ಲಿ ಸಾಹೇಬರು ಮತ್ತು ಅವರ ಹಿಂಬಾಲಕರ ಪಡೆ ತಾವು ತಂದಿದ್ದ ಹೊಚ್ಚ ಹೊಸ ಗಂಜಿ ಹಾಕಿದ ಕಫನ್ನಿನಲ್ಲಿ ಕೊಳೆತ ಶವವನ್ನು ವಿಧಿ ಬದ್ಧವಾಗಿಸುತ್ತಿದ್ದರು. ಸ್ನಾನ ಮಾಡಿಸಲು ಸಾಧ್ಯವಿಲ್ಲದಷ್ಟು, ಆ ಶವ ಕೊಳೆತು ಹೋದದ್ದರಿಂದ ಪವಿತ್ರ ಸ್ತೋತ್ರದ ನೀರಿನ ಪ್ರೋಕ್ಷಣೆ ಮಾತ್ರ ಮಾಡಲಾಯಿತು. ದುರ್ವಾಸನೆಗೆ ಹೊಟ್ಟೆ ತೊಳೆಸುವಂತಾದರೂ ಯಾರೊಬ್ಬರೂ ತೋರಗೊಡಲಿಲ್ಲ. ಹಾಜರಿದ್ದ ಪೋಲೀಸಿನವರು ಕರವಸ್ತ್ರದಿಂದ ಮೂಗನ್ನು

ಮುಚ್ಚಿಕೊಂಡರು. ಅಂತೂ ಇಂತೂ ನಿಸಾರ್‌ನ ಶವಯಾತ್ರೆ ಮುತುವಲ್ಲಿ ಸಾಹೇಬರು ಮತ್ತು ಅವರ ಸಂಗಡಿಗರ ಹೆಗಲೇರಿ ಹೊರಟಿತು. ಹೆಣದ ದುರ್ವಾಸನೆ ಸಹ್ಯವಾಗಲು ಸಾಕಷ್ಟು ಸೆಂಟ್ ಸುರಿದಿದ್ದು ಶವವಾಹನದ ಮೇಲ್ಭಾಗದಲ್ಲಿ ಮಲ್ಲಿಗೆ ಹೂವಿನ ಲಡಿಗಳಿಂದ ಮಾಡಿದ್ದ ಚಾದರದಿಂದ ಆವೃತವಾಗಿತ್ತು. ಆ ಮಲ್ಲಿಗೆ ಹೂವುಗಳೆಲ್ಲಾ ಬಿರಿಯದೆ ಮುಗುಮ್ಮಾಗಿದ್ದವು. ಬಹುಶಃ "ಹರ್‌ಫೂಲ್ ಕೆ ಕಿಸ್‌ಮತ್ ಮೇ ಕಹ್ಞಾಂ ನಾಜೆ ಉರುಸಾಮ, ಚಂದ್ ಫೂಲ್ ತೋ ಖಿಲ್‌ತೇ ಹೈಂ ಮಜಾರೋಂಕೆ ಲಿಯೆ."

"ಬಿರಿದ ಎಲ್ಲಾ ಹೂವಗಳ ಅದೃಷ್ಟದಲ್ಲಿ ವಧುವಿನ ಮುಡಿಯೇರುವ ಸೌಭಾಗ್ಯ ಎಲ್ಲಿದೆ... ಕೆಲವು ಸುಮಗಳು ಅರಳುವುದೇ ಗೋರಿಗಳಿಗಾಗಿ."

ಶವದ ಮೆರವಣಿಗೆ ಬಹುದೂರ ಕ್ರಮಿಸಿಬೇಕಿತ್ತು. ಆದರೆ ಜನರೂ ಕೂಡಾ ಸಾಕಷ್ಟು ಸಂಖ್ಯೆಯಲ್ಲಿದ್ದರಲ್ಲ. ಶವವಾಹಕವು ಒಂದೆರಡು ನಿಮಿಷಗಳಿಗಿಂತ ಹೆಚ್ಚಾಗಿ ಒಬ್ಬನ ಹೆಗಲು ಮೇಲಿರದೆ ಸ್ಥಳಾಂತರವಾಗುತ್ತಿತ್ತು. ನಗರ ಪ್ರದೇಶವನ್ನು ದಾಟಿ ಶವದ ಮೆರವಣಿಗೆ ಮುಂದುವರಿಯುತ್ತಲೇ ಇತ್ತು. ಇನ್ನೇನು ಆಗೋ ಆ ತಿರುವಿನಿಂದ ಮುಂದಕ್ಕೆ ಹೋದರೆ ಖಬರಸ್ಥಾನ್. ಹತ್ತು ಹೆಜ್ಜೆಯಷ್ಟೇ.... ಅಷ್ಟರಲ್ಲಿ ಆ ಸನ್ನಿವೇಶದ ಗಾಂಭೀರ್ಯವನ್ನು ದುಃಖವನ್ನು ಒಮ್ಮೆಲೇ ಚದುರಿಸುವಂತಹ ವಿಚಿತ್ರವಾದ ಅಸಭ್ಯವಾದ ಏರಿಯ ಧ್ವನಿಯ ಬೈಗುಳೊಡನೆ ತೂರಾಡುತ್ತಾ ಬಂದ ವ್ಯಕ್ತಿಯನ್ನು ನೋಡಿದೊಡನೆಯೇ ಶವವಾಹಕದ ಮುಂಭಾಗದಲ್ಲಿ ಹೆಗಲು ಕೊಟ್ಟಿದ್ದ ಮುತವಲ್ಲಿ ಸಾಹೇಬರು ಸ್ಥಂಭೀ ಭೂತರಾಗಿಬಿಟ್ಟರು. ಅವರ ಮೋರೆ ಬಿಳಿಪೇರಿತು. ಅಷ್ಟೇ ಅಲ್ಲ. ಆ ಶವದ ಮೆರವಣಿಗೆಯಲ್ಲಿದ್ದ ಬಹುತೇಕ ಜನರ ಅವಸ್ಥೆ ಅದೇ ರೀತಿಯದಾಗಿತ್ತು. ಯಾರೊಬ್ಬರೂ ಕೂಡಾ ಮುಂದಡಿ ಇಡಲಿಲ್ಲ. ಎಲ್ಲರ ಗಂಟಲ ದ್ರವ ಆರಿತು. ಆ ವ್ಯಕ್ತಿ ಅಸಭ್ಯವಾಗಿ ಇನ್ನಷ್ಟು ಬೈಗುಳವನ್ನು ಉದುರಿಸಿ ಹಾಗೆಯೇ ಸಣ್ಣ ಓಣಿಯೊಂದರಲ್ಲಿ ತೂರಾಡುತ್ತಾ ಮರೆಯಾದ.

ಬಹುಬೇಗ ಚೇತರಿಸಿಕೊಂಡವರೇ ಮುತವಲ್ಲಿ ಸಾಹೇವರು. ಶವವನ್ನು ಕೊಂಡೊಯ್ಯುವಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಎಚ್ಚರವಹಿಸಲು ಜೊತೆಗಿದ್ದ ಪೋಲೀಸಿನವರನ್ನು ಈ ಸಂದರ್ಭದಲ್ಲಿ ಕಂಡು ಶವದ ಜೊತೆಗಿದ್ದವರು ನಿಂತುದ್ದನ್ನು ಕಂಡು ಒಬ್ಬ ಪೋಲೀಸಿನವ ಮುಂದೆ ಹೋಗಿ ಕುಡುಕನತ್ತ ಲಾಠಿ ಆಡಿಸಿ ಅವನನ್ನು ಬೆದರಿಸಿದ.

ಮುತುವಲ್ಲಿ ಸಾಹೇಬರು ಮೆಲ್ಲನೆ ಮುಂದಡಿ ಇಟ್ಟರು. ಜಮಾತ್ ಕೂಡಾ ಅವರೊಡನೆ ಚಲಿಸಿತು. ಈಗ ಮಾತ್ರ ಮುತುವಲ್ಲಿ ಸಾಹೇಬರ ಕಾಲುಗಳು ಕಂಪಿಸತೊಡಗಿದವು. ಯಾರೋ ಬಂದು ಅವರ ಹೆಗಲಿನಿಂದ ಬದಲಾಯಿಸಿ ತಾನು ಹೆಗಲು ನೀಡಿದ ಮುತುವಲ್ಲಿ ಸಾಹೇಬರು ಕರವಸ್ತ್ರ ತೆಗೆದು ಧಾರಾಕಾರವಾಗಿ ಬರುತ್ತಿದ್ದ ಬೆವರನ್ನು ಒರೆಸಿಕೊಂಡರು. ಜನರ ನಡುವೆ ದಾವೂದನತ್ತ ಕೆಂಗಣ್ಣು ಬೀರಿದರು. ಅವನು ನೋಟವನ್ನು ಕೆಳಗೆ ಹರಿಸಿದ. ಬಹುತೇಕ ಜನರು ಕಣ್ಣುಗಳಲ್ಲಿಯೇ ಮಾತಾಡಿಕೊಂಡರು ಒಬ್ಬರೂ ಉತ್ತರಿಸಲಿಲ್ಲ. ಆದರೂ ದಾಪುಗಾಲು ಹಾಕುತ್ತಾ ಖಬರಸ್ಥಾನ್ ಕಡೆ ಮುಂದುವರೆಸಿದರು.

ಪೋಲೀಸಿನವರು ಖಬರಸ್ಥಾನ ಹೊರಗಡೆಯೇ ನಿಂತರು. ಅಂತೂ ಶವದ ದಫನ್ ಆಯಿತು. ಅದೂ ಮುಸ್ಲೀಮರ ಖಬರ್‌ಸ್ಥಾನ್‌ನಲ್ಲಿ ಮುತುವಲ್ಲಿ ಸಾಹೇಬರ ತಲೆಯ ನರಗಳು ಸಿಡಿದುಹೋಗುತ್ತಿದ್ದವು. ಇದು ಯಾರ ಶವ?...

ಆ ಕುಡುಕ ಪೇಂಟರ್ ನಿಸಾರ್ ಎನ್ನುವುದರಲ್ಲಿ ಅವರಿಗೆ ಯಾವ ಸಂಶಯವೂ ಇರಲಿಲ್ಲ. ದಾವೂದ್ ಮೇಲೆ. ನಿಸಾರ್‌ನ ಹೆಂಡತಿಯ ಮೇಲೆ ಅವರಿಗೆ ಕೊಚ್ಚಿ ಹಾಕುವಷ್ಟು ಕೋಪ ಬಂದಿತ್ತು. ಆದರೂ ಅವರಿಗೊಂದೇ ಸಮಾಧಾನ. ಜಮಾತಿನ ಬಹುತೇಕ ಮಂದಿ ನಿಸಾರ್‌ನನ್ನು ಗುರುತಿಸಿದ್ದರೂ ಒಬ್ಬರಾದರೂ ಪೋಲೀಸಿನವರ ಮುಂದೆ ಅವರನ್ನು ಬಿಟ್ಟುಕೊಟ್ಟಿರಲಿಲ್ಲ. ಅವರ ಮರ್ಯಾದೆಯನ್ನು ಕಾಪಾಡಿದ್ದರು. ಒಂದು ಕ್ಷಣ ಸಮಾಧಾನ ಕೂಡಲೇ ಮಾಯವಾಯಿತು. ಸಾವಿರಾರು ಕಾಗೆಗಳು ಕಾ... ಕಾ ಎನ್ನುತ್ತಾ ಅವರ ಮೆದುಳನ್ನು ಕಿತ್ತು ತಿನ್ನತೊಡಗಿದವು... ಇದು ಹಿಂದುವಿನ ಹೆಣವೋ... ಮುಸ್ಲಿಮನ ಹೆಣವೋ... ಗುರುತಿಸಲಸಾಧ್ಯವಾದಷ್ಟು ಕೊಳೆತುಹೋಗಿದ್ದ ಆ ಶವ... ಇಲ್ಲೇ ಕೊಳೆಯಬೇಕೋ.... ಅಲ್ಲಿ ಕೊಳೆಯಬೇಕೋ... ಜನರ ಆ ಶವದ ಮೇಲೆ ಸರಸರನೆ ಮಣ್ಣೆಳೆಯುತ್ತಿದ್ದರು. ಪೂರ್ತಾ ಮಣ್ಣೆಳೆಯುವುದನ್ನು ಕಾಯದೆ ಅವರು ವೇಗವಾದ ಹೆಜ್ಜೆಗಳನ್ನಿಡುತ್ತಾ ಮನೆಯ ಕಡೆ ದಾಪುಗಾಲಿಕ್ಕಿದರು. ಈ ದಿನ ಅವರ ಜೊತೆಯಲ್ಲಿ ಯಾರೂ ಇರಲಿಲ್ಲ. ಅವರನ್ನು ಜೀವಂತವಾಗಿ ಕುಕ್ಕಿ ಕೊಲ್ಲುತ್ತಿದ್ದ ಕಾಗೆಗಳ ವಿನಹ....

ತೀರಾ ಬಳಲಿಕೆಯಿಂದ ಮನೆಯ ಪಡಸಾಲೆಯಲ್ಲಿ ಬಂದು ಕುಳಿತು ಕೆಲಕ್ಷಣಗಳಾದ ನಂತರವೂ ಆರಿಫಳನ್ನು ಕಾಣದೇ ಇದ್ದಾಗ ಅವರಿಗೆ ಚಡಪಡಿಕೆ

ಎನಿಸಿ "ಆರಿಫ... ಒಂದು ಲೋಟ ನೀರು ತಾ..." ಎಂದು ಕೂಗಿ ಕರೆದರು.

ಆರಿಫಳ ಬದಲಿಗೆ ಬಂದ ಮಗಳನ್ನು ನೋಡಿ "ಏಕೆ.... ನೀನಿವತ್ತು ಸ್ಕೂಲಿಗೆ ಹೋಗಿಲ್ಲ" ಎಂದು ಕೇಳಿದರು.

"ಅಮ್ಮಾ ಮನೇಲಿಲ್ವಲ್ಲ. ಅದಕ್ಕೆ ನಾನು ಮನೇಲಿ ಉಳ್ಕೊಂಡೆ" ಎಂದಳು.

"ಮನೇಲಿರ್ದೆ.... ಎಲ್ಲಿಗೋದಳು?"

ತಂದೆಯ ಪ್ರಶ್ನೆಗೆ ಅತ್ತೂ ಕೆಂಪಾಗಿದ್ದ ಕಣ್ಣುಗಳ ಮೇಲೆ ಆವೃತವಾಗಿದ್ದ ರೆಪ್ಪೆಗಳನ್ನು ಮೇಲೆಕೆತ್ತುತ್ತಾ ಹುಡುಗಿ ಹೇಳಿದಳು.

"ಅನ್ಸರ್‌ಗೆ ತುಂಬಾ ಖಾಯಿಲೆಯಾಗಿದೆಯಲ್ಲಪ್ಪಾ, ಅಮ್ಮಾ ಅವನ ಜೊತೆ ಆಸ್ಪತ್ರೇಲಿದ್ದಾರೆ..."

"ಆಂ... ಏನಂದೆ?... ಯಾರ್‍ಗೆ ಖಾಯಿಲೆ... ಯಾವಾಗ್ನಿಂದ, ಏನ್ ಖಾಯಿಲೆ ಒಟ್ಟೊಟ್ಟಿಗೆ ಬಂದ ಪ್ರಶ್ನೆಗಳಿಗೆ ಹುಡುಗಿಯ ಕಂಗಳಿಂದ ಭಾರವಾದ ಹನಿಗಳು ಉದುರಿದವು.

"ಆಗ್ಲೆ ಹದಿನೈದು ಇಪ್ಪತ್ತು ದಿನದಿಂದಾನೆ ಅನ್ಸರ್‌ಗೆ ತುಂಬಾ ಜ್ವರ ಇತ್ತಲ್ಲಾ... ಡಾಕ್ಟರ್ ಅದೇನೋ ಮೆದುಳಿನ ಖಾಯಿಲೆ ಅಂತ ಹೇಳಿದ್ದಾರಪ್ಪ...? ಮೆನಿನ್ ಜೈಂಟೀಸ್ ಅಂತಾ... ಖಾಯಿಲೆ ಅಂತೆ..." ಎಂದು ಹೇಳಿದವಳೇ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು. ಮುತುವಲ್ಲಿ ಸಾಹೇಬರ ಕೈಯಿಂದ ಲೋಟ ಜಾರಿ ಕೆಳಗೆ ಬಿದ್ದಿತು. ಮತ್ತೆ ಬಹು ನಿಧಾನವಾಗಿ ಅವರ ಕಿವಿಗಳಲ್ಲಿ ಮೊಳಗತೊಡಗಿತು. ಅಣ್ಣಾ... ನನ್ನ ಪಾಲಿಗೆ ಆಸ್ತಿ... ಅಣ್ಣಾ... ಈ ಬಡ ವಿಧವೆಗೆ ಸಹಾಯ ಮಾಡಿ... ಮಾಯಿ ಬಾಪ್... ನನ್ನ ಮಗಳ ಮದುವೆಗೆ ಸಾಲ ಕೊಡಿ... ಹಕ್ ದಾರ್ ತರ್‌ಸೆ ತೋ ಅಂಗಾರ್ ಕಾ ನ್ಹೂ ಬರ್‌ಸೆ... ಕಾಗೆಗಳು.. ಕಪ್ಪು.. ಬೂದು... ಅವುಗಳೊಳಗಿನ ಕಾಮನಬಿಲ್ಲು..

■

# ದೇವರು ಬೇಡ, ಮಾನವೀಯತೆ ಬೇಕು

**–ವಸುದೇವ ಭೂಪಾಲಂ**

ಮಾನವನಿಗೆ ಎರಡು ದಾರಿಯಿವೆ. ನೈಸರ್ಗಿಕವಾದುದೊಂದು, ನಿಸರ್ಗಾತೀತವಾದುದೊಂದು. ಜನ ತಮತಮಗೆ ಈ ಎರಡರಲ್ಲಿ ಸರಿಕಂಡ ದಾರಿಯನ್ನು ಹಿಡಿಯಬಹುದು.

ನೈಸರ್ಗಿಕ ಪಥದಲ್ಲಿ ನಾವು ಈಗ ಇರುವ ಜಗತ್ತಿಗಾಗಿ ಬಾಳುತ್ತೇವೆ; ಮೆದುಳನ್ನು ಬೆಳೆಸಿ, ಸಂಶೋಧನೆಗಳಲ್ಲಿ ತೊಡಗುತ್ತೇವೆ. ಸಾಧ್ಯವಾದಾಗಲೆಲ್ಲ ಪ್ರಕೃತಿಯನ್ನು ಮಾನವನ ಅನುಕೂಲತೆಗಳಿಗೆ ಅಳವಡಿಸುತ್ತೇವೆ. ಅನ್ನ, ಬಟ್ಟೆ, ಮನೆಗಳ ಅನುಕೂಲತೆಗಳಿಗೆ ಗಮನಕೊಟ್ಟು ಮೈಯ ಹಸಿವನ್ನು ಹಿಂಗಿಸುತ್ತೇವೆ. ಕಲೆ ವಿಜ್ಞಾನಗಳಿಗೆ ಗಮನಕೊಟ್ಟು ಮನಸ್ಸಿನ ಹಸಿವನ್ನು ಹಿಂಗಿಸುತ್ತೇವೆ.

ನಿಸರ್ಗಾತೀತದ ಪಥದಲ್ಲಿ ಈ ಲೋಕದ ಬದುಕನ್ನು ಬಲಿಗೊಟ್ಟು ಪರಲೋಕದ ಸುಖಕ್ಕಾಗಿ ಶ್ರಮಿಸಬೇಕಾಗುತ್ತದೆ. ಇದಕ್ಕಾಗಿ ದಾನ ದಕ್ಷಿಣೆ ವ್ರತ ನಿಯಮ ಉಪವಾಸ ವನವಾಸಗಳನ್ನೆಲ್ಲಾ ಮಾಡಬೇಕಾಗುತ್ತದೆ.

ನಿಸರ್ಗದ ಪಥದಲ್ಲಿ ಆಲೋಚನೆ ತರ್ಕ, ಪರಿಶೀಲನೆ, ಸಂಶೋಧನೆ ಇವನ್ನು ಅನುಸರಿಸಬೇಕು. ನಿಸರ್ಗಾತೀತದ ಪಥದಲ್ಲಿ ನಂಬಿಕೆ, ಅಂಗೀಕಾರ, ನಮ್ಮ ಇಂದ್ರಿಯ ಆಲೋಚನೆಗಳಲ್ಲಿ ಅಪನಂಬಿಕೆ; ಇವು.

ಇದು ಪಥದಲ್ಲಿ ನಿಮ್ಮ ಬಂಧು ಬಳಗದವರ, ಹೆಂಡತಿ ಮಕ್ಕಳ ಒಳಿತಿಗಾಗಿ ಬದುಕಬೇಕು. ಇನ್ನೊಂದು ಪಥದಲ್ಲಿ ದೆವ್ವ ಭೂತಗಳಿಗಾಗಿ ದೇವರು ಆರಾಧನೆಗಳಿಗಾಗಿ ಬದುಕಬೇಕು.

ನಿಸರ್ಗದ ಪಥದಲ್ಲಿ ಪ್ರಾಮಾಣಿಕತೆ; ನಮ್ಮ ಅಭಿಪ್ರಾಯಗಳನ್ನು ಧೈರ್ಯ, ನರಕ, ದೇವರು, ದೆವ್ವ, ಭೂತಗಳ ಹೆದರಿಕೆಯನ್ನು ಎದುರಿಸುವ ಸಾಹಸ ಬೇಕು. ನಿಸರ್ಗಾತೀತದ ಪಥದಲ್ಲಿ ಗುಲಾಮನ ತನ್ನ ವ್ಯಕ್ತಿತ್ವದ ಉದಾತ್ತತೆಯ ಅವಹೇಳನ, ತನಗೆ ಅನುಭವಿಸಲು ಸಾಧ್ಯವಿಲ್ಲದ ಸ್ವಾತಂತ್ರ್ಯವನ್ನು ಇತರರೂ ಅನುಭವಿಸಬಾರದು ಎಂಬ ಹಠ,

ಇದನ್ನು ಮುರಿದೆಸೆದಿರಿ, ಇದನ್ನು ಒಡೆದು ಹಾಕಿದಿರಿ; ಇನ್ನೊಂದನ್ನು ಮುರುಗ ಮಾಡಿದಿರಿ; ಮತ್ತೊಂದು ಇಲ್ಲವೇ ಇಲ್ಲವೆಂದಿರಿ. ಅವುಗಳ ನಮಗೇನು

ಕೊಡುತ್ತೀರಿ? ಮುಂದೇನು ಮಾಡಬೇಕು? ಎಂದು ಯಾರೂ ಪ್ರಶ್ನಿಸಬಹುದು. ನಾವು ಒಳ್ಳೆಯದನ್ನೂ ಮುರಿದೆಸೆದಿಲ್ಲ, ಉಪಯುಕ್ತವಾದುದಾವುದನ್ನೂ ಒಡೆದು ಹಾಕಿಲ್ಲ, ಸುಂದರವಾದುದನ್ನೂ ತಿರುಗ ಮುರುಗ ಮಾಡಿಲ್ಲ; ಇದ್ದುದನ್ನು ಇಲ್ಲವೆಂದಿಲ್ಲ, ಅಂಧಶ್ರದ್ಧೆಗಳನ್ನು ಕುರುಡು ನಂಬಿಕೆಗಳನ್ನು ಕುಸಿಯಲಿರುವ ಮನೆಗಳನ್ನು ಒಡೆದು ಹಾಕಿದ್ದೇವೆ, ಮುರಿದು ಹಾಕಿದ್ದೇವೆ. ಕಿತ್ತುಹಾಕಿದ್ದೇವೆ. ಇಲ್ಲದ ಸುಳ್ಳು ಲೋಕಗಳ ಬೆದರಿಕೆ, ಸುಖಗಳ ನೆವದಿಂದ ಧನಹರಣ, ಕಾಲಹರಣವಾಗುವುದು ಬೇಡ, ಎಂದಿದ್ದೇನೆ.

'ಅವುಗಳ ಬದಲು ಏನು ಮಾಡಬೇಕೆನ್ನುತ್ತೀರಿ?'

ಲೋಕದಲ್ಲಿ ಸುಖ ಶಾಂತಿಗಾಗಿ ಪ್ರಯತ್ನಿಸಿ, ಸ್ನೇಹಮಯರಾಗಿ ಹೆಚ್ಚಿಸಿಕೊಳ್ಳಿ. ಯಾರಾರ ಅಭಿಪ್ರಾಯ ಏನೇನೆ ಇರಲಿ, ಯಾರಾರ ಜಾತಿಮತ ಏನೇನೇ ಇರಲಿ, ವಿಶ್ವಾಸದಿಂದಿರಿ. ವೈಜ್ಞಾನಿಕ ಮನೋವೃತ್ತಿ ಗೆಳೆತನವನ್ನುಂಟುಮಾಡುತ್ತದೆ; ಮತ, ಕುರುಡುನಂಬಿಕೆ ಹಗೆತನವನ್ನುಂಟುಮಾಡುತ್ತದೆ. ಹಲವರು ಹೇಳುತ್ತಾರೆ. ನಂಬಿಕೆಗಳು ಮುಖ್ಯವೆಂದು ನಾವು ಹೇಳುತ್ತೇವೆ, ಕೆಲಸಗಳೇ ಮುಖ್ಯವೆಂದು.

ಮನಸ್ಸು, ಉಲ್ಲಾಸದಿಂದಿರಲಿ, ಸಮಾಧಾನದಿಂದಿರಲಿ. ಮೈ ಆರೋಗ್ಯದಿಂದಿರಲಿ, ಬಲಿಷ್ಠವಾಗಿರಲಿ. ಮೈಯನ್ನು ನಾವು ಕಾಪಾಡಿಕೊಂಡರೆ ಆತ್ಮವಿದ್ದುದಾದರೆ ಮುಂತಾದವುಗಳನ್ನುಳ್ಳವರಾಗಿದ್ದು, ರೋಗದ ಹರಡುವಿಕೆಗೆ ಕಾರಣವಾಗುವುದು ಅಪರಾಧವೆಂದು ಪರಿಗಣಿಸಲ್ಪಡುವ ದಿನ ಬೇಗ ಬರಲಿ.

ಸುಖಶಾಂತಿಗಳಿಂದ ಬದುಕು ಕಳೆಯುವುದು ಪ್ರತಿಯೊಬ್ಬನ ಕರ್ತವ್ಯ.

***'ಉದಯ ಕಾಲದೊಳೆದ್ದು***
***ಗಡಗಡ ನಡುಗುತ***
***ನದಿಯಲಿ ಮಿಂದೆವೆಂದು'***

ಹೇಳಿಕೊಳ್ಳುವುದೂ, ದಿನವೂ ತ್ರಿಕಾಲ ಸ್ನಾನ ಮಾಡುವುದು ಮುಖ್ಯವಲ್ಲ. ಮೈ ಶುಚಿಯಾಗಿರುವುದು ಮುಖ್ಯ. ವ್ರತ ನಿಯಮ ಉಪವಾಸಗಳಿಂದ ಯಾವ ದೇವರಿಗೂ ತೃಪ್ತಿಯಾಗುವುದಿಲ್ಲ. ಹಸಿವಾದಾಗ ಮಾತ್ರ ತಿನ್ನುವ ರೂಢಿಯಿಟ್ಟುಕೊಳ್ಳುವುದು ಸಾಕು. ಯಜ್ಞಕುಂಡದಲ್ಲಿ ರೇಷ್ಮೆ

ವಸ್ತುಗಳನ್ನೆಸೆಯುವುದೂ, ನಮಗೆ ಉಡಲಿಲ್ಲದಾಗ ಜೋಯಿಸರುಗಳಿಗೆ ಬಟ್ಟೆಗಳನ್ನು ದಾನ ಮಾಡುವುದೂ ಮರುಳತನ. ಪ್ರತಿಯೊಬ್ಬನೂ ತನ್ನ ಮೈಯನ್ನು ಸಾಕಷ್ಟು ಬಟ್ಟೆಗಳಿಂದ ಮುಚ್ಚಿಕೊಳ್ಳುವುದು ಅವಶ್ಯಕ. ಇಲ್ಲದ ದೇವರುಗಳಿಗಾಗಿ ಗುಡಿ ಚರ್ಚು ಮಸೀದಿಗಳನ್ನು ಕಟ್ಟುವುದು ವ್ಯರ್ಥ. ದೇವರಿರುವುದಾದರೆ ಅವನು ಎಲ್ಲೆಲ್ಲೂ ಇದ್ದಾನೆ; ಗುಡಿಯಲ್ಲಿ ಮಾತ್ರವಲ್ಲ. ಇರುವ ಜನಗಳಿಗಾಗಿ ಮನೆ ಬೇಕು. ಅಂಥ ಸಂಪ್ರದಾಯ, ಕುರುಡು ನಂಬಿಕೆ ಹಾನಿಕರ. ಕಾಲಕ್ಕೆ ಅನುವಾಗಿ ವರ್ತನೆ, ವಿಚಾರಶೀಲತೆ ಬೇಕು. ವಿದ್ಯಾಮಂದಿರಗಳು ದೇವರುಗಳಿಗಿಂತ ಶ್ರೇಯಸ್ಕರ. ವೇದ ಪುರಾಣಗಳ ಅಧ್ಯಯನಕ್ಕಿಂತ ಜಗತ್ತಿನ ಲೇಸು. ದೇವರಲ್ಲಿ ಹೆದರಿಕೆ ಬೇಡ; ನ್ಯಾಯದಲ್ಲಿ, ಸತ್ಯದಲ್ಲಿ ವಿಶ್ವಾಸವಿಡಬೇಕು.

ದೇವರ ಕ್ಷಮೆ ನಮಗೆ ಬೇಡ; ಮಾನವ ಕ್ಷಮೆ, ವಿಶ್ವಾಸ ಬೇಕು. ತಿಮ್ಮಬೊಮ್ಮರ ತಲೆಹೊಡೆದು, ನಾವು ಹೊಟ್ಟೆ ಬೆಳೆಸಿದ ಪಾಪಕ್ಕೆ ಜಪತಪ ಮೂಲಕ ನಮಗೆ ದೇವರು ಕ್ಷಮೆ ನೀಡಿದರೆ, ತಿಮ್ಮ ಬೊಮ್ಮರಿಗೇನು ನಮ್ಮ ಹೊಟ್ಟೆಕಿಚ್ಚು ತೀರಿಸಿಕೊಳ್ಳಲು ಮುಗ್ಧಳಾದೊಬ್ಬ ಕನ್ನಿಕೆಗೆ, ಇಲ್ಲದ ಅಪವಾದವನ್ನು ಹೊರೆಸಿ ಅವಮಾನಕ್ಕೀಡುಮಾಡಿದ ದಾನ ದಕ್ಷಿಣೆಗಳ ಕಾರಣವಾಗಿ ದೇವರು ನಮಗೆ ಕ್ಷಮೆ ನೀಡಿದರೆ, ಮೊದಲಿನಿಂದ ಬೆಂದು ನೊಂದ ತರುಣ ತರುಣಿಯರಿಗೇನು ಬಂತು? ಇಲ್ಲಿ ಮಾಡಿದ ಒಳಿತಿಗೆ ಒಳಿತು, ಕೆಡುಕಿಗೆ ಕೆಡುಕು ಪ್ರತಿಫಲವಾಗಿ ದೊರೆತಾಗ ಮಾತ್ರ ಈ ಜಗತ್ತನ್ನು ದೇವರು ನ್ಯಾಯವಾಗಿ ನಡೆಸುತ್ತಿದ್ದಾನೆಂದು ತೀರ್ಮಾನಿಸಬಹುದು. ದೇವರಿಗೆ ಹೇಗಾದರೂ ಮಾಡಿ ಸುಗುಣಗಳ ಕಿರೀಟ ಸ್ವರ್ಗ ನರಕಗಳ ಮಾತೆತ್ತುವುದು ಮರಳುತನ.

ಸಂಪ್ರದಾಯಶರಣತೆಯ ಬದಲು ಬುದ್ಧಿಶೀಲತೆ, ಮತಾಂಧತೆ ದೇವ ಬದಲು ಮಾನವೀಯತೆ ಬೇಕು. ಈ ಜಗತ್ತಿನಲ್ಲಿ ನಾಲ್ಕು ಜನಕ್ಕೆ ದುಡಿದವನನ್ನು ಯಾವ ದೇವರೂ ನರಕದಲ್ಲಿ ನರಳಿಸಲಾರ; ಆದ್ದರಿಂದ ಕಾಲಹರಣ ಮಾಡುವುದರ ಬದಲು ನಾಲ್ಕು ಜನಕ್ಕೆ ಒಳಿತಾದ ಕಾರ್ಯಕ್ಕಾಗಿ ಕಾಲವನ್ನು ಬಳಸಿ. ಈ ಜಗತ್ತಿನಲ್ಲಿ ನಾಲ್ಕು ಜನರಲ್ಲಿ ವಿಶ್ವಾಸವಿರುವವನನ್ನು ದೇವರು ದ್ವೇಷಿಸಲಾರ. ದೇವರಲ್ಲಿ ವ್ಯರ್ಥ ಭಕ್ತಿಯನ್ನು ತೋರಿಸುವುದರ ಬದಲು, ಮಾನವರಲ್ಲಿ ವಿಶ್ವಾಸವನ್ನು ತೋರಿಸಿ.

ದೇವರಲ್ಲಿ ಭಕ್ತಿ ಹೆದರಿಕೆಗಳಿರುವುದಕ್ಕಿಂತ ನಿಮ್ಮ ಸತಿ ಸುತರಲ್ಲಿ ಬಂಧು

ಮಿತ್ರರಲ್ಲಿ ಪ್ರೀತಿ ವಿಶ್ವಾಸವಿಡುವುದು ಲೇಸು. ಕ್ಷುಲ್ಲಕ ಮಾನವನ ವಿಶ್ವಾಸದಿಂದ ದೇವರಿಗೆ ಏನೂ ಆಗಬೇಕಾದುದಿಲ್ಲ. ಆದರೆ ನಿಮ್ಮ ಹೆಂಡತಿ, ಮಕ್ಕಳಿಗೆ ಸೋದರ ಸೋದರಿಯರಿಗೆ ಹಲವಾರು ಅನುಕೂಲವುಂಟಾಗುತ್ತದೆ. ಮಕ್ಕಳಲ್ಲಿ ಪ್ರೀತಿಯಿದ್ದರೆ, ಅವುಗಳ ಹುಟ್ಟಿನಿಂದ ಮೊದಲ್ಗೊಂಡು ಅವು ದೊಡ್ಡವರಾಗುವವರೆಗೆ ದಿನದಿವೂ ಗಳಿಗೆ ಗಳಿಗೆಯೂ ಮಕ್ಕಳ ಬದುಕು ಆನಂದದ ಹೊನಲಾಗುವುದು! ಮಗುವಿಗಿತ್ತ ಪ್ರೀತಿಯ ಸತ್ಫಲ ನಿಮ್ಮ ಮುಪ್ಪಿನಲ್ಲಿ ನಿಮಗೂ ಉಂಟಾಗುವುದು. ದೇವರನ್ನು ಪ್ರೀತಿಸಿ (?) ತಮ್ಮ ಮಕ್ಕಳ ಮರಿಯನ್ನು ಕಸಕ್ಕಿಂತ ಕಡೆಯಾಗಿ ಕಟುಕತನದಿಂದ ಕಾಣುವವರು ಸಮಾಜದಲ್ಲಿ ಹಲವಾರು ಜನ ಸಿಗುತ್ತಾರೆ; ಇಂಥವರ ಮುಪ್ಪಿನಲ್ಲಿ ಮಕ್ಕಳ ಕರ್ತವ್ಯ ಏನೂ ಇಲ್ಲವೇ ಇಲ್ಲ. ಕಲ್ಲಿನ ಗುಡಿಗಳನ್ನು ಕಟ್ಟುವುದಕ್ಕಿಂತ ಅಮೃತದ ಮನೆ ಕಟ್ಟುವುದು ಲೇಸು. ಪ್ರೀತಿಯಿಂದ ನಿರ್ಮಿತವಾದ ಮನೆಯಷ್ಟು ಪವಿತ್ರವಾದ ಗುಡಿ ಯಾವುದೂ ಇಲ್ಲ.

ಗಣೇಶನ ಮಣ್ಣಿನ ವಿಗ್ರಹಗಳನ್ನು ಪೂಜಿಸಿ, ನೀರಿನಲ್ಲಿ ಮುಳುಗಿಸುತ್ತಾರೆ. ಈ ಪ್ರತಿಮೆಗಳು ಹೂ, ಜೋಯಿಸರ ಭಾವನೆ. ಪೂಜಾವೆಚ್ಚ ಇತ್ಯಾದಿಗಳಿಗಾಗಿ ಕೋಟ್ಯಂತರ ಜನ ಅಪಾರವಾದ ಹಣ ವ್ಯರ್ಥವಾಗಿ ವೆಚ್ಚ ಮಾಡುತ್ತಾರೆ. ಇದಕ್ಕೆ ಬದಲು, ಅದೇ ಹಣವನ್ನು ಶಾಲೆಗಳಲ್ಲಿ, ಆಸ್ಪತ್ರೆಗಳಲ್ಲಿ, ಬಡವರಿಗೆ ಊಟ ತಿಂಡಿ, ಬಟ್ಟೆಗಳಿಗಾಗಿ ವೆಚ್ಚ ಮಾಡುವುದು ಸಾರ್ಥಕವಲ್ಲವೆ?

ಕ್ಷುಲ್ಲಕನಾದ ಮಾನವನೊಬ್ಬನ ಅತೃಪ್ತಿ ಮಹಿತೋಮಹಿಮನಾದ ದೇವರಿಗೆ ಘಾತವುಂಟು ಮಾಡುವುದು; ಅದರಿಂದ ದೇವರಿಗೆ ಕೋಪಬರುವುದು; ಎಂದು ಹೆದರುವುದು ಅನಾವಶ್ಯಕ. ನಮ್ಮಂತ ಇತರ ಜನರಿಗೆ ಘಾತವುಂಟು ಮಾಡಬಾರದೆಂಬ ಹೆದರಿಕೆಯಿರಬೇಕು. ಎಸಗಲು ಅಸಾಧ್ಯವಾದ ಅಪರಾಧದದ ಬಗೆಗೆ ಹೆದರಿಕೆ ಬೇಡ. ಮಾಡಬಹುದಾದ ಅಪರಾಧದ ಬಗೆಗೆ ಹೆದರಿಕೆಯಿರಲಿ. ಅಂತರಹಿತನೂ, ಸ್ವಯಂ ಪರಿಪೂರ್ಣನೂ, ನಿರ್ವಿಕಾರನೂ ಆದ ದೇವರನ್ನು ಯಾರೂ ಘಾತಿಸಲಾರರು. ಇತರರು ಮಾಡುವ ಒಳಿತು ಕೆಡುಕುಗಳು ಸ್ವಯಂಪರಿಪೂರ್ಣನ ಆನಂದವನ್ನು ಹಿಗ್ಗಿಸಲಾರವು; ಕುಗ್ಗಿಸಲಾರವು. ಏಕೆಂದರೆ ಇತರರಿಂದ ದೇವರಿಗೆ ಘಾತವಾಗುವುದರಿಂದ ಅವನು ಸ್ವಯಂಪರಿಪೂರ್ಣನೇ ಅಲ್ಲ.

ಭವಿಷ್ಯ ದೇಗುಲದ ತಳಹದಿಯನ್ನು ಇಂದು ಹಾಕಬೇಕು. ಈ

ದೇಗುಲದಲ್ಲಿ ಈ ದೇವರ ವಿಗ್ರಹವನ್ನು ಪ್ರತಿಷ್ಠಾಪನೆ ಮಾಡುವುದಿಲ್ಲ. ಮಾನವೀಯತೆಯನ್ನು ಆರಾಧಿಸಬೇಕಾಗುತ್ತದೆ. ಪ್ರೇಮ, ಸ್ನೇಹ, ಸಜ್ಜನಿಕೆ, ಔದಾರ್ಯ, ಸೌಂದರ್ಯ ಈ ದೇಗುಲದಲ್ಲಿ ಪೂಜಿತವಾಗುತ್ತದೆ.

ವೇದದ ಮಹೋನ್ನತ ಗುಣವೆಂದರೆ, 'ಪರರ ಚಿಂತನೆಯಲ್ಲಿ ಇಹವನ್ನು ಮರೆಯಿರಿ' ಎಂದು ಹೇಳದೆ ಇರುವುದು. ವೇದ ಈ ಬದುಕಿನ ಸುಖಭೋಗ ಗಳಿಗಾಗಿಯೇ ಬೋಧನೆಗಳನ್ನು ನೀಡುತ್ತದೆ. ಇದೇ ತತ್ವ ಮುಂದೆಯೂ ಮತಾಧಿಕಾರಿಗಳಿಂದ ಬೋಧಿಸಲ್ಪಟ್ಟಿದ್ದರೆ ಲಕ್ಷಾಂತರ, ಕೋಟ್ಯಾಂತರ ಜನರ ಬಾಳು ಹಸನವಾಗುತ್ತಿತ್ತು. ಸುಖವಾಗಿರುತ್ತಿತ್ತು.

ವೇದದಲ್ಲಿ ನಿರೂಪಿತವಾಗಿರುವಂತೆ, ಆರಾಧಕರು ಅಮರತೆಯನ್ನಾಗಲಿ ಸ್ವರ್ಗವನ್ನಾಗಲಿ ಬೇಕೆಂದು ದೇವರನ್ನು ಬೇಡಿಕೊಳ್ಳುತ್ತಿರಲಿಲ್ಲ. ತುಂಬು ನೂರು ವರ್ಷ ಆಯಸ್ಸು, ಅಭ್ಯುದಯ, ಯುದ್ಧ, ಸಮರ್ಥ ಸಂತಾನ ಮುಂತಾದ ಐಹಿಕ ಸುಖಗಳನ್ನು ಕೊಡೆಂದು ಬೇಡಿಕೊಳ್ಳುತ್ತಿದ್ದರು. ಶತ್ರುವಿನಾಶ, ರೋಗ ವಿಮುಕ್ತತೆ, ಆಹಾರದಲ್ಲಿ ಸಮೃದ್ಧತೆ ಇವು ವೇದದ ಋಷಿಗಳ ಸಂತೋಷಕರವಾದ ಗುರುಗಳಾಗಿದ್ದವು. 'ಅಗ್ನಿಯೇ ಹಲವರನ್ನು ಕಾಪಾಡಬಲ್ಲ ಐಶ್ವರ್ಯವನ್ನು ನಮ್ಮ ಪ್ರಮುಖರಿಗೆಲ್ಲ ಕೊಡು' ಎನ್ನುತ್ತಾನೆ ವಸಿಷ್ಠ (ಋಗ್ವೇದ VII.೫.೯) 'ಓ ಇಂದ್ರ, ಅಮೂಲ್ಯ ವಸ್ತುಗಳಿಂದ ನಮ್ಮನ್ನು ತೃಪ್ತಿಗೊಳಿಸು. ನಮ್ಮ ಒಡೆಯರಿಗೆ ಸಮೃದ್ಧಿಯಾದ ಆಹಾರವನ್ನೂ ಧೀರವಾದ ಸಂತಾನವನ್ನೂ ಕೊಡು (VII.೨೪.೬) 'ನಾವು ನೂರು ವರ್ಷ ಸೂರ್ಯೋದಯವನ್ನು ನೋಡುವಂತಾಗಲಿ, ನಾವು ನೂರು ವರ್ಷ ಬದುಕುವಂತಾಗಲಿ' (VII.೬೭.೧೬).

ಕಾಣದ, ಇಲ್ಲದ ಪರಲೋಕಕ್ಕಾಗಿ ತಹತಹಪಡುತ್ತ ತಿಣುಕಾಡುವ ಮನೋಭಾವ ಋಗ್ವೇದದಲ್ಲಿ ಕಾಣಬರುವುದಿಲ್ಲ. ಈ ಬದುಕಿನಲ್ಲಿ ಉಲ್ಲಾಸದ ಆಸಕ್ತಿ ಎದ್ದುತೋರುತ್ತದೆ. ಋಗ್ವೇದದಲ್ಲಿ ನಿವೃತ್ತಿ ಅಥವಾ ಪರಿತ್ಯಾಗಕ್ಕೆ ಉಪದೇಶವಿಲ್ಲ, ವೇದದ ಮತ ಆಶಾಪೂರಿತವಾದುದು.

ಕಮ್ಯೂನಿಸ್ಟ್ ರಷ್ಯಾದಲ್ಲಿ ದೇವರಿಲ್ಲ. ಜನ ಸಾಮಾನ್ಯವಾಗಿ ನಾಸ್ತಿಕವಾದವನ್ನು ಎತ್ತಿ ಹಿಡಿಯುತ್ತಾರೆ. ಮೊದಲಿನ ಚರ್ಚ್‌ಗಳಲ್ಲಿ ಜನ ಬೇರೆ ಕೆಲಸ ಮಾಡುತ್ತಾರೆ. ರಷ್ಯದ ಜನ ಬದುಕಿದ್ದಾರೆ. ಬೇರೆ ದೇಶಗಳಲ್ಲಿ ಜನ ದೇವರಿದ್ದಾನೆ; ಬದುಕಿದ್ದಾರೆ.

ದೇವರಿಲ್ಲ, ದೇವರಿದ್ದಾನೆ; ಎಲ್ಲಾ ರೂಢಿ. ಎಲ್ಲಾ ಬದುಕುವರು.

* * *

ಜಗತ್ತು ಹೊಸ ಯುಗವನ್ನು ಕಾಣಲು ತೊಡಗಿದೆ. ಪರದ ಆಸೆಯಲ್ಲಿ ಇಹವನ್ನು ಕಳೆದುಕೊಳ್ಳಿರೆಂದು ಬೋಧಿಸುವ ಮತ ಜನಕ್ಕೆ ಬೇಡವೆನಿಸುತ್ತಿದೆ. ಇಹದಲ್ಲೇ ಸುಖ ಸೌಭಾಗ್ಯಗಳನ್ನು ಒದಗಿಸುವ ಪ್ರಯೋಜನಕಾರಿ ಮತದಲ್ಲಿ ಜನಕ್ಕೆ ಶ್ರದ್ಧೆಯುಂಟಾಗುತ್ತಿದೆ.

ಕೃಷಿಯ ನೂತನ ವಿಧಾನಗಳನ್ನು ಕಂಡುಹಿಡಿದು ಹೆಚ್ಚು ಬೆಳೆ ಒದಗಿಸುವ ಜನ, ಉಕ್ಕಿನ ಸೇತುವೆಗಳನ್ನು ಕಟ್ಟಿ ದೊಡ್ಡ ದೊಡ್ಡ ನದಿಗಳನ್ನು ಧಿಕ್ಕರಿಸಿದ ಜನ, ಭಾರಿ ಅಣೆಕಟ್ಟುಗಳನ್ನು ಕಟ್ಟಿ ವಿಶಾಲ ಕ್ಷೇತ್ರಗಳಿಗೆ ನೀರೊದಗಿಸಿ ಜನರ ಉಣಿಸನ್ನು ಅಧಿಕಿಸಿದವರು, ರೈಲು ವಿಮಾನಗಳನ್ನು ಕಂಡುಹಿಡಿದವರು, ಮುದ್ರಣ ಸಾಧನಗಳನ್ನು ಕಂಡುಹಿಡಿದು ಬಳಕೆಗೆ ತಂದು ಜ್ಞಾನಪ್ರಸಾರಕ್ಕೆ ಹಿಂದೆಂದೂ ಕಾಣದ ಅನುಕೂಲತೆಗಳನ್ನು ಕಲ್ಪಿಸಿದವರು. ಬಗೆಬಗೆಯ ಯಂತ್ರಗಳನ್ನು ಸೃಜಿಸಿ ಮಾನವಕೋಟಿಗೆ ಹಿಂದೆ ಯಾವ ಕಾಲದಲ್ಲೂ ಕಾಣದ ಸುಖಸಾಧನಗಳನ್ನು ಒದಗಿಸಿದವರು, ಪರ್ವತಾಗ್ರಗಳ ಸಾಗರತಳಗಳ ವೈಚಿತ್ರ್ಯಗಳನ್ನು ನೋಡಿ ಹೇಳಿದವರು, ಆಕಾಶ ನಕ್ಷತ್ರ ಗ್ರಹ ಚಂದ್ರ ಸೂರ್ಯರ ಅದ್ಭುತಗಳನ್ನು ವೀಕ್ಷಿಸಿದ ಖಗೋಳ ಶಾಸ್ತ್ರಜ್ಞರು, ಶ್ರೇಷ್ಠವಾದ ಕವಿ ಕಲಾವಿದ ಗಾಯಕ ನರ್ತಕ ವಾಗ್ಮಿಗಳ, ಮಾನವನ ದೇಹದ ನೋವನ್ನು ಕಡಿಮೆಮಾಡಲು ಬಗೆಬಗೆಯ ಔಷಧಿ ಚಿಕಿತ್ಸೆಗಳನ್ನು ಸಂಶೋಧಿಸಿದ ವೈದ್ಯರು; ಇವರೇ ನೂತನ ಮತದ ಮಠಾಧಿಪತಿಗಳು, ಪಂಡರು, ಪೂಜಾರರು, ಯೋಗಿಗಳು, ಋಷಿಮುನಿಗಳು. ವಿಜ್ಞಾನದ ವಿಜಯಗಳೇ ಪವಾಡಗಳು. ನಿಸರ್ಗವನ್ನು ವಿವರಿಸುವ ಗ್ರಂಥಗಳೇ ವೇದಪುರಾಣಗಳು. ಪ್ರತಿನಕ್ಷತ್ರದಲ್ಲಿ, ಪ್ರತಿಯೊಂದು ಜೀವಿಯಲ್ಲಿ ಪ್ರತಿ ಅಣುವಿನಲ್ಲಿ ಇರುವ ಶಕ್ತಿಯೇ ದೇವರು.

ನಮಗಿರುವುದು ಈ ಲೋಕವೊಂದೇ, ಈ ಜನ್ಮವೊಂದೇ, ಕೋಟಿ ಕೋಟಿ ಜ್ಯೋತಿವರ್ಷ (light years)ಗಳಷ್ಟು ದೂರವಿರುವ ನಕ್ಷತ್ರಗಳನ್ನು ವೀಕ್ಷಿಸಿದ ಟೆಲಿಸ್ಕೋಪ್‌ಗಳಿಗೂ ಯಾವ ಸ್ವರ್ಗ ನರಕಗಳೂ ಕಾಣಲಿಲ್ಲ. ಸ್ವರ್ಗವಿರುವುದೂ ಈ ಲೋಕದಲ್ಲೇ. ಮನುಷ್ಯನ ಉಸಿರು ನಿಂತ ಮೇಲೆ ಅವನ ದೇಹವನ್ನು ಬೆಂಕಿಯಲ್ಲಿ ಸುಟ್ಟರೆ ಬೂದಿ ಸಿಗುತ್ತದೆ. ಮಣ್ಣಿನಲ್ಲಿ ಹೂತರೆ ಮಣ್ಣಾಗುತ್ತದೆ; ಯಾವ ಆತ್ಮವೂ ಸಿಗುವುದಿಲ್ಲ. ಹೊರಗಿನ ಗಾಳಿಯನ್ನು

ಮೂಗಿನ ಮೂಲಕ ಶ್ವಾಸಕೋಶಗಳಿಗೆ ಎಳೆದುಕೊಂಡಾಗ, ಶ್ವಾಸಕೋಶದ ರಕ್ತನಾಳಗಳು ಆಮ್ಲಜನಕವನ್ನು ಹೀರಿ ಇಂಗಾಲಾಮ್ಲವನ್ನು ಬಿಡುವುವು. ಈ ನಿಶ್ವಾಸ ಗಾಳಿ ಮತ್ತೆ ಮೂಗಿನ ಮೂಲಕ ಹೊರಬರುವುದು; ಇನ್ನಾವ ಪ್ರಾಣವಾಯುವೂ ಅಲ್ಲ. ಪುನರ್ಜನ್ಮವೊಂದು ಭ್ರಾಮಕ ಕಲ್ಪನೆ.

ನಮ್ಮ ಕರ್ತವ್ಯದ ಉದ್ದೇಶ ಇಲ್ಲದ ಪರಕ್ಕಾಗಿ ಕೂಡದು. ನಮ್ಮ ಸಮಾಜದ, ಜಗತ್ತಿನ ಒಳಿತಿಗಾಗಿ ನಾವು ಕಾರ್ಯಶೀಲರಾಗಬೇಕು. ಸುಳ್ಳಿನ ದೇವರಲ್ಲಿ ಭಕ್ತಿ ಪ್ರದರ್ಶನಕ್ಕಾಗಿ ಕಾಲಹರಣಗಳನ್ನು ವ್ಯರ್ಥಮಾಡುವುದರ ಬದಲು, ಮಾನವರಲ್ಲಿ ತಮ್ಮ ವಿಶ್ವಾಸವನ್ನು ನೀಡುವುದಕ್ಕಾಗಿ ಕಾಲವನ್ನೂ, ಪ್ರಾಣವನ್ನೂ ಬಳಸುವುದು ಒಳಿತು. ಮಾನವರನ್ನು ದ್ವೇಷಿಸಿ ದೇವರನ್ನು ಪ್ರೇಮಿಸುವುದು ಸರಿಯಲ್ಲ. ದೇವರನ್ನು ಮರೆತು ಮಾನವರನ್ನು ಪ್ರೇಮಿಸೋಣ. ಧೈರ್ಯವನ್ನೂ ಸಂತೋಷವನ್ನೂ ವರ್ಧಿಸಿಕೊಳ್ಳೋಣ. ಒಳ್ಳೆಯ ಜನಕ್ಕೆ ನಮ್ಮ ಹೃದಯವನ್ನು ತೆರೆಯೋಣ.

■

# ಜೀವನ ಮತ್ತು ಕಲೆ

## ಆಶಯ :

## ಮೈತ್ರಿಸೂತ್ರ

**–ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ (ತತ್ವಕಥನ–ಆಯ್ದಭಾಗ)**

ಈಚಿನ ವರ್ಷಗಳಲ್ಲಿ ಯಾವಯಾವುದೋ ವಿಚಾರಕ್ಕೆ ವೈಮನಸ್ಯ–ಸಂಘರ್ಷ, ವ್ಯಕ್ತಿದ್ವೇಷ, ಮತೀಯ ಭಾವನೆಗಳು ವಿಜೃಂಭಿಸುತ್ತಿವೆ. ಇಂಥವು ಸಮಾಜದ ಎದುರಿಗೆ ಬಂದಾಗ ತಿಳಿದವರು, ಅರೆತಿಳಿದವರು, ಅಲ್ಪರು, ಅಲ್ಪಾತಿಅಲ್ಪರು – ನಾನಾ ವರಸೆಗಳಲ್ಲಿ ಮಾತನಾಡುತ್ತಿರುತ್ತಾರೆ. ಅವರವರ ಮಾತಿಗೆ ಯಾವ ಪೂರ್ವಾಪರವೂ ಇರುವುದಿಲ್ಲ. ಸಮಾಜ–ಸಂಸ್ಕೃತಿ ನಡೆದು ಬಂದ ದಾರಿಯ ತಿಳಿವಳಿಕೆಗಳು ಅಂಥವರಿಗೆ ಇರುವುದಿಲ್ಲ. ಚರಿತ್ರೆಯಲ್ಲಿ ನಡೆಯಬಾರದ ಅನೇಕ ಘಟನೆಗಳು ನಡೆದಿವೆ. ಅಂಥ ಘಟನೆಗಳನ್ನು ಸಾಮರಸ್ಯದ ಮೂಲಕ ಹಿರಿಯರು, ಯೋಗಿಗಳು, ಸಂನ್ಯಾಸಿಗಳು, ಸಾಧು–ಸಂತರು ಶಮನಿಸಿದ್ದಾರೆ. ನಾವು ಈ ಸಂಗತಿಯನ್ನು ಗಮನಿಸಬೇಕು! ತಿಳಿಯಲಾರದ ಮುಗ್ಧರು ಅನೇಕ ಬಾರಿ ಬಲಿಪಶು ಆಗುವುದುಂಟು. ವಿಚಾರ–ವಿವೇಕಗಳನ್ನು ಎಂದೂ ಆವೇಶಕ್ಕೆ ಬಲಿಗೊಡಬಾರದು. ಕಳೆದ ಎರಡು ಸಾವಿರದ ಐದುನೂರ ಅರವತ್ತು ವರ್ಷಗಳ ಹಿಂದೆ ಬುದ್ಧ ಭಗವಾನರು ಲೋಕಕ್ಕೆ ಸಾರಿದ್ದು 'ಮೆತ್ತಸುತ್ತಂ' ಎಂಬ ಅಪೂರ್ವ 'ಸೂತ್ರ'ವೊಂದನ್ನು ಲೋಕಕ್ಕೆ ಸಾರಿದರು. ಅದು ಅಂದಿನಿಂದ ಇಂದಿನವರೆಗೆ ನಮಗೆ 'ವಿವೇಕ'ವನ್ನು ನೀಡುತ್ತಿದೆ.

ಈ ಸೂತ್ರದಲ್ಲಿ 'ಸಮವಾಯ ತತ್ವ'ವೇ ಪ್ರಧಾನವಾಗಿದೆ. ಸಮವಾಯ–ಎಂದರೆ, ಒಬ್ಬರು ಇನ್ನೊಬ್ಬರ ಧರ್ಮವನ್ನು ಕೇಳಬೇಕು. ಶುಶ್ರೂಷೆ ಮಾಡಬೇಕು. ಎಲ್ಲ ಮತದವರು ಬಹುಶ್ರುತರಾಗಿ ಕಲ್ಯಾಣಮಾರ್ಗದತ್ತ ಸಾಗಬೇಕು. ಇದು ಭಗವಂತನಾದ ಬುದ್ಧನ ಲೋಕೋತ್ತರ ಆಶಯ! 'ಸೂತ್ರ' ಎಂದರೆ ದಾರ. ನಮ್ಮನ್ನೆಲ್ಲಾ 'ಮೈತ್ರಿ'? ಎಂಬ ದಾರದಲ್ಲಿ ಸೂತ್ರಿಸಿಕೊಳ್ಳಬೇಕು. ಜೀವನವು ಸೂತ್ರದಿಂದ ಬಂಧಿತವಾಗಿದೆ.

■

# ಬಿಡುಗಡೆ

– ವೀಣಾಶಾಂತೇಶ್ವರ

"ಸರೂ, ಏ ಸರೂ... ಏಳಲ್ಲ, ಬೆಳಗಾಗಿ ಹೋಗಿ ಎಷ್ಟೊತ್ತಾತು......"

ಪ್ರೀತಿ ತುಂಬಿದ ಮೃದುವಾದ ದನಿಯಲ್ಲಿ ಆತ ಹೆಂಡತಿಯನ್ನು ಎಬ್ಬಿಸುತ್ತಿದ್ದ. "ಉಹ್ಞೂ ಉಹ್ಞೂ" ಬೆಳಗಿನ ಸವಿನಿದ್ದೆಯ ಮಂಪರಿನಿಂದ ಹೊರಬರಲು ಇಚ್ಛಿಸದ ಸರೋಜಾ ಮುಸುಕನ್ನು ಇನ್ನಷ್ಟು ಬಿಗಿಯಾಗಿ ಎಳೆದುಕೊಂಡಳು. ಆತ ಆಕೆಯ ಮುಸುಕು ಸರಿಸಿ ಹಣೆಯ ಮೇಲೆ ಹೂಮುತ್ತನ್ನೊತ್ತಿ ಮತ್ತೆ ಹೇಳಿದ, "ಜಾಣಮರಿ, ಏಳು, ಇವತ್ತು ಸೋಮವಾರ, ಇಬ್ರೂ ಡ್ಯೂಟಿಗೆ ಹೋಗಬೇಕಲ್ಲ?"

ಹಾಗೆ ಹತ್ತಾರು ನಿಮಿಷ ಮುದ್ದುಗರೆದರೂ ಆಕೆ ಏಳದಿದ್ದಾಗ ಎದ್ದು ಹೊರಡುತ್ತ ಆತನೆಂದ, "ನಿನ್ನೆ ರಾತ್ರಿ ಭಾಳೊತ್ತನಕ ಅಕೌಂಟ್ಸ್ ಬರಕೋತ ಕೂತಿದ್ದೆಲ್ಲ, ಅದಕ್ಕ ನಿನ್ನ ನಿದ್ದಿ ಮುಗೀವಲ್ದು. ಅಡ್ಡಿಯಿಲ್ಲ, ಮಲಕೋ. ನಾನs ಒಂದಿಷ್ಟು ಬ್ರೇಕ್ ಫಾಸ್ಟ್ ರೆಡೀ ಮಾಡ್ತೀನಿ. ಅಮ್ಯಾಲ ಎದ್ದೀಯಂತೆ."

ಸರೋಜಾಗೆ ಅಂತಹ ಗಾಢ ನಿದ್ದೆಯೇನೂ ಹತ್ತಿರಲಿಲ್ಲ. ಆಕೆ ಮಂಚದ ಮೇಲೆ ಸುಖವಾಗಿ ಮಲಗಿದ್ದಂತೆಯೇ ಅಡಿಗೆಮನೆಯಿಂದ ಕೇಳಿಬರುತ್ತಿದ್ದ ಸದ್ದುಗಳಿಗೆ ಕಿವಿಗೊಟ್ಟಳು. ಹಾಲು ಕಾಯಿಸುತ್ತಿದ್ದಾನೆ... ರವೆ ಹುರಿಯುತ್ತಿದ್ದಾನೆ.... ಉಪ್ಪಿಟ್ಟಿಗೆ ಒಗ್ಗರಣೆ ಹಾಕುತ್ತಿದ್ದಾನೆ... ಚಹಾಕ್ಕೆ ಎಸರು ಇಡುತ್ತಿದ್ದಾನೆ.... ಡಬ್ಬಿಗಳನ್ನು ತಡಕಾಡುತ್ತಿದ್ದಾನೆ, ಬಹುಶಃ ಸಕ್ಕರೆ ಸಿಕ್ಕಿಲ್ಲ, ತೆಗೆದಿರಿಸಿದ್ದು ಮುಗಿದಿರಬೇಕು, ದೊಡ್ಡ ಡಬ್ಬಿಯೊಂದು ಕಪಾಟಿನಲ್ಲಿದೆ, 'ಸರೂ, ಸಕ್ಕರಿ ಎಲ್ಲದ?' ಅಂತ ಬಹುಶಃ ಕೂಗುತ್ತಾನೆ... ಇಲ್ಲ, ಹುಡುಕಾಟ ಮುಂದುವರಿಸಿದ್ದಾನೆ, ಮಲಗಿರುವ ಹೆಂಡತಿಗೆ ಡಿಸ್ಟರ್ಬ್ ಮಾಡಬಾರದೆಂದು ತಾನೆ ಹುಡುಕುತ್ತಿದ್ದಾನೆ.... ಸಿಕ್ಕಿರಬೇಕು. ಸಿಗದೆ ಏನು? ಎಲ್ಲಾ ಸಾಮಾನುಗಳೂ ಅಡಿಗೆ ಮನೆಯಲ್ಲೆ ಒಂದಿಲ್ಲೊಂದು ಡಬ್ಬಿಯಲ್ಲೋ ಬಾಟಲಿಯಲ್ಲೋ ಇದ್ದೇ ಇರುತ್ತವಲ್ಲ.... ಹುಡುಕಿಕೊಳ್ಳುವಷ್ಟು ವ್ಯವಧಾನ ಇರಬೇಕಷ್ಟೆ.

"ಸರೂ ಡಾರ್ಲಿಂಗ್, ಚಹಾ–ತಿಂಡಿ ರೆಡಿ. ಈಗರೆ ಏಳು ಮಹಾರಾಯ್ತಿ".... ಆತ ಒಳಗಿನಿಂದ ಕೂಗಿದ. ಹೌದು, ಈಗ ಏಳಲೇಬೇಕು. ಇಲ್ಲವಾದರೆ ತನ್ನ ಬ್ಯಾಂಕಿಗೆ ಆಮೇಲೆ ಅವನ ಆಫೀಸಿಗೆ ಹೊತ್ತಾಗಿ ಬಿಡುತ್ತದೆ....

"ಹಾಯ್ ಸರೂ, ನೀ ಬ್ಯಾಂಕಿನಿಂದ ಬಂದು ಭಾಳೋತ್ತಾತ್ತೇನು?" ಸಾರಿ, ನನಗ ಲಗೂ ಬರ್ಲಿಕ್ಕೆ ಆಗ್ಲಿಲ್ಲ. ಇವತ್ತ ಪಗಾರದ ದಿವಸ. ಆಫೀಸಿನ್ಯಾಗ ಗದ್ದಲೋಗದ್ದಲ. ಎಲ್ಲಾರೂ ಪಗಾರದ ಸಲುವಾಗಿ ಕಾಯ್ಕೊಂಡು ಕೂತಿರ್ತಾರ. ಎಲ್ಲರಿಗೂ ಕೊಟ್ಟು, ಬರೂದ್ರಾಗ ತಡಾ ಆತು. ಇವತ್ತ ಶನಿವಾರ, ಹಾಫ್ ಡೇ. ಅದಕ್ಕ ಮಧ್ಯಾಹ್ನ ಲಗೂನೇ ಬಂದು ನಿನ್ನ ಮ್ಯಾಟಿನಿ ಶೋಕ್ಕ ಕರ್ಕೊಂಡು ಹೋಗ್ತೀನೀಂತ ಪ್ರಾಮೀಜ್ ಮಾಡಿದ್ದೆನಲ್ಲ. ವ್ಹೆರಿ ವ್ಹೆರಿ ಸಾರಿ" – ತನ್ನದಲ್ಲದ ತಪ್ಪಿಗಾಗಿಯೂ ಆತ ಕ್ಷಮೆ ಕೇಳುತ್ತಿದ್ದ. ಹೆಂಡತಿ ತನಗಾಗಿ ಕಾಯುವಂತೆ ಮಾಡಿದ್ದು, ಆಕೆಯ ಮನಸ್ಸಿಗೆ ಬೇಸರವಾಗಿರಬಹುದಾಗಿದ್ದು, ಸರಿಯಲ್ಲ ಅಂತ ಆತನಿಗೆ ಅನಿಸುತ್ತಿತ್ತು.

ತಾನು ತಪ್ಪು ಮಾಡಿದಾಗ ತಕ್ಷಣ ಅದಕ್ಕೆ ಪರಿಮಾರ್ಜನೆ ಮಾಡುವುದು ಆತನ ಸ್ವಭಾವ. "ಹೋಗಲಿ, ನೀ ಬ್ಯಾಸರ ಮಾಡಿಕೋಬ್ಯಾಡ. ಈಗ ಊಟಾ ಮಾಡಿ ರೆಸ್ಟ್ ತಗೊಳ್ಳೋಣ. ಸಂಜೀನ್ಯಾಗ ಹೋಗೋಣಂತ ಸಿನೆಮಾಕ್ಕ, ಯಾವುದದು, ನಿನ್ನ ಪೆಟ್ ಹೀರೋ ಶಮ್ಮಿ ಕಪೂರ ಇದ್ದಾನಲ್ಲ? ರಾತ್ರೀ ಅಡಗಿ ಪಡಿಗಿ ಏನೂ ಮಾಡಬ್ಯಾಡ. ಕಾಮತ್ ಹೋಟೆಲ್‌ನ್ಯಾಗ ಊಟಾ ಮಾಡೇ ಮನಿಗೆ ಬರೂಣಂತ. ನಿನಗೆ ಅಲ್ಲಿಯ ಚೈನೀಜ್ ಡಿಶ್ ಸೇರ್ತಾವಲ್ಲ?"

ಸಿನೇಮಾಗೆ ಅಥವಾ ಹೊರಗೆಲ್ಲಾದರೂ ಹೋಗಿ ತಡವಾಗಿ ಮನೆ ಬಂದ ನಂತರ ಅಡಿಗೆ ಮಾಡುವುದು ಬೇಸರದ ಕೆಲಸವೆಂದು ಆತನಿಗೆ ಗೊತ್ತು. ಬೇಸರ ಬಂದರೂ ತೊಂದರೆಯಾದರೂ ದಣಿವಾಗಿದ್ದರೂ ಹಾಗಂತ ಹೇಳದೆ ಸಾಮಾನ್ಯವಾಗಿ ಎಲ್ಲ ಹೆಂಗಸರು ಅಡಿಗೆ ಮಾಡಿಯೇ ಮಾಡುತ್ತಾರಲ್ಲ, ತನ್ನ ಹೆಂಡತಿಗೆ ಆ ತಾಪತ್ರಯ ಬೇಡವೆಂದು ಆತನ ಇಚ್ಛೆ.

ಹಾಗೆಯೇ ಆಕೆಗೆ ಏನೆಲ್ಲ ಬೇಕು ಅನ್ನುವುದನ್ನೂ ಆತ ಎಷ್ಟು ಚೆನ್ನಾಗಿ ಸ್ಟಡೀ ಮಡಿ ಅಬ್ಸರ್ವ್ ಮಾಡಿ ತಿಳಿದುಕೊಂಡಿದ್ದಾನೆ – ಆಕೆಗೆ ಚೈನೀಜ್ ಡಿಶ್ ಸೇರುತ್ತವೆ. ಅಖ್ತರ್ ಬೇಗಮ್‌ನ ಗಜಲ್ ಸೇರುತ್ತವೆ. ಬಿಳಿ ಹಾಗೂ ತಿಳಿಗುಲಾಬಿ ಬಣ್ಣ ಸೇರುತ್ತವೆ. ಬೆಳದಿಂಗಳಲ್ಲಿ ತಿರುಗಾಡುವುದು ಸೇರುತ್ತದೆ. ಹೊರಗೆ ಮಳೆ ಬರುತ್ತಿದ್ದಾಗ ಒಳಗೆ ಬೆಚ್ಚಗೆ ಕೂತು ಬಿಸಿ ಚಹಾದೊಡನೆ ಕಾಂದಾಭಜಿ ತಿನ್ನಲು ಸೇರುತ್ತದೆ. ಹಗುರವಾದ ಕಾಟನ್ ಸೀರೆಗಳು ಸೇರುತ್ತವೆ. ರಾತ್ರಿ ಆತನ ಎದೆಯಲ್ಲಿ ಮುಖ ಹುದುಗಿಸಿ ಮಲಗಲು ಸೇರುತ್ತದೆ. ಇದೆಲ್ಲಾ

ಆತನಿಗೆ ಗೊತ್ತಿದೆ. ಆಕೆಯ ಈ ಆಸೆಗಳನ್ನು, ಎಂತಹ ಸಿಂಪಲ್ ಆಸೆಗಳು! ಪೂರೈಸಲು ಆತ ಯಾವಾಗಲೂ ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದಾನೆ.

"ಅಂಥಾಗ ಮಹಾರಾಯ್ತಿ, ಮೊದಲ ನನ್ನ ಕಿಸೇದಾಗಿನ ಸ್ಯಾಲರೀ ಅಮೌಂಟು ತಗದಿಡು. ಬೋನಸ್-ಗೀನಸ್ ಅಂತ ಈ ಸರೆ ಭಾಳ ಬಂದದ ನೋಡು, ಹತ್ತು ಸಾವಿರದ ಮ್ಯಾಲೆ ಇರಬೇಕು. ನನ್ನ ಸ್ಕೂಟರಿನ ಪೆಟ್ರೋಲ್ ಖರ್ಚಿಗಷ್ಟು ನೀ ಕೊಟ್ಟರೆ ಸಾಕು. ಉಳದದ್ದೆಲ್ಲಾ ನಿಂದೇ. ನಿನಗ ಹ್ಯಾಂಗ ಬೇಕೋ ಹಾಂಗ ಖರ್ಚುಮಾಡು."

ಮೊದಲು ಆತ ಪ್ರೋಬೇಶನರಿ ಆಫಿಸರ್ ಆಗಿದ್ದ. ಆಗ ಬರುತ್ತಿದ್ದ ಸಂಬಳ ಕಡಿಮೆಯಿತ್ತು. ಆಗಲೂ ಆತ ಹೀಗೆಯೇ ಎಲ್ಲವನ್ನೂ ತಂದು ಆಕೆಯ ಕೈಯಲ್ಲಿಡುತ್ತಿದ್ದ. ಈಗ ಆತ ತನ್ನ ಡಿಪಾರ್ಟ್‌ಮೆಂಟಿನ ಅತ್ಯಂತ ಹಿರಿಯ ಅಧಿಕಾರಿ. ದೊಡ್ಡ ಸಂಬಳ ಬರುತ್ತದೆ. ಈಗಲೂ ಎಲ್ಲಾ ತಂದು ಆಕೆಯ ಕೈಗೆ ಹಾಕುತ್ತಾನೆ. ತನ್ನ ಸಂಬಳದೊಂದಿಗೆ ಆತನದನ್ನು ಆಕೆ ಬ್ಯಾಂಕಿನಲ್ಲಿ ಜಾಯಿಂಟ್ ಅಕೌಂಟನಲ್ಲಿಡುತ್ತಾಳೆ. ಹೆಂಡತಿಗೆ ಬರುವ ಹಣವೆಷ್ಟು, ಎಲ್ಲಿದೆ, ಹೇಗೆ ಖರ್ಚು ಮಾಡುತ್ತಾಳೆ, ಅದೆಲ್ಲ ಆತ ಕೇಳಿದವನೇ ಅಲ್ಲ.

"ಸರೂ, ನೀ ಕೂಸಿಗೆ ಹಾಲು ಕುಡಿಸಿ ನನ್ನ ಕಡೆ ಕೊಟ್ಟುಬಿಡು, ನಾ ನೋಡಿಕೋತೀನೆ. ನೀ ಬ್ಯಾರೆ ರೂಮಿನೊಳಗೆ ಹೋಗಿ ಆರಾಮ ಮಲಕೋ. ಎರಡು ತಿಂಗಳ ಹಸಿ ಬಾಣಂತಿ. ಈ ನಮ್ಮ ರಾಜಕುಮಾರ ಹಗಲೆಲ್ಲಾ ಮಲಗಿ ರಾತ್ರಿಯೆಲ್ಲಾ ಎಚ್ಚರಿರ್ತಾನ. ಅವನ ಜೋಡಿ ನೀನೂ ಜಾಗರಣಿ ಮಾಡಿದರ ನಿನಗ ತ್ರಾಸಾಗ್ತದ. ಇಂವಾ ದೊಡ್ಡಾಂವ ಆಗೂತನಕಾ ರಾತ್ರಿಯೆಲ್ಲಾ ಇವನ್ನ ನೋಡಿಕೊಳ್ಳೋ ಡ್ಯೂಟಿ ನಾ ಮಾಡ್ತೇನಿ. ನಿನ್ನ ಆರೋಗ್ಯ ಮುಖ್ಯ" – ಆತನದು ಬಹಳ ನಿಷ್ಪಕ್ಷಪಾತ ದೃಷ್ಟಿ. ಮಗುವನ್ನು ನೋಡಿಕೊಳ್ಳುವ ಮತ್ತು ಬೆಳೆಸುವ ಜವಾಬ್ದಾರಿ ಕೇವಲ ತಾಯಿಯದು ಅಂತ ಆತ ಒಪ್ಪುತ್ತಿರಲಿಲ್ಲ. ಗಂಡ-ಹೆಂಡತಿ ಇಬ್ಬರೂ ಕೂಡಿ ಮಕ್ಕಳನ್ನು ಹಡೆದಿರುತ್ತಾರೆಂದ ಮೇಲೆ, ಅದರಲ್ಲೂ ಇಬ್ಬರೂ ಉದ್ಯೋಗಸ್ಥರಾಗಿರುತ್ತಾರೆಂದ ಮೇಲೆ, ಮಕ್ಕಳ ಜವಾಬ್ದಾರಿ ಇಬ್ಬರಿಗೂ ಸೇರಬೇಕು ಅಂತ ಆತನ ವಾದ. ಅದಕ್ಕೇ ಆತ ಯಾವಾಗಲೂ ಹೇಳುತ್ತಿದ್ದ, 'ಮಹಿಳಾ ಮತ್ತು ಶಿಶು ಕಲ್ಯಾಣ ಇಲಾಖೆ' ಅನ್ನುವ ಪದಪ್ರಯೋಗವೇ ತಪ್ಪು. ಅದನ್ನು 'ತಂದೆ-ತಾಯಿ ಮತ್ತು ಶಿಶು ಕಲ್ಯಾಣ ಇಲಾಖೆ' ಅಂತ ಬದಲಾಯಿಸಬೇಕು.

"ಸರೂ, ನೀ ತಿಂಡಿ ರೆಡಿ ಮಾಡೂದ್ರಾಗ ನಾನು ರಾಜೂಗ ಸ್ನಾನ ಮಾಡಿಸಿ ಡ್ರೆಸ್ ಹಾಕಿ ಸ್ಕೂಲ್‌ಬ್ಯಾಗ್ ತಯಾರಿ ಮಾಡಿರ್ತೀನಿ. ಅಥವಾ ನೀ ಅವನನ್ನ ತಯಾರು ಮಾಡುತ್ತಿದ್ದರ ಮಾಡು, ನಾ ಅವನ ಟಿಫಿನ್ ರೆಡಿ ಮಾಡ್ತೀನಿ. The choice is yours.

"ಸರೂ ಬ್ಯಾಂಕಿನಿಂದ ದಣದು ಬಂದೀದಿ. ಈಗ ರಾತ್ರಿ ಅಡಿಗೀನೂ ನೀನs ಮಾಡೂದು, ಹುಡುಗರಿಗೆ ಹೋಮ್‌ವರ್ಕ್‌ನೂ ನೀನs ಮಾಡಸೂದು, ಹಿಂಗ ಬ್ಯಾಡಾ. ನಾವು ಈ ಎರಡೂ ಕೆಲಸಾ ಹಂಚಿಕೊಳ್ಳೋಣ–ನೀ ಅಡಗಿ ಮಾಡಿದ ದಿವ್ಸ ನಾ ಹೋಮ್‌ವರ್ಕ್ ಮಾಡಸ್ತೀನಿ. ನೀ ಹೋಮ್‌ವರ್ಕ್ ಮಾಡ್ಸಿದ ದಿವ್ಸ ಅಡಿಗಿ ನಂದು."

"ಸರೂ, ಏ ಸರೂ, ಸ್ವಲ್ಪ ಟೆರೇಸ್ ಮೇಲೆ ಬಂದು ಕೂಡ ಬಾ... ಇಲ್ಲೇ ಬಾ, ನಿನಗ ಆರಾಮ ಖುರ್ಚಿ ಹಾಕಿ ದಿಂಬು ಇಟ್ಟೀನಿ ನೋಡು. ಇವತ್ತ ಹುಣ್ಣಿಮೆ. ಬೆಳದಿಂಗಳು ಎಷ್ಟ ಚೆಂದ ಅದ. ಎಲ್ಲಾ ಚಿಂತೀ ಮರತು ಸ್ವಲ್ಪ ಹೊತ್ತು ಕೂಡೋಣ... ಹೀಂಗ ನಾವಿಬ್ಬರs ಬೆಳದಿಂಗಳದಾಗ ಕೂತರ ಹಿಂದಿನದೆಲ್ಲಾ ನೆನಪಾಗ್ತದ ಅಲ್ಲ? ಲಗ್ನಾದ ಹೊಸದಾಗಿ ಬೆಳದಿಂಗಳ ರಾತ್ರಿ ಮಾಳಿಗೀ ಮ್ಯಾಲ ಹಾಸಿಕೊಂಡು ಮಲಗತ್ತಿದ್ದೆವಲ್ಲ..." ಬಹಳ ರಸಿಕತೆಯನ್ನು ಕೊನೆವರೆಗೆ ಉಳಿಸಿಕೊಂಡು ಬಂದಿರುವ ಗಂಡ.

"ಇಷ್ಟ ವರ್ಷಾದ್ರೂ ನಮ್ಮ ಭಾವನಾ ಇನ್ನೂ ಹಂಗs ಫ್ರೆಶ್ ಉಳಿದಾವಲ್ಲ ನಿನ್ನ ಕಣ್ಣಾಗಿನ ಮಿಂಚಿನ್ಹಾಂಗ..."

ಲಗ್ನವಾಗಿ ಹಲವಾರು ವರ್ಷಗಳು ಕಳೆದು ಹೋದ ನಂತರ ಯಾರ ಭಾವನೆಗಳೂ ಫ್ರೆಶ್ ಆಗಿ ಉಳಿದಿರುವುದಿಲ್ಲ. ಯಾವ ಹೆಂಡತಿಯ ಕಣ್ಣಮಿಂಚೂ ಉಳಿದಿರುವುದಿಲ್ಲ... ಆದರೂ ಅವು ಉಳಿದಿವೆ ಅಂತ ಗಂಡನಿಗೆ ಅನ್ನಿಸಬೇಕಾದರೆ ಆತ ನಿಜವಾಗಿ ದಿಲ್‌ದಾರ್ ಗಂಡನಾಗಿರಬೇಕು...

* * *

ಸರೂ, ನನ್ನ ಜೀವನದಾಗ ನನಗ ಎಲ್ಲಾ ರಿತಿಯ ಸುಖಾ–ಸಂಪತ್ತು. ಕೀರ್ತಿ–ಅಂತಸ್ತು, ಮಾನ–ಮರ್ಯಾದೆ ಏನೇನು ಬೇಕೋ ಎಲ್ಲಾ ವೈಭವಾನೂ ಸಿಕ್ಕಿತು. ಅದರ ಈ ಎಲ್ಲಕ್ಕಿಂತಾ ನನಗ ನೀನು ಬಹಳ ಅಮೂಲ್ಯವಾದ ಆಸ್ತಿ ನೋಡು. ನನ್ನ ಜೀವನಕ್ಕ ಅರ್ಥಾ ಕೊಟ್ಟಾಕಿ ನೀನು. ನಿನ್ನಂಥ ಹೆಂಡತಿ

ಸಿಕ್ಕಿದ್ದು ನನ್ನ ಪುಣ್ಯದ ಫಲ ಯಾಕಂದರ ನೀ ನನಗ ಈ ಬದುಕಿನ ಸುಖದ ಸಾರಾಮೃತವನ್ನs ಕುಡಿಸೀದಿ" ಗಂಡನಿಂದಸೀ ಬಗೆಯ ಕೃತಜ್ಞತೆಯ ಸಂತೃಪ್ತಿಯ ವಿಶ್ವಾಸದ ಮಾತು ಕೇಳುವ ಅವಕಾಶ ಅದೆಷ್ಟು ಹೆಂಡಿರಿಗೆ ಒದಗಿ ಬಂದೀತು?

* * *

ಸರೋಜಾಗೆ ಅರ್ಧ ಎಚ್ಚರ, ಅರ್ಧ ನಿದ್ದೆ. ರೂಮಿನಲ್ಲಿ ವಿಶಾಲವಾದ ಮಂಚದ ಮೇಲೆ ಆಕೆ ಒಬ್ಬಳೇ ಮಲಗಿದ್ದಾಳೆ. ಆಕೆಗೆ ನಿದ್ದೆ ಹತ್ತಿದೆಯೆಂದು, ತೊಂದರೆ ಮಾಡಬಾರದೆಂದು ಉಳಿದವರೆಲ್ಲ ಹೊರಗೆ ಸೇರಿದ್ದಾರೆ. ಮೆಲುದನಿಯಲ್ಲಿ ಮಾತಾಡುತ್ತಿದ್ದಾರೆ. ಯಾರು-ಯಾರೋ ಬಂದಿದ್ದಾರೆ. ದೊಡ್ಡ ಮಗ ರಾಜ, ಅವನ ಹೆಂಡತಿ, ಕಿರಿಯವನು, ಮಗಳು ಮತ್ತು ಅಳಿಯ ನೆರೆಮನೆಯವರು, ಬ್ಯಾಂಕಿನ ಸಹೋದ್ಯೋಗಿಗಳು, ಆತನ ಆಫೀಸಿನಲ್ಲಿ ಕೆಲಸ ಮಾಡುವವರು, ಇನ್ನೂ ಯಾರು... ಯಾರೋ... ನೂರಾರು ಜನ ಸೇರಿದ್ದಾರೆ. ಆದರು ಗದ್ದಲ ಮಾಡದೆ ಪಿಸುಮಾತಿನಲ್ಲೇ ಎಲ್ಲ ವ್ಯವಹಾರ ನಡೆಸಿದ್ದಾರೆ.

"ರಾಜೂ ನೀ ದೊಡ್ಡಾಂವಪಾ, ಇನ್ನ ಎಲ್ಲಾ ಜವಾಬ್ದಾರಿ ನಿಂದೇ, ನಿಮ್ಮ ತಾಯಿನ್ನ ಕಾಳಜಿಯಿಂದ ನೋಡಿಕೊಬೇಕಪಾ, ಅವ್ರಿಗೆ ಈ ಶಾಕ್ ತಡಿಯೋದು  ಆಗ್ಲಿಕ್ಕಿಲ್ಲ." ಯಾರೋ ಹಿರಿಯ ಮನುಷ್ಯರ ಕಳಕಳಿ.

"ಹೌದ್ರೀ ಕಾಕಾ, ಅದಕ್ಕs ಡಾಕ್ಟರು ಮಮ್ಮಿಗೆ ನಿದ್ದೆ ಇಂಜೆಕ್ಷನ್ ಕೊಟ್ಟಾರ. ಆಕಿ ಇನ್ನೂ ಮಂಪರಿನ್ಯಾಗೇ ಇದ್ದಾಳ" ಕೆಳದನಿಯಲ್ಲಿ ರಾಜೂನ ವಿವರಣೆ.

"ಎಂಥಾ ದೊಡ್ಡಮನಿಶ್ಯಾ ಏನ ಕಥಿ! ಎಷ್ಟ ಮಂದಿಗೆ ಎಷ್ಟ ಉಪಕಾರ ಮಾಡಿದ್ರು! ಯಾರು ಏನು ಕೇಳಿದ್ರೂ ಇಲ್ಲ ಅಂದವರಲ್ಲ, ಎಷ್ಟ ಶಾಂತ-ಸಮಾಧಾನದ ಸ್ವಭಾವ ! ಎಂದೂ ಸಿಟ್ಟಾದವರಲ್ಲ, ಕೆಟ್ಟ ಮಾತು ಆಡಿದವರಲ್ಲ, ಒಬ್ಬರಿಗೆ ಅನ್ಯಾಯ ಮಾಡಿದವರಲ್ಲ. ಸತ್ಯ ಹರಿಶ್ಚಂದ್ರನಂಥಾ ಮನಿಶ್ಯಾ ನೋಡ್ರಿ" ಇನ್ನೊಬ್ಬರಿಂದ ಆತನ ಗುಣಗಾನ.

ಸರೋಜಾಗೆ ಈಗ, ಪೂರಾ ಎಚ್ಚರಾಯಿತು. ಹೊರಗೆ ಜನ ಸೇರಿದ್ದಾರೆ. ಆತನನ್ನು ಹೊಗಳುತ್ತಿದ್ದಾರೆ. ಅನುಕಂಪ ಸೂಚಿಸುತ್ತಿದ್ದಾರೆ.

ಹೌದು ಆತ ಈಗಿಲ್ಲ, ನಿನ್ನೆ ರಾತ್ರಿ ಹತ್ತು ಗಂಟೆಗೆ ಆತ ಹೃದಯಾಘಾತವಾಗಿ ಸತ್ತು ಹೋದ.

ಈಗ ಬೆಳಗಿನ ಒಂಭತ್ತು ದಾಟಿದೆ. ಈ ಕಳೆದ ಸುಮಾರು ಹನ್ನೆರಡು ಗಂಟೆಯ ಕಾಲ ತಾನೇನು ಮಾಡುತ್ತಿದ್ದೆ?

ಸರೋಜಾ ನೆನಪಿಸಿಕೊಳ್ಳಲು ಪ್ರಯತ್ನಿಸಿದಳು. ಸರಿಯಾಗಿ ಹತ್ತಕ್ಕೆ ಎರಡು ನಿಮಿಷಗಳಿದ್ದಾಗ ಆತನ ಜೀವ ಹೋಯಿತು. ಡಾಕ್ಟರು ಬಳಿಯಲ್ಲೇ ಇದ್ದರು. ""I am sorry madam", ಅಂದರು, ಮಗ ರಾಜುವನ್ನು ಕರೆದರು. ಮಗಳೂ ಓಡಿ ಬಂದಳು. ಅವರೆಲ್ಲ ಅಪ್ಪನಿಗೆ ಸೀರಿಯಸ್ ಅಂತ ತಿಳಿದು ಕಳೆದ ವಾರವೇ ಬಂದಿದ್ದರು. ಹಗಲು–ರಾತ್ರಿ ಅಪ್ಪನ ಸೇವೆ ಮಾಡಿದರು. ಅಪ್ಪ ಇನ್ನಿಲ್ಲ ಅಂತ ತಿಳಿದೊಡನೆ ಕರುಣಾಜನಕವಾಗಿ ಅತ್ತರು. ಇಷ್ಟೆಲ್ಲ ಆಗುವಾಗ ಮಧ್ಯರಾತ್ರಿ ಸಮೀಪಿಸಿತ್ತು. ತಾನೇನು ಮಾಡುತ್ತಿದ್ದೆ? "ಮಮಿಗೆ ಶಾಕ್ ಆಗೇದ.

ಅದಕ್ಕs ಆಕಿ ಅಳತಾ ಇಲ್ಲ, ಮಾತಾಡತಾ ಇಲ್ಲ" "ಹೌದೌದು. ಅವ್ರಿಗೆ ಸೆಡೇಶನ್ ಕೊಡೋದು ಛಲೋ," "ಅಯ್ಯೋ ಅಮ್ಮಾ..." ಸರೋಜಾಗೆ ಇದೆಲ್ಲ ಕೇಳಿದ ನೆನಪಿದೆ. ಮುಂದೆ–ಮುಂದೆ ಆಕೆ ನಿಧಾನವಾಗಿ ಕನಸಿನ ಲೋಕ ಸೇರಿದಳು.

ಕನಸಿನ ಲೋಕವೆ?
ಹೌದು. ಅಂದರೆ ಇಷ್ಟು ಹೊತ್ತು ನಡೆದದ್ದೆಲ್ಲ ಕನಸೆ?
ಹೌದು.

ಆಕೆ ಮಲಗಿದ್ದಾಗ ಆತ ಚಹಾ ಮಾಡಿದ್ದು? ಸಂಬಳದ ಹಣವನ್ನೆಲ್ಲ ಆತ ಆಕೆಯ ಕೈಯಲ್ಲಿರಿಸಿದ್ದು? ಮಗುವನ್ನು ತಾನೇ ರಾತ್ರಿಯೆಲ್ಲ ನೋಡಿಕೊಳ್ಳುವೆನೆಂದು ಆತ ಹೇಳಿದ್ದು? ಸಿನಿಮಾಗೆ–ಕಾಮತ್ ಹೋಟೆಲ್‌ಗೆ ಹೋಗೋಣವೆಂದು ಆತ ಹೇಳಿದ್ದು? ಕೆಲಸವನ್ನು ಹಂಚಿಕೊಳ್ಳೋಣ ಅಂತ ರಮಿಸಿದ್ದು? ಬೆಳದಿಂಗಳಲ್ಲಿ ಪ್ರೀತಿಯ ಮಾತುಗಳನ್ನಾಡಿದ್ದು? ಜೀವನ ಸಾರ್ಥಕವಾಯಿತೆಂದು ಹೇಳಿದ್ದು?

ಇದೆಲ್ಲ ಕನಸೆ?
ಹೌದು.

ಎಂತಹ ಸುಂದರ ಕನಸುಗಳು! ಆಕೆ ಹುಡುಗಿಯಾಗಿದ್ದಾಗಿನಿಂದ ಕಂಡಿದ್ದ ಕನಸುಗಳು! ಇವೆಲ್ಲಾ ಬರಿ ಕನಸುಗಳೇ ಆಗಿದ್ದರೆ ಈ ಕನಸುಗಳಿಂದ ಎಚ್ಚರವಾಗುವುದು ಯಾರಿಗೆ ಬೇಕಿತ್ತು?..... ಹಾಗಿದ್ದರೆ ತನಗೀಗ ಎಚ್ಚರವಾಗಿದೆ. ವಾಸ್ತವ ಬೇರೆ ಅಂತ ಗೊತ್ತಾಗುತ್ತಿದೆ. ಇಷ್ಟು ಹೊತ್ತು, ಅದೆಷ್ಟೋ ಹೊತ್ತು, ಕಂಡಿದ್ದು–ಅನುಭವಿಸಿದ್ದು

ಬರೀ ಕನಸುಗಳು..........

ಆತ ಸತ್ತು ಹೋಗಿದ್ದಾನೆ. ತನ್ನನ್ನು ಲಗ್ನವಾದಾತ, ಮೂರು ಮಕ್ಕಳನ್ನು ಹುಟ್ಟಿಸಿದಾತ, ಜೊತೆಗೆ ಮೂವತ್ತೈದು ವರ್ಷ ಬಾಳಿದಾತ, ಮೂವತ್ತೈದು ವರ್ಷಗಳ ಕಾಲ ತನ್ನ ಕನಸುಗಳನ್ನೆಲ್ಲ ಕನಸುಗಳಾಗಿಯೇ ಉಳಿಸಿದಾತ, ಈಗ ಸತ್ತಿದ್ದಾನೆ; ಇದು ವಾಸ್ತವ.

ಇದಷ್ಟೇ ವಾಸ್ತವವೇ?
ಅಲ್ಲ.

ವಾಸ್ತವದ ವ್ಯಾಪ್ತಿ ಕನಸುಗಳ ವ್ಯಾಪ್ತಿಗಿಂತ ಅದೆಷ್ಟೋ ಪಾಲು ಹೆಚ್ಚಿನದು; ಅದೆಷ್ಟೋ ಪಾಲು ಕಹಿಯಾದದ್ದು, ಅಸಹ್ಯವಾದದ್ದು, ಕ್ರೂರವಾದದ್ದು.

ಸರೋಜಾಗೆ ಬಾಯಾರಿದಂತೆನಿಸಿತು. ಒಂದು ಕಪ್ಪು ಬಿಸಿ ಚಹಾ ಬೇಕೆನಿಸಿತು. ತಾನಾಗಿ ಹೇಗೆ ಯಾರಿಗೆ ಕೇಳುವುದು? ಗಂಡನ ಹೆಣ ಇನ್ನೂ ಪಡಸಾಲೆಯಲ್ಲಿ ಇದೆ. ಅವನ ಸುತ್ತಲೂ ಯಾರು ಯಾರೋ ಕೂತು ಅಳುತ್ತಿದ್ದಾರೆ. ಎಷ್ಟು ರಾಗಬದ್ಧವಾಗಿ ಅಳುತ್ತಿದ್ದಾರೆ.

ನ್ಯಾಯವಾಗಿ ತಾನೂ ಈಗ ಅಳಬೇಕಾದ ಸಮಯ – ಎಲ್ಲರಿಗಿಂತ ಹೆಚ್ಚಿನ ದುಃಖ ತನಗೇ ಆಗಬೇಕಲ್ಲ?

ಆದರೆ ನ್ಯಾಯ ಅನ್ನುವುದು ಈ ದೇಶದಲ್ಲಿ ಈ ಸಮಾಜದಲ್ಲಿ, ಅದೂ ಹೆಂಗಸಿನ ಪಾಲಿಗೆ, ಇದೆಯೇ? – ಅನೇಕ ವೇದಿಕೆಗಳ ಮೇಲಿಂದ ಭಾಷಣ ಮಾಡುತ್ತ ಸರೋಜಾ ಈ ಪ್ರಶ್ನೆ ಕೇಳಿದ್ದಾಳೆ, ಉತ್ತರ ಗೊತ್ತಿದ್ದೂ....

ಅರೆತೆರೆದ ಬಾಗಿಲ ಸಂದಿಯಿಂದ ಆಕೆಗೆ ಹೊರಗೆ ಮಲಗಿಸಿದ ಆತನ ಹೆಣ ಕಾಣುತ್ತಿದೆ. ಸ್ನಾನ ಮಾಡಿಸಿದ್ದಾರೆ. ಮೂಗಿನಲ್ಲಿ ಹತ್ತಿ ತುರುಕಿದ್ದಾರೆ

ಉದ್ದಕ್ಕೂ ಮಲಗಿದ್ದಾನೆ, ಈಗ ಎದ್ದು ಬರುತ್ತಾನೇನೋ ಅನ್ನಿಸುವಂತೆ, ಎದ್ದು ಬಂದು ಕರ್ಕಶವಾದ ದನಿಯಲ್ಲಿ ಕೂಗಾಡುತ್ತಾನೇನೋ ಅನ್ನಿಸುವಂತೆ....

* * *

ಏ ಸರೋಜ, ಇಲ್ಲೆ ಬಾ... ಏನು, ಕರೆದ ಕೂಡಲೇ ಬರ್ಲಿಕ್ಕೆ ಆಗೂದಿಲ್ಲ ನಿನಗ? ಗ್ಯಾಸ್ ಮ್ಯಾಲ ಹಾಲು ಇಟ್ಟದ್ರೇನಾತು? ನಾ ಬಾ ಅಂದ ಕೂಡ್ಲೆ ಗ್ಯಾಸ್ ಬಂದ್ ಮಾಡಿ ಬರಬೇಕು ತಿಳೀತs? ....ಪಗಾರ ಬಂತಲ್ಲ ನಿನ್ನೆ? ಪಗಾರ ಬಂದ ಕೂಡ್ಲೆ ರೋಕ್ಕಾ ತಂದು ನನ್ನ ಕೈಯಾಗ ಕೊಡು ಅಂತ ಹೇಳಿಲ್ಲ ನಿನಗ? .....ಹೌದು, ನನ್ನ ವ್ಯವಹಾರದಾಗ ನೀ ಕೈಹಾಕಬ್ಯಾಡ, ರೊಕ್ಕಾ ತಂದು ನನ್ನ ಕೈಯಾಗಿಟ್ಟು ಬಾಯಿ ಮುಚಿಗೊಂಡು ಸುಮ್ನಿರು"

"ಅಲ್ಲ ಸರೋಜಿ, ನೀ ಬ್ಯಾಂಕನ್ಯಾಗ ಆಫೀಸರ್ ಇದ್ದೀ ಖರೆ, ಅದರರ್ಥ ನಿನಗ ಬೇಕಾದವನ ಜೋಡಿ ಖಿಖಿಖಿ ಮಾಡಿಕೋತ ಚಕ್ಕಂದ ಆಡ್ಲಿಕ್ಕೆ ಲೈಸೆನ್ಸ್ ಆದ ಅಂತ ಅಲ್ಲ.... ಅಂವಾ ನಿನ್ನ ಕೊಲೀಗ್ ಇರಬಹುದು. ಕೊಲೀಗ್ ಇದ್ದರ ಕೆಲಸದ ಪೂರ್ತೆ ಎಷ್ಟೋ ಅಷ್ಟs ಮಾತಾಡ್ಬೇಕು. ನಗೂದು– ಹಲ್ಲು ಕಿರಿಯೂದು ಯಾಕ?.... ನಾನs ತಪ್ಪ ಮಾಡಿದೆ ಡಬಲ್ ಡಿಗ್ರಿ ತಗೊಂಡು ನೌಕರಿ ಮಾಡೋ ಹೆಂಗಸ್ರಿಗೆ ಕೊಬ್ಬು ಜಾಸ್ತಿ. ನಿನ್ನಂಥಾಕಿನ್ನ ನಾ ಲಗ್ನಾನs ಮಾಡಿಕೋಬಾರದಿತ್ತು... ನಾ ಗಂಡ ಜೀವಂತ ಇದ್ದಗನs ಬ್ಯಾರೆ ಗಂಡಸರ ಜೋಡಿ ನಕ್ಕೋತ ಮಾತಾಡುವಾಕಿ ಲಗ್ನದಕಿಂತಾ ಮೊದಲ ಏನೇನ ಮಾಡೀಯೋ ಯಾರಿಗ್ಗೊತ್ತು... ಇಕಾ ನೋಡು, ನಾ ಹೇಳಿದ್ದು ನೆನಪಿಟುಗೋ, ಹೊರಗಿನ ಗಂಡಸರ ಜೋಡಿ ಖಾಲಿಫುಕಟ ನಕ್ಕೋತ ಮಾತಾಡಿದರೆ ನಿನ್ನ ಹಲ್ಲs ಮುರೀತೀನಿ.....:"

"ಏನು, ಹೊಟೇಲಿಗೆ ಹೋಗಬೇಕ? ಯಾಕ? ಮಕ್ಕಳು ಹೋಗೋಣಾಂತರ? ಅವರಿಗೆ ಸ್ಪಷ್ಟ ಹೇಳು. ಹೋಟೇಲಿನ ತಿಂಡಿ ಆರೋಗ್ಯಕ್ಕೆ ಛಲೋ ಅಲ್ಲ. ದುಡ್ಡೂ ಹಾಳು, ಆರೋಗ್ಯನೂ ಹಾಳು. ಮನ್ಯಾಗ ಏನ ಬೇಕಾದ್ದು ತಿನ್ಲಿ... ಏನು, ನಿನಗ ಅಡಿಗೆ ಮಾಡ್ಲಿಕ್ಕೆ ಇವತ್ತ ಬೇಜಾರs? ನಿನಗ ಬೇಜಾರಾದ್ರ ಮಕ್ಕಳಿಗೆ ಮಾಡ್ಲಿಕ್ಕೆ ಹಚ್ಚು, ಅವ್ರೂ ಕಲೀಲಿ. ಬರೇ ಅನ್ನಾ ಮಾಡ್ರಿ, ಚಟ್ನಿಪುಡಿ ಉಪ್ಪಿನ ಕಾಯಿ ಹಚಿಗೊಂಡು ತಿನ್ರಿ ಸಿಂಪಲ್ ಊಟಾ ಮಾಡಬೇಕು– ಗಾಂಧೀಜಿ ಹೇಳ್ಯಾರ– ಬಾಗಲ್ಲಾ ಹಾಕ್ಕೋ, ಇವತ್ತ ಕ್ಲಬ್‌ನ್ಯಾಗ ಡಿನ್ನರ್ ಆದ, ನಾ ರಾತ್ರಿ ತಡಾ ಆಗಿ ಬರ್ತೀನಿ."

"ಏ ಸರೋಜಿ, ಎಲ್ಲೆ ಸತ್ತೀಯೆ? ಈ ಹುಡುಗರು ಅಳೂದು–ಜಗಳಾಡೂದು ಅಂತ ದಾಂಧಲೆ ನಡಸ್ಯಾರ ನಿನಗ ಕಿವಿ ಕೇಳಸೂದಿಲs? ಇವರ್ನ ಆತ್ಲಾಗ ಎಳಕೊಂಡು ಹೋಗು. ಶನಿವಾರ ಒಂದಿನ ಮಧ್ಯಾಹ್ನ ಒಂದಿಷ್ಟು ಉಂಡು ಮಲಕೊಂಡೀನಿ, ಒಂದs ಸವನ ಡಿಸ್ಟರ್ಬ್ ಮಾಡ್ಲಿಕ್ಹತ್ಯಾವ ಶನಿಗಳು.... ಏನು, ಹಟಾ ಬಂದದ? ಕಪಾಳಿಗೆ ಒಂದೊಂದು ರಪ್ ಅಂತ ಏಟಾ ಕೊಟ್ಟು ಕತ್ತಲಿ ಖೋಣ್ಯಾಗ ಹಾಕಿ ಬಾಗಲಾ ಹಾಕು. ಎರಡು ದಿನಾ ಉಪಾಸ ಹಾಕು. ತಾವs ದಾರಿಗೆ ಬರ್ತಾರ.... ಮಕ್ಕಳ್ನ ಉಪಾಸ ಹಾಕಿ ನೀ ಹ್ಯಾಂಗ ಉಣ್ಣೂದು ಅಂತೀಯಾ? ಅವರ ಜೋಡಿ ನೀನೂ ಉಪಾಸ ಮಾಡು. ನಿಂದೂ ಆರೋಗ್ಯ ಛಲೋ ಆಗ್ತದ. ಈಗೀಗ ಭಾಳ ದಪ್ಪ ಆಗೀದಿ...."

"ಏ ಸರೋಜೀ ಇವತ್ತೇನು ರಾತ್ರಿ ಅಡಿಗೀ ಮಾಡೋ ವಿಚಾರ ಇಲ್ಲೇನು? ಎಷ್ಟೋತ್ತಾತು ಟೆರೇಸ್ ಮ್ಯಾಲ ಹೋಗಿ ಸುಮ್ನ ದೆವ್ವನ್ಹಾಂಗ ಕೂತು ಬಿಟ್ಟೀಯಲ್ಲ?

.....ಬೆಳುದಿಂಗಳು ಅದs ನs? ಇದ್ರೇನಾತು? ನಿನಗೊಂದು ಈ ಬೆಳದಿಂಗಳ ಹುಚ್ಚು. ಹುಣ್ಣಿಮಿ ಬಂದಾಗೊಮ್ಮೆ ನಿನ್ನ ಮೈಯಾಗೇನರ ದೆವ್ವ–ಗಿವ್ವ ಬರ್ತದೋ ಏನೋ. ಅದಕ್ಕs ಹಿಂಗ ಕಣ್ಣ ಮುಚಿಗೊಂಡು ಸುಮ್ಮ ಕೂತುಬಿಡ್ತೀ... ಯಾರಿಗರೆ ದೆವ್ವಾ ಬಿಡಸವ್ರಿಗೆ ಕೇಳಬೇಕು...."

"ನೀ ಹೀಂಗ ಬರ್ಥಡೇ ಬಂತು– ಅದು ಬಂತು ಹೊಸ ಸೀರಿ ತಗೊಳ್ಳೊದು, ಸ್ವೀಟ್ಸ್ ಮಾಡೂದು, ಮಂದಿನ್ನ ಕರದು ಪಾರ್ಟಿ ಕೊಡೂದು ವಗ್ಯೈರೆ ಎಲ್ಲಾ ಹುಚ್ಚುಚ್ಚಾಟ ಬಿಟ್ಟುಬಿಡು. ಮನ್ಯಾಗ ರಗಡ ಸೀರಿ ಅವ. ಸುಮ್ಸುಮ್ನ ಖರ್ಚು ಮಾಡಬಾರದು. ಮನ್ಯಾಗ ಎರಡು ಸೀರಿ–ಹೊರಗ ಹೋಗ್ಲಿಕ್ಕೆ ಎರಡು ಸೀರಿ, ಒಟ್ಟು ನಾಲ್ಕು ಸೀರಿ ಇದ್ದರ ಸಾಕು. ಅನವಶ್ಯಕ ಬಟ್ಟೆ ಸಲುವಾಗಿ ದುಡ್ಡು ಹಾಳು ಮಾಡೂದು ನನಗೆ ಸೇರೂದಿಲ್ಲ. ಎಂಥಾ ಸೀರಿ ಉಟ್ಟರೇನು, ಬರಬರತ ಹರೇದಾಕಿ ಆಗ್ತೀಯೇನು? ಕನ್ನಡ್ಯಾಗ ಮಾರಿ ನೋಡಿಕೋ–ಕಣ್ಣು ಗಲ್ಲ ಎಲ್ಲಾ ಹ್ಯಾಂಗ ಒಳಸೇರ್ಯಾವ ಗೊತ್ತಾಗ್ತದ.... ಏನು ನನ್ನ ಸಿಗರೇಟು–ಬಿಯರ್ ಖರ್ಚಿನ ಸಲುವಾಗಿ ಮಾತಾಡ್ತಿಯಾ ನಾ ಗಂಡಸು. ನಾ ಬೇಕಾದ್ದು ಮಾಡ್ತೇನಿ. ನಾ ಇಡೀ ದಿನಾ ದುಡುದು ದಣಿದಿರ್ತೀನಿ, ನನ್ನ ರಿಕ್ರಿಯೇಶನ್ ಸಲುವಾಗಿ ಏನಾದ್ರೂ ಮಾಡ್ತೇನಿ, ನೀ ನನ್ನ ಸುದ್ದಿಗೆ ಬರಬ್ಯಾಡ."

"ಏನೂ, ರಾಜೂನ ಫೀಜಿಗೆ ರೊಕ್ಕ ಬೇಕs? ನಿನ್ನ ಪಗಾರ ಬರ್ತದಲ್ಲ, ಅದರಾಗಿಂದ ಕೊಡು. ಮಕ್ಕಳ ಸ್ಕೂಲಿನ ಫೀಜು–ಪುಸ್ತಕ–ಡ್ರೆಸ್ಸು ಅಂತ ನನ್ನ ತಲಿ ತಿನ್ನ ಬ್ಯಾಡ. ಅದನ್ನೆಲ್ಲಾ ನೀನೇ ಮ್ಯಾನೇಜ್ ಮಾಡ್ಬೇಕು. ಏನು, ಈ ತಿಂಗಳು ಗೆಸ್ಟ್ಸ್ ಬಂದರಂತ ಹಾಲಿನ ಬಿಲ್ಲು ಜಾಸ್ತಿ ಆತs? ಯಾರು ಬಂದ್ರೇನು, ನೀ ಯಾಕ ಹಾಲು ಹೆಚ್ಚಿಗಿ ಹಾಕಿಸಿಕೋಬೇಕು? ಇನ್ನ ಮ್ಯಾಲ ಹಾಲಿನ ಖರ್ಚು ಅರ್ಧಾ ಮಾಡಿಬಿಡು. ನನ್ನ ಪೂರ್ತೆ ಒಂದು ಲೋಟಾ ಕುಡಿಲಿಕ್ಕೆ ಆದರ ಸಾಕು. ಬೇಕಾರ ರಾಜೂಗೆ ಅರ್ಧ ಲೋಟಾ ಕೊಡು. ಮಗಳಿಗೆ ಹಾಲು ಕೊಡೋ ಜರೂರಿಲ್ಲ. ದಪ್ಪ ಆಗಿ ಕೂತರ ಲಗ್ನಾ ಯಾರು ಮಾಡಿಕೋಳ್ಳವ್ರು? ನೀ ಅಂತೂ ಹಾಲು ಕುಡಿಲೇಬಾರದು. ಮೂವತ್ತ ವರ್ಷ ದಾಟಿದ ಮ್ಯಾಲೆ ಹೆಂಗಸ್ರು ಹಾಲು ಕುಡಿದರ ಡಯಾಬಿಟಿಸ್ ಬರತದ. ತಿಳೀತೇನು?"

ನೀ ಏನs ಅನ್ನು ಸರೋಜಿ, ನೀವು ಕಲಿತ ಹೆಂಗಸರು ಭಾಳ ನಾಜೂಕು ನೋಡು, ಏನೂ ಉಪಯೋಗಿಲ್ಲ. ಏನೋ ಒಂದಿಷ್ಟು ಫ್ಲ್ಯೂ ಆಗಿ ಎಂಟ್ಹತ್ತು ದಿನ ಜ್ವರಾ ಬಂದವು ಅಂತ ಮಲಗೇ ಬಿಟ್ಟೀಯಲ್ಲ? ನಿಮ್ಮ ನಖರಾನೇ ಭಾಳ. ಹಳ್ಳಿಯೊಳಗಿನ ಹೆಂಗಸ್ರನ್ನು ನೋಡು, ಹ್ಯಾಂಗ ಹೊಲದಾಗ ಕೆಲಸಾ ಮಾಡತಾರ, ಜ್ವರಾ–ಗಿರಾ ಬಂದರ ಕೇರ್ ಮಾಡೂದೇ ಇಲ್ಲ ಅವ್ರು. ನೀ ಹಿಂಗ್ ವೀಕನೆಸ್ ಅಂತ ಮಲಗೇ ಇದ್ದರ ನಿನಗೆ ನೆಟ್ಟಗೆ ಆಗೂದಿಲ್ಲ. ಎದ್ದು ಅಡಿಗಿಪಿಡಿಗಿ ಮಾಡ್ಲಿಕ್ಕೆ ಸುರು ಮಾಡು. ನನ್ನವು ಒಂದ್ನಾಲ್ಕು ಶರ್ಟು–ಪ್ಯಾಂಟು ಇಟ್ಟೀನಿ ನೋಡು, ಒಗದು ಇಸ್ತ್ರೀ ಮಾಡು. "ಗುಳುಗಿ–ಔಷಧ ಅಂತೆಲ್ಲಾ ತಗೋಬ್ಯಾಡ. ಅದರಿಂದ ಕೆಟ್ಟ ಸೈಡ್ ಇಫೆಕ್ಟ್ ಆಗ್ತಾವ. ನಾ ಒಂದಿಷ್ಟು ನನ್ನ ಫ್ರೆಂಡ್ಸ್ ಕೂಡ ನಾಲ್ಕದಿನಾ ಜೋಗ ಮುರುಡೇಶ್ವರ – ಗೋಕರ್ಣ ಕಡೆ ಟ್ರಿಪ್ ಹೋಗಿ ಬರ್ತೀನಿ. ಮನೀಕಡೆ ಜೋಪಾನ."

"ಏ ಸರೋಜಿ, ಎಲ್ಲೆ ಹೊಂಟೀದಿ? ನಿನ್ನ ಬ್ಯಾಂಕಿಗೆ ಇವತ್ತ ಲೀವ್ಹ್ ಹಾಕಿ ಮನ್ಯಾಗಿರು ಅಂತ ಹೇಳ್ಲಿಲ್ಲs? ಅದೇನು ಅರ್ಜೆಂಟ್ ಅಕೌಂಟ್ಸ್ ಸಬ್‌ಮಿಟ್ ಮಾಡೋದಿದ್ರೂ ಇರ್ಲಿ, ನೀ ಇವತ್ತು ಹೋಗಬ್ಯಾಡ. ನನಗ ಯಾಕೋ ಅರಾಮಿಲ್ಲ ಅಂತ ಹೇಳಿದೆನಲ್ಲ, ಮೊದಲ ಹೋಗಿ ಡಾಕ್ಟರನ್ನ ಕರಕೊಂಡು ಬಾ. ಜ್ವರಾನs? ಇನ್ನೂ ಬಂದಿಲ್ಲ. ಅದರ ಬರೋ ಹಾಂಗ ಕಾಣಸ್ತದ, ನಾಳೆ ಬರಬಹುದು. ಅದಕ್ಕ ಮೊದಲ ಡಾಕ್ಟರನ್ನ ಕರೆಸಿ ಗುಳಿಗಿ–

ಔಷದ ತಗೊಳ್ಳೋದು ಛಲೋ. ಸ್ವಲ್ಪ ನನ್ನ ಕಾಲು ಒತ್ತು. ಹಣೆಗೆ ಒಂದಿಷ್ಟು ವಿಕ್ಸ್ ವೆಪೋರಬ್ ಹಚ್ಚಿ ತಿಕ್ಕು. ಒಂದಿಷ್ಟು ರವಾದ ಪಾಯಸಾ ಮಾಡಿಕೊಂಡು, ಬಿಸಿನೀರು ಕಾಯಿಸಿಕೊಂಡು ಬಾ. ಲೀವ್ಹ್ ಲೆಟರ್ ಕಳಸು ನಿನ್ನ ಸುಡುಗಾಡು ಬ್ಯಾಂಕಿಗೆ.... ಅಹ್! ಓಹ್! ಅಮ್ಮಾ! ಅದೇನು ಥರ್ಮಾಮೀಟರ್ ಹಚ್ಚಿ ನೋಡತೀ, ನಾರ್ಮಲ್ ಅದನ? ನಿನ್ನ ತಲಿ ನನಗೆ ಜ್ವರಾ ಬರತಾವ ಅನಸ್ಲಿಕತ್ತೇದ ಅಂತ ಹೇಳ್ತಿನಲ್ಲ ಹೋಗು ಮೊದಲ ಆ ಡಾಕ್ಟರನ್ನ ಕರಕೊಂಡ ಬಾ...."

"ಅಲ್ಲs ಸರೋಜಿ, ಯಾವಾಗ್ಲೂ ಸಣ್ಣ ಮುಖಾ ಮಾಡಿಕೊಂಡು ಕೂಡ್ಲಿಕ್ಕ ಏನ ಧಾಡಿ ಆಗೇದ ನಿನಗ? ನನ್ನಂಥಾ ದೊಡ್ಡ ಅಧಿಕಾರದಾಗಿರೋ ಗಂಡ ಇದ್ದಾನ, ಮಕ್ಕಳು ಸೆಟಲ್ ಆಗ್ಯಾರ. ದೊಡ್ಡಮನಿ, ಕಾರು, ವಸ್ತ್ರಾ–ವಡವಿ ಎಲ್ಲಾ ಅವ. ನನ್ನಂಥಾ ಗಂಡ ಸಿಗ್ಲಿಕ್ಕೆ ನೀ ಪುಣ್ಯಾ ಮಾಡೀದಿ. ನನ್ನಿಂದ ನಿನಗ ಎಷ್ಟ ಉಪಕಾರ ಆಗೇದ, ಉಪಯೋಗ ಆಗೇದ, ಎಂದರೆ ತಿಳಕೋತೀಯೇನು?"

"ಮಮ್ಮೀ ಇನ್ನು ನಿದ್ದೀ ಮಂಪರಿನ್ಯಾಗ ಇದ್ದಾಂಗ ಕಾಣಸ್ತದ" ಹೊರಗಿನಿಂದ ಮಗಳ ದನಿ.

"ಆದರ ಇನ್ನೂ ಎಷ್ಟೊತ್ತು ಅಂತ dead body ಇಟಗೊಂಡು ಕೂಡೋದು? ಮುಂದಿನ ಕೆಲಸ ಆಗಬೇಕಲ? ರಾಜೂ, ನೀ ಹೋಗಿ ಸಾವಕಾಶ ನಿನ್ನ ತಾಯಿಯವರನ್ನ ಹೊರಗ ಕರಕೊಂಡ ಬಾ. ನಿನ್ನ ತಂದಿಯವರ ದೇಹದ ಹತ್ತಿರ ಐದು ಮಿನಿಟು ಕೂಡಿಸು. ಎಲ್ಲಾ ಶಾಸ್ತ್ರ ಆಗಬೇಕಲ. ಅದಷ್ಟು ಸಂಕ್ಷಿಪ್ತ ಮಾಡಿದ್ರಾತು." – ಹಿರಿಯರೊಬ್ಬರ ಅನುಕಂಪಪೂರಿತ ಸೂಚನೆ.

"ಅಯ್ಯೋ ದೇವರೆ, ಮಮ್ಮೀ ಇದನ್ನೆಲ್ಲಾ ಹ್ಯಾಂಗ ತಡಕೋಬೇಕು!" ಮಕ್ಕಳ ಅಳಲು.

"ಏನು ಮಾಡೋದರೆಪಾ, ಆ ಪುಣ್ಯಾತ್ಮನ ಆಯುಷ್ಯ ಮುಗೀತು. ದೇವರ ಪಾದಾ ಸೇರಿದ್ರು ಹೊರಗಿನ ಮಂದೀಗೇ ಇದು ತುಂಬಿಬಾರದ ಹಾನಿ ಅನಸ್ತದ. ಅಂಥಾದ್ರಾಗ ನಿಮ್ಮ ತಾಯಿಗೆ ಹ್ಯಾಂಗನಸ್ತಿರಬೇಕು, ಪಾಪ, ಗಂಡ ಅಂದರ ದೇವರು ಅಂತ ತಿಳಕೊಂಡ ಹೆಣ್ಮಗಳು."

"ಅಣ್ಣಾ, ನೀನ ಹೋಗಿ ಗಟ್ಟಿ ಮನಸ್ಸು ಮಾಡಿ ಮಮ್ಮಿನ್ನ ಎಬ್ಬಿಸಿ ಕರಕೊಂಡ ಬಾ" – ಮಗಳ ಅಳುದನಿ.

ಸರೋಜಾಗೆ ಯಾರೂ ಎಬ್ಬಿಸಬೇಕಾಗಿರಲಿಲ್ಲ. ಆಕೆಗೆ ಎಚ್ಚರವಾಗಿತ್ತು. ಕನಸುಗಳ ಲೋಕದಿಂದ ಆಕೆ ಹೊರಬಂದಿದ್ದಳು. ವಾಸ್ತವದ ಲೋಕದಲ್ಲಿ ಆಕೆ ಎಚ್ಚರವಾಗಿದ್ದಳು.

ಮೈ–ಮನಸ್ಸು ಹಗುರವಾದಂತಹ ಭಾವ. ಅದೆಂಥದೋ ಬಿಡುಗಡೆಯ ಸುಖದ ಭಾವ. ಎಲ್ಲ ನೋವುಗಳಿಂದ ಅಪಮಾನಗಳಿಂದ ಹಿಂಸೆಯಿಂದ ನಿರಾಶೆಯಿಂದ ಅನ್ಯಾಯದಿಂದ ದಬ್ಬಾಳಿಕೆಯಿಂದ ಕಳಚಿಕೊಂಡಂತಹ ಭಾವ. ತನಗೆ ದುಃಖವಾಗುತ್ತಿಲ್ಲ ಎಂದು ಆಕೆಗೆ ತಿಳಿಯುತ್ತಿದೆ. ದುಃಖವೇಕೆ ಆಗುತ್ತಿಲ್ಲವೆಂದು ಕಸಿವಿಸಿಯೂ ಆಗುತ್ತಿಲ್ಲ. ದುಃಖವಾಗುತ್ತಿದ್ದರೆ – ಕಸಿವಿಸಿಯಾಗುತ್ತಿದ್ದರೆ ಸಂತಾಪವಾಗುತ್ತಿದ್ದರೆ ಅದು ಈ ಗಂಡ ಸತ್ತು ಹೋದದ್ದಕ್ಕಾಗಿ ಅಲ್ಲ ಆತ ಸಾಯಿಸಿದ ತನ್ನ ಅಸಂಖ್ಯ ಕನಸುಗಳಿಗಾಗಿ....

ತಲೆ ಕೊಡವಿಕೊಂಡು ಸರೋಜಾ ಎದ್ದಳು. ಕೂದಲನ್ನು ಸೀರೆಯನ್ನು ಸರಿಪಡಿಸಿಕೊಂಡಳು. ಒಳಗಿನ ಬಾಗಿಲಿನಿಂದ ಒಬ್ಬಳೇ ಅಡಿಗೆ ಮನೆಗೆ ಹೋಗಿ ಕಾಯಿಸಿಟ್ಟಿದ್ದ ಹಾಲನ್ನು ಗ್ಲಾಸಿಗೆ ಬಗ್ಗಿಸಿಕೊಂಡು ಸಕ್ಕರೆ ಬೆರೆಸಿ ಗಟಗಟ ಕುಡಿದಳು. ನಂತರ, ಮಗ ತನ್ನನ್ನು ಕರೆಯಲು ಬರುವ ಮೊದಲೇ, ಹಗುರವಾದ ದಿಟ್ಟವಾದ ಹೆಜ್ಜೆಗಳನ್ನಿಡುತ್ತ ಪಡಸಾಲೆಗೆ ಬಂದಳು.

■

# ಬೆಳಗಾಗ ನಾನೆದ್ದು

**– ಜಾನಪದ**

ಬೆಳಗಾಗ ನಾನೆದ್ದು ಯಾರ್ಯಾರ ನೆನೆಯಲಿ
ಎಳ್ಳು ಜೀರಿಗಿ ಬೆಳೆಯೋಳ । ಭೂಮ್ತಾಯ
ಎದ್ದೊಂದು ಗಳಿಗಿ ನೆನೆದೇನ ೧

ಸುಮ್ಮನೆ ಬೀಸಿದರೆ ಬೀಳದು ಈ ಕಲ್ಲು
ನಾಗಸೊರದಂತೆ ದನಿಯೆತ್ತಿ । ಹಾಡಿದರ
ಗಮ್ಮನೆ ಬೀಳ್ವಾದು ಈ ಕಲ್ಲು ೨

ಎಳ ಹುಲ್ಲು ಅಡವ್ಯಾಗ ತಿಳಿನೀರು ಕೊಳದಾಗ
ಬಲವುಳ್ಳ ನಾಯಿ ಸಾಕ್ಯಾನ । ನನ ತಮ್ಮ
ಒನಪೀಲೆ ಕುರಿಯ ಕಾಯ್ದಾನ ೩

ಅಣ್ಣಾನ ಹೊಲದಾಗ ಬೆಳ್ಯಾನ ಬಿಳಿಜೋಳ
ಮೆಲ್ಲಕ ಮೆಲಿಯೊ ಗಿಣಿರಾಮ । ಅಣ್ಣನ
ಕಲ್ಲು ಬಂದಾವು ಕಡಿಗಾಗೊ ೪

ತಂಗೀಯ ಕರಕೊಂಡು ಕೆಂದೀನ ಹೊಡಕೊಂಡು
ತಂಗಿ ಮಕ್ಕಳಿಗೆ ಬಿಸುಲೆಂದು । ತಮ್ಮಯ್ಯ
ವಲ್ಲಿ ಮುಂಜೆರಗ ಹಿಡಿದಾನೆ ೫

ಚಿಂಚಲ ದಾರ್‍ಯಾಗ ಮಿಂಚೋದು ಏನಣ್ಣ
ಕಂಚುಗಾರುಣ್ಣ ತಿದಿಯೂದಿ । ಚಿಂಚೂಲಿ
ಮಾಯವ್ವಗ ಕಳಸ ಮಾಡ್ಯಾನ ೬

ತೋಟಕ್ಕೆ ಹೋದಣ್ಣ ಊಟಕ್ಕೆ ಬರಲಿಲ್ಲ
ತೋಟದ ಹೂವ ತಲೆತುಂಬ । ಇಟುಕೊಂಡು
ಊಟದ ಚಿಂತಿ ಮರೆತಾನು ೭

ಕೆಲಸ ಮಾಡಿದರ ಸರಸವಾಡೀದ್ಧಂಗ
ಆಲಸಂದಿ ಕಾಳ ಸುಲಿದ್ಧಂಗ । ಕಂಡವನ
ಕೆಲಸ ನೋಡತ್ತಿ ಕಳುಹಾಳ ೮

ಅವರೀಗಿ ಅವರಣ್ಣ ಅವಲಕ್ಕಿ ಕಳುಹ್ಯಾನ
ನಮ್ಮಣ್ಣನೇನು ಬಡವಾನ । ಕ್ಯಾದಿಗಿ
ಗರಿಯೊಳಗೆ ಘಳಗಿ ಕಳುಹ್ಯಾನ ೯

ಅಚ್ಚಮಲ್ಲಿಗಿ ಹೂವ ಮುಚ್ಚಿ ಮಾರುವ ಜಾಣ
ನಾ ಕೊಳುವೆನಿದರ ಬೆಲೆ ಹೇಳೊ । ತಂಗೀಗಿ
ಸುರುಳಿಗೂದಲದ ಸುಗುಣೀಗಿ ೧೦

ಬೀಸಲಕ ಕುಂತೇನಿ ಕೂಸ ನನ ತೊಡಿಮ್ಯಾಲ
ವಾಸ್ಯಾಡಬೇಡ ನೆಗೆಯೇಣಿ । ನಿನ್ನ ಕೆಲಸ
ತಾಸೊತ್ತಿನಾಗ ತಿರುವೇನೋ ೧೧

ಗಂಡ ಸತ್ತವ್ವಗ ರಂಡೆಮುಂಡೆನ ಬೇಡ
ಕಂದನ ಹಿಡಿದು ತಪಹಾಳ । ಅವಳೀಗೆ
ಗಂಗಾದೇವೆಂದು ಕರಿಬೇಕ ೧೨

# ಮಸಾಲೆ ದೋಸೆ

– ಪು.ತಿ.ನ.

ಹಳ್ಳಿಯವನು ಪಟ್ಟಣಿಗರ ಹೋಟೆಲುಗಳಲ್ಲಿ ಮಸಾಲೆ ದೋಸೆಯನ್ನು ತಿನ್ನುತ್ತಿದ್ದರೆ ಅದನ್ನು ಸಹಾನುಭೂತಿಯಿಂದ ನೋಡುವ ನಾಗರೀಕರಿದ್ದಾರೆಯೇ? ಈ ನೋಟ ಅವರಿಗೆ ಏನೋ ಅನಾಹುತವನ್ನು ಸೂಚಿಸುತ್ತದೆಯಲ್ಲ? ಹಿರೋಷಿಮಾದ ಮೇಲೆ ಆಟಂಬಾಂಬು ಬಿತ್ತು, ಬಂಗಾಳದಲ್ಲಿ ಲಕ್ಷಗಟ್ಟಲೆ ಜನರು ಆಹಾರವಿಲ್ಲದೆ ಸತ್ತರು – ಬಹುದೂರದ ಸಮಾಚಾರ. ಇವುಗಳಿಂದ ಮನಸ್ಸು ಚಕಿತವಾಗುವಷ್ಟು ಹೃದಯ ತಲ್ಲಣಗೊಳ್ಳುವುದಿಲ್ಲ. ಈ ದುರಂತಗಳಿಂದ ಪರಂಗಿಯವರ ಮೇಲೆ ನಮಗಿರುವ ವಿಶ್ವಾಸವಾದರೂ ಕಡಿಮೆಯಾಗಿದೆಯೇ? ಆದರೆ ಬೆಳಗಾಗುತ್ತಲೇ ಬಸ್ಸೇರಿ ಬಂದು ನಗರದಲ್ಲಿ ಮಸಾಲೆ ದೋಸೆಯನ್ನು ಮೆಲ್ಲುತ್ತಿರುವ ಹಳ್ಳಿಗನನ್ನು ಕಂಡು ನಾಗರಿಕನ ಮನಸ್ಸು ಪ್ರಕ್ಷುಬ್ಧವಾಗುತ್ತದೆ. ಏಕೆ? ಇದರಲ್ಲಿ ಯಾವ ದುರಂತವಡಗಿದೆ? ದೇಶದಲ್ಲಿ ಈಗಿನ ಆಹಾರಾಭಾವಕ್ಕೂ ರೈತ ಮಸಾಲೆ ದೋಸೆ ತಿನ್ನುವುದಕ್ಕೂ ಏನು ಸಂಬಂಧ? "ಕಾಲಕಾಲಕ್ಕೆ ಮಳೆಯಾಗುತ್ತಿಲ್ಲ, ಬೆಳೆ ಬೆಳೆಯುತ್ತಿಲ್ಲ; ರೈತರು ಮಸಾಲೆ ದೋಸೆಯನ್ನು ತಿನ್ನುವುದಕ್ಕೆ ಪ್ರಾರಂಭಿಸಿಬಿಟ್ಟರು.... ಬಸ್ಸನಲ್ಲಿ ಪ್ರಯಾಣ ಮಾಡುವುದು ದುಸ್ತರ, ಹಳ್ಳಿಯವರಿಗೆ ಹೆಜ್ಜೆಯಷ್ಟು ದೂರಕ್ಕೂ ಬಸ್ಸೇ ಬೇಕು – ಪಟ್ಟಣಕ್ಕೆ ಹೋಗಿ ಮಸಾಲೆ ದೋಸೆ ತಿನ್ನಬೇಡವೇ?.... ಎಷ್ಟೋ ಜಮೀನುಗಳು ಬಂಜರು ಬಿದ್ದಿವೆ; ಬೇಸಾಯಗಾರನಿಗೆ ಹೋಟೆಲಿನ ಮಸಾಲೆ ದೋಸೆಯ ರುಚಿ ನಾಲಿಗೆಗೂರಿದರೆ ಇನ್ನೇನಾದೀತು?.... ಗುತ್ತಿಗೆ ಸರಿಯಾಗಿ ಬರುತ್ತಿಲ್ಲ; ಮಸಾಲೆ ರುಚಿ ಕಂಡವ ಗುತ್ತಿಗೆ ಕೊಟ್ಟಾನೆ?... ಪಟ್ಟಣದಲ್ಲಿ ಏನಿದೆ ನಾಜೂಕು, ಹಳ್ಳಿಗೆ ಹೋಗಿ ನೋಡಬೇಕು ಅವರ ದಿಂರಂಗತನವನ್ನು; ಎಲ್ಲಾ ಮಸಾಲೆ ದೋಸೆಯ ಮಹತ್ತು!" – ಈ ರೀತಿ ಹಳ್ಳಿಗರು ಮತ್ತು ಪಟ್ಟಣಿಗರು ಇವರ ವ್ಯವಹಾರದಲ್ಲಿ ಒಂದು ಮಹಾಕ್ರಾಂತಿಯನ್ನೇ ಎಬ್ಬಿಸಿದೆ, ಗ್ರಾಮ್ಯಜಿಹ್ವಾ ಬಾಂಧವ್ಯದಿಂದ ಈ ಮಸಾಲೆ ದೋಸೆ.

ರೈತರೇಕೆ ಪಟ್ಟಣಗಳಿಗೆ ಬಸ್ಸುಗಳಲ್ಲಿ ಹೋಗಿ ಮಸಾಲೆದೋಸೆಗಳನ್ನು ತಿಂದು ಹಿಂದಿರುಗಬಾರದೋ, ಏಕಿದು ನಾಗರಿಕರಿಗೆ ಅಸಮ್ಮತವಾಗಬೇಕೋ– ಚಿಂತಿಸತಕ್ಕ ವಿಷಯ. ಹಾಗೆಯೇ ಆಲೋಚಿಸಿದರೆ ಆ ದೋಸೆಗಳನ್ನು ತಿನ್ನುವುದಕ್ಕೆ ಅವರೇ ಅಲ್ಲವೆ ಹೆಚ್ಚು ಅರ್ಹರು? ಯಾರ ಕೈಕೆಸರಾದರೆ

ಯಾರ ಬಾಯಿ ಮೊಸರಾಗಬೇಕು? ಕೃಷಿಗೆ ತಕ್ಕ ಫಲ ಕರ್ಷಕನಿಗೇ ಎಂಬ ಧ್ಯೇಯದ ಘೋಷಣೆ ನಗರದಲ್ಲಿ ಮೊದಲು ಹುಟ್ಟಿತೋ ಹಳ್ಳಿಗಳಲ್ಲೋ? ಈ ಮಸಾಲೆ ದೋಸೆಯಲ್ಲಿ ಹಳ್ಳಿಯವನು ಬೆಳೆಯದಿರುವ ಯಾವ ದ್ರವ್ಯವಿದೆ– ಇದರ ಹಿಟ್ಟುಗಳನ್ನು ಅರೆಯುವ ಯಂತ್ರವೊಂದು ವಿನಾ? (ಈ ಯಂತ್ರಸ್ಪರ್ಶದಿಂದ ರುಚಿ ಹೆಚ್ಚುತ್ತದೋ ಕೆಡುತ್ತದೋ ರಸಜ್ಞರು ವಿವೇಚಿಸಲಿ) ಅದನ್ನು ಹುಯ್ಯುವ ಭಟ್ಟನೋ? ಆತನೂ ಕೆಟ್ಟು ಪಟ್ಟಣವನ್ನು ಸೇರಿದ ಹಳ್ಳಿಗನೇ ಅಲ್ಲವೆ? ಈ ದೋಸೆ ತಮ್ಮದೆಂದುಕೊಳ್ಳುವುದಕ್ಕೆ ನಾಗರಿಕರಿಗೇನು ಹಕ್ಕು? ಅದನ್ನು ತಿಂದು ಶ್ಲಾಘ್ಯವಾದ ಪದಾರ್ಥವಿದು ಎಂದು ಮೊದಲು ಗುರುತಿಸಿ ಪ್ರಚಾರಕ್ಕೆ ತಂದವರು ಅವರಿರಬಹುದು, ನಗರದಲ್ಲಿ ಆ ಭಟ್ಟನ ಪ್ರತಿಭೆ ಕಮರಿರಬಹುದು; ಅದಮಾತ್ರಕ್ಕೇ, ಕೆಲವರು ವಿಮರ್ಶಕರು ಕೆಲವರು ಕೃತಿಕಾರರನ್ನು ವಿಶೇಷವಾಗಿ ಪ್ರಶಂಸಿಸಿ ಅವರು ತಮಗೆ ಮಾತ್ರ ವಿಶಿಷ್ಟರೆಂದುಕೊಳ್ಳುವ ಹಾಗೆ, ರುಚಿಕಂಡ ಮಾತ್ರಕ್ಕೆ ಮಸಾಲೆ ದೋಸೆಯೂ ನಾಗರಿಕರ ಹಕ್ಕಿನದಾಗಿ ಆಗಬೇಕೆ? ಈ ರುಚಿಸ್ವಾಮ್ಯ ಖಂಡನಾರ್ಹವೋ ಮಂಡನಾರ್ಹವೋ? ರುಚಿಸ್ವಾಮ್ಯದಿಂದ ಗ್ರಾಮೀಣನೂ ನಾಗರಿಕನ ನಿಲುವಿಗೆ ಸಂದನಲ್ಲಾ ಎಂಬ ಅಸೂಯೆಯಿಂದ ಈ ಅಸಹನೆ ನಗರಗಳಲ್ಲಿ ಪ್ರಚಲಿತವಾಗಿದೆ ಎಂದು ನನ್ನ ಊಹೆ. ಅಹುದು, ಇಲ್ಲಿದೆ ಭಯ. ಗಾಯತ್ರಿಯಿಂದ ಬ್ರಾಹ್ಮಣ, ಕಲ್ಮಾದಿಂದ ಮುಸಲ್ಮಾನ್, ಜ್ಞಾನಸ್ನಾನದಿಂದ ಕ್ರಿಶ್ಚಿಯನ್, ಲಿಂಗಧಾರಣೆಯಿಂದ ವೀರಶೈವ – ನಂಬಿದರೆ ನಂಬಿ ಬಿಟ್ಟರೆ ಬಿಡಿ – ಆ ಹಿಟ್ಟು ರೊಟ್ಟಿಗಳನ್ನು ತಿನ್ನುತ್ತಿರುವವರೆಗೆ ಹಳ್ಳಿಗ ಹಳ್ಳಿಗ; ಆತ ಮಸಾಲೆ ದೋಸೆಯನ್ನು ತಿನ್ನಲು ಪ್ರಾರಂಭಿಸಿಬಿಟ್ಟನೆಂದರೆ ಆತ ನಾಗರಿಕನಾಗಿ ಮತಾಂತರ ಹೊಂದಿಬಿಡುತ್ತಾನೆ! ಹಳ್ಳಿಯವರೆಲ್ಲ ನಾಗರಿಕರಾಗಿಬಿಟ್ಟರೆ ನಾಗರಿಕನಿಗೆ ತನ್ನ ನಾಗರಿಕತೆ ಉಳಿಯುತ್ತದೆಯೇ ಎಂಬ ಭಯ ಸಹಜವಾಗಿಯೇ ಮೂಡುತ್ತದೆಯಲ್ಲವೆ. ಹಳ್ಳಿಗನ ಈ ಪರಿವರ್ತನೆಯಲ್ಲಿದೆ ನಾಗರಿಕನ ದುರಂತದ ಮೊಳಕೆ. ತನ್ನ ಮಹತ್ವದ ದುರ್ಗ ತನ್ನ ಮಸಾಲೆ ದೋಸೆಯ ಒಳಸಂಚಿನಿಂದಲೇ ಭಗ್ನವಾಗುತ್ತಿದೆಯಲ್ಲಾ; ರೈತ ನಾಗರಿಕನಾಗುವುದೂ ಬೇಲಿ ಹೊಲವನ್ನು ನುಂಗುವುದೂ ಒಂದೇ ತೆರನಲ್ಲವೇ; 'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ' – ಎಂದರೆ 'ಕೆಲಸ ನಿನಗೆ, ಫಲ ನನಗೆ' ಎಂಬ ಗೀತಾಸೂಕ್ತಿಯಲ್ಲಿ ಇದುವರೆಗೂ ನಿಷ್ಠವಾಗಿದ್ದ ನಮ್ಮ ಪೌರ ಸಂಸ್ಕೃತಿಯ ನೆಲಗಟ್ಟಿನಲ್ಲಿ ಇಂಥ ಬಿರುಕು ತೋರಿದರೆ ಏನು

ಗತಿ? ರೈತ ತಾನು ಬೆಳೆದುದನ್ನೆಲ್ಲಾ ತಾನೇ ತಿಂದು ಮುಗಿಸಿದರೆ ನಾವು ಬಾಳುವುದೆಂತು? ಹಳ್ಳಿಯವನು ನಾಗರಿಕನಾದರೆ ಭೂಮಿ ಬಂಜೆಯಾದಂತೆ ತಾನೆ; ಆಗ ನಾಡಿನ ಮಕ್ಕಳಾರು, ನಮ್ಮ ಸಂಸ್ಕೃತಿಗೇನು ಗತಿ? ಈ ರೀತಿಯಲ್ಲಿ, ಪಲಾಂಡುವಿನ ಈ ಅಪೂರ್ವವಾದ ಅಪರೂಪದ ನವ್ಯಸ್ಪೃಹೆಯುಳ್ಳ ಪಲ್ಲೀಜನದ ವಿಷಯವಾಗಿ ನಾಗರಿಕರು ಪಡುವ ಆತಂಕದಲ್ಲಿ ಸ್ವಾರ್ಥಕ್ಕಿಂತಲೂ ದೇಶಾಭಿಮಾನ ಒಂದು ನವಿರಷ್ಟು ಹೆಚ್ಚಾಗಿರುವಂತೆ ತೋರುತ್ತದೆ.

ನಿಜವಾಗಿ ಮಸಾಲೆದೋಸೆ ಕ್ರಾಂತಿಕರವಾದ ವಸ್ತುವೇನೋ ಹೌದು. ಅದು ಹಿಟ್ಟಿನ ಮುದ್ದೆಯಂತೆ ಸರಳವಾದ ಉಣಿಸಲ್ಲ. ಅದು ಬಹು ಸಂಕೀರ್ಣ ವಸ್ತು. ಅನೇಕ ತಂತಿಗಳಿಂದ ಕೂಡಿ ಶೃತಿಗೆ ಸಿದ್ಧವಾದ ಪಿಟೀಲಿನ ಮೇಲೆ ಕುಶಲವಾದಕನು ಕಮಾನನ್ನು ಆಡಿಸುವ ಹಾಗಾಗುತ್ತದೆ. ಪ್ರವಿಣನಾದ ವಲಲನು ಹದವರಿತು ನಿರ್ಮಿಸಿದ ಮಸಾಲೆ ದೋಸೆಯ ಮೊದಲ ತುಣುಕು ರಸನೆಗೆ ಸೋಕಿದಾಗ. ಕಾಂತೆಯ ಪ್ರಣಯ ಕೋಪದಂತೆ ಅದು ಹೊರಗೆ ಕಟು, ಒಳಗೆ ಮೃದು. ಅಗ್ನಿಸಾಕ್ಷ್ಯವಾಗಿ ವರಿಸಿದ ಗೃಹಿಣಿಯೊಡನೆ ನಾವು ನಡೆಸುವ ಗಾರ್ಹಸ್ಥ್ಯದಂತಲ್ಲ ಅದರೊಳಗಿನ ಮಸಾಲೆಯ ರುಚಿ; ಅನ್ಯಸ್ತ್ರೀ ಕಟಾಕ್ಷದಂತಿಗೆ ಆ ಪಲಾಂಡು ಮಾಧುರ್ಯ. ಇಂಗಿನ ಕಹಿ, ಮೆಂತ್ಯದ ಒಗಚು, ಹಸಿಶುಂಠಿ ಹಸಿಮೆಣಸಿನಕಾಯಿ ಮೆಣಸುಗಳ ವಿಶಿಷ್ಟವಾದ ಖಾರಗಳು, ಪಲ್ಯದ ಕಾಯಿಗಳ ವಿವಿಧ ಮಾಧುರ್ಯ. ಹಿಟ್ಟುಗಳ ಹುದುಗಿನ ಹಿತವಾದ ಹುಳಿ, ತುಪ್ಪದ ಕಂಪು, ಬೆಣ್ಣೆಯ ವಿಪುಲಾರ್ದ್ರತೆ – ಈ ಸಮೃದ್ಧ ರಸಗಳನ್ನು ಹೊಂದಿಸಿ, ಸುತ್ತಲೂ ಕೆನ್ನಾಲಗೆಯನ್ನು ಚಾಚಿ ಕಾವಲೆಯ ಮೇಲಿರುವ ಭಕ್ಷ್ಯವನ್ನು ರುಚಿ ನೋಡಲು ಹವಣಿಸುವ ಅಗ್ನಿದೇವನನ್ನು ನೀರಿನಿಂದ ದಟ್ಟಿಸುತ್ತಾ, ಕಣ್ಣಿಗೆ ನಾಲಗೆಯ ಹರಿತವನ್ನು ಕೊಟ್ಟು ಒಂದು ಕ್ಷಣವೂ ಹಿಂಚು ಮುಂಚಿಲ್ಲದಂತೆ ಸಿದ್ಧಕ್ಷಣದಲ್ಲಿ ಎಲೆಗಿಳಿಸುವ ಕುಶಲ ಬಾಣಸಿಗನ ಕುಶಲ ಕೃತಿ ಈ ಮಸಾಲೆ ದೋಸೆ. ಇದಕ್ಕೆ ಯಾವ ರಸನಾವಂತ ಮರುಳಾಗಲೊಲ್ಲ? ಮಡಿಕೆಯಲ್ಲಿ ಗರುಗನ್ನು ಹೊಳೆಸುತ್ತಾ, ಬಿಚ್ಚಿದ ಗಳಿಗೆಯಲ್ಲಿ ಹದವಾಗಿ ಬೆಂದ ಸ್ವರ್ಣೋದರವನ್ನು ಪ್ರದರ್ಶಿಸಿ, ರಸಾರ್ದ್ರವಾದ ಮಸಾಲೆ ಪಲ್ಯದ ಸುಗಂಧಭಾರವಾದ ಬಾನಿನ ಪತಾಕೆಯಂತಿರುವ ಹಬೆಯಿಂದ ಘ್ರಾಣೇಂದ್ರಿಯವನ್ನು ವಿಭ್ರಮಗೊಳಿಸುತ್ತಾ ನಿಮ್ಮ ಹಸ್ತಗತವಾಗುವ ಈ ವಸ್ತು ಮನೆಯಲ್ಲಿ ದೊರೆಯುವ ವಸ್ತುವೇ, ಮಠದಲ್ಲಿ ದೊರೆಯುವ ವಸ್ತುವೇ? ಯಾವ ರಸಜ್ಞವಾದ ಜಿಹ್ವೆ ಇದನ್ನು ಮೋಹಿಸಿ ಮುದ್ದಿಸದು? ಆ ಮಡ್ಡಿ ಇಡ್ಲಿಯನ್ನು ಇದರ ಮುಂದೆ

ನಿವಾಳಿಸಬೇಕಲ್ಲವೆ? ಈ ಮೈಸೂರು ಮಸಾಲೆಯ ಪ್ರಲೋಭಕ್ಕೆ ಸಿಕ್ಕಿ ಚೇತರಿಸಿಕೊಂಡ ಮಡಿ ಯಾರದು. ಎಲ್ಲಿದೆ? ಸರಳತೆಯಿಂದ ಸಂಕೀರ್ಣತೆಗೆ, ಗ್ರಾಮೀಣತೆಯಿಂದ ನಾಗರಿಕರತೆಗೆ, ವೈದಿಕದ ಇರು ಕಟ್ಟಿನಿಂದ ಲೌಕಿಕದ ಹಸರಕ್ಕೆ, ಮೌಗ್ಧ್ಯದಿಂದ ಪ್ರೌಢಿಮೆಗೆ, ಕ್ಷೇತ್ರದಿಂದ ಯಂತ್ರಾಗಾರಕ್ಕೆ, ಪಂಚಾಯಿತಿಯಿಂದ ರಾಜ್ಯಸಭೆಗೆ, ಈ ಮಸಾಲೆ ದೋಸೆ ಮಂದಿಗಳನ್ನು ಸೆಳೆದೊಯ್ಯುತ್ತಿರುವುದೇನಚ್ಚರಿ? ಇದರಿಂದ ಎಷ್ಟೊಂದು ಗುಡಿಗಳು ಹುಡಿಗೂಡಿಲ್ಲ, ಎಷ್ಟೊಂದು ಹೊಲ ಹಾಳುಬಿದ್ದಿಲ್ಲ? ಸುಂದರಿಯಾದ ವಿಲಾಸಿನಿಯ ರಖಾವುದಾರನಂತೆ, ನಾಗರಿಕನು ಈ ಮಸಾಲೆ ದೋಸೆಯ ಪ್ರಲೋಭನಕ್ಕೆ ಸಿಕ್ಕುವ ಹಳ್ಳಿಗನ ವಿಷಯದಲ್ಲಿ ಸಹಾನುಭುತಿಯನ್ನು ತೋರಿಸುವುದು ಸಾಧ್ಯವಾದ ಮಾತೆ?

ಹೀಗೆ ಅನೇಕ ದೃಷ್ಟಿಗಳಿಂದ ಆರೋಗ್ಯವಾದರೂ ಭೋಗ್ಯವಾದ ಈ ವಸ್ತು ನಮ್ಮ ನಾಗರಿಕ ಸಂಸ್ಕೃತಿಯ ವಿಶಿಷ್ಟವಾದ ರುಚಿಯನ್ನು ಲೋಕಕ್ಕೆ ಎತ್ತಿ ತೋರಿಸಿಕೊಡುವಂತೆ, ಒಂದು ರೀತಿಯಲ್ಲಿ ನಮ್ಮ ಭಾರತದ ಸಂಸ್ಕೃತಿಯ ಮೂಲವನ್ನೇ ಅಲ್ಲಾಡಿಸುತ್ತಿದೆಯೋ ಏನೋ. ಏಕೆಂದರೆ ನಮ್ಮ ಸಂಸ್ಕೃತಿ ಅರಣ್ಯಜನ್ಯವಾದದ್ದು, ವ್ಯಕ್ತಿನಿಷ್ಠವಾದುದು; ವನ್ಯಜನಪೋಷಿತವಾಗಿ ಅನ್ಯ ಜನ ದುರ್ಗಮವಾದದ್ದು. ಅದು ಪಾಶ್ಚಾತ್ಯ ಸಂಸ್ಕೃತಿಯಂತೆ ನಾಗರಿಕವಲ್ಲ– ಅದು ಬದುಕಬೇಕಾದರೆ ಗ್ರಾಮ್ಯರಿಂದ ಗ್ರಾಮಗಳಲ್ಲಿ. ನಗರದಲ್ಲಿ ಅದರ ವ್ಯಾಪ್ತಿ ಕಡಮೆ. ಅದಕ್ಕೇ ನಮ್ಮನ್ನು ಪಾಶ್ಚಾತ್ಯಲೋಕ ದೂರುತ್ತದೆ – ಭಾರತೀಯರು ಸಂಸ್ಕೃತರಾದರೂ ನಾಗರಿಕರಲ್ಲ ಎಂದು. ಏಕೆಂದರೆ ಅದರ ಪ್ರಜೆ ನಾಗರಿಕ, ಆದರೆ ಸಂಸ್ಕೃತವಲ್ಲ. ನಮ್ಮದೋ ಸಂಸ್ಕೃತಿಸಂಪನ್ನವಾದರೂ ನಾಗರಿಕವಲ್ಲ! ನಗರಕ್ಕೂ ನಮ್ಮ ಸಂಸ್ಕೃತಿಗೂ ಸ್ವಲ್ಪ ದೂರದೂರವೇ. ನಗರದಲ್ಲಿ ಅದು ನಮ್ಮ ಮುಂದಿನ ಬೈಠಕುಖಾನೆಗಳಲ್ಲಿ ತಲೆದೋರದು; ಹಿಂದಿನ ಪಾಕ ಶಾಲೆಯಲ್ಲಡಗುತ್ತದೆ. ನಿಜ, ಪಂಡಿತ ನೆಹ್ರುವಿನ ಮೂದಲಿಕೆ ಸತ್ಯವನ್ನೇ ಹೇಳುತ್ತದೆ; ನಮ್ಮ ಅಡಿಗೆಮನೆಗಳಲ್ಲೇ ನಮ್ಮ ಸಂಸ್ಕೃತಿಯ ನೆಲೆ, ಅವೇ ಅದರ ನಿಧಿಸ್ಥಾನ. ಅಂತಃಪುರವೆಲ್ಲಿ, ವೇಶ್ಯಾಗೃಹವೆಲ್ಲಿ? ಪಾಕಗೃಹಗಳೆಲ್ಲಿ, ಹೋಟೆಲುಗಳೆಲ್ಲಿ? ರೈತ ಮಸಾಲೆ ದೋಸೆಯನ್ನು ತಿನ್ನುತ್ತಿದ್ದರೆ ಅದನ್ನು ಕಂಡ ನಮಗೆ ನಮ್ಮ ರಸಿಕಪೂರ್ವಜರು ಅವರ 'ದುರಭ್ಯಾಸ'ಗಳನ್ನು ಅನುಕರಿಸುವ ನಮ್ಮ ವಿಷಯದಲ್ಲಿ ಪಡುತ್ತಿದ್ದ ಕನಿಕರ ಇವರ ವಿಷಯಕ್ಕೆ ನಮಗೆ ಮತ್ತೆ ಮೂಡುತ್ತದೆ. "ನಾವು ಕೆಟ್ಟೆವು, ನೀವೂ ಕೆಡಬೇಕೆ? ನಮ್ಮ

ನಾಲಗೆಯಷ್ಟು ಪಟುವಾಗಿಲ್ಲ. ಅದರ ಜಾಡ್ಯಕ್ಕೆ ಈ ಮಸಾಲೆ ಬೇಕು. ನಿಮ್ಮದು ಸರಳ ಮತ್ತು ಮುಗ್ಧ. ನಿಮ್ಮ ರುಚಿಯನ್ನು ಶುಚಿಯಾಗಿಟ್ಟುಕೊಂಡು ಗ್ರಾಮೀಣತೆಯನ್ನುಳಿಸಿಕೊಳ್ಳಿ, ಸಂಸ್ಕೃತಿಗೆ ಆಕರರಾಗಿ. ನಿಮ್ಮಿಂದಲೇ ಅದರ ಉದ್ಧಾರ. ನಮಗೆ ಕುಲವಿಲ್ಲ, ಗೋತ್ರವಿಲ್ಲ, ಆಚಾರವಿಲ್ಲ. ವಿಚಾರವಿಲ್ಲ – ಇಲ್ಲಿ, ಎಲ್ಲರೂ ಒಂದಾಗಿಬಿಟ್ಟೆವು. ಇನ್ನೂ ನಿಮ್ಮಲ್ಲಿ ವ್ಯಕ್ತಿವಿವೇಕ ಉಳಿದಿದೆ. ನಾವಂತೂ ನಾವಾದೆವು, ನೀವು ನೀವಾಗಿರಬಾರದೇ? ನಿಮ್ಮ ಕನಿಕರಕ್ಕೆ ನಾವು ಪಾತ್ರರು" ಈ ತೆರೆ ಹರಿಯುತ್ತದೆ ನಮ್ಮ ಸಮೃದ್ಧಾನುಕಂಪೆಯ ಲಹರಿ. ನಮಗೂ ಹಳ್ಳಿಯವನಿಗೂ ಇರುವ ಅಂತರವನ್ನು ಈ ಭಕ್ಷ್ಯ ವಿಶೇಷದಿಂದ ಉಳಿಸಿಕೊಳ್ಳಬೇಕೆಂದು ನಮಗೆ ಆಸೆ.

"ನೀವು ನೀವಾಗಿರಿ, ನಾವು ನಾವಾಗಿರುತ್ತೇವೆ," ಇದೀಗ ಮಾತು ಸಂಪ್ರದಾಯನಿಷ್ಠರ ಹೃದಯತಲದಲ್ಲಿ ಸದಾ ಜಾಗೃತವಾಗಿರುವ ಪ್ರಜ್ಞಾವಾಣಿ, ಸ್ವಾಸ್ಥ್ಯಮಂತ್ರ, ಸ್ವಾಸ್ಥ್ಯಕ್ಕೆ ಧಕ್ಕೆ ಬರುವ ಸಂದರ್ಭಗಳಲ್ಲೆಲ್ಲಾ ಸಂಪ್ರದಾಯನಿಷ್ಠೆ ತಲೆದೋರುತ್ತದೆ. ಅಸ್ವಸ್ಥವಾದದ್ದು ಸ್ವಾಸ್ಥ್ಯಕ್ಕೆ ಬರುವ ಹವಣಿಕೆಯೇ ಪ್ರಗತಿ ಎನ್ನಿಸಿಕೊಳ್ಳುತ್ತದೆಯೋ ಏನೋ. ನೀವು ಅಸ್ವಸ್ಥರೋ, ಹಾಗಾದರೆ ನೀವು ಪ್ರಗತಿಶೀಲರು; ಸ್ವಸ್ಥರೋ ಹಾಗಾದರೆ ಸಂಪ್ರದಾಯನಿಷ್ಠರು. ಮನುಷ್ಯ ಎಲ್ಲಿ ಸಾಂಪ್ರದಾಯಿಕನೋ ಎಲ್ಲಿ ಪ್ರಗತಿಶೀಲನೋ ಹೇಳಲು ಬರುವಂತಿಲ್ಲ. ಅದು ಯಾವ ಯಾವ ವಿಷಯಗಳಲ್ಲಿ ಅವನು ನೆಮ್ಮದಿಯಾಗಿದ್ದಾನೆ, ಯಾವ ಯಾವುಗಳಲ್ಲಿ ಅಸ್ವಸ್ಥ ಎಂಬುದರ ಮೇಲೆ ಹೋಗುತ್ತದೆ. ಮಸಾಲೆ ದೋಸೆಯ ವಿಷಯದಲ್ಲಿ ನಾಗರಿಕ ಸಂಪ್ರದಾಯನಿಷ್ಠ. ಮಸಾಲೆ ದೋಸೆಗೂ ಹಳ್ಳಿಗನನ್ನು ನಾಗರಿಕನನ್ನಾಗಿ ಪರಿವರ್ತನೆಗೊಳಿಸುವ ಪ್ರಭಾವವಿದೆ; ಹಿಟ್ಟು ರೊಟ್ಟಿಗಳಿಗೆ ನಾಗರಿಕನನ್ನು ಆಕರ್ಷಿಸಿ ಹಳ್ಳಿಗನನ್ನಾಗಿ ಮಾಡುವ ಸಾಮರ್ಥ್ಯವಿಲ್ಲ. ಆದುದರಿಂದ ಹಳ್ಳಿಗನ ಹಳ್ಳಿಗತನಕ್ಕೆ ಯಾರಿಂದಲೂ ಯಾವ ಅಪಾಯವೂ ಇಲ್ಲ. ಆದರೆ ನಾಗರಿಕ ನಾಗರಿಕತೆಯ ವೈಶಿಷ್ಟ್ಯವನ್ನು ತನಗೊಬ್ಬನಿಗೆ ಉಳಿಸಿಕೊಳ್ಳಲಾರ. ತಮ್ಮ ದಾಯಾದಿಗಳು ಬೆಳೆಯಲೆಂದು ಯಾರಿಗೆ ತಾನೆ ಆಸೆ ಇದೆ? ಈ ಮಸಾಲೆ ದೋಸೆಯ ವ್ಯಾಪ್ತಿಯೋ ಕ್ಷಾಮದಿಂದ ಕ್ಷೀಣಿಸದು; ರೇಷನ್ ಶಾಸನಗಳಿಂದ ಕುಂಠಿತವಾಗದು. ಇದನ್ನು ತಡೆಗಟ್ಟಿ ತನ್ನ ವಿಶಿಷ್ಟತೆಯನ್ನು ಕಾಪಾಡಿಕೊಳ್ಳಲಾರದ ನಾಗರಿಕನ ಈ ಅಸಾಮರ್ಥ್ಯ ನಿಂದೆಯಲ್ಲಿ ಅಲ್ಲವೆ ಮುಗಿಯಬೇಕು? ಎಲ್ಲ ಕ್ಷೋಭೆಗಳಿಗೂ ಇದರ ರುಚಿ ಪ್ರಸರಣವೇ ಕಾರಣವೆಂದು ರೈಲುಗಳಲ್ಲೂ ಬಸ್ಸುಗಳಲ್ಲೂ ಗೋಷ್ಠಿಗಳಲ್ಲೂ

ಚೌಕಗಳಲ್ಲೂ ಪಟ್ಟಣಿಗರು ಗುಸುಗುಸು ಎಂದು ಬುಸುಗುಟ್ಟುತ್ತಿದ್ದಾರೆ–ಒಂದು ದೋಸೆಗೆ ಹತ್ತು ಬಾಯಾದರೆ ಏನು ಗತಿ ಎಂದು.

ಅಲ್ಲದೆ ಇನ್ನೊಂದು ರಹಸ್ಯ ಈ ಮಸಾಲೆ ದೋಸೆಯ ನಿಂದೆಯಲ್ಲಡಗಿದೆ. ನಿಮ್ಮ ಧ್ಯೇಯವೇನು ನಮ್ಮ ಸಂಸ್ಕೃತಿಯ ವಿಷಯದಲ್ಲಿ, ಹೇಳಬಲ್ಲಿರಾ? ನಿಮಗೆ ಏಕತೆಯಲ್ಲಿಷ್ಟವೋ, ವೈವಿಧ್ಯದಲ್ಲಿ ಪ್ರೀತಿಯೋ? ಭಾರತದ ಜನ ಒಂದು ಜನಾಂಗವಾಗಿರಬೇಕೇ ಅಥವಾ ಅನೇಕ ಜನಾಂಗಗಳ ಉದ್ಗೀಥವಾಗಿರಬೇಕೇ? ಒಂದು ಮತ, ಒಂದು ಪುಸ್ತಕ, ಒಬ್ಬ ಗುರು, ಒಂದು ಶಿಸ್ತು, ಒಂದು ಮಾತು, ಒಂದು ರೀತಿ, ಈ ಏಕಮೇವಾದ್ವಿತೀಯತೆಯಲ್ಲಿ ನೀವು ಆಸಕ್ತರಾಗಿದ್ದೀರಾ; ಅಥವಾ ಬಹುಮತ, ಬಹುಗುರು, ಬಹುಪುಸ್ತಕಗಳಲ್ಲಿ ನಿಮ್ಮ ಶ್ರದ್ಧೆಯೋ? ನಿಮಗೆ ಸ್ವಾಪದ ಏಕಸ್ಥಿತಿ ಇಷ್ಟವೋ? ಜಾಗರದ ಬಹುಸ್ಥಿತಿ ಪ್ರಿಯವೋ? ನೀವು ಏಕತಾಪ್ರಿಯರಾದರೆ ಈ ಮಸಾಲೆ ದೋಸೆಯ ನಿಂದೆ ನಿಮಗೆ ಸಲ್ಲದು. ಅದರ ವ್ಯಾಪ್ತಿ ಹೆಚ್ಚಿದಷ್ಟೂ ನಿಮ್ಮ ಧ್ಯೇಯವೂ ಗುರಿಮುಟ್ಟುತ್ತದೆ. ಏಕೆಂದರೆ ಅನ್ನದಂತೆ ನಾಲಗೆ. ನಾಲಗೆಯಂತೆ ಮನಸ್ಸು, ಮನಸ್ಸಿನಂತೆ ಭಾವನೆ, ಭಾವನೆಯಂತೆ ಜನ, ಜನದಂತೆ ಜನಾಂಗ–ಏಕಾನ್ನದಿಂದ ಏಕಜನಾಂಗ, ಬಹ್ವನ್ನಗಳಿಂದ ಬಹುಜನಾಂಗಗಳು, ವಿಪುಲ ಸಂಪ್ರದಾಯಗಳು, ವಿಶಿಷ್ಟ ಸಂಸ್ಕೃತಿಗಳು. ಇಂದ್ರಿಯಗಳಲ್ಲೆಲ್ಲಾ ಬಹು ಪ್ರಬಲವಾದ ರಸನೆಯ ಗ್ರಸನದಿಂದ ಸಂಪ್ರದಾಯಗಳ ಜುಟ್ಟುನ್ನೆಲ್ಲಾ ಹಿಡಿದು ಅಲ್ಲಾಡಿಸಿ, ಅನೇಕ ಸಂಸ್ಕೃತಿಗಳನ್ನು ಧ್ವಂಸಮಾಡಿ. ಒಂದೇ ನಾಗರಿಕತೆಯನ್ನು ಸ್ಥಾಪಿಸಿ, ಒಂದು ಜನಾಂಗವನ್ನು ಯಾವ ಸಮರ್ಥನಾದರೂ ನಿರ್ಮಿಸಬಲ್ಲನು. ಈ ಚಕ್ರ ಎಲ್ಲಿ ಒಡೆದರೆ ಅಲ್ಲಿ ಬಹು ಜನಾಂಗ ಬಹು ಸಂಸ್ಕೃತಿ ನಿರ್ಮಾಣಗೊಳ್ಳುತ್ತವೆ; ಎಲ್ಲಿ ಒಂದುಗೂಡಿದರೆ ಅಲ್ಲಿ ಒಂದು ಜನಾಂಗ ಒಂದು ನಾಗರಿಕತೆ ಮೂಡಿಕೊಳ್ಳುತ್ತದೆ. ಅನ್ನದ ರುಚಿಯ ಮೇಲಿನ ಪ್ರಭುತ್ವದಿಂದ ನಮಗೆ ಬೇಕಾದ ಜನವನ್ನೂ ಜನಾಂಗವನ್ನೂ ನಾವು ಸೃಷ್ಟಿಸಬಹುದೆಂಬ ರಹಸ್ಯವನ್ನು ಕಮ್ಯೂನಲ್ ಕಿಚಿನ್ಸ್ ಅನ್ನು ನಿರ್ಮಿಸಿದ ರಷ್ಯ ಬಲ್ಲದು; ನಂಬರ್ ಒನ್, ನಂಬರ್ ಟು, ನಂಬರ್ ತ್ರಿ ಲಂಚ್, ಡಿನ್ನರ್, ಬ್ರೇಕ್‌ಫಾಸ್ಟನ್ನು ಕಲ್ಪಿಸಿ ಈ ಕಡಲಿಂದ ಆ ಕಡಲಿನ ತೀರಕ್ಕೆ ಎಲ್ಲೆಂದರಲ್ಲಿ ಒಂದೇ ರುಚಿಯಲ್ಲಿ ಹಂಚುವ ಅಮೆರಿಕಾ ಬಲ್ಲುದು; ಪ್ರತ್ಯೇಕ ಹಾಸ್ಟೆಲ್ಲುಗಳು ಬೇಡವೆಂಬ ಜನರು ಬಲ್ಲರು; ಭುಕ್ತಿ ಪ್ರಭುತ್ವವುಳ್ಳ ಸೈನ್ಯ ವ್ಯವಸ್ಥೆ ಬಲ್ಲುದು. ಈಗ ನಮ್ಮ ಭಾರತದಲ್ಲಿ ಎಷ್ಟು ಬಗೆಯ ಪಾಕಶಾಲೆಗಳಿವೆ, ಎಷ್ಟು ವಿಧವಾದ ಆಹಾರಗಳು ಯಾವ ಯಾವ

ರುಚಿಗಳಲ್ಲಿ ಅಲ್ಲಿ ಪಾಕಗೊಳ್ಳುತ್ತಿವೆ, ಯಾವ ಯಾವ ಜನಾಂಗಕ್ಕೆ ಯಾವ ಯಾವ ಅಡಿಗೆ ವಿಶಿಷ್ಟವಾದದ್ದು, ಇಷ್ಟವಾದದ್ದು, ಎಣಿಸಿ ವಿಭಜಿಸಿ ಹೇಳಬಲ್ಲಿರಾ ಭಾರತದಲ್ಲಿ ಅಷ್ಟು ಮತಗಳಿವೆ, ಅಷ್ಟು ಸಂಸ್ಕೃತಿಗಳಿವೆ, ಅಷ್ಟು ಜನಾಂಗಗಳಿವೆ! ದ್ವೈತಕ್ಕೂ, ವಿಶಿಷ್ಟಾದ್ವೈತಕ್ಕೂ, ಅದ್ವೈತಕ್ಕೂ ಈಗ ಏಕೆ ಹಿಂದಿನಷ್ಟು ಸ್ಪರ್ಧೆಯಿಲ್ಲ, ಗೊತ್ತೆ? ಪರಸ್ಪರವಾದ ಅಡಿಗೆಗಳ ವಿನಿಮಯ ಈಗ ಈ ಮತಸ್ಥ ಯುವ ಜನಕ್ಕೆ ಸಾಧ್ಯ–ಅದರಿಂದ. ಈ ಮತಗಳ ವ್ಯತ್ಯಾಸವನ್ನು ಆಯಾ ಬ್ರಹ್ಮ ಸೂತ್ರ ಭಾಷ್ಯಗಳಿಂದ ಅಳೆಯುವುದು ಮಂಕುತನ. ಇವುಗಳ ಮಾನದಂಡ ಆಂಬೊಡೆ, ಪುಳಿಯೋಗರೆ ಮತ್ತು ಹೋಳಿಗೆ. ಆಯಾ ಮತಗಳ ಸಂಸ್ಕೃತಿಯ ವೈಶಿಷ್ಟ್ಯ ಈ ಖಾದ್ಯವಸ್ತುಗಳಲ್ಲಿ ಅಡಗಿದೆಯೇ ಹೊರತು ಆಯಾ ಸಿದ್ಧಾಂತಗಳಲ್ಲಲ್ಲ. ಈ ಭೋಜನ ದ್ರವ್ಯಗಳ ಪರಸ್ಪರಾಕರ್ಷಣೆಯಿಂದ ಈಗಿನ ತ್ರಿಮತಸ್ಥರಿಗೆ ಸೌಹಾರ್ದ ಸೌಮನಸ್ಯಗಳು ಏರ್ಪಟ್ಟಿವೆಯೇ ವಿನಾ ತತ್ವಗಳ ಸಮನ್ವಯದಿಂದಲ್ಲ. ಹಿಂದಣವರಿಗೆ ಈ ಪಂಕ್ತಿಲಾಭದ ಸೌಕರ್ಯವಿರಲಿಲ್ಲ. ಆದ್ದರಿಂದ ಆಯಾ ಮತದವರ ಆಯಾ ವಿಶಿಷ್ಟ ಸಂಸ್ಕೃತಿ ಅವರವರ ಪೂರ್ವಗ್ರಹಗಳಿಂದ ಸಂರಕ್ಷಿತವಾಗಿ ಮೆರೆದು ಮೊರೆಯುತ್ತಿತ್ತು. ಈಗ ಪಾಕಶಾಲೆಯ ಮಡಿ ಮಡಿದಿದೆ, ಅಪಾಜ್ತೇಯರ ಪಟ್ಟಿ ಮಾಸಿದೆ. ನಾಲಗೆಯ ರುಚಿಗ್ರಹಣಶಕ್ತಿ ಹದಗೊಂಡಿದೆ, ಪೂರ್ವಗ್ರಹದ ಬೇಲಿ ಮುರಿದು ಸಹಾನುಭೂತಿ ಹೆಸರಿಸಿದೆ. ಬ್ರಾಹ್ಮಣ್ಯ ಒಂದಾಗಬೇಕೆಂಬ ಹಂಬಲವೂ ಕೂಡ ಈ ಆಹಾರಸಾಮ್ಯ ಸಂಭವಿಸಿದ ದಿನದಿಂದ ಮೊದಲಿಟ್ಟಿತು ಎಂಬುದು ನಾವೆಲ್ಲರೂ ಗಮನಿಸತಕ್ಕ ವಿಷಯ. ಈಗ ಅದು ಎಲ್ಲ ಜಾತಿಗಳೂ ಒಂದಾಗಬೇಕೆಂಬ ಪ್ರಸ್ಥಾನಕ್ಕಿಳಿದಿದೆ. ಒಂದು ರುಚಿ, ಒಂದು ಜನ; ಮತ್ತೊಂದು ರುಚಿ ಮತ್ತೊಂದು ಜನ, ಮತ್ತೊಂದು ಮತ. ರುಚಿಯಂತೆ ಮತಿ. ತಮ್ಮ ತಮ್ಮ ಮತಗಳಲ್ಲಿ ಅಭಿಮಾನವುಳ್ಳ ಮತಗಳವರು ರುಚಿಗಳ ಏಕತೆಯನ್ನು ಸಾಧಿಸುವ ಹೋಟೆಲುಗಳನ್ನೂ ಹಾಸ್ಟೆಲುಗಳನ್ನೂ ಕ್ಲಬ್ಬುಗಳನ್ನೂ ನಿಂದಿಸುವುದೂ ಮಡಿವಂತರಾದ ಸ್ವಯಂಪಾಕಿಗಳನ್ನು ವಂದಿಸುವುದೂ ಈ ಹುರುಳನ್ನರಿತೇ. ನಮನಮಗೆ ವಿಶಿಷ್ಟವೂ ಸಂರಕ್ಷಣೀಯವೂ ಗೋಪ್ಯವೂ ಆದ ಮತ ನಮ್ಮ ನಮ್ಮ ಪಾಕಶಾಲೆಗಳಲ್ಲಡಗಿದೆ ಎಂದ ಮೇಲೆ, ಅದನ್ನು ದುಶ್ಶಾಸನನು ಸಭೆಯಲ್ಲಿ ದ್ರೌಪದಿಯ ಸೀರೆಯನ್ನೆಳೆದಂತೆ ಈ ಭಟ್ಟರುಗಳು ಹೋಟೆಲುಗಳಲ್ಲಿ ಬಯಲಿಗೆಳೆಯುತ್ತಿದಾರಲ್ಲ! ಇದನ್ನು ಯಾವ ಮತಾಭಿಮಾನಿ ಸಹಿಸಿಯಾನು? "ಮಂತ್ರಂ ಯತ್ನೇನ ಗೋಪಯೇತ್" ನಿಶ್ಚಯ. ರಾಮಾನುಜರು ಗೋಪುರವೇರಿ ನಿಂತು ಮೂಲಮಂತ್ರವನ್ನೇ ಉಗ್ಗಡಿಸಿದರೂ ಯಾರಿಗೇನಾಯಿತು?

ಪುಳಿಯೋಗರೆ ಉಳುಂದೋಹರೆಗಳ, ಪಾಕರಹಸ್ಯ ರಹಸ್ಯವಾಗಿ ಉಳಿಯುವವರೆಗೂ ಮಂತ್ರ ಸುರಕ್ಷಿತವಾಗಿಯೇ ಇರುತ್ತದೆ ಎಂಬುದನ್ನು ಬಲ್ಲ ಜನವೇ ಬಲ್ಲುದು.

ಆದುದರಿಂದ, ಜನಾಂಗವನ್ನು ಒಂದುಗೂಡಿಸುವುದು ಪಾಕಶಾಲೆ, ವಿಂಗಡಿಸುವುದು ಪಾಕಶಾಲೆ. ಸೌಹಾರ್ದವನ್ನು ಮುದುರಿಸುವುದೂ ಕುದುರಿಸುವುದೂ ಪಾಕಶಾಲೆಯ ಕೆಲಸವೇ. ಶ್ರೀವೈಷ್ಣವರು ಇಷ್ಟರೂ ಸಹ್ಯರೂ ಆಗಿರುವುದು ಶ್ರೀಭಾಷ್ಯದಿಂದಲೋ ಕ್ಷೀರಾನ್ನದಿಂದಲೋ ರುಚಿಬಲ್ಲವರು ಹೇಳಲಿ. ಆಹಾರ ಸಾಮ್ಯದಿಂದ ಮತಸಾಮ್ಯ; ಅಭಿಮತವಾದ ಅಡಿಗೆಯಿಂದ ಅಭಿಮಾನದ ಬಳವಿ; ಪರಸ್ಪರ ಭೋಜನಾಹ್ವಾನ ವಿನಿಮಯದಿಂದ ಸ್ನೇಹಸ್ವಾಸ್ಥ್ಯ; ಪ್ರಸಾದ ಸಮೃದ್ಧಿಯಿಂದ ಶಿಷ್ಯವೃದ್ಧಿ; ಒಬ್ಬರ ಮನಸ್ಸು ಮತ್ತೊಬ್ಬರಿಗೆ ತಿಳಿಯಬೇಕಾದರೆ ನಾಲಗೆ ನುಡಿಯುವ ಮಾತಿನಿಂದಲ್ಲ; ರಸನೆ ಸವಿಯುವ ರಸದಿಂದ. ಮಹಮ್ಮದೀಯರನ್ನು ಕಂಡರೆ ಸಹಾನುಭೂತಿಯಿರಲಿ ಎನ್ನುವುದು ಬಯಲಿನ ಮಾತು. ಅದು ಕುರಾನಿನ ಪಠನದಿಂದಲೂ ಉರ್ದೂ ಭಾಷೆಯಿಂದಲೂ ಕುದುರದು. ಪಲಾವು ಮತ್ತು ಬಿರಿಯಾನಿಗಳನ್ನು ತಿನ್ನಿರಿ– ಇದೀಗ ಅದನ್ನು ಸಾಧಿಸುವ ಉಪಾಯ. ಇಂಗ್ಲೀಷರ ಸಾಹಿತ್ಯಕ್ಕೂ ಸಾಹಸಕ್ಕೂ ಬೆರಗಾಗಿ ಅವರಂತಾಗಬೇಕೆಂದು ಎಷ್ಟು ನಟಿಸಿದರೆ ತಾನೆ ಏನು? ಬ್ರೆಡ್, ಬೀರ್, ಜಾಂ, ಹಾಂ, ಇವುಗಳಿಂದ ನಮಗೆ ಆಂಗ್ಲತನ ಪ್ರಾಪ್ತವಾಗಬೇಕೇ ಹೊರತು ಅದಕ್ಕೆ ಬೇರೆ ಮಾರ್ಗವಿಲ್ಲ. ಕಾಫಿ ಕುಡಿಯುವ ಅಭ್ಯಾಸದಿಂದ ನಮ್ಮಲ್ಲಿ ಕುದುರಿರುವಷ್ಟು ಆಂಗ್ಲ ಮಮತೆ ಮತ್ತೇತರಿಂದ ಆಗಿದೆ, ಬೆರಳು ಮಡಿಸಿರಿ. ಆಪೆಲ್ಸ್ ಮತ್ತು ಕ್ಯಾಬೇಜಸ್ ಇವುಗಳಿಲ್ಲದೆ ಷೇಕ್ಸ್‌ಪಿಯರೂ ಡಿಕನ್ಸೂ ನಮಗೆ ಮಾನ್ಯರಾಗುತ್ತಿದ್ದಾರೆ? ಆಹಾರ ವೈಷಮ್ಯವಿರುವವರೆಗೂ ಆಂಗ್ಲ ಆಂಗ್ಲ; ಭಾರತೀಯ ಭಾರತೀಯ. ಮಹಾತ್ಮರು ಲೋಕಪ್ರಿಯರಾದುದು ಹೇಗೆ–ಅವರ ಆಹಾರ ಸಾಮಗ್ರಿಗಳ ಸರ್ವಲೋಕ ಪ್ರಿಯತೆಯಿಂದಲ್ಲವೇ? – ಆಡಿನ ಹಾಲು ಹೊರತು, (ಇದರಿಂದಲೋ ಏನೋ ಅವರಿಗೆ ನಿಗೂಢಾತ್ಮರೆಂದು ಅಪಖ್ಯಾತಿ ಬಂದದ್ದು) ದ್ರಾಕ್ಷಿ, ಖರ್ಜೂರ, ಬಾದಾಮಿ, ಕಿತ್ತಲೇಹಣ್ಣು, ಕಡಲೆಕಾಯಿ, ಈರುಳ್ಳಿ, ಬೆಳ್ಳುಳ್ಳಿ ಇತ್ಯಾದಿ ಯಾರಿಗೆ ಬೇಡ. ಪಾಕಿಸ್ತಾನಕ್ಕೂ ಆಂಗ್ಲಸ್ಥಾನಕ್ಕೂ ಇರುವ ಮಧುರ ಸಂಬಂಧ ಮತ್ತೇತರಿಂದ – ಗೋವು ಮತ್ತು ಗೋಧಿಯಿಂದಲ್ಲದೆ! ಉತ್ತರ ಕರ್ಣಾಟಕವೂ ದಕ್ಷಿಣ ಕರ್ಣಾಟಕವೂ ಒಂದಾಗಬೇಕೇ – ಇದರ ಜೀವಾಳ ಭಾಷಣದಲ್ಲಿಲ್ಲ;

ಭಕರಿಯಲ್ಲಿದೆ. ಅಬ್ರಾಹ್ಮಣರಿಗೂ ಬ್ರಾಹ್ಮಣರಿಗೂ ಏಕೆ ವೃಥಾ ಸ್ಪರ್ಧೆ? ಹೋಟೆಲುಗಳ ಮೂಲಕ ಬ್ರಾಹ್ಮಣಾಹಾರಗಳು ಹರಡಿ ಅವರೂ ಮನೋವೃತ್ತಿಯಲ್ಲಿ ಬ್ರಾಹ್ಮಣರೇ ಆಗಿರುವುದರಿಂದ. ಹುಟ್ಟಿನಲ್ಲಿ ಒಂದೇ ತೆರನಾದ ಜೇನುನೊಣಗಳು ರಾಣಿ, ಸೈನಿಕ, ಕಾರ್ಮಿಕ ಎಂದು ಕ್ರಮೇಣ ವಿಂಗಡಗೊಳ್ಳುವುದು ಅವು ಅವು ತಿಂದು ಬೆಳೆಯುವ ಆಹಾರದ ಗುಣ, ಪ್ರಮಾಣ ಮತ್ತು ಪೌಷ್ಟಿಕ ಗುಣದ ವ್ಯತ್ಯಾಸಗಳಿಂದ ಅಲ್ಲವೇ? ಹಾಗೆಯೇ ನಮ್ಮ ಈ ವರ್ಣವ್ಯವಸ್ಥೆಯೂ ಕೂಡ. ಹಿಂದೆ ಆಹಾರವೈಷಮ್ಯದಿಂದ ವಿಂಗಡಗೊಂಡಿತು–ಈಗ ಸಾಮ್ಯದಿಂದ ಒಂದಾಗ ಹತ್ತಿದೆ. ಉತ್ತರ ದಕ್ಷಿಣ ಭಾರತಗಳು ಸೌಮನಸ್ಯದಿಂದಿರಬೇಕೇ? ಹಾಗಾದರೆ ಗೋಧಿ ಮತ್ತು ಅಕ್ಕಿಗಳ ಪರಸ್ಪರ ವಿನಿಮಯವಾಗಲಿ. ಹಾ, ಇಲ್ಲಿದೆ ಕಷ್ಟ. ಅಕ್ಕಿಯ ರುಚಿ ಹರಡಿ ಅದರ ಸ್ಪೃಹೆ ಹಬ್ಬುವಂತೆ ಗೋಧಿಯದು ಹರಡದು; ಅದರಿಂದ ದಕ್ಷಿಣಕ್ಕೆ ಉತ್ತರದಿಂದ ಬಾಧೆ. ದೋಸೆ ಇಡ್ಲಿಗಳು ಹರಡುವಂತೆ ಹಿಟ್ಟುಭಕರಿಗಳು ರಸನೆಯನ್ನು ಗ್ರಹನಮಾಡವು; ಅದರಿಂದಲೇ ಒಂದು ಕೋಮಿನವರಿಂದ ಮತ್ತೊಂದು ಕೋಮಿನವರಿಗೆ ತೊಂದರೆ. ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಕಿನಿಸು. ಸಂಸ್ಕೃತಿ ಸಂಪನ್ನರಾದ ದುರ್ಬಲರಿಗೆ ಯಾವಾಗಲೂ ಆತ್ಮ ರಕ್ಷಣೆಯಲ್ಲಿಯೇ ಜ್ಞಾನ; ಪ್ರಬಲರಿಗೋ ಆಕ್ರಮಣದಲ್ಲಿಯೇ ವ್ಯಸನ. ಮಸಾಲೆ ದೋಸೆಯ ರುಚಿಯನ್ನು ಕಂಡು ಅದಕ್ಕೆ ವ್ಯಾಮೋಹಗೊಳ್ಳುವ ಹಳ್ಳಿಯವನ ವಿಷಯದಲ್ಲಿ ದುರ್ಬಲನೂ ಪರಾವಲಂಬಿಯೂ ರಸಿಕನೂ ಆದ ನಾಗರಿಕನು ಭಯಜನ್ಯವಾದ ವಿಷಾದವನ್ನು ಸೂಚಿಸುವುದೇನು ಸೋಜಿಗ.

ಆದರೆ ಕಾಲ ನಮ್ಮದಲ್ಲ; ರೈತನದು. ಪ್ರಸಿದ್ಧವಾದ ತುಣಿತ್ತೇಂಗೊಳಲನ್ನು ತಿಂದು "ಇದೇನೂಂತ ಹಾಕಿದಿರಿ ನಳ್ಳಿಕಾಲು ಅಗಿದ್ಹಂಗೈತೆ" ಎಂದು ಗೊಡ್ಡು ಸಾರಿಗೇ ಒಲಿದು, ನಾಗರಿಕನ ವದನಕ್ಕೆ ಸ್ಮಿತವನ್ನೂ ಮನಸ್ಸಿಗೆ ನೆಮ್ಮದಿಯನ್ನೂ ತಂದ ಹಳ್ಳಿಗನ ಕಾಲ ಮುಗಿಯಿತು. ಈಗ ಪಾಕಶಾಲೆ ವಿವಿಕ್ತವಲ್ಲ, ವೈಯಕ್ತಿಕವಲ್ಲ. ಅದು ಸಾರ್ವತ್ರಿಕ, ಸಾರ್ವಜನಿಕ. ಈಗ ಹಳ್ಳಿಗನು ನಾಗರಿಕನಾಗುವುದೂ ಹಿಂದುಗಳೆಲ್ಲಾ ಒಂದಾಗುವುದೂ ತಪ್ಪದು. ಯಾರಿಗೂ ಯಾವ ವೈಶಿಷ್ಟ್ಯವೂ ಉಳಿಯಬಾರದೆಂಬುದು ಈಗಿನ ನಿಯಮ. ಈ ಐಕ್ಯವನ್ನು ಸಾಧಿಸುವುದರಲ್ಲಿ ಮಸಾಲೆ ದೋಸೆ ಅತ್ಯಂತ ಪ್ರಭಾವಶಾಲಿಯಾದ ವಸ್ತು. ಈ ಭಕ್ಷ್ಯಾಗ್ರಗಣ್ಯನ ಕಾಲವೂ ಮುಗಿದು ಬಿರಿಯಾನಿಯ ಮುಂಬೆಳಗು ರಸನಾನಭದಲ್ಲಿ ಹೊಗರಿಡುತ್ತಿದೆಯೋ ಏನೋ – ಕರ್ಣ ಕ್ಷೇತ್ರದಲ್ಲಿ ಈ

ಫಾರಸೀ ಹಾಡುಗಳಂತೆ. ಭವಿಷ್ಯವನ್ನು ಬಲ್ಲವರಾರು? "ಪಾಕ ತಮ್ಮದಲ್ಲದವರಿಗೆ ಶೋಕ ತಪ್ಪಿದಲ್ಲ; ನಿಮ್ಮ ಕಿಚಿನ್ ನಿಮ್ಮದಾದರೆ ಕಮ್ಯೂನಿಸಂ ಏನು ಮಾಡೀತು" – ಇತ್ಯಾದಿ ಗಾದೆಗಳಿಂದ. ನಾವು ನಮ್ಮ ನಮ್ಮ ಸಂಸ್ಕೃತಿಗಳನ್ನು ಕಾಪಾಡಿಕೊಳ್ಳಬೇಕಾಗಿದೆ. ಈ ಗಾದೆಗಳ ಬೋಧೆಯಿಂದ ನಮ್ಮ ಬಾಧೆಗಳ ಪರಿಹಾರ ಎಷ್ಟರಮಟ್ಟಿಗೆ ಆಗುತ್ತದೋ ಕಾಣೆ.

ಸದ್ಯಕ್ಕೆ, ಬಿರಿಯಾನಿ ಮತ್ತು ವೋಡ್ಕಗಳ ಕಾಲ ಬರುವವರೆಗೂ, ಕೋಮು ಕೋಮುಗಳಲ್ಲಿ ಸಾಮರಸ್ಯವನ್ನು ಕಲ್ಪಿಸಿ, ಒಬ್ಬರಿಗೆ ಮಾತ್ರ ವಿಶಿಷ್ಟವೆನಿಸದೆ, ರುಚಿ ಕಂಡವರೆಲ್ಲರಿಗೂ ವಿಶಿಷ್ಟವೂ ಇಷ್ಟವೂ ಆಗಿ, ಈ ರಸನಾ ಸಂಸ್ಕೃತಿಯಿಂದ ನಾಗರಿಕ ಜೀವನವನ್ನು ಸುಮಧುರವಾಗಿ ಮಾಡುವ ರಾಜಪುರಸ್ಕೃತವಾದ ಮಸಾಲೆ ದೋಸೆ ಅಥವಾ ಪಲಾಂಡ್ವಪೂಪವನ್ನು ನಾವು ರಹಸ್ಯವಾಗಿ ಕಂಡುಕೊಂಡಿರುವ ವಿಶ್ರಾಂತಿ ಮಂದಿರದಲ್ಲಿ ಹಳ್ಳಿಗನ ಕಣ್ಣಿಗೆ ಮರೆಯಾಗಿ ಮೆದ್ದು ಸುಖಿಸಿ ಸುಮನಸ್ಕರಾಗುವುದು ಉಚಿತವಲ್ಲವೇ?

■

## ಮುತ್ತುಗಳನ್ನಾಯ್ದುಕೊಡಲೇ?

**– ಶಾಂತರಸ**

ನೆತ್ತಮನಾಡಿ ಭಾನುಮತಿ ಸೋಲ್ತೆಡೆ ಸೋಲಮನೀವುದೆಂದು ಕಾ।
ಡುತ್ತಿರೆ. ಲಬಣಂ ಪಱಿಯೆ, ಮುತ್ತಿನ ಕೇಡನೆ ನೋಡಿ ನೋಡಿ ಬ॥
ಳ್ಳುತ್ತಿರೆಯೇವಮಿಲ್ಲದಿವನಾಯ್ವುದೊ ತಪ್ಪದೆ ಪೇಱಿಮೆಂಬ ಭೂ।
ಪೊತ್ತಮನಂ ಬಿಸುಟ್ಟಿರದೆ ನಿಮ್ಮೊಳೆ ಪೊಕ್ಕೊಡೆ ಬೇಡನಲ್ಲನೇ॥
(ಪಂಪಭಾರತ, ನವಮಾಶ್ವಾಸಂ, ಪದ್ಯ ೬೯)

"ಸಾಮ್ರಾಜ್ಞಿ ಭಾನುಮತಿಯವರಿಗೆ ಬೇಸರ ಬಂದಿದೆ."

ಅರಮನೆಯ ತುಂಬ ಸುದ್ದಿ. ಸಾಮ್ರಾಜ್ಞಿಯ ಬೇಸರವನ್ನು ಕಳೆಯಲು ಅಂತಃಪುರದ ನಾರಿಯರು ಹತ್ತುನಿಟ್ಟಿನಿಂದ ಪ್ರಯತ್ನಿಸಿದರು. ನಯದಿಂದ ಮಾತಿನಿಂದ, ಕಥೆಯಿಂದ, ಹಾಡಿನಿಂದ, ವಿನೋದದಿಂದ ನಾನಾ ರೀತಿಯಿಂದ ತಮ್ಮೊಡತಿಯ ಬೇಸರ ಕಳೆದು ಮುದವನ್ನು ಬರಿಸಲು ಅವರು ಯೋಚಿಸಿದರು; ಯತ್ನಿಸಿದರು. ಆದರೆ ಭಾನುಮತಿಯ ಮನವನ್ನು ಆವರಿಸಿದ್ದ 'ಬೇಸರ' ಅಲ್ಲಿಂದ ಅಗಲಲಿಲ್ಲ.

ಬೆಳಿಗ್ಗೆ ಪಲ್ಲಂಕದಿಂದ ಏಳುವಾಗಲೇ ಒಂದು ರೀತಿಯ ಆಲಸ್ಯವೆನಿಸಿತ್ತು ಆಕೆಗೆ. ಮೀಯುವ ಶಾಸ್ತ್ರವಾಯಿತು; ಅಲಂಕಾರ ಮುಗಿಯಿತು. ಒಡತಿಯ ಕಳೆಯಿಲ್ಲದ ಮೊಗ ಕಂಡು ಸಖಿಯರಿಗೆ ದುಗುಡು, ದಾಸಿಯರಿಗೆ ಭಯ.

"ಮಹಾರಾಜ್ಞಿಯವರಿಗೆ ಏನಾಗಿದೆ? ಸೇವಕಿಯರೆಲ್ಲ ಭಯಗೊಂಡಿದ್ದಾರೆ: ಸಖಿಯರು ಚಿಂತೆಗೊಳಗಾಗಿದ್ದಾರೆ.

ಆಪ್ತ ಸಖಿ ಸುಖದಾ ಕೇಳಿದಳು.

"ಏನೋ ಬೇಸರ?" ಭಾನುಮತಿಯ ಉತ್ತರ.

"ಅದು ದೂರವಾಗುವ ಬಗೆ?"

"ತಿಳಿಯದಾಗಿದೆ" ಎಂದು ನುಡಿದ ಭಾನುಮತಿ ಅಂತಃಪುರದ ಮಹಡಿಯಿಳಿದು ಅಂಗಳಕ್ಕೆ ಬಂದಳು. ಸಖಿಯರು, ಕನ್ನಡಿ, ಕಳಸ, ಗಿಂಡಿ, ಸಂಚಿ ಮುಂತಾದ ಊಳಿಗದವರು ಹಿಂಬಾಲಿಸಿದರು.

ಭಾನುಮತಿ ಪಾರಿಜಾತದ ಗಿಡದಡಿಯಲ್ಲಿ ನಿಂತಳು; ನೆಲದ ತುಂಬ ಹೂಗಳು; ನೂರು ನೂರು ಹೊಂಗನಸು ಅರಳಿದಂತೆ. ಆಕೆ ಮೆಲ್ಲನೆ ಬಾಗಿ ಕುಳಿತು, ನವುರಾಗಿ ಸವರಿ ಬೊಗಸೆತುಂಬಾ ಹೂ ತೆಗೆದುಕೊಂಡಳು; ಏಳುತ್ತಿದ್ದಂತೆಯೇ ಹೂ ಚೆಲ್ಲಿಬಿಟ್ಟಳು. ಪವನ ನಸು ಬಿರುಸಾಗಿ ಚಲಿಸಿ ಪಾರಿಜಾತದ ಗಿಡವನ್ನು ಅಲುಗಿಸಿದ. ಭಾನುಮತಿ ಮತ್ತು ಸುತ್ತಮುತ್ತ ನಿಂತ ಹೆಂಗಳೆಯರು ಮೈತುಂಬ ಪುಷ್ಪವೃಷ್ಟಿ; ಸೀರ್ಪನಿಗಳ ಅಭಿಷೇಕ. ಭಾನುಮತಿ ಹಿಂದೆ ಸರಿದು ನಿಂತು ಮೇಲೆ ನೋಡಿದಳು. ಆಗಸದ ತುಂಬ ಮೋಡಗಳು.

"ದುರ್ದಿನ". ಉಂಡೆಗಟ್ಟಿದ ಬೇಸರ ಚೆಂದುಟಿಗಳನ್ನು ಒತ್ತಿ ಹೊರಬಿದ್ದಂತಾಯಿತು.

"ಬೆಳಗಿನಿಂದ ನೇಸರದ ದರ್ಶವೇ ಇಲ್ಲ." ಸುಖದಾ ನುಡಿದಳು.

"ಈ ಡಬ್ಬು ಹಾಕಿದ ಮುಗಿಲಿನಿಂದ ಮನಸ್ಸುಗಳೂ ಡಬ್ಬು ಹಾಕಿಕೊಳ್ಳುತ್ತವೆ."

ಗಿಂಡಿಯವಳ ಕಿಂಕಿಣಿ ಕಂಠ ಧ್ವನಿ ಮಾಡಿತು.

"ಸಿಳ್ಳುಗಾಳಿ. ಈ ಗಾಳಿ ಮೆಲ್ಲನೆ ತೂರುವ ಸೀರ್ಪನಿಗಳು....."

"ನಿಲ್ಲಿಸಿದೆಯೇಕೆ ಕಾವ್ಯಕೋಕಿಲೆ? ಮಂದಿನದನ್ನೊರೆ."

ಕನ್ನಡಿಯವಳು ಉಲಿದಳು.

"ತಂಪಿನಿಂದ ಬಯಲಿಗೆ ಗ್ಗುಗ್ಗರಿಗಟ್ಟಿದಂತೆ ಕಾಣುವುದಿಲ್ಲವೋ, ಉದುರುತ್ತಿರುವ ಈ ಸೀರ್ಪನಿಗಳಿಂದ!?" ಕಾವ್ಯ ಕೋಕಿಲೆ ಭಾನುಮತಿ ಮೊಗ ನೋಡುತ್ತ ನುಡಿದಳು.

ಭಾನುಮತಿಯ ಬೇಸರ ದೂರವಾಗಲಿಲ್ಲ. ಆಕೆ ಮಹಡಿಯೇರಿ ಜಾಲಂದ್ರದಲ್ಲಿ ದೃಷ್ಟಿ ಚಿಮ್ಮಿ, ಹಿಂದೆ ಸರಿದು ತೂಗುಮಂಚದ ಮೇಲೆ ಕುಳಿತಳು. ದಾಸಿ ಹಣ್ಣಿನ ತಟ್ಟೆ, ಸೂಖೋಷ್ಣವಾದ ಹಾಲಿನ ಬಟ್ಟಲನ್ನು ಒಡತಿಯ ಮುಂದೆ ಚಾಚಿದಳು. ಭಾನುಮತಿ ಹಣ್ಣು ಮುಟ್ಟಲಿಲ್ಲ; ಒಂದೆರಡು ಗುಟುಕು ಹಾಲು ಕುಡಿದಳು.

"ಸಾಕಾಯ್ತು ಎಷ್ಟಂತ ಸಹಿಸಲಿ, ಈ ಕಾಮಿಯ ಕಾಟ? ಹಗಲಿರುಳೂ

ಸಹವಾಸ ಬೇಕಂತೆ! ನಿರಿಗೆ ಹಿಡಿದು ಜಗ್ಗುವುದು; ಹೆರಳನ್ನು ಕಚ್ಚುವುದು, ಸೆರಗನ್ನು ಎಳೆಯುವುದು; ಎದೆಯಲ್ಲಿ ಮುಖವಿಡುವುದು; ನಿತಂಬ ಪರಚುವುದು, ತೊಡೆಯ ಮೇಲೆ ಮಲಗುವುದು; ನನ್ನ ಬಾಯ ತುತ್ತೇ ಬೇಕದಕ್ಕೆ! ಸಾಕಪ್ಪಾ ಸಾಕು; ಈ ಕಾಮಿಯ ಸಂಗ ಸಾಕು." ನುಡಿಯುತ್ತ ವಿನೋದಿನಿ ಬಂದಳು, ಅಂತಃಪುರದ ನಗೆಗಾರ್ತಿ.

"ಯಾವ ಕಾಮಿ? ಎಂತಹ ಕಾಮುಕ?" ಸಖಿಯರು ಕೇಳಿದರು.

"ಅಯ್ಯೋ, ಮುಗ್ಧೆಯರೆಂದರೆ ಮುಗ್ಧೆಯರು! ನನ್ನ ಕಾಮಿ, ಅಂದರೆ ನನ್ನ ಆ ಬಿಳೀ ಬೆಕ್ಕು" ಎಂದಾಗ ಎಲ್ಲರ ಮುಖಗಳಲ್ಲಿ ನಗೆ ಮೂಡುತ್ತಿರುವಂತೆಯೇ ಒಡತಿಯ ಗಂಭೀರ ಮುಖ ಕಂಡು ಮಾಯವಾಯಿತು.

ಏನದು ರಾಣಿಯ ಹಿಂದೆ?" ಆಶ್ಚರ್ಯದಿಂದ ಕೇಳಿದಳು ವಿನೋದಿನಿ.

ಭಾನುಮತಿ ಹಿಂದಿರುಗಿ ನೋಡಿದಳು. ಮತ್ತೆ ವಿನೋದಿನಿಯ ಮೊಗ ನೋಡಿದಳು. ಏನೂ ಇಲ್ಲವಲ್ಲ ಎಂಬ ಭಾವವಿತ್ತು ಕಂಗಳಲ್ಲಿ.

"ಏನೂ ಏಕಿಲ್ಲ? ನಿಮ್ಮ ಹಿಂದೆ ನಿಮ್ಮ ಬೆನ್ನಿದೆ; ಹೆರಳು ಓಲಾಡುತ್ತಿದೆ" ಎಂದು ವಿನೋದಿನಿ ನುಡಿದಾಗ ಭಾನುಮತಿಯ ತುಟಿಗಳಲ್ಲಿ ನಗೆಯ ಚಿಕ್ಕ ಅಲೆಯೊಂದು ಏಳುತ್ತಿರುವಂತೆಯೇ ಮಾಯವಾಯಿತು.

ಬೇಸರದಲ್ಲಿಯೇ ಊಟವಾಯಿತು. ಎರಡನೆಯ ಪ್ರಹರ ಮುಗಿಯುತ್ತಿರುವಾಗ ಗಾಂಧಾರಿ ಬಂದು ಸೊಗವಾತುಗಳಿಂದ, ಯೋಗಕ್ಷೇಮದಿಂದ ಸೊಸೆಯ ಬೇಸರ ಕಳೆಯಲು ಪ್ರಯತ್ನಿಸಿದಳು. ಆಕೆ ಹೋದ ಬಳಿಕ ದುಶ್ಯಲೆ ಬಂದಳು. ವಿನೋದದ ಮಾತುಗಳನ್ನಾಡಿದ ಬಳಿಕ,

"ಯಾಕೆ ಅಣ್ಣಯ್ಯ ಬಂದಿಲ್ಲವೇ ಅತ್ತಿಗೆಮ್ಮನ ಬೇಸರ ನೀಗಿಸಲು?" ಎಂದಳು. "ರಾಜಿಕ ಮಹಾಕಾರ್ಯಗಳಿಂದ ಅವರಿಗೆ ಬಿಡುವೆಲ್ಲಿ?" ಭಾನುಮತಿಯ ಧ್ವನಿಯಲ್ಲಿ ವ್ಯಂಗ್ಯವಿತ್ತು. ದುಶ್ಯಲೆ ಹೋದಳು. ಭಾನುಮತಿಯ ಬೇಸರ ಹೋಗಲಿಲ್ಲ. "ಹೆಗ್ಗಡಿತೀ, ನಮ್ಮನ್ನ ಕಲಾಶಾಲೆಗೆ ಕರೆದೊಯ್ಯಿ." ಮಹಾರಾಜ್ಞಿ ಆಜ್ಞೆಯಿತ್ತಳು. ಸಖಿಯರು ಮತ್ತು ಊಳಿಗವರೊಂದಿಗೆ ಕಲಾಶಾಲೆಗೆ ಒಡತಿಯನ್ನು ಕರೆದೊಯ್ದಳು ಹೆಗ್ಗಡತಿ. ಕಲಾಶಾಲೆಯಲ್ಲಿ ಕಲಾಮೋದಿನಿ ಚಿತ್ರಗಳನ್ನು, ಶಿಲ್ಪಗಳನ್ನು ತೋರಿಸಿ ವಿವರಣೆ ನೀಡತೊಡಗಿದಳು.

"ಹೆಗ್ಗಡತಿ ನಾವು ನಾಟ್ಯಗೃಹಕ್ಕೆ ಹೋಗುವೆವು."

ಒಡತಿಯ ಆಜ್ಞೆಯಂತೆ ನಾಟ್ಯಗೃಹಕ್ಕೆ ನಡೆದರು. ನಾಟ್ಯಗೃಹ ಪ್ರವೇಶಿಸಿ ರಂಗಮಂಟಪದತ್ತ ಹೋಗುತ್ತಿರುವಾಗ ತಿರುಗಿನಿಂತು ಭಾನುಮತಿ,

"ಹೆಗ್ಗಡಿತೀ, ನಮಗೆ ವಿಹಾರಗೃಹದ ದಾರಿ ತೋರಿಸು" ಎಂದಳು. ವಿಹಾರ ಗೃಹಕ್ಕೆ ಬಂದಾಗ ನಾಲ್ಕನೆಯ ಪ್ರಹರ ಪ್ರಾರಂಭವಾಗಿತ್ತು.

ವಿಹಾರಗೃಹದ ಕೆಳ ಅಂತಸ್ತಿನಲ್ಲಿ ರಾಗ ರಾಗಿಣಿಯರ, ರತಿಕಾಮರ ನಾನಾ ವಿಧ ನೃತ್ಯಭಂಗಿಗಳ ಚಿತ್ರಗಳನ್ನು ಗೋಡೆಗೆ ಅಲಂಕರಿಸಿದ್ದಾರೆ. ನೇರವಾಗಿ ಭಾನುಮತಿ ಮಹಡಿಯೇರಿ ರಂಗಶಾಲೆಗೆ ಹೋದಳು. ರಂಗಶಾಲೆಯ ಪೂರ್ವದ ಗೋಡೆಗೆ ಭವ್ಯವಾದ ನಟರಾಜನ ಮೂರ್ತಿ ವಿರಾಜಿಸಿತ್ತು; ಬಲಪಾರ್ಶ್ವದಲ್ಲಿ ಸರಸ್ವತಿಯ ಪ್ರತಿಮೆ; ಅದರ ಕೆಳಗೆ ವೀಣೆ ಕೊಳಲು ಮುಂತಾದ ವಾದ್ಯ ಸಾಧನಗಳು. ಎಡ ಪಾರ್ಶ್ವದಲ್ಲಿ ಲಕ್ಷ್ಮಿಯ ವಿಗ್ರಹ; ಅದರಡಿಯಲ್ಲಿ ಹಾಸಂಗಿ, ಸಂಪುಟ ಮುಂತಾದ ಪಗಡೆಯಾಟದ ಸಾಮಗ್ರಿಗಳು. ಪಶ್ಚಿಮ ಬಾಗಿಲಲ್ಲಿ ಕೆಲ ಹೆಂಗಸರು ಚಪ್ಪಾಳೆ ತಟ್ಟಿ ಯಾವುದೋ ಹಾಡನ್ನು ಗುಣುಗುಣಿಸುತ್ತ ಕುಳಿತವರು ಭಾನುಮತಿ ಬಂದೊಡನೆಯೇ ಎದ್ದುನಿಂತು ವಂದಿಸಿದರು. ಭಾನುಮತಿ ಪೀಠದ ಮೇಲೆ ಕುಳಿತು ವೀಣಾವಾದನ ಚತುರೆಯತ್ತ ದೃಷ್ಟಿ ಚೆಲ್ಲಿದಳು. ಅವಳು ವೀಣೆಯನ್ನೆತ್ತಿಕೊಂಡು ನುಡಿಸಿದಳು. ಇನಿಯನ ಅಗಲಿಕೆಯ ಅಳಲನ್ನು ತೋಡಿಕೊಳ್ಳುವ ಭಾವವೊಂದು ತೇಲಿಬಂತು. ಮರುನಿಮಿಷಕ್ಕೆ ಭಾನುಮತಿ ಎದ್ದು ಬಿಸಿಲುಮಚ್ಚೆಯಲ್ಲಿ ಹೋಗಿನಿಂತಳು.

"ದುರ್ದಿನ". ಉಲಿದಳು.

ತುಂತುರುಹನಿ ಜಿನುಗುತ್ತಿತ್ತು. ಆತಪತ್ರದವಳು ಬಣ್ಣಬಣ್ಣದ ಕೊಡೆ ಹಿಡಿದಳು. ಕನ್ನಡಿ ಗಿಂಡಿ, ಚಾಮರ, ಸಂಚಿ ಎಲ್ಲ ಊಳಿಗದವರೂ ಸುತ್ತು ಮುತ್ತು ನಿಂತರು. ನಗೆಗಾರ್ತಿ ವಿನೋದಿನಿ, ಕಾವ್ಯಕೋಕಿಲೆ, ಆಪ್ತಸಖಿ ಸುಖದಾ, ಹೆಗ್ಗಡಿತಿ ಒಡತಿಯ ಹತ್ತಿರವಿದ್ದರು.

ವರ್ಷಾಋತುವಿನ ಮೋಡಗಳು ಆಕಾಶದ ತುಂಬ ಗೊತ್ತು ಗುರಿಯಿಲ್ಲದೆ ಓಡಾಡುತ್ತಿದ್ದವು. ದೂರದಿಗಂತದಲ್ಲಿ ಮಳೆಯ ಕಾಲುಗಳಿದ್ದವು. ನಸುದೂರದಲ್ಲಿ ಯಮುನಾ ನದಿ ದಡಸೂಸಿ ಹರಿಯುತ್ತಿತ್ತು. ಸಿಳ್ಳುಗಾಳಿಯ ಅಲೆಯೊಂದು

ಮೊಗಕ್ಕೆ ಬಡಿಯಿತು. ಹಸ್ತಿನಾವತಿ ನಗರವೇ ಬೇಸರದಿಂದ ನಿಟ್ಟುಸಿರಿಟ್ಟಂತೆನಿಸಿತು, ಭಾನುಮತಿಗೆ.

ಕಾವ್ಯಕೋಕಿಲೆ ಮೆಲ್ಲನೆ ಹಿಂದೆ ಸರಿದಳು. ಸಖಿಯರು, ದಾಸಿಯರು ಹಿಂದೆ ಸರಿದರು. ಆತಪತ್ರದವಳೂ ಹಿಂದೆ ಸರಿದಳು. ಯಮುನಾ ನದಿಯನ್ನು ನೋಡುತ್ತ ತುಸು ಮೈಮರೆತ ಭಾನುಮತಿಗೆ ಅವರು ಸರಿದುದು ಗೊತ್ತಾಗಲಿಲ್ಲ. ತುಂತುರು ಹನಿಗಳು ಮೈಮೇಲೆ ಬಿದ್ದು ತಂಪೆನಿಸಿದಾಗ "ರಂಜನೆ" ಎಂದು ಹಿಂದಿರುಗಿ ನೋಡಿದಳು.

ಸಾಮ್ರಾಟ ಸುಯೋಧನ ನಿಂತಿದ್ದ.

"ತಾವು"

"ಭಾನುಮತಿ ನಿನಗೆ ಬೇಸರವೆಂದು ತಿಳಿಯಿತು. ಅತ್ಯವಸರದ ರಾಜಿಕ ಕೆಲಸಗಳಿದ್ದರೂ ಬಿಟ್ಟುಬಂದೆ."

"ಬಂದಿರಲ್ಲ, ನನ್ನ ಭಾಗ್ಯ"

"ದಿನದಿನಕ್ಕೆ ಈ ರಾಜ್ಯಕಾರ್ಯಗಳು ಬೆಳೆದು ತಲೆ ಕೆಡಿಸುತ್ತಿವೆ. ಇರಲಿ ಪ್ರಿಯೆ, ಏಕೆ ಬೇಸರ? ಏನು ಮಾಡಿದರೆ ಅದು ದೂರವಾಗುವುದು?"

"ಏಕೆ ಬೇಸರವೋ? ನನಗೆ ತಿಳಿಯದಾಗಿದೆ! ಬೆಳಿಗ್ಗೆ ಎದ್ದಾಗಿನಿಂದ ಒಂದು ರೀತಿಯ ಜಡತೆ; ಆಲಸ್ಯ. ಯಾವುದರಲ್ಲಿಯೂ ಮನಸ್ಸು ತೊಡಗದು. ಬೆಳಿಗ್ಗೆ ಅಂಗಳದ ಪಾರಿಜಾತ ಹೂಗಳನ್ನು ಮಾತಾಡಿಸಿದೆ. ಊಟವಾಯಿತು. ವಿನೋದವಾಯಿತು. ದುಶ್ಶಲೆ ಬಂದಿದ್ದಳು; ಅತ್ತೆಮ್ಮ ಬಂದು ಮಾತಾಡಿದರು. ನಾಟ್ಯಗೃಹವಾಯಿತು; ಕಲಾಶಾಲೆಯಾಯಿತು. ವಿಹಾರಗೃಹಕ್ಕೆ ಬಂದೆ. ಎಲ್ಲೂ ಮನಸ್ಸು ತೊಡಗದಾಗಿದೆ; ಬೇಸರ ಕಳೆಯದಾಗಿದೆ. ಏನು ಮಾಡಲಿ?" ಎಂದಳು ಭಾನುಮತಿ. ಅವರು ಮಾತಾಡುತ್ತ ರಂಗಶಾಲೆಗೆ ಬಂದು ಪೀಠದ ಮೇಲೆ ಕುಳಿತರು.

"ನಿನ್ನ ಪ್ರೀತಿಯ ಆಟ, ಪಗಡೆಯಾಟವಾಡಿ ಬೇಸರ ಕಳೆಯಬಹುದಿತ್ತಲ್ಲ? ಸುಯೋಧನ ಕೇಳಿದ.

"ಯಾರೊಡನೆ ಆಡಲಿ? ಅಂತಃಪುರದ ಯಾವ ಹೆಣ್ಣೂ ನಮ್ಮೊಡನೆ

ಪಗಡೆಯಾಡಲು ಬರುವುದಿಲ್ಲ. ಇನ್ನು ಮೈದುನರೊಡನೆ ಆಡುವುದೂ ಅಷ್ಟೇ; ಆಡದಿರುವುದೂ ಅಷ್ಟೆ. ಇದರಲ್ಲಿ ಅವರಿನ್ನೂ ಎಳೆಯರು."

"ಇಂದು ನಮ್ಮೊಡನೆಯೇ ಆಡು" ದುರ್ಯೋಧನನೆಂದ.

"ನಿಮ್ಮೊಡನೆ ಆಡಬೇಕೆ? ಅದು ಒಂದೇ ಪಕ್ಷದ ಆಟವಾಗುತ್ತದೆ. ನಿಮ್ಮ ಕಾಯಿಗಳನ್ನು ನಾನೇ ನಡೆಸಬೇಕು; ನನ್ನ ಕಾಯಿಗಳನ್ನು ನಾನೇ ನಡೆಸಬೇಕು" ನುಡಿದಳು ಭಾನುಮತಿ.

"ಜೂಜಿನಲ್ಲಿ ಪಾಂಡವರ ಸಕಲೈಶ್ವರ್ಯಗಳನ್ನು ಗೆದ್ದ ನಾನು ನಿನ್ನೊಡನೆ ಸದಾ ಸೋಲನ್ನನುಭವಿಸುತ್ತಿರುವೆ, ವಿಚಿತ್ರ!" ಮೃದು ಗಂಭೀರವಾಣಿಯಲ್ಲಿ ಸುಯೋಧನ ನುಡಿದ.

"ಜೂಜಿನಲ್ಲಿ ಗೆದ್ದವರು ನೀವಲ್ಲ! ಸೋದರ ಶಕುನಿ. ಆತ ಹೇಳಿದಂತೆ ದಾಳ ಎಸೆದವರು ನೀವು; ಎಣಿಸಿ ಕಾಯಿ ನಡೆಸಿದಾತ ಆತ." ಭಾನುಮತಿ ನಸುವ್ಯಂಗ್ಯ ಮುಗುಳುನಗೆಯೊಂದಿಗೆ ಹೇಳಿದಳು.

"ಶಕುನಿ ಮಾವನೊಡನೆ ಒಮ್ಮೆ ಆಡಿ ನೋಡು."

"ಒಲ್ಲೆನೆನ್ನುವರಾರು? ಆದರೆ ಅವರೆಂದೂ ನನ್ನೊಡನೆ ಪಗಡೆಯಾಡಲು ಸಮ್ಮತಿಸಿಲ್ಲ." ಭಾನುಮತಿಯ ಧ್ವನಿಯಲ್ಲಿ ಅಭಿಮಾನವಿತ್ತು.

"ನಿನ್ನೊಡನಾಡಿದರೆ ಅವರಿಗೂ ಸೋಲುವೆನೆಂಬ ಹೆದರಿಕೆ ಇರಬೇಕು."

"ನಿಮಗೇ ಗೊತ್ತು ನಿಮ್ಮ ಮಾವಂದಿರ ಅಂತಸ್ತು."

"ನಮ್ಮೆಲ್ಲರಿಗಿಂತ ಅಂಗದೊರೆ ಚೆನ್ನಾಗಿ ಆಡುತ್ತಾನೆ. ನೀನು ಒಮ್ಮೆಯೂ ಆತನೊಡನೆ ಆಡಿಲ್ಲವಲ್ಲ?"

"ಇಲ್ಲ"

"ಕರೆಸಲೇ ಆತನನ್ನು?"

"ತಮ್ಮಿಚ್ಛೆ"

ಕರ್ಣನಿಗಾಗಿ ಬಳಿಯಟ್ಟಲಾಯಿತು. ಅರ್ಧ ಘಳಿಗೆಯಲ್ಲಿ ಕರ್ಣ ಬಂದ.

ಭಾನುಮತಿಯ ಇಚ್ಛೆಯನ್ನು ಸುಯೋಧನ ಅರುಹಿದ. ಕರ್ಣ ಒಪ್ಪಿದ. ಲಕ್ಷ್ಮೀವಿಗ್ರಹದಡಿಯಲ್ಲಿ ಹೋಗಿ ಕುಳಿತರು. ಪರಿಚಾರಿಕೆ ಹಾಸಂಗಿ ಮತ್ತು ನೆತ್ತದ ದಾಳವಿರು ಬಂಗಾರದ ಸಂಪುಟವನ್ನು ತಂದಿತ್ತಳು.

ಚೌಕಾಕಾರದ ಹಾಸಂಗಿ. ಅದರಲ್ಲಿ ಪಟ್ಟ ಮತ್ತು ಜರಿ ಮಿಶ್ರಣದಿಂದ ಹೆಣೆದು ಮನೆಗಳನ್ನು ರಚಿಸಲಾಗಿತ್ತು. ನುಣುಪು ಹಾಲುಗಲ್ಲಿನ ಚೌಕಾಕಾರದ ನಾಲ್ಕು ಮುಖಗಳಿರುವ ದಾಳಗಳಿಗೆ ಕೆಂಪುರತ್ನದ ಚಿಕ್ಕ ಹರಳುಗಳನ್ನು ಕೂಡಿಸಿದ್ದರು. ಈ ಹರಳುಗಳನ್ನು ಎಣಿಸಿ ಕಾಯಿಗಳನ್ನು ನಡೆಸುತ್ತಿದ್ದರು.

"ನೆತ್ತದಲ್ಲಿ ಸೋಲು ಗೆಲುವಿಗೆ ಪಣವೇನು?" ಸುಯೋಧನ ಕೇಳಿದ.

"ನೀವೇ ಹೇಳಬೇಕು". ಭಾನುಮತಿ ನುಡಿದಳು.

"ನೀ ಹೇಳು ಅಂಗರಾಜ" ಸುಯೋಧನ ಕೇಳಿದ.

"ನಾನು ಸೋತರೆ ಇನ್ನೊಮ್ಮೆ ಸಾಮ್ರಾಜ್ಞಿಯೊಡನೆ ಆಡುವುದಿಲ್ಲ.

"ನಾನು ಸೋತರೆ ನನ್ನ ಕೊರಳ ಮುತ್ತಿನ ಹಾರ ಕೊಡುವೆ" ಭಾನುಮತಿ ಹೇಳಿದಳು.

"ಆಟ ಮೊದಲಾಗಲಿ" ಪೀಠದ ಮೇಲೆ ಕೂಡುತ್ತ ಸುಯೋಧನನೆಂದ. ವಿಹಾರ ಗೃಹದ ಪರಿಚಾರಿಕೆಯರು, ಊಳಿಗದವರು ಆಟ ನೋಡಲು ಸುತ್ತ ದೂರದಲ್ಲಿ ನಿಂತರು.

ಕರ್ಣ ದಾಳಗಳನ್ನು ಕೈಯಲ್ಲಿ ತೆಗೆದುಕೊಂಡು, ಗಲಗಲಿಸಿ ಮುಷ್ಠಿ ಬಿಗಿಹಿಡಿದು ಜಾನಿಸಿ ಎಸೆದ. ಎರಡು, ಒಂದು, ಮೂರು, ಆರು ಎಂದು ಕಾಯಿ ನಡೆಸಿದ. ಮೂರನೆಯ ಎಸೆತಕ್ಕೆ ಭಾನುಮತಿ ಕರ್ಣನಕಾಯಿ ಸುಟ್ಟು, ಮುಂದುವರಿದು ಒಳ ಮನೆ ಸೇರಿದಳು. ಹತ್ತೆಂಟು ಕೈಗಳವರೆಗೂ ಕರ್ಣನಿಗೆ ಭಾನುಮತಿಯ ಕಾಯಿಯನ್ನು ಸುಡುವುದಾಗಲಿಲ್ಲ.

ಕಂಚುಕಿ ಬಂದು ಮಹಾರಾಜರಿಗೆ ಏನೋ ನಿವೇದಿಸಿದ. 'ಆಟ ನಡೆಯಲಿ, ಈಗ ಬರುತ್ತೇನೆ" ಎಂದು ಹೇಳಿ ದುರ್ಯೋಧನ ವಿಹಾರಗೃಹದಿಂದ ಹೊರಟುಹೋದ.

ಆಟ ಭರದಿಂದ ಸಾಗಿತು. ಭಾನುಮತಿ ಮತ್ತೆ ಮತ್ತೆ ಕರ್ಣನ

ಕಾಯಿಗಳನ್ನು ಸುಟ್ಟಳು. ಪರಿಚಾರಿಕೆಯರು ಚಪ್ಪಾಳೆಯಿಟ್ಟು ನಕ್ಕರು. ಕರ್ಣ ಅಧೀರನಾಗಲಿಲ್ಲ. ಧೀರ ಗಂಭೀರ ಗತಿಯಿಂದ ಆಟ ನಡೆಸಿದ.

ಬರಬರುತ್ತಾ ಭಾನುಮತಿಯ ಗತಿ ಮಂದವಾಯಿತು. ಆಕೆಯ ಒಂದು ಕಾಯಿ ಹಣ್ಣಾಗಿತ್ತು; ಇನ್ನುಳಿದ ಕಾಯಿಗಳು ಅಂಗರಾಜನ ಪೆಟ್ಟು ತಿಂದು, ಸುಟ್ಟು ಮೂಲ ಮನೆ ಸೇರುತ್ತಿದ್ದವು. ಮೂಲ ಮನೆಯಿಂದ ಹೊರಟಂತೆಲ್ಲ ಕರ್ಣ ಅವುಗಳನ್ನು ಸುಡುತ್ತಿದ್ದ. ಜಾನಿಸಿ ಎಸೆದದ್ದೆಲ್ಲ ಕರ್ಣನಿಗೆ ಬೀಳಹತ್ತಿತು.

ಭಾನುಮತಿಯ ಗತಿ ಇನ್ನಷ್ಟು ಮಂದವಾಯಿತು. ಕಳೆಗುಂದಿದಳು. ಕರ್ಣನ ಒಂದೇ ಒಂದು ಕಾಯಿ ಹಣ್ಣಾಗುವುದುಳಿದಿತ್ತು. ಭಾನುಮತಿಯ ಒಂದೇ ಒಂದು ಕಾಯಿ ಹಣ್ಣಾಗಿತ್ತು.

ದುರ್ಯೋಧನ ಬಂದು ಕರ್ಣನ ಹಿಂದೆ ನಿಂತ. ಆಟಗಾರರಿಗೆ ಚಕ್ರವರ್ತಿ ಬಂದು ನಿಂತುದರ ಅರಿವಾಗಲಿಲ್ಲ. ಕತ್ತಲಾಗುತ್ತ ಬಂದಿತ್ತು. ಪರಿಚಾರಿಕೆಯರು ತೂಗುಂಜೋಡರುಗಳನ್ನು ಬೆಳಗಿದರು.

ಕರ್ಣನ ಕೊನೆಯ ಕಾಯಿಯೂ ಹಣ್ಣಾಯಿತು. ಆತ ಗೆಲುವಿನ ಧ್ವನಿ ಮಾಡಿದ. ಭಾನುಮತಿ ಸೋತಿದ್ದರೂ ಆ ಛಾಯೆ ಮೊಗದಲ್ಲಿ ಮೋಡದಂತೆ ಪ್ರಯತ್ನಿಸುತ್ತಿದ್ದಳು. ಪರಿಚಾರಿಕೆಯರು ಮೌನವಾಗಿ ನಿಂತರು.

"ಸಾಮ್ರಾಜ್ಞಿ, ನೀವು ಸೋತಿರಿ, ಪಣಕ್ಕೆ ಹಚ್ಚಿದ ಮುತ್ತಿನ ಹಾರವನ್ನು ಕೊಡಿರಿ." ಕರ್ಣ ಕೇಳಿದ.

"ಇಂಥ ಸೋಲನ್ನು ಎಂದೂ ಅನುಭವಿಸಿರಲಿಲ್ಲ. ಅಂಗರಾಜ ಆಡಬೇಕು ಪಗಡೆಯಾಟ ನಿಮ್ಮಂಥವರೊಡನೆ! ನನ್ನ ಬೇಸರಿಕೆ ಕಳೆದು ಹೋಯಿತು."

"ನಿಮ್ಮ ಬೇಸರಿಕೆ ಕಳೆದುಹೋದುದು ಸಂತೋಷ. ಪಣದ ಮಾತೇ ಆಡುತ್ತಿಲ್ಲವಲ್ಲ? ಕೊಡಿರಿ ಕೊರಳ ಮುತ್ತಿನ ಹಾರವನ್ನು."

"ಕೊಡುವುದಿಲ್ಲ".

"ಏಕೆ?"

"ಸೋತುದು ಸಾಕಲ್ಲವೆ ಮತ್ತೆ ಮುತ್ತಿನಹಾರ ಕೊಡಬೇಕೇ?"

"ಸೋತಮೇಲೆ ಕೊಡಬೇಕು" ಪಣವೆಂದರೆ ಪಣ; ಮಾತೆಂದರೆ ಮಾತು."

"ನಾನು ಕೊಡುವುದಿಲ್ಲ."

"ತೊಂಡಿ ನ್ಯಾಯ ಚೆನ್ನಲ್ಲ. ಆಟದ ನೇಮಕ್ಕೆ ಎಲ್ಲರೂ ಬದ್ಧರಾಗಿರಬೇಕು. ಕೊಡಿರಿ ಹಾರ."

"ಹೇಳಿದೆನಲ್ಲ ಕೊಡುವುದಿಲ್ಲವೆಂದು"

"ನಾನು ಬಿಡುವುದಿಲ್ಲ"

"ನಾನು ಕೊಡುವುದಿಲ್ಲ"

"ನಾನು ತೆಗೆದುಕೊಳ್ಳದೆ ಇರುವುದಿಲ್ಲ"

"ನೋಡುವೆ, ಹೇಗೆ ತೆಗೆದುಕೊಳ್ಳುವಿರಿ?"

"ಹೀಗೆ" ಎಂದು ಅಂಗರಾಜ ಕರ್ಣ ಭಾನುಮತಿಯ ಕೊರಳ ಹಾರಕ್ಕೆ ಕೈ ಹಾಕಿ ಎಳೆದ. ಛಟ್ ಎಂದು ಸರ ಹರಿದು ಮುತ್ತುಗಳು ಚೆಲ್ಲಾಪಿಲ್ಲಿಯಾದವು. ಪರಿಚಾರಿಕೆಯರು, ಊಳಿಗದವರು ಭಯಗ್ರಸ್ತರಾಗಿ ನಿಂತರು.

"ಭೇಷ್! ಕರ್ಣ ಭೇಷ್!" ಎಂದ ದುರ್ಯೋಧನ.

ಕರ್ಣ ಹಿಂತಿರುಗಿ ನೋಡಿದ. ಅವನ ಮುಖದ ಕಳೆ ಜರ್ರೆಂದು ಇಳಿದು ಹೋಯಿತು. ಭಯದಿಂದ ಬಾಯಾರಿತು. ಎದ್ದು ನಿಂತ. ಮಾತು ಬರಲಿಲ್ಲ.

"ಮುತ್ತುಗಳನ್ನು ಆಯ್ದುಕೊಡಲೇ ಕರ್ಣಾ?" ಎಂದು ಸುಯೋಧನ ಬಾಗಿ ಮುತ್ತಗಳನ್ನಾಯತೊಡಗಿದ.

"ಸುಯೋಧನಾ" ಎಂದು ಕರ್ಣ ಆತನ ಕೈ ಹಿಡಿದು ನಿಲ್ಲಿಸಿದ.

"ನೀನಾಡಿದ್ದು ಕಟಕಿಯಲ್ಲವಷ್ಟೇ?" ಕರ್ಣ ಕೇಳಿದ ಭಯದಿಂದ.

"ಕಟಕಿ"? ಯಾಕೆ ಕಟಕಿ?"

"ನಾನು ಅವಿನಯವೆಸಗಿದೆ. ಆಟ ಗೆದ್ದ ಸಂತೋಷದ ಭರದಲ್ಲಿ ಮೈ ಮರೆತು ಕೊರಳ ಹಾರಕ್ಕೆ ಕೈ ಹಾಕಿದೆ. ಸಾಮ್ರಾಜ್ಞಿಯೆಂಬುದನ್ನು ಮರೆತೆ." ನುಡಿಯುತ್ತಿದ್ದಂತೆ ಕರ್ಣ ನಸು ನಡುಗಿದ.

“ಒಳ್ಳೆಯದನ್ನೇ ಮಾಡಿದೆ ಕರ್ಣ, ಇದರಲ್ಲಿ ಅವಿನಯವೇನು ಬಂತು? ಆಟದಲ್ಲಿ ಸೋತವರು ಪಣವನ್ನು ಕೊಡಲೇ ಬೇಕಲ್ಲ.” ಸುಯೋಧನನೆಂದ.

“ಆದರೆ ಸಾಮ್ರಾಜ್ಞಿಯೊಂದಿಗೆ ನನ್ನ ವರ್ತನೆ....”

“ನಿಲ್ಲು ಕರ್ಣಾ, ಮುಂದೆ ನುಡಿಯದಿರು. ಪಗಡೆಯಾಟದಲ್ಲಿ ಏಕೆ ಎಲ್ಲ ಆಟಗಳಲ್ಲಿಯೂ ಅವರಿವರೆಂಬ ಭೇದ ಭಾವನೆಯಲ್ಲಿ? ಅದು ಸಲ್ಲ. ಭಾನುಮತಿ ಪಗಡೆಯಾಟಕ್ಕೆ ಕುಳಿತಾಗ್ಗೆ ಸಾಮ್ರಾಜ್ಞಿಯಲ್ಲ; ಅವಳೊಬ್ಬ ಆಟಗಾರ್ತಿ. ನೀನು ಅಂಗರಾಜನಲ್ಲ; ಸಾಮಾನ್ಯ ಆಟಗಾರ. ಯಾರೇ ಆಗಲಿ, ಸಾಮಾನ್ಯನಾಗಲಿ, ಸಾಮ್ರಾಟನಾಗಲಿ ಆಟದ ನೇಮಗಳಿಗೆ ಬದ್ಧರಾಗಿರಲೇಬೇಕು. ಅದನ್ನು ಮೀರಿದವರಿಗೆ ತಕ್ಕ ಶಾಸ್ತಿಯಾಗಬೇಕು. ಭಾನುಮತಿ ಆಟದ ನೇಮಗಳಿಗೆ ಹೊಂದಿ ನಡೆಯಲಿಲ್ಲ; ಸೋತವರಂತೆ ವರ್ತಿಸಲಿಲ್ಲ. ಸೋಲವನ್ನು ಕೊಡುವುದಿಲ್ಲವೆಂಬ ಆಕೆಯ ಉದ್ಧಟತನಕ್ಕೆ ನೀನು ಸರಿಯಾದುದನ್ನೇ ಮಾಡಿದೆ” ಎಂದು ಸುಯೋಧನ ಮತ್ತೆ ಬಾಗಿ ಮುತ್ತುಗಳನ್ನು ಎತ್ತಿಕೊಂಡ.

“ಹೌದು, ಕರ್ಣ ಮಾಡಿದುದು ಸರಿ. ನನ್ನ ವರ್ತನೆ ಉದ್ಧಟತನದ್ದಾಯಿತು. ಚಕ್ರವರ್ತಿಯವರ ಮಾತಿಗೆ ನನ್ನ ಸಂಪೂರ್ಣ ಒಪ್ಪಿಗೆಯಿದೆ.” ಭಾನುಮತಿ ನುಡಿದಳು.

“ಇಲ್ಲ. ನನ್ನದೇ ಉದ್ಧಟತನ. ನೀವು ನನ್ನ ಒಡೆಯ ಒಡತಿಯರು. ನಿಮ್ಮೊಡನೆ ನನ್ನ ಈ ವರ್ತನೆ ಸಲ್ಲ.” ಕರ್ಣನೆಂದ.

“ಕರ್ಣಾ, ನಾನು ಚಕ್ರವರ್ತಿಯಲ್ಲ; ನೀನು ಮಾಂಡಲಿಕನಲ್ಲ. ಅವು ಹೊರಜಗತ್ತಿನವು. ನಾನು ನೀನು ಗೆಳೆಯರು, ಕೇವಲ ಗೆಳೆಯರು. ಗೆಳೆತನದಲ್ಲಿ ಇಷ್ಟೂ ಸಲಿಗೆ ಬೇಡವೆ?” ಸುಯೋಧನ ನುಡಿದ.

“ನಮ್ಮಲ್ಲಿಯ ಕೆಳೆತನವನ್ನು ಮರೆತು ಅಂತರವೆಣಿಸಿದ್ದಕ್ಕಾಗಿ ಅಂಗರಾಜನಿಗೆ ಶಿಕ್ಷೆಯಾಗಬೇಕು” ಮುಗುಳ್ನಗೆ ತುಳುಕಿಸುತ್ತ ಭಾನುಮತಿ ನುಡಿದಳು.

ಕರ್ಣ ತುಂಬುಗಣ್ಣಿನಿಂದ ಭಾನುಮತಿಯನ್ನು ನೋಡಿದ. ಅರಳಿದ ಮೊಗದಿಂದ ಸುಯೋಧನನ್ನು ನೋಡಿದ.

“ಸುಯೋಧನಾ, ಎಂತಹ ವಿಶಾಲ ಹೃದಯ ನಿನ್ನದು! ಎಂತಹ ನಿಷ್ಕಲ್ಮಷ ಮನಸ್ಸು ನಿನ್ನದು!” ಎನ್ನುತ್ತಿರುವಂತೆಯೇ ಕರ್ಣನ ಕಂಠ ಗದುಗದಿಸಿತು; ಕಡೆಗಣ್ಣಲ್ಲಿ ನೀರು ಉರವಣಿಸಿದುವು,

“ಗೆಳೆಯ ಕರ್ಣಾ, ನೀನು ನನ್ನ ಜೀವ, ನನ್ನ ಆತ್ಮ”ಎಂದು ಸುಯೋಧನ ತುಂಬು ಹೃದಯದಿಂದ ನುಡಿದು ಆತನನ್ನು ಅಪ್ಪಿಕೊಂಡ.

ಈ ಅಪೂರ್ವ ದೃಶ್ಯವನ್ನು ಕಂಡ ಭಾನುಮತಿ ಮತ್ತು ಪರಿಚಾರಿಕೆಯರು ಮತ್ತು ಊಳಿಗದವರ ಕಂಗಳಲ್ಲಿ ಸುಖಜಲ ಹೊಮ್ಮಿದವು.

■

# ಸಂಕೀರ್ಣ

## ವ್ಯವಹಾರ ಮತ್ತು ನೈತಿಕತೆ

**– ಡಾ. ಜಿ. ಎನ್. ಮಲ್ಲಿಕಾರ್ಜುನಪ್ಪ**

ಜ್ಞಾನ – ವಿಜ್ಞಾನ – ತಂತ್ರಜ್ಞಾನಗಳ ಬೆಳವಣಿಗೆಯಿಂದಾಗಿ ಇಡೀ ಜಗತ್ತು ಒಂದು ಗ್ರಾಮವಾಗಿ ಮಾರ್ಪಡುತ್ತಿದೆ ಎನ್ನುವುದು ಕೆಲವರ ಅಭಿಪ್ರಾಯ. ವ್ಯವಹಾರ ನಿರ್ವಹಣಶಾಸ್ತ್ರದ ಪಿತಾಮಹ ಎಂದು ಕರೆಯಲ್ಪಟ್ಟಿರುವ ಪೀಟರ್ ಎಫ್. ಡ್ರಕರ್‌ರವರ ದೃಷ್ಟಿಯಲ್ಲಿ ಈ ಜಗತ್ತು ಒಂದು ಗ್ಲೋಬಲ್ ಶಾಪಿಂಗ್ ಸೆಂಟರ್ ಆಗುತ್ತಿದೆ. ಜಗತ್ತನ್ನು ವ್ಯವಹಾರ ಇಂದು ಯಾವ ದೃಷ್ಟಿಯಲ್ಲಿ ಪರಿಭಾವಿಸಿದೆ ಎಂಬುದಕ್ಕೆ ಇದೊಂದು ನಿದರ್ಶನ. ಯಾವುದನ್ನು ಇವತ್ತು ಜಾಗತೀಕರಣ ಎಂದು ಕರೆಯುತ್ತಿದ್ದೇವೆಯೋ ಅದು ಇದೇ ವ್ಯಾಪಾರೀಕರಣ ಮೂಲದಿಂದ ಸ್ಫುರಿಸಿರುವುದಾಗಿದೆ. ವ್ಯಾಪಾರ ಮತ್ತು ವಾಣಿಜ್ಯಗಳಿಗೆ ಸಂಬಂಧಿಸಿದಂತೆ ಆಯಾ ರಾಷ್ಟ್ರಗಳು ನಿರ್ಮಿಸಿಕೊಂಡಿರುವ ನಿರ್ಬಂಧನೆಯ ರಕ್ಷಣೆಯ ಗೋಡೆಗಳನ್ನು ಕೆಡವಿ ಮುಕ್ತ ವ್ಯಾಪಾರಕ್ಕೆ ಅವಕಾಶ ಮಾಡಿಕೊಡುವುದು ಉದಾರೀಕರಣವಾದರೆ ಆರ್ಥಿಕ ಕ್ಷೇತ್ರದಲ್ಲಿ ಖಾಸಗೀ ಕ್ಷೇತ್ರವನ್ನು ಬೆಂಬಲಿಸಿ ಬಲಪಡುವುದೇ ಖಾಸಗೀಕರಣ. ಈ ಎರಡೂ ನೀತಿಯನ್ನು ಜಗತ್ತಿನಾದ್ಯಂತ ವಿಸ್ತರಿಸುತ್ತಾ ನಿಯಂತ್ರಿತ ಮಾರುಕಟ್ಟೆಗಳನ್ನು ಜಾಗತಿಕ ಪೈಪೋಟಿಗೆ ಮುಕ್ತಗೊಳಿಸುವುದೇ ಜಾಗತೀಕರಣ. ಈ ಮೂರು ಕರಣಗಳು ವ್ಯವಹಾರ ಕ್ಷೇತ್ರದೊಳಗಿನ ನೈತಿಕ ನೆಲೆಗಟ್ಟನ್ನು ಛಿದ್ರಗೊಳಿಸುತ್ತಿರುವ ಅನುಭವ ನಮ್ಮನ್ನು ಆತಂಕಕ್ಕೀಡುಮಾಡಿದೆ. ಯಾವುದೇ ವ್ಯಕ್ತಿ ಅಥವಾ ವಲಯ ನೈತಿಕ ನೆಲೆಗಟ್ಟನ್ನು ಹೊಂದಿರುವುದಿಲ್ಲವೋ ಅದು ಜೀವ ವಿರೋಧಿಯೂ, ಜನ ವಿರೋಧಿಯೂ ಆಗಿರುತ್ತದೆ ಎನ್ನುವುದು ಎಲ್ಲ ಕಾಲಕ್ಕೂ ಸತ್ಯ.

"ವ್ಯಾಪಾರಂ ದ್ರವ್ಯ ಚಿಂತನಂ" ಎಂದು ಯಾರು, ಯಾವಾಗ ಹೇಳಿದರೋ ಏನೋ ಇಂದು ಮಾತ್ರ ಅದು ಅದೇ ಅರ್ಥದಲ್ಲಿ ಮುಂದುವರೆದಿದೆ. ಲಾಭ ಗಳಿಸುವುದು ಮತ್ತು ಸಂಪತ್ತನ್ನು ಕ್ರೋಢೀಕರಿಸಿ ಕೊಳ್ಳುವುದೊಂದೇ ವ್ಯವಹಾರದ ಏಕೈಕ ಉದ್ದೇಶ ಎಂದು ಇದರೊಳಗೆ

ತೊಡಗಿರುವ ಪ್ರತಿಯೊಬ್ಬರೂ ಭಾವಿಸಿದಂತಿದೆ. ಇದು ಇಷ್ಟಕ್ಕೆ ನಿಲ್ಲದೆ ಇತ್ತೀಚಿನ ದಶಕಗಳಲ್ಲಿ "ವ್ಯಾಪಾರಂ ದ್ರೋಹ ಚಿಂತನಂ" ಎನ್ನುವಷ್ಟರ ಮಟ್ಟಿಗೆ ಅದು ಕಲುಷಿತಗೊಳ್ಳುತ್ತಿರುವುದು ನಿಜಕ್ಕೂ ಆತಂಕಕಾರಿ. ಮೋಸ, ವಂಚನೆಗಳಿಲ್ಲದೆ ಸಾತ್ವಿಕ ಮಾರ್ಗಗಳ ಮೂಲಕ ವ್ಯವಹಾರ ನಡೆಸುವುದಾಗಲೀ, ಬದುಕುಳಿಯುವುದಾಗಲೀ, ಬೆಳೆಯುವುದಾಗಲೀ ಸಾಧ್ಯವೇ ಇಲ್ಲ ಎನ್ನುವ ಸ್ಥಿತಿ ನಿರ್ಮಾಣವಾಗಿದೆ. ರಾಜಕೀಯ ಕ್ಷೇತ್ರವನ್ನೂ ಒಳಗೊಂಡಂತೆ ಎಲ್ಲಾ ಕ್ಷೇತ್ರಗಳೊಳಗಿನ ಭ್ರಷ್ಟಾಚಾರಕ್ಕೆ ವ್ಯಾಪರೀ ಕ್ಷೇತ್ರವೇ ಕಾರಣವಾಗುತ್ತಿದೆ. ಪ್ರತಿಯೊಂದು ಚಟುವಟಿಕೆಯ ಹಿಂದೆ ಒಂದು ವ್ಯಾಪರೀ ಆಸಕ್ತಿ, ಆರ್ಥಿಕ ಶಕ್ತಿ ಪ್ರೇರಣೆಯಾಗಿರುವುದನ್ನು ಕಾಣುತ್ತಿದ್ದೇವೆ. ಅಂದರೆ, ವ್ಯವಹಾರ ಎನ್ನುವುದು ನಮ್ಮ ಬದುಕಿನಲ್ಲಿ ಅಷ್ಟೊಂದು ಸಾರ್ವತ್ರಿಕವಾಗುತ್ತಿದೆ ಮತ್ತು ಮಹತ್ವ ಪಡೆದಿದೆ. ಈ ಹಿನ್ನೆಲೆಯಲ್ಲಿ ವ್ಯವಹಾರ ಎಂದರೇನು? ಅದರ ಉದ್ದೇಶಗಳಾವುವು? ಅದರ ನೈತಿಕ ನೆಲೆಗಟ್ಟುಗಳೇನು? ಈ ಬಗೆಗಿನ ಪ್ರಸ್ತುತ ಸ್ಥಿತಿ ಹೇಗೆ ಆತಂಕಗಳಿಗೆ ಕಾರಣವಾಗಿದೆ? ಮತ್ತು ಈ ಬಿಕ್ಕಟ್ಟಿನಿಂದ ಹೊರಬರಲು ಸೂಕ್ತ ಮಾರ್ಗ ಯಾವುದು? ಎನ್ನುವುದನ್ನು ಸೂಕ್ತವಾಗಿ ತಿಳಿಸಿ ಚಿಂತನೆಗೆ ಪ್ರೇರಣೆ ನೀಡುವುದು ಈ ಲೇಖನದ ಉದ್ದೇಶವಾಗಿದೆ.

**ವ್ಯವಹಾರ ಎಂದರೇನು?**

ಇದೊಂದು ಅನಾದಿ ಕಾಲದಿಂದಲೂ ಬೇರೆ ಬೇರೆ ಸಮೂಹಗಳಲ್ಲಿ ನಡೆದು ಬಂದ ಆರ್ಥಿಕ ಚಟುವಟಿಕೆ. ನಮ್ಮ ಬದುಕನ್ನು ಶೃಂಗರಿಸಿಕೊಳ್ಳಲು ಬೇಕಾದ ಸರಕು – ಸೇವೆಗಳನ್ನು ಉತ್ಪಾದಿಸುವ, ಮಾರಾಟದ ಮೂಲಕ ವಿತರಿಸುವ ಮತ್ತು ಅಂತಿಮವಾಗಿ ಅನುಭೋಗಿಸಿ ಸುಖಿಸುವ ಎಲ್ಲ ಚಟುವಟಿಕೆಗಳನ್ನು ಇದು ಒಳಗೊಂಡಿದೆ. ಈ ಚಟುವಟಿಕೆಗಳನ್ನು ವ್ಯವಹಾರಶಾಸ್ತ್ರ ಪರಿಭಾಷೆಯಲ್ಲಿ ಉದ್ಯಮ, ವ್ಯಾಪಾರ ಮತ್ತು ವಾಣಿಜ್ಯಗಳೆಂದು ಮೂರು ಗುಂಪುಗಳಲ್ಲಿ ವಿಂಗಡಿಸಲಾಗಿದೆ. ಲಾಭ ಗಳಿಸುವುದರ ಜೊತೆಗೆ ಗ್ರಾಹಕರಿಗೆ ಉತ್ತಮ ಗುಣಮಟ್ಟದ ಸೇವೆಯನ್ನು ನೀಡುವುದು, ಅನುಭೋಗ ವೈವಿಧ್ಯತೆಗೆ ತಕ್ಕಂತೆ ಹೊಸ ಅನ್ವೇಷಣೆ ಮಾಡುವುದು, ಅವರ ಬಯಕೆಗಳನ್ನು ತಣಿಸುವುದು ಮತ್ತು ಸಮಾಜ – ಪರಿಸರಗಳನ್ನು ಬೆಳೆಸುವುದು, ಸಹ ಅದರ ಉದ್ದೇಶಗಳಾಗಿವೆ. ನಾಗರಿಕ ಮನುಷ್ಯನ ಬೆಳವಣಿಗೆಯ ಹಿಂದೆ ವ್ಯವಹಾರದ ಬೆಳವಣಿಗೆಯ ಹೆಜ್ಜೆಗುರುತುಗಳಿರುವುದನ್ನು ನೋಡಿದರೆ ಇದರ ಮಹತ್ವ ತಿಳಿಯುತ್ತದೆ. ಸಮುದ್ರ ಮಾರ್ಗಗಳನ್ನೂ ಹುಡುಕಿದವರೂ, ವಿಜ್ಞಾನ–

ತಂತ್ರಜ್ಞಾನ ಕ್ಷೇತ್ರದಲ್ಲಿನ ಸಂಶೋಧನೆಗಳನ್ನು ಬೆಳೆಸಿದವರು, ಈಸ್ಟ್ ಇಂಡಿಯಾ ಕಂಪನಿಗಳನ್ನು ಸ್ಥಾಪಿಸಿ ಆ ನೆಲೆಯಿಂದ ದೇಶಗಳನ್ನು ಆಳಿದವರೂ, ಯುದ್ಧಗಳನ್ನು ರೂಪಿಸಿದವರೂ, ಭಯೋತ್ಪಾದನೆಯನ್ನು ಬಿತ್ತಿದವರೂ ಒಂದಲ್ಲಾ ಒಂದು ರೀತಿಯಲ್ಲಿ ವ್ಯಾಪಾರ – ವಾಣಿಜ್ಯಗಳಿಗೆ ಸಂಬಂಧಿಸಿದವರೇ ಆಗಿದ್ದಾರೆ. ಸಣ್ಣ ಏಕವ್ಯಕ್ತಿ ಕಿರಾಣಿ ವ್ಯಾಪಾರಿಯಿಂದ ಮೊದಲುಗೊಂಡು ಬಹುರಾಷ್ಟ್ರೀಯ ಕಂಪನಿಗಳ ಎತ್ತರಕ್ಕೆ ಅದು ವ್ಯಾಪಿಸಿದೆ, ಬೆಳೆದಿದೆ.

## ಯಾವುದು ನೈತಿಕ ನೆಲೆಗಟ್ಟು ಮತ್ತು ಬಿಕ್ಕಟ್ಟು?

ನೈತಿಕತೆ ಎನ್ನುವುದು ವ್ಯಕ್ತಿ ಮತ್ತು ಸಮಾಜಗಳ ಶಿಸ್ತಿಗೆ ಅಭಿವೃದ್ಧಿಗೆ ರೂಪುಗೊಂಡ ಕಾನೂನು, ನೈಸರ್ಗಿಕ ನ್ಯಾಯ ಮೂಲದ ಅನೌಪಚಾರಿಕ ನಿಯಮಗಳಿವು. ಅಕ್ಷರ ಸಂಸ್ಕೃತಿಯ ಔಪಚಾರಿಕ ನಿಯಮಗಳು ಕಾನೂನಾದರೆ ಇವು ಮೌಖಿಕ ಸಂಸ್ಕೃತಿಯ ದೈವಿಕ ನಂಬಿಕೆಯ ಲೇಪನದ ಕಟ್ಟು–ಕಟ್ಟಳೆಗಳು, ಸಮುದಾಯದ ಬಗೆಗಿನ ವ್ಯಕ್ತಿಯ ಕಾಳಜಿಯನ್ನು, ವ್ಯಕ್ತಿಯ ಬಗೆಗಿನ ಸಮುದಾಯದ ಹೊಣೆಗಾರಿಕೆಯನ್ನು ಇವು ಒಳಗೊಂಡಿವೆ. ಈ ಅನಭಿಷಿಕ್ತ ಕಾನೂನುಗಳೇ ಬಹುಕಾಲದಿಂದ ನಮ್ಮ ಬದುಕನ್ನು ಇಡಿಯಾಗಿ ಇಟ್ಟಿವೆ ಎಂದರೆ ತಪ್ಪಾಗಲಾರದು. ವ್ಯಕ್ತಿ ಮತ್ತು ಸಮುದಾಯಗಳ ಅಂತಃಸಾಕ್ಷಿಯಿಂದ ಕ್ರಿಯಾಶೀಲವಾಗುವ ಈ ಪ್ರಜ್ಞೆ ಸಹಜೀವನ ಮತ್ತು ಸಜ್ಜೀವನದ ಉದ್ದೇಶಗಳನ್ನು ಗುರಿಯಾಗಿಸಿಕೊಂಡಂತಹುದಾಗಿದೆ.

ವ್ಯವಹಾರ ಕ್ಷೇತ್ರದಲ್ಲಿ ಈ ನಿಯಮಗಳು, ಈ ಪ್ರಜ್ಞೆ ಕಡೆಗಣಿಸಲ್ಪಟ್ಟಿದೆಯೆಂದರೆ ಪರಸ್ಪರ ಕತ್ತು ಕೊಯ್ಯುವ ಅನಾರೋಗ್ಯಕರ ಪೈಪೋಟಿಯೇ ಮಾರುಕಟ್ಟೆಯ ಶ್ರೇಷ್ಠ ಮೌಲ್ಯವಾಗಿದೆ. ಅದನ್ನು ಜಯಿಸುವ ವಾಮ ಮಾರ್ಗಗಳೇ, ಅಡ್ಡಾಡಿ ತಂತ್ರಗಳೇ, ಒಪ್ಪಿತ ಮಾರ್ಗಗಳಾಗುತ್ತಿವೆ. ಇಡೀ ವಲಯ ಹಿಂಸಾತ್ಮಕ ಯುದ್ಧ ತಂತ್ರಗಳನ್ನು ಕರಗತ ಮಾಡಿಕೊಳ್ಳುತ್ತಿದೆ. ಕಾಳಸಂತೆ, ಕಪ್ಪುಹಣ, ಕಲಬೆರಕೆಯಂತಹ ಕಪ್ಪು ವಿದ್ಯೆಯ ಕುಕೃತ್ಯಗಳು ಇಲ್ಲಿ ರಾರಾಜಿಸುತ್ತಿವೆ. ಏನಕೇನ ಸರಕು–ಸೇವೆಗಳನ್ನು ಮಾರಾಟ ಮಾಡುವುದೇ ಮುಖ್ಯವಾಗಿದೆ. ಅವುಗಳಲ್ಲಿ ಇಲ್ಲದ ಗುಣಗಳನ್ನು ಜಾಹೀರಾತೆಂಬ ಮಾಂತ್ರಿಕ ವಿದ್ಯೆಯ ಮೂಲಕ ಸಲ್ಲದ ರೀತಿಯಲ್ಲಿ ಬಿಂಬಿಸಿ, ದುಬಾರಿ ಬೆಲೆಗೆ ಮಾರಿ ಲಾಭಗಳಿಸುವುದನ್ನು ಹೇಳಿಕೊಡುವ ವಿದ್ಯೆ ಕೂಡ ದುಬಾರಿಯಾಗಿದೆ! ತೀವ್ರ ವಾಣಿಜ್ಜೀಕರಣಕ್ಕೊಳಗಾಗುತ್ತಿರುವ ವೈದ್ಯಕೀಯ, ತಾಂತ್ರಿಕ, ವ್ಯವಹಾರ

ನಿರ್ವಹಣೆ ಮುಂತಾದ ಉನ್ನತ ಶಿಕ್ಷಣ ಕ್ಷೇತ್ರಗಳು ಇದಕ್ಕೆ ಇಂದು ನಿದರ್ಶನಗಳಾಗುತ್ತಿವೆ.

ನೈತಿಕ ನೆಲೆಗಟ್ಟು ಮತ್ತು ಸಾಮಾಜಿಕ ಹೊಣೆಗಾರಿಕೆಯಿಂದ ದೂರವಾಗುತ್ತಿರುವ ವ್ಯವಹಾರ ಸಂಸ್ಥೆಗಳಿಂದಲೇ ಇಂದು ಹೆಚ್ಚು ಅನಾಹುತಗಳಾಗುತ್ತಿವೆ ಎಂದರೆ ತಪ್ಪಾಗಲಾರದು. ಭಾರತದ ಉದಾಹರಣೆಯನ್ನೇ ತೆಗೆದುಕೊಳ್ಳೋಣ. ಲಕ್ಷಾಂತರ ಜನ ಕಾರ್ಮಿಕರು ಮತ್ತು ಸಾರ್ವಜನಿಕರು ಪ್ರಾಣ ಕಳೆದುಕೊಂಡು ಮತ್ತೆ ಸಹಸ್ರ ಸಂಖ್ಯೆಗಳಷ್ಟು ಜನ ಪರಿಹಾರವಿಲ್ಲದೆ ಇಂದಿಗೂ ಪರಿತಪಿಸುತ್ತಿರುವ ಭೋಪಾಲ್ ಅನಿಲ ದುರಂತವಾಗಲೀ; ಇಡೀ ದೇಶದ ಅರ್ಥವ್ಯವಸ್ಥೆಯನ್ನು ತಲ್ಲಣಗೊಳಿಸಿದ ಹರ್ಷದ್ ಮೆಹ್ತಾ ಷೇರು ಪೇಟೆ ಹಗರಣದ ಪ್ರಕರಣವಾಗಲೀ; ಸ್ವಚ್ಛವೂ ಪವಿತ್ರವೂ ಆದ ಗಂಗಾ, ಯಮುನಾ ಮುಂತಾದ ಬೃಹತ್ ನದಿಗಳನ್ನು ಕೈಗಾರಿಕಾ ತ್ಯಾಜ್ಯದಿಂದ ಕಲುಷಿತಗೊಳಿಸಿ ಜನಜೀವನವನ್ನು ಸಂಕಷ್ಟಕ್ಕೀಡುಮಾಡುತ್ತಿರುವ ಪರಿಸರ ಮಾಲಿನ್ಯವಾಗಲೀ; ತೀವ್ರ ಗಣಿಗಾರಿಕೆಯಿಂದ ನಿಸರ್ಗದ ಮೇಲಾಗುತ್ತಿರುವ ಪರಿಣಾಮಗಳಾಗಲೀ, ವ್ಯವಹಾರ ಮತ್ತು ತಪ್ಪು ನಿರ್ದೇಶನದ ಅಭಿವೃದ್ಧಿ ಮಾದರಿಗಳಿಂದಾದುವುಗಳೇ. ಹರ್ಷದ್ ಮೆಹ್ತಾ ಪ್ರಕರಣವೊಂದರಿಂದಲೇ ಸುಮಾರು 2.5 ಲಕ್ಷ ಕೋಟಿ ರೂ.ಗಳ ವಹಿವಾಟು ನಡೆದಿತ್ತೆಂದರೆ ಈ ಕಪ್ಪು ವ್ಯವಹಾರದ ಗಂಭೀರತೆ ಅರ್ಥವಾಗುತ್ತದೆ.

ಒಳ್ಳೆಯ ಗುಣಮಟ್ಟದ ಸರಕು–ಸೇವೆಗಳನ್ನು ಅನುಭೋಗಿಸುವುದೇ ನಮ್ಮ ಬಯಕೆಯಲ್ಲವೇ? ಇದು ಗ್ರಾಹಕರ ಹಕ್ಕು ಮತ್ತು ಉತ್ಪಾದಕರ ಹೊಣೆಗಾರಿಕೆ. ಹೊಣೆಗಾರಿಕೆಯನ್ನು ನಿಭಾಯಿಸುವ ಹೆಸರಿನಲ್ಲಿ ಮೋಸ ಮಾಡುವುದು, ವಿಷ ಉಣಿಸುವುದು ಕಾನೂನುಬಾಹಿರ ಮತ್ತು ಅನೈತಿಕ. ಜನತಂತ್ರ ವ್ಯವಸ್ಥೆಯಲ್ಲಿ ಕಾನೂನುಗಳೆಲ್ಲವೂ ನೈತಿಕ ನೆಲೆಗಟ್ಟಿನಲ್ಲಿರುವುದರಿಂದ ನೈತಿಕ ಸಮ್ಮತವಾದವುಗಳೆಲ್ಲಾ ಕಾನೂನು ಪಾಲಕವೂ ಆಗಿರುತ್ತದೆ.

ಅನೈತಿಕ ವ್ಯಾಪಾರೀಕರಣ ಅದೆಷ್ಟು ವ್ಯಾಪಕವಾಗಿ ನಮ್ಮ ಬದುಕನ್ನು ವ್ಯಾಪಿಸಿಕೊಳ್ಳುತ್ತಿದೆಯೆಂದರೆ, ದೇವರು–ದೈವ–ಆಧ್ಯಾತ್ಮಗಳಂತಹ ಅಲೌಕಿಕ ನಂಬಿಕೆಗಳೂ ಮಾರಾಟದ ಸರಕಾಗುತ್ತಿವೆ. ಧಾರ್ಮಿಕ ಸ್ಥಳಗಳಲ್ಲಿ ಪೂಜೆ–ಪ್ರಾರ್ಥನೆ–ಅರ್ಚನೆಗಳ ಹೆಸರಿನಲ್ಲಿ ಕಂಡುಬರುವ ದೇಣಿಗೆ/ಬೆಲೆ ಪಟ್ಟಿಗೂ

ಅಂಗಡಿಯೊಂದರ ಸರಕುಗಳ ಬೆಲೆಪಟ್ಟಿಗೂ ಏನಾದರೂ ವ್ಯತ್ಯಾಸ ಕಂಡು ಬರುತ್ತದೆಯೇ? ಒಬ್ಬರ ನಂಬಿಕೆಗಳನ್ನು, ಮತ್ತೊಬ್ಬರು ದುರುಪಯೋಗ ಪಡಿಸಿಕೊಳ್ಳುವುದು, ಅಸಹಾಯಕತೆಯನ್ನು ನಗದೀಕರಿಸಿಕೊಳ್ಳುವುದು, ನಾವು ನಿಂತ ನೆಲ–ನೆಲೆಗಳನ್ನು ಹಾಳುಗೆಡುವುದು, ಮುಂತಾದ ಕೃತ್ಯಗಳೆಲ್ಲವೂ ಅನೈತಿಕವಲ್ಲವೆ? ಬದುಕಿನ ಬಹುಮುಖ್ಯ ಅಂಗವಾದ ವ್ಯವಹಾರ ಇಂಥ ಚಟುವಟಿಕೆಗಳಿಂದ ತುಂಬಿ ಹೋಗುತ್ತಿರುವುದು ಆತಂಕದ ವಿಷಯ. ಇಂದು ಕೆಲವೊಂದು ಬಹುರಾಷ್ಟ್ರೀಯ ಕಂಪನಿಗಳು ಇಂಥದ್ದೇ ಅನಾಹುತಗಳನ್ನು ತಂದೊಡ್ಡುತ್ತಿವೆ. "ಜವರಾಯ ಬಂದರೆ ಬರಿಗೈಲಿ ಬರಲಿಲ್ಲ ಕೈಯಲ್ಲಿ ಕೊಡಲಿ ಕುಡಗೋಲು, ಒಳ್ಳೊಳ್ಳೆ ಮರಾನ ಕಡಿಬಂದ" ಎಂಬ ಜಾನಪದ ಪದ್ಯದ ಸಾಲುಗಳಂತೆ ಈ ಕಂಪನಿಗಳು ನಮ್ಮ ಆರ್ಥಿಕ ಮತ್ತು ಸ್ವಚ್ಛ ನೈಸರ್ಗಿಕ ಪರಿಸರದ ಅವನತಿಗೆರ ಕಾರಣವಾಗುತ್ತಿವೆ.

**ಸೂಕ್ತದಾರಿ :**

ಹೀಗೇ ಮುಂದುವರಿಯುತ್ತಿರುವ ಈ ಕರಾಳ ಸಂಸ್ಕೃತಿಯನ್ನು ನಿರ್ಲಕ್ಷಿಸಿದರೆ ಅನರ್ಥ–ಅರಾಜಕತೆಗಳು ಸಂಭವಿಸುವುದರಲ್ಲಿ ಸಂದೇಹವಿಲ್ಲ. ಈ ವಲಯವನ್ನು ನೈತಿಕ ನೆಲೆಗಟ್ಟಿಗೆ ಕೊಂಡೊಯ್ಯಲೇಬೇಕು. ಕಾನೂನಿನ ಕಡಿವಾಣ ಹಾಕಲೇಬೇಕು. ಅಭಿವೃದ್ಧಿ ಹೊಂದಿರುವ, ಜಾಗತಿಕ ಮಾರುಕಟ್ಟೆಗಳಿಗೆ ಹೆಸರಾಗಿರುವ ಅಮೆರಿಕಾ, ಸಿಂಗಪೂರ್, ಚೀನಾದಂತಹ ರಾಷ್ಟ್ರಗಳನ್ನೇ ನೋಡೋಣ. ವ್ಯವಹಾರ ಕ್ಷೇತ್ರದಲ್ಲಿ ಗುಣಮಟ್ಟ ಇದೆ. ಶಿಸ್ತು ಇದೆ ಎಂದರೆ ಅದಕ್ಕೆ ಅಲ್ಲಿನ ಕಠಿಣ ನಿಯಮಗಳೇ ಕಾರಣ. Produce for Sale ಎನ್ನುವ ಧೋರಣೆಯ ಬದಲಾಗಿ Produce for proper use ಎನ್ನುವ ನೀತಿ ಎಲ್ಲರಲ್ಲೂ ಬರಬೇಕಾಗಿದೆ. ಗ್ರಾಹಕನ ಸಂತೃಪ್ತಿಯ ಮೇಲೆ ಲಾಭಗಳಿಸುವ ಕ್ರಮಗಳಿಗೆ ಮುಂದಾಗಬೇಕಿದೆ. ಜೊತೆಗೆ ದಾರ್ಶನಿಕರ ಬದುಕಿನ ಆದರ್ಶಗಳನ್ನು, ಲೌಕಿಕದ ಬದುಕಿನ ನಶ್ವರತೆಯನ್ನು ದುರಾಸೆಗೆ ಕಡಿವಾಣ ಹಾಕುವ ವಿಧಾನಗಳನ್ನು ಸ್ವಲ್ಪ ಮಟ್ಟಿಗಾದರೂ ಅನುಸರಿಸಬೇಕು. ಇಲ್ಲವಾದಲ್ಲಿ "ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದು." ಎನ್ನುವ ಬಸವಣ್ಣನ ಮಾತಿನಂತೆ ಮೋಸದ ಕ್ರಮಗಳಿಂದ ಗಳಿಸಿದ ವ್ಯವಹಾರದ ಲಾಭವನ್ನು ಶೋಷಣೆ ಮೂಲದ ಧಾರ್ಮಿಕ ಕೇಂದ್ರಗಳ ಹುಂಡಿ–ಗುಂಡಿಗಳಿಗೆ ಸುರಿದು ತೃಪ್ತಿಪಟ್ಟುಕೊಳ್ಳಬೇಕಷ್ಟೆ.

■

# ಕತ್ತೆ ಆದಳು ಅತ್ತೆ

**– ಜಾನಪದ**

ಒಂದೂರಿನಲ್ಲಿ ಅವ್ವ ಮಗ ಇಬ್ರಿದ್ರು. ಮಗ ವಯಸ್ಸಿಗೆ ಬಂದಿದ್ದ. ತಾಯಿ ಒಂದೂರಗೆ ಹೆಣ್ಣು ನೋಡಿ, ಮದ್ವಿ ಮಾಡಿದ್ಲು.

ಇಂಗೇ ಕೂಲಿ ನಾಲಿ ಮಾಡ್ಕಂಡಿರ್ತಾರೆ. ಒಂದ್ಮೂರು ಏಕ್ರೆ ಜಮೀನಿತ್ತು. ಹೆಣ್ತಿ, ಅತ್ತೇನ ಸೇರ್ತಿರಲಿಲ್ಲ. ಹೆಂಗಾದ್ರೂ ಮಾಡಿ ಈ ಅಜ್ಜಿನ ಮನೆ ಬಿಡ್ಸು ಬೇಕಂತ ಯೇಚ್ನೆ ಮಾಡ್ತೀರ್ತಳೆ.

ಒಂದಿನ ಗಂಡನ ಹತ್ರ, "ಅತ್ತೇವರು ಯಾವಾಗ್಴ ಮನೇಲಿ ಇರ್ತಾರೆ. ಮೂರು ಎಕ್ರೆ ಜಮೀನ್ಗೆ ಜ್ವಾಳ ಹಾಕಿ ಹೊಲ್ದ ಕಾವುಲು ಕಳಿಸಬಹುದಲ್ಲ" ಅಂತ ಹೇಳಿದ್ಲು. ಪೈರು ಕೊಯ್ಯಕೆ ಬಂದಾಗ ಒಂದು ಗುಡ್ಲು ಹಾಕೊಟ್ರೆ ಪಸಂದಾಗಿ ಕಾಯ್ಕೊಂಡಿರುತ್ತೆ, ಅಂತ ಗಂಡ್ನಗೆ ಹೇಳಿದ್ಲು.

"ಅಯ್ಯೋ ದಡ್ಡಿ, ವಯಸ್ಸಾಗಿರೋ ನಮ್ಮ ಅಮ್ಮನನ್ನು ಹೊಲಕ್ಕೆ ಕಳಿಸು ಅಂತ ಹೇಳ್ತೀಯಲ್ಲಾ ಯಾವ ಧರ್ಮ. ಸೊಸೆ ಮಗಯಿದ್ದು ಈ ಮಳೇ ಗಾಳೀಲಿ ಆಯಮ್ಮ ಹೊಲಕ್ಕೆ ಹೋದ್ರೆ, ಜನ ನಮ್ಮ ಏನನ್ನಕ್ಕಿಲ್ಲ! ಅಂತ ಬುದ್ಧಿವಾದ ಹೇಳಿ ನಾನು ಎಲ್ಲಿಗೂ ಕಳ್ಸಲ್ಲ" ಅಂದ.

ಗಂಡ ನನ್ಮಾತು ಕೇಳಲಿಲ್ಲಂತ ಅತ್ತೆ ಮೇಲೆ ದಿವ್ಸಾನು ಜಗ್ಳ ಮಾಡಳು. ಅತ್ತೆಗೆ ಸರಿಯಾಗಿ ಊಟ ಕೊಡ್ತೀರಲಿಲ್ಲ. ಎರಡು ಸೋರೆಗೆ ಮುದ್ದೆ ಮಾಡಾಳು. ಒಂದು ಸೋರೆಗೆ ಕಲ್ಲಳ್ಳು ಬೆರಿಸಿ ಮುದ್ದೆ ಮಾಡಳು, ಅತ್ತೆಗೆ ಕೊಡಳು. ಇವ್ರಮ್ಮ ಮಗ್ನತ್ರ "ನನ್ಗೆ ಕಲ್ಲಳ್ಳು ಇರೋ ಮುದ್ದೆ ಕೊಡ್ತಳೆ ನಿನ್ನೇಣ್ತಿ" ಅಂತ ಹೇಳಿದ್ಲು.

ತಾಯಿ ಪರ್ವಾಗಿ, ಇವ್ನು ಹೆಣ್ತಿ ಜೊತೆ ವಾಚಾಡ್ತಿದ್ದ. ಇವ್ರ ತಾಯಿ ಇವ್ರ ವಾಚಾಡದು ನೋಡಿ, ಕಣ್ಮರೆಯಾಗೆ ಹೊಲದತ್ರ ಇರಬಹುದು, ಮನೇಲಿರುದು ಬ್ಯಾಡ ಅಂದು ಮಗ್ನ ಕೂಟ; "ಹೊಲಕ್ಕೆ ಜ್ವಾಳ ಬಿತ್ತಿ ನನ್ಗೆ ಒಂದು ಗುಡಿಸ್ಲು ಆಕ್ಕೊಡಪ್ಪಾ, ನಾನು ಕಾವಲು ಇರ್ತೀನಿ" ಅಂದ್ಲು. ಇವ್ನು ತಾಯಿ ಮಾತು ಕೇಳಿ ಒಂದು ರೀತಿ ಒಳ್ಳೇದು ಅಂದ್ಕಂಡು, ಎರೆ ಹೊಲಕ್ಕೆ ಜ್ವಾಳ ಹಾಕಿದ. ತಾಯ್ಗೆ ಒಂದು ಗುಡಿಸ್ಲು ಕಟ್ಟಿಕೊಟ್ಟ. ಹೆಣ್ತಿ ಹತ್ರ ಅಡಿಗೆ ಮಾಡ್ಸಿ ದಿನಾನು ಊಟ ಕೊಟ್ಟು ಬರಾನು.

ಆ ಮುದುಕಿ ಸತ್ರೆ ಸಾಕು ಅಂತ, ರಾಗಿ ಹಿಟ್ಟಿಗೆ ಕಲ್ಲು ಮಣ್ಣು ಬೆರೆಸಿ ಅಡಿಗೆ ಮಾಡಿ ಬುತ್ತಿ ಕಟ್ಟೀರ್ತಳೆ. ಇವ್ನು ಒಂದಿನನೂ ಬುತ್ತಿ ಬಿಚ್ಚಿ ನೋಡಿರಲ್ಲ. ತಾಯಿ ಏನಂತ್ಕಂತಾಳೆ, ನನ್ಮಗ ಊಟ ತರ್ತಾನೆ ಕೊಟ್ಟು ಬಿಡ್ತನೆ. ಒಳಗೆ ಏನು ಕಟ್ಟಿದಳೂ ಅಂತನು ನೋಡಲ್ಲ ಅಂತ ಅಂದ್ಕಂಡು; ಈ ಊಟ, ತಿನ್ನಾದ್ಕಿಂತ ಸುಮ್ನೆ ಇರಾದು ಲೇಸು ಅಂದು ಯೇಚ್ನೆ ಮಾಡ್ರ ಮಲ್ಕಂಡು ಬಿಟ್ಲು. ಸರಿಯಾಗಿ ಊಟ ಇಲ್ದೆ ವಣ್ಕಂಡು ಬಿಟ್ಟು.

ಒಂದಿನ ಬ್ರಹ್ಮ, ಈಶ್ವರ, ವಿಷ್ಣು, ಮನ್ಸುರ ವೇಷ ಆಕ್ಕಂದು ಮುದುಕಿ ಕುಂತಿದ್ದ ಹೊಲಕ್ಕೆ ಬರ್ತಾರೆ. "ಅಮ್ಮಾ ನಮ್ಗೆ ಬಾಳ ಹೊಟ್ಟೆ ಹಸಿವು ಆಗ್ತೈತೆ ಬಾಳ ದೂರದಿಂದ ನೆಡಕಂಡು ಬಂದೀವಿ ಏನಾರ ಇದ್ರೆ ಕೊಡಮ್ಮ" ಅಂದ್ರು. ಆ ಅಜ್ಜಿ ಮರುಕ ಪಟ್ಗಂಡು "ಇಲ್ಲೇ ಕುಂತಿರ್ರಪ್ಪಾ, ನಾನು ಜ್ವಾಳ ತೆನೆ ಮುರ್ಕಂಡು ಬಂದು, ಜಜ್ಜಿ ಕೊಡ್ತೀನಿ ತಿಂದು ಹೋಗ್ವಾಂತ್ರಿ" ಅಂದ್ಲು. ಹೋಗಿ ತೆನಿ ಮುರ್ಕಂಡು ಬಂದಿ ಜಜ್ಜಿ ಕೊಟ್ಲು. ಅವ್ರು ಮೂವರು ತಿಂದ್ಕಂತ ಮುದುಕಿ ಕೈಯಗ್ಳ ಕಾಳು ಎಷ್ಟು ರುಚಿ ಇದಾವೆ ಅಂತ ಕೊಂಡಾಡಿ, "ಬಂಗಾರ್ದಂತ ಅಜ್ಜಿ, ಸತ್ತಾಗ ಅಜ್ಜಿ ಬಂಗಾರ ಆಗ್ಲೀ" ಅಂತ ಆಶೀರ್ವಾದ ಮಾಡಿ ಹೊಂಟ್ಹೋದ್ರು.

ಅಜ್ಜಿ ಊಟ ಬಿಟ್ಟು ದಿನಕ್ಕಿನ ಸಣ್ಣಾಗಿ ಪ್ರಾಣ ಬಿಟ್ಟುಬಿಟ್ಟು. ಪ್ರಾಣ ಬಿಡಕ್ಲು ಅವ್ರು ಆಶೀರ್ವಾದ ಮಾಡ್ದಂತೆ, ಬಂಗಾರದ ಗಟ್ಟಿಯಾಗಿ ಬಿಟ್ಟು.

ಮಗ ಆವೊತ್ತು, ನಮ್ಮಮ್ಮೆಗ್ಗೆ ಬಾಳ ಅಸ್ವಾಗಿರಬೇಕಂತ ಅಡಿಗೆ ಮಾಡಿಸ್ಕಂಡು ಊಟ ತಕ್ಕೊಂಡು ಜೋರಾಗಿ ಬರ್ತಾನೆ. ಬಂದು ನೋಡ್ತಾನೆ! ಅವ್ವ ಬಂಗಾರ್ದ ಗಟ್ಟಿಯಾಗಿ; ಗುಡಿಸ್ಲಲ್ಲಿ ಉದ್ದಕ್ಕೆ ಮನ್ಗಿ ಬಿದ್ಬಿಟ್ಟಿದ್ದಾಳೆ. ಆವಾಗ ಅವುನ್ಗೆ ಸಂತೋಷವಾಗಿ ಮನ್ಗೆ ಬಂದು ಹೆಣ್ತಿಗೆ ಹೇಳ್ತನೆ. ಗಾಡಿ ಕಟ್ಸಿಕೊಂಡು ಬಂಗಾರದ ಮುದುಕಿನ ಮನ್ಗೆ ತಂದಿ, ಪೂಜೆ ಮಾಡ್ತ ಸ್ರೀಮಂತ್ರಾಗ್ತರೆ.

ಒಂದಿನ ಇವ್ನು "ಏನೇ ನಮ್ಮವ್ವನ ಕಥೆ ಮುಗಿತು. ನಿಮ್ಮವ್ವ ಐದಳಲ್ಲಾ, ಕರೆಸಿದ್ರೆ, ಹೊಲನಾದ್ರೂ ಕಾಯ್ತಾಳೆ" ಅಂತ ಹೇಳ್ದ. ಅಂಗೇಳಿತ್ಲು ತೌರು ಮನ್ಗೆ ಹೋಗಿ ತಾಯಿನ ಕರೆದು, "ಈಗ ಇರೋ ಐದು ಜನ ಮದ್ವೆ ನಾನೆ ಮಾಡ್ತೀನಿ ನಿನಗ್ಯಾಕೆ ಸುಮ್ನೆ ನಮ್ಮನ್ಗೆ. ಬಾ ಅಂದು ಕರ್ಕಂಡು ಬಂದ್ಲು.

ಇವುಳ್ಗೆ ಬಂಗಾರ್ದ ಮೋಹ ಹೆಚ್ಚಾಯ್ತು. ನಮ್ಮಮ್ಮನ ಜ್ವಾಳ ಹೊಲಕ್ಕೆ ಕಳಿಸಿದ್ರೆ; ಬಂಗಾರ್ದ ಗಟ್ಟಿಯಾಗ್ತಳೆ ಅಂದು ಹೊಲ ಕಾಯಕೆ ನೇಮಿಸಿದ್ಲು.

ಗಂಡ್ನ, ಕೈಯ್ಲಿ ಅವ್ರಮ್ಮಗೆ ಬೇಕಾದ್ದು ಅಡಿಗೆ ಮಾಡಿ, ಬುತ್ತಿ ಕಳ್ಸೊಳು. ಈ ಅಜ್ಜಿ ಮಹಾ ಕರ್ಮಿಷ್ಠೆ. ಒಬ್ರುಗು ತುತ್ತು ಅನ್ನ ಹಾಕ್ದಳಲ್ಲ.

ಇಂಗೇ ಇರ್ಬೇಕಾದ್ರೆ, ಇವ್ರ ತಾಯಿನ ಪರೀಕ್ಷೆ ಮಾಡಾಕೆ, ಒಂದಿನ; ಬ್ರಹ್ಮ ವಿಷ್ಣು ಈಶ್ವರ ಹೊಲಕ್ಕೆ ಬರುತ್ತಾರೆ. ಬಂದಿ, ಅಮ್ಮ ನಮ್ಗೆ ಬಾಳ ಅಸಿವಾಗಿದೆ. ಏನಾರ ಇದ್ರೆ ಕೊಡಮ್ಮ ಅಂತ ಕೇಳ್ತಾರೆ. ಆಗ ಅಜ್ಜಿಯಿದ್ದು; ಏನ್ರೋ, "ನಿಮ್ಮ ಬಾಯಗೆ ನನ್ನಾಟು ಒಯ್ಯ, ಯಾರ್ನ ಕೇಳಿ ಈ ಹೊಲ್ದಾಕೆ ಕಾಲಿಟ್ರಿ" ಅಂತ ಬೈಯ್ತಾಳೆ. ಆಗ "ಇದು ಏನು ತಿಳಿಯದ ಕತ್ತೆ, ಬರ್ರಿ ಹೋಗಾಣ" ಅಂದು ಹೊಂಟು ಓದ್ರು. ಇವ್ರು ಅಂಗೆ ಅನ್ನುತ್ಲೆ ಕತ್ತೆ ಆಗಿಬಿಟ್ಳು.

ಕತ್ತೆ ಆಗತ್ಲು ಅದು ಕೆರೆ ಹಿಂದ್ಕೆ ಮೇಯಾಕೆ ಹೋಯ್ತು. ಅಗಸ್ರನ ಕತ್ತೆ ಇತ್ತಲ್ಲಾ ಅದು, ಮಾಯ್ವಾಗಿ ಬಿಡ್ತು. ಅಗಸ್ರನು ಕತ್ತೆ ನೋಡ್ಕಂತಾ ಬಟ್ಟೆ ಸೆಳಿತಾ ಇರ್ತಾನೆ.

ಈಕೆ, ನಮ್ಮಮ್ಮ ಹೊಲ ಕಾದ್ಕಂಡು ಬಾಳ ಹೊಟ್ಟೆ ಅಸ್ಕಂಡಿರಬೇಕು ಅಂತ ಬಿಸಿ ಬಿಸಿ ಅಡ್ಗೆ ಮಾಡಿ, ಗಂಡ್ನ ಕೈಗೆ ಬುತ್ತಿ ಕಟ್ಟಿ ಕಳುಸ್ತಾಳೆ. ಬಂದು ನೋಡ್ತಾನೆ, ಯಾರು ಇರಲ್ಲ. ಕೂಗ್ತಾನೆ ಯಾರು ಮಾತಾಡಲ್ಲ. ನಮ್ಮತ್ತೆ ಹೊಟ್ಟೆ ಅಸ್ಕಂಡಿ ಮನ್ಗೋಗಿರಬೇಕಂತ ಮನ್ಗೆ ಬರ್‍ತೀರ್‍ತನೆ.

ಅಲ್ಲಿಗೆ ಈ ತ್ರಿಮೂರ್ತಿಗಳು ಜಂಗಮರ ವೇಷ ಹಾಕ್ಕಂಡು ಇವುನ ಮನೆ ಹತ್ರ ಭಿಕ್ಷೆ ಬೇಡಾಕೆ ಬಂದಿರ್ತಾರೆ. ಶಿವ ಶಿವ ಕೋರಾಣ್ಕೆ ಭಿಕ್ಷ ಅಂದ್ರು. ಎಷ್ಟೋತ್ತಾದ್ರೂ ತರಲಿಲ್ಲ. 'ಓ–ಹೋ–ಇದೇ ಕಾಣ್ರೋ, ಕೆರೆ ಹಿಂದೆ ಕತ್ತೆ ಆಗಿರೊ ಅಜ್ಜಿ ಮನೆ" ಅಂತ ಗಟ್ಟಿಯಾಗಿ ಮಾತಾಡ್ತ ಇದ್ರು. ಅಷ್ಟೊತ್ತಿಗೆ ಹೊಲಕ್ಕೆ ಬುತ್ತಿ ತಗಂಡು ಹೋದನು, ಬಂದು ಇವ್ರ ಮಾತು ಕೇಳ್ಕಂಡ.

ಇವ್ರುಗೆ ಭಿಕ್ಷೆ ನೀಡ್ದ ಮೇಲೆ, ಇಬ್ರು ಮಾತಾಡ್ಕಂ ನಿಜವಿರಬಹುದೆ ಅಂತ ಕೆರೆ ಹಿಂದ್ಕೆ ನೋಡಾಕೆ ಹೋಗ್ತರೆ. ಹೋದು ಕೂಡ್ಲೆ; ಕತ್ತೆ, ಮಗ್ಳನ ನೋಡಿ ಕಣ್ಣೀರು ಸುರಿಸುತ್ತೆ; ಮಗ್ಳಗೆ ಗೊತ್ತಾಗಿ ಬಿಡ್ತು. ಇದು ನಮ್ದು ಕತ್ತೆ ಅಂತ ಹಿಡಿಯಾಕೆ ಹೋಗ್ತಾಳೆ. ಅಗಸ್ರನು ನನ್ನ ಕತ್ತೆ ಅಂತ ಹೇಳ್ತನೆ. ಕೊನ್ಗೇ ಇವ್ನು ಇರ್‍ಲಿ, ಬಾರೆ ಅಂತ ಕರೆದು "ನೀನು ನಮ್ಮಮ್ಮಗೆ ಮಾಡ್ದ ಅನ್ಯಾಯದಿಂದ ನಿಮ್ಮಮ್ಮ ಕತ್ತೆ ಆದ್ಲು. ಅಂದು ಮನ್ಗೆ ಬರ್ತಾರೆ.

■

# ವಿಕ್ಕಿಪೀಡಿಯ ಎಂದರೇನು?

– ಯು. ಬಿ. ಪವನಜ

ಕನ್ನಡ ಉಳಿಯಬೇಕಾದರೆ ಕನ್ನಡ ಬಳಸಬೇಕು. ಇದು ಎಲ್ಲರೂ ಒಪ್ಪುವ ಮಾತು. ಕನ್ನಡ ಬಳಸುವುದೆಂದರೆ ದಿನನಿತ್ಯದ ವ್ಯವಹಾರಗಳಲ್ಲಿ ಕನ್ನಡ ಬಳಸುವುದು. ಕನ್ನಡ ಭಾಷೆಯ ಶ್ರೀಮಂತಿಗೆ ಬಗ್ಗೆ ಭಾಷಣ ಬಿಗಿದು ಮೇಜು ಕುಟ್ಟುವುದರಿಂದ ಕನ್ನಡ ಉಳಿಯುವುದಿಲ್ಲ. ಅದು ಉಳಿಯಬೇಕಾದರೆ ಜನಸಾಮಾನ್ಯರು ಅದನ್ನು ಬಳಸಬೇಕು. ಜನಸಾಮಾನ್ಯರಿಗೆ ಪ್ರಮುಖವಾಗಿ ಬೇಕಾದುದು ಸಾಹಿತಿಗಳು ಬೆನ್ನುತಟ್ಟಿಕೊಳ್ಳುವ ಸೃಜನಶಿಲ (ಕಥನ) ಸಾಹಿತ್ಯವಲ್ಲ. ಅದು ಬೇಡ ಎಂದಲ್ಲ. ಆದರೆ ಜನಸಾಮಾನ್ಯರಿಗೆ ಅತೀ ಅಗತ್ಯವಾಗಿ ಬೇಕಾದುದು ಮಾಹಿತಿ ಸಾಹಿತ್ಯ. ಒಬ್ಬಾತನಿಗೆ ಹೊಚ್ಚಹೊಸ ನಮೂನೆಯ ಪ್ಲಾಸ್ಮಾ, ಎಲ್‌ಸಿಡಿ ಅಥವಾ ಎಲ್‌ಇಡಿ ಟಿವಿ ಖರೀದಿಸಬೇಕಾಗಿದೆ ಎಂದಿಟ್ಟುಕೊಳ್ಳಿ. ಆತನಿಗೆ ಇವುಗಳ ವ್ಯತ್ಯಾಸ ಗೊತ್ತಿರಬೇಕು, ತನ್ನ ಅಗತ್ಯ ಮತ್ತು ಮಿತಿಯೊಳಗೆ ಯಾವುದು ಉತ್ತಮ ಎಂದು ತಿಳಿಯಬೇಕು. ಆತ ಇದನ್ನು ಕನ್ನಡದಲ್ಲಿ ತಿಳಿಯುವ ಬಗೆ ಹೇಗೆ? ಇದಕ್ಕೆ ಬೇಕು ಒಂದು ವಿಶ್ವಕೋಶ.

ಈಗ ಇನ್ನೊಂದು ವಿಷಯದ ಕಡೆ ಗಮನಹರಿಸೋಣ. ಈಗ ಇಂಗ್ಲಿಶ್ ಮಾಧ್ಯಮ ಮತ್ತು ಕನ್ನಡ ಮಾಧ್ಯಮ ಬಗ್ಗೆ ತೀವ್ರ ಚರ್ಚೆ ನಡೆಯುತ್ತಿದೆ. ಕನ್ನಡ ಮಾಧ್ಯಮದಲ್ಲಿ ಕಲಿತರೆ ನಮ್ಮ ಮಕ್ಕಳಿಗೆ ಪ್ರಪಂಚ ಜ್ಞಾನ ದೊರೆಯುವುದಿಲ್ಲ. ಆದುದರಿಂದ ನಮ್ಮ ಮಕ್ಕಳನ್ನು ಇಂಗ್ಲಿಶ್ ಮಾಧ್ಯಮದಲ್ಲಿ ಕಲಿಸುತ್ತೇವೆ ಎಂದು ಹೆಚ್ಚಿನ ತಂದೆತಾಯಂದಿರು ಹೇಳುತ್ತಾರೆ. ಕನ್ನಡ ಭಾಷೆಯಲ್ಲಿ ಪ್ರಪಂಚ ಜ್ಞಾನದ ಲಭ್ಯತೆ ತುಂಬ ಕಡಿಮೆ ಎಂಬುದನ್ನು ನಾವು ಒಪ್ಪಲೇ ಬೇಕು. ಆದರೆ ಈ ಸಮಸ್ಯೆಗೆ ಪರಿಹಾರ ಇಂಗ್ಲಿಶ್ ಭಾಷೆಯ ಮೊರೆ ಹೋಗುವುದಲ್ಲ. ಕನ್ನಡ ಭಾಷೆಯಲ್ಲಿ ಪ್ರಪಂಚ ಜ್ಞಾನವನ್ನು ತರುವುದು. ಈ ರೀತಿ ಮಾಡಲು ಸಹಾಯ ಮಾಡುವುದು ಅತಿ ಜನಪ್ರಿಯವಾಗಿರುವ ಸ್ವತಂತ್ರ ಮತ್ತು ಮುಕ್ತ ವಿಶ್ವಕೋಶ ಕನ್ನಡ ವಿಕಿಪೀಡಿಯ.

ವಿಕಿಪೀಡಿಯ ಒಂದು ಸ್ವತಂತ್ರ ಮತ್ತು ಮುಕ್ತ ವಿಶ್ವಕೋಶ. ಇದು 2001ರಲ್ಲಿ ಪ್ರಾರಂಭವಾಯಿತು. ಇದು ಜಗತ್ತಿನ 300ಕ್ಕಿಂತ ಹೆಚ್ಚು ಭಾಷೆಗಳಲ್ಲಿದೆ. ಇನ್ನೂ ಸುಮಾರು 300 ಭಾಷೆಯ ವಿಕಿಪೀಡಿಯಗಳು

ತಯಾರಿಯ ಹಂತದಲ್ಲಿವೆ. 24 ಭಾರತೀಯ ಭಾಷೆಗಳಲ್ಲೂ ವಿಕಿಪೀಡಿಯ ಲಭ್ಯ. ಅದರಲ್ಲಿ ಕನ್ನಡ, ತುಳು, ಕೊಂಕಣಿ ಭಾಷೆಗಳೂ ಸೇರಿವೆ. ಕನ್ನಡ ವಿಕಿಪೀಡಿಯ 2003ರಲ್ಲಿ ಪ್ರಾರಂಭವಾಯಿತು.

ಎಲ್ಲ ವಿಕಿಪೀಡಿಯಗಳಂತೆ ಕನ್ನಡ ವಿಕಿಪೀಡಿಯವೂ ಜನರಿಂದ ಜನರಿಗಾಗಿ ಜನರೇ ನಡೆಸುವ ಒಂದು ಮುಕ್ತ ಮತ್ತು ಸ್ವತಂತ್ರ ವಿಶ್ವಕೋಶ. ಇದಕ್ಕೆ ಯಾರು ಬೇಕಾದರೂ ಸಂಪಾದಕರಾಗಿ ಲೇಖನ ಸೇರಿಸಬಹುದು, ಇರುವ ಲೇಖನ ತಿದ್ದಬಹುದು. ಇನ್ನೊಬ್ಬರು ಬರೆದ ಲೇಖನದಲ್ಲಿ ಏನಾದರೂ ತಪ್ಪುಗಳು ಕಂಡುಬಂದರೆ ಅಥವಾ ಮಾಹಿತಿಯ ಕೊರತೆ ಇದ್ದಲ್ಲಿ ಆ ಮಾಹಿತಿ ನಿಮ್ಮಲ್ಲಿ ಇದ್ದಲ್ಲಿ ಅದನ್ನು ನೀವೇ ತಿದ್ದಬಹುದು ಮತ್ತು ಹೆಚ್ಚಿನ ಮಾಹಿತಿ ಸೇರಿಸಬಹುದು. ನಿಮಗೆ ಒಂದು ವಿಷಯದ ಬಗ್ಗೆ ಚೆನ್ನಾಗಿ ತಿಳಿದಿದೆ ಮತ್ತು ಆ ವಿಷಯದ ಬಗ್ಗೆ ವಿಕಿಪೀಡಿಯದಲ್ಲಿ ಲೇಖನ ಇಲ್ಲ ಎಂದಾದಲ್ಲಿ ಆ ಬಗ್ಗೆ ಒಂದು ಹೊಸ ಲೇಖನವನ್ನು ನೀವೇ ಸೇರಿಸಬಹುದು. ನಿಮ್ಮ ಲೇಖನ ಯಾರೋ ಒಬ್ಬರು ಒಪ್ಪಿದ ನಂತರ ಅದು ಪ್ರಕಟವಾಗುವ ಪರಿಪಾಠ ಇಲ್ಲಿಲ್ಲ. ನೀವು ಲೇಖನ ಬರೆದು "ಪುಟವನ್ನು ಉಳಿಸಿ" ಎಂಬುದರ ಮೇಲೆ ಕ್ಲಿಕ್ ಮಾಡಿದರೆ ನಿಮ್ಮ ಲೇಖನ ಕನ್ನಡ ವಿಕಿಪೀಡಿಯಕ್ಕೆ ಸೇರ್ಪಡೆಯಾಗುತ್ತದೆ. ಪ್ರಪಂಚದಾದ್ಯಂತ ಹಬ್ಬಿರುವ ಕನ್ನಡಿಗರಿಗೆ ಅದು ಕ್ಷಣಮಾತ್ರದಲ್ಲಿ ದೊರೆಯುವಂತಾಗುತ್ತದೆ.

ವಿಕಿಪೀಡಿಯ ನಾನ್ ಪ್ರಾಫಿಟ್ ಸಂಸ್ಥೆಯಾದ ವಿಕಿಮೀಡಿಯ ಫೌಂಡೇಶನ್‌ನ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತ್ತಿದೆ. ಇದು ಸರಕಾರಿ ಸಂಸ್ಥೆಯಲ್ಲ, ಸರಕಾರದಿಂದ ಯಾವುದೇ ರೀತಿಯ ಅನುದಾನವನ್ನು ಪಡೆಯುತ್ತಿಲ್ಲ. ಈ ಯೋಜನೆಗೆ ಆವಶ್ಯಕವಾದ ಬಂಡವಾಳವನ್ನು ವಿಕಿಪೀಡಿಯದ ಸಾಮಾನ್ಯ ಬಳಕೆದಾರರಿಂದ ದೇಣಿಗೆಯ ರೂಪದಲ್ಲಿ ಸಂಗ್ರಹಿಸಲಾಗಿದೆ. ವಿಕಿಪೀಡಿಯ ನಡೆಸಲು ನೀವೂ ಧನಸಹಾಯ ನೀಡಬಹುದು. ಇಂದು ವಿಕಿಪೀಡಿಯ ಇಷ್ಟು ಜನಪ್ರಿಯವಾಗಿರುವ ಕಾರಣ ಕೆಲವು ಸರಕಾರಿ ಹಾಗೂ ಕಾರ್ಪೋರೇಟ್ ಸಂಸ್ಥೆಗಳು ಕೂಡ ಧನ ಸಹಾಯ ನೀಡಲು ಮುಂದಾಗಿವೆ.

ವಿಕಿಪೀಡಿಯದಲ್ಲಿ ಮಾಹಿತಿಯನ್ನು ಸೇರಿಸುವುದಕ್ಕೆ ನಾವು ತಜ್ಞರು ಆಗಿರಬೇಕು ಎನ್ನುವ ಒಂದು ತಪ್ಪು ಕಲ್ಪನೆ ತುಂಬ ಜನರಲ್ಲಿದೆ. ಇದು

ಸರಿಯಲ್ಲ. ವಿಕಿಪೀಡಿಯದಲ್ಲಿ ಬರೆಯುವುದಕ್ಕೆ ನೀವು ತಜ್ಞರು ಆಗಿರಬೇಕು ಎಂಬ ಕಟ್ಟಳೆಯಿಲ್ಲ. ವಾಸ್ತವವಾಗಿ ವಿಕಿಪೀಡಿಯದ ಯಾವುದೇ ಬರಹ ಒಬ್ಬನೇ ಲೇಖಕ ಬರೆದುದಲ್ಲ. ಬೇರೆ ಬೇರೆ ದೇಶ, ಹಿನ್ನೆಲೆಗಳ ಅನೇಕ ಮಂದಿಯ ಸಹಕಾರದಲ್ಲಿ ಪ್ರತಿಯೊಂದು ಪುಟವೂ ರೂಪುಗೊಳ್ಳುತ್ತದೆ. ವಿಕಿಪೀಡಿಯ ಒಂದು ಸಹಯೋಗಿ ವಿಶ್ವಕೋಶ. ನಿಮಗೆ ತಿಳಿದಷ್ಟು ನೀವು ಸೇರಿಸಿ. ನೀವು ಬಿಟ್ಟಿರುವುದನ್ನು ವಿಷಯ ತಿಳಿದ ಬೇರೆ ಯಾರಾದರು ಸೇರಿಸುತ್ತಾರೆ.

ಕನ್ನಡ ವಿಕಿಪೀಡಿಯದಲ್ಲಿ ಬರೆಯುವುದರಿಂದ ಯಾವುದೇ ಆರ್ಥಿಕ ಲಾಭವಿಲ್ಲ. ಲೇಖಕರ ಹೆಸರನ್ನೂ ಲೇಖನದ ಕೆಳಗೆ ಬರೆಯುವ ಪರಿಪಾಠವಿಲ್ಲ. ವಿಕಿಪೀಡಿಯದಲ್ಲಿ ಬರೆಯುವುದೆಂದರೆ ನಿಜವಾದ ಸ್ವಾರ್ಥರಹಿತ ಸಮಾಜಸೇವೆ. ನಮ್ಮ ಭಾಷೆಯ ಉಳಿವಿಗೆ ಇದು ಅತೀ ಅಗತ್ಯ. ಆದುದರಿಂದ ಇಂದೇ ಕೀಲಿಮಣೆ ಮೇಲೆ ಕುಟ್ಟಿ – kn.wikipedia.org.

■

# ಅಯ್ಯೋ ಗಣೇಶ

– ಎಚ್. ನರಸಿಂಹಯ್ಯ

ಸನ್ಮಾನ್ಯ ಶ್ರೀ ಗಣೇಶನಿಗೆ,

ನರಸಿಂಹಯ್ಯನು ಮಾಡುವ ಸಾಷ್ಟಾಂಗ ನಮಸ್ಕಾರಗಳು. ನಾನು ಕ್ಷೇಮ. ನೀನೂ ಕ್ಷೇಮವಾಗಿದ್ದೀಯ ಎಂದು ನಂಬಿದ್ದೇನೆ.

ಈ ಕಾಗದವನ್ನು ಕೆಲವು ವರ್ಷಗಳ ಹಿಂದೆಯೇ ಬರೆಯಬೇಕಾಗಿತ್ತು. ಪ್ರತಿವರ್ಷ ಈ ಸಮಯಕ್ಕೆ ಕಾಗದ ಬರೆಯಬೇಕು ಅಂತ ಅನಿಸುತ್ತಿತ್ತು. ಆದರೆ ಕಾರಣಾಂತರದಿಂದ ಕಾಗದ ಬರೆಯುವುದನ್ನು ಮುಂದೆ ಹಾಕುತ್ತಾ ಬಂದೆ.

ನಿನಗಾಗುತ್ತಿರುವ ಅವಮಾನವನ್ನು ನೋಡಿ ನೋಡಿ ನನಗೆ ತುಂಬಾ ವ್ಯಥೆಯಾಗಿದೆ. ನಿನ್ನ ಚತುರ್ಥಿ ಸಂದರ್ಭದಲ್ಲಿ ನಿನ್ನ ಉತ್ಸವ ಬೀದಿಗೊಂದು, ಕೇರಿಗೊಂದು ಮೊದಲಾಗುತ್ತದೆ. ನಿನ್ನ ಪೀಠ ರಸ್ತೆಯ ಮಧ್ಯೆ. ಇದರಿಂದ ನೂರಾರು ಜನರಿಗೆ ಅನಾನುಕೂಲ. ನಿನ್ನ ಹಬ್ಬಕ್ಕೆ 15–20 ದಿನಗಳು ಮುಂಚೆಯೇ ನಿನ್ನ ಹೆಸರಿನಲ್ಲಿ ನಿನ್ನ 'ಭಕ್ತರು' ಗೋಲಕಗಳನ್ನು ಹಿಡಿದು ಕಾಣಿಕೆ ವಸೂಲು ಮಾಡುತ್ತಾರೆ. ಆ ಕಾಣಿಕೆ ಎಲ್ಲಿಗೆ ಹೋಗುತ್ತದೆ ಅನ್ನುವುದು ನಿನಗೂ ಗೊತ್ತಿಲ್ಲ. ನಿನ್ನನ್ನು ಪೂಜಿಸುವ ವಿಧಾನವಂತೂ ನನ್ನ ಮನಸ್ಸಿಗೆ ತುಂಬಾ ಯಾತನೆ ಕೊಟ್ಟಿದೆ. ನಿನ್ನ ಮುಂದೆ ಯಾವುದೋ ಸಿನಿಮಾ ಸಂಗೀತ ಹಾಕ್ತಾರೆ. ಅಸಹ್ಯವಾಗಿ ಕುಣೀತಾರೆ. ನಿನ್ನನ್ನು ವಿಸರ್ಜಿಸುವ ವಿಧಾನ ಕಂಡು ನಾನು ಮರುಕ ಪಟ್ಟಿದ್ದೇನೆ. ನಿನ್ನ ಬಹುವಿಗ್ರಹಗಳಿಗೆ ಲಾಲ್‌ಬಾಗ್ ಕೆರೆಯಲ್ಲಿ ಜಲಸಮಾಧಿ. ಆ ಕೆರೆಯ ನೀರೆಲ್ಲಾ ಗಬ್ಬು ಕೊಳಚೆ ನೀರು ಮುಟ್ಟುವುದಕ್ಕೂ ಆಗುವುದಿಲ್ಲ. ಅಂತಹ ನೀರಿನಲ್ಲಿ ನಿನಗೆ ವಾರ್ಷಿಕ ಮೋಕ್ಷ.

ಅಲ್ಲದೆ ನಿನ್ನ ಹೆಸರಿನ ದುರುಪಯೋಗಕ್ಕಂತೂ ಕೊನೆಯೇ ಇಲ್ಲ. ನಿನ್ನ ಹೆಸರಿನಲ್ಲಿ ಬೀಡಿಗಳಿವೆ, ಹೋಟೆಲುಗಳಿವೆ. ಇನ್ನೂ ಯಾವುದಕ್ಕೋ ನಿನ್ನ ಹೆಸರು ಇಟ್ಟಿದ್ದಾರೆ, ಈ ಬೀಡಿಗಳ ಜಾಹೀರಾತಿಗೆ ನಿನ್ನ ಚಿತ್ರವೇ ಗುರುತು. ಸದ್ಯ ನಿನ್ನ ಬಾಯಿಯಲ್ಲಿ ಬೀಡಿ ಇಟ್ಟು ಸೇದುವುದನ್ನು ತೋರಿಸಿಲ್ಲ. ನಿನ್ನ ಬಾಯಿ ಸೊಂಡಿಲ ಕೆಳಗೆ ಇರುವುದರಿಂದ ನೀನು ಬೀಡಿ ಸೇದುವುದನ್ನು ತೋರಿಸಲು ಆಗುವುದಿಲ್ಲ. ಆಗುವ ಹಾಗಿದ್ದರೆ, ಅದನ್ನೂ ಮಾಡುತ್ತಿದ್ದರು

ಅಂತ ಕಾಣುತ್ತೆ. ಈ ಸಹಿಸಲಾರದ ಅವಮಾನಗಳನ್ನೆಲ್ಲಾ ನಿನಗೆ ಸದಾ ಮಾಡುತ್ತಿರುವವರೆಲ್ಲಾ ನಿನ್ನ 'ಭಕ್ತರೆ'.

ಇನ್ನೊಂದು ವಿಷಯ. ನಿನ್ನ ವಿದ್ಯಾರ್ಥಿ 'ಭಕ್ತರು' ನಿನ್ನನ್ನು ಜ್ಞಾಪಿಸಿ ಕೊಳ್ಳುವುದು ಪರೀಕ್ಷೆ ಸಮಯದಲ್ಲಿ. ಆ ಕಾಲದಲ್ಲಿ ನಿನ್ನ ದೇವಸ್ಥಾನಗಳೆಲ್ಲಾ ವಿದ್ಯಾರ್ಥಿಗಳಿಂದ ತುಂಬಿ ತುಳುಕಿ ಹೋಗಿರುತ್ತದೆ. ಫುಟ್‌ಪಾತ್‌ನಲ್ಲೂ ಸಾಕಷ್ಟು ವಿದ್ಯಾರ್ಥಿಗಳು ಭಯಭಕ್ತಿಯಿಂದ ಕಣ್ಣು ಮುಚ್ಚಿಕೊಂಡು ನಿಂತು ನಿನ್ನ ಸಹಾಯವನ್ನು ಅಂಗಲಾಚಿ ಬೇಡುತ್ತಾರೆ. ಕೆಲವರಂತೂ ಕಣ್ಣೇ ಬಿಡುವುದಿಲ್ಲ. ಏಕೆಂದರೆ ಅವರು ಓದೇ ಇಲ್ಲ. ಓದು ಮತ್ತು ಆತ್ಮವಿಶ್ವಾಸ ಕಡಿಮೆ ಆದಷ್ಟೂ ನಿನ್ನ ಮೇಲೆ 'ಭಕ್ತಿ' ಜಾಸ್ತಿಯಾಗುತ್ತದೆ.

ನಾನು ತುಂಬಾ ಬಡತನದಿಂದ ಬಂದವನು. ನಾನು ಎಂದೂ ನಿನ್ನನ್ನು ಪರೀಕ್ಷೆಯಲ್ಲಿ ಪಾಸ್ ಮಾಡಿಸು ಎಂದು ಕೇಳಿಕೊಂಡಿಲ್ಲ. ಆದರೂ ನಾನು ಎಲ್ಲಾ ಪರೀಕ್ಷೆಗಳನ್ನು ಉನ್ನತ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದೇನೆ. ಜಂಭದಿಂದ ಈ ಮಾತನ್ನು ಆಡುತ್ತಿದ್ದೇನೆಂದು ತಪ್ಪು ತಿಳಿದುಕೊಳ್ಳಬೇಡ. ಪರೀಕ್ಷೆಯಲ್ಲಿ ಪಾಸಾಗುವುದು ನನ್ನ ಕೆಲಸ, ಅದಕ್ಕಾಗಿ ಪ್ರಯತ್ನಿಸುವುದು ನನ್ನ ಕರ್ತವ್ಯ. ನಿನಗೂ ಅದಕ್ಕೂ ಏನು ಸಂಬಂಧ? ನಿನ್ನ ಕಾಲದ ವಿದ್ಯಾಭ್ಯಾಸಕ್ಕೂ ಈಗಿನ ಕಾಲದ ವಿದ್ಯಾಭ್ಯಾಸಕ್ಕೂ ಅಜಗಜಾಂತರ ವ್ಯತ್ಯಾಸ. ಈಗ ಶಿಕ್ಷಣ ಕ್ಷೇತ್ರವೇ ತುಂಬಾ ಕ್ಲಿಷ್ಟ, ಗೊಂದಲಮಯ. ಜೊತೆಗೆ ನಿನಗೆ ಬಂದ ಕಷ್ಟಗಳಿಂದ, ಅವಮಾನಗಳಿಂದ ನೀನು ಬಿಡಿಸಿಕೊಳ್ಳಲು ಸಾಧ್ಯವಾಗಿಲ್ಲ. ಆದ್ದರಿಂದ ಇನ್ನೊಬ್ಬರ ಕಷ್ಟಗಳನ್ನು ನಿನ್ನಿಂದ ಪರಿಹರಿಸಲು ಸಾಧ್ಯವಿಲ್ಲವೆಂದು ನನ್ನ ಭಾವನೆ. ನಿನ್ನ ಇತಿಮಿತಿಗಳನ್ನು, ಅಸಹಾಯಕತೆಯನ್ನು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ ನಿನ್ನ ಸಹಾಯವನ್ನು ನಾನು ಬೇಡಿಲ್ಲ. ಹೀಗೆಲ್ಲಾ ಬರೆದ ತಕ್ಷಣ ಕೆಲವರು ನನ್ನನ್ನು ಧರ್ಮ ವಿರೋಧಿ, ದೇವರನ್ನು ಅವಹೇಳನ ಮಾಡುವ, ನಾಸ್ತಿಕ ಎಂದು ಆಪಾದಿಸುತ್ತಾರೆ. ನಾನು ಇದಾವುದೂ ಅಲ್ಲ. ನನಗೆ ವಿದ್ಯಾಸಂಸ್ಥೆಗಳು, ಆಸ್ಪತ್ರೆಗಳು, ಅನಾಥಾಲಯದಂತಹ ಸಂಸ್ಥೆಗಳೇ ದೇವಾಲಯಗಳು. ಕಾಯಕವೇ ಕೈಲಾಸ. ಕೆಲಸವೇ ಪೂಜೆ, ಪ್ರಾಮಾಣಿಕತೆ, ಕರ್ತವ್ಯ ಪಾಲನೆ, ಸಮಾಜ ಸೇವೆಯೇ ನನ್ನ ಧರ್ಮ. ಮೂಢನಂಬಿಕೆಗಳನ್ನು ಅರ್ಥವಿಲ್ಲದ ಆಚರಣೆಗಳನ್ನು ಖಂಡಿಸಿದರೆ ನಾನು ನಾಸ್ತಿಕ ಎಂದು ಅಪಪ್ರಚಾರ ಮಾಡುತ್ತಾರೆ. ನಾನು ಹುಟ್ಟುವುದಕ್ಕಿಂತ ಶತಶತಮಾನಗಳ ಹಿಂದೆಯೇ ದೇವರು

ಎಲ್ಲಾ ಕಡೆ ಇದ್ದಾನೆಂಬುದನ್ನು ಸ್ಥಿರಪಡಿಸಲು ನನ್ನ ಭಕ್ತ ಪ್ರಹ್ಲಾದನ ಕೋರಿಕೆಯಂತೆ ನಾನೇ ಕಂಭದಿಂದ ಹೊರಬಂದೆ. ಜೊತೆಗೆ 'ಅಹಂ ಬ್ರಹ್ಮಾಸ್ಮಿ' ಎಂಬ ಶಂಕರಾಚಾರ್ಯರ ಉಕ್ತಿಯನ್ನು ನಾನು ಒಪ್ಪುತ್ತೇನೆ, ನಾವೇ ದೇವರು. ಪ್ರತಿಯೊಬ್ಬ ಮನುಷ್ಯನೂ ದೇವರು. ಆದ್ದರಿಂದ ಜನಸೇವೆಯೇ ಜನಾರ್ದನ ಸೇವೆ. ತನ್ನಲ್ಲಿ ತನಗೆ ವಿಶ್ವಾಸವಿಲ್ಲದವನೇ ನಾಸ್ತಿಕ ಎಂದು ಸ್ವಾಮಿ ವಿವೇಕಾನಂದರು ಹೇಳಿದರು. ಇದೊಂದು ತುಂಬಾ ಅರ್ಥಪೂರ್ಣ ಹೇಳಿಕೆ. ನಮ್ಮ ದೇಶದಲ್ಲಿ ಇಂತಹ ಆತ್ಮವಿಶ್ವಾಸವಿಲ್ಲದ ನಾಸ್ತಿಕರು ಅಪಾರ.

ನಮ್ಮಲ್ಲಿ ದೇವರು ಮತ್ತು ತತ್ಸಂಬಂಧವಾದ ವಿಷಯಗಳ ಬಗ್ಗೆ ತುಂಬಾ ಬೊಗಳೆ ಬಿಡುತ್ತಾರೆ. ನೋಡಿದವರಿಗಿಂತ ಹೆಚ್ಚಾಗಿ ಮಾತನಾಡುತ್ತಾರೆ. ಒಂದು ಕಥೆ ಹೇಳ್ತೀನಿ ಕೇಳು. ಒಬ್ಬ ಧರ್ಮ ಪ್ರಚಾರಕ ಒಂದು ಊರಿಗೆ ಧರ್ಮ ಪ್ರಚಾರ ಮಾಡಲು ಹೋದನಂತೆ. ಅವನಲ್ಲಿದ್ದ ಒಂದು ಕಾರ್ಡನ್ನು ಪೋಸ್ಟ್ ಮಾಡಬೇಕಾಗಿತ್ತು. ಆದುದರಿಂದ ದಾರಿಯಲ್ಲಿ ಒಬ್ಬ ಯುವಕನನ್ನು ಆ ಊರಿನ ಪೋಸ್ಟಾಫಿಸಿಗೆ ದಾರಿ ಯಾವುದು ಎಂದು ಕೇಳಿದ. ಆ ಯುವಕ ಸೂಕ್ತವಾದ ಮಾರ್ಗದರ್ಶನ ಕೊಟ್ಟ. ಆ ಧರ್ಮ ಪ್ರಚಾರಕ ಹುಡುಗನಿಗೆ ಥ್ಯಾಂಕ್ಸ್ ಹೇಳಿ ಸಂಜೆ ಇದೇ ಊರಿನಲ್ಲಿ ತನ್ನ ಉಪನ್ಯಾಸಕ್ಕೆ ಬಾ ಎಂದು ಆಹ್ವಾನಿಸಿದ. ಯಾವ ವಿಷಯದ ಬಗ್ಗೆ ನೀವು ಉಪನ್ಯಾಸ ಮಾಡುತ್ತೀರಿ ಎಂದು ಕೇಳಿದಾಗ "ಸ್ವರ್ಗಕ್ಕೆ ದಾರಿ ಯಾವುದು?" ಎಂಬುದು ಉಪನ್ಯಾಸದ ವಿಷಯ ಎಂದ. ಅದಕ್ಕೆ ಆ ಯುವಕ "ನಮ್ಮೂರು ಪೋಸ್ಟಾಫಿಸಿಗೆ ನಿಮಗೆ ದಾರಿ ಗೊತ್ತಿಲ್ಲ, ನೀವು ಸ್ವರ್ಗಕ್ಕೆ ಹೇಗೆ ದಾರಿ ತೋರಿಸುತ್ತೀರಿ" ಎಂದು ಹೇಳಿ ಹೊರಟುಹೋದ. ನಮ್ಮ ಧರ್ಮ ಪ್ರಚಾರಕರೆಲ್ಲಾ ಇಂತಹವರೇ. ಕಾಣ ತಾಳೆಗೆ, ಪ್ರಯೋಗಕ್ಕೆ ಸಿಗದಿರುವ ವಿಷಯಗಳ ಬಗ್ಗೆ ಬಾಯಿಗೆ ಬಂದದ್ದನ್ನೆಲ್ಲಾ ಮಾತನಾಡಬಹುದು.

ನಿನ್ನ ಉತ್ಸವಗಳೆಲ್ಲಾ ಧರ್ಮ ಹೆಸರಿನಲ್ಲಿಯೇ ಆಗುತ್ತಿವೆ. ನಮ್ಮದು ಧರ್ಮ ಭೂಮಿ, ಪುಣ್ಯ ಭೂಮಿ ಎಂದು ಹೇಳಿದಾಗಲೆಲ್ಲಾ ನನಗೆ ಮೈ ಉರಿದುಹೋಗುತ್ತದೆ. ಜಾತಿ ಪದ್ಧತಿಯಂತಹ ಅನಿಷ್ಟ–ಅಯೋಗ್ಯ ವ್ಯವಸ್ಥೆಗೆ ನಮ್ಮ ದೇಶದ ಮೂಲ ಮತ್ತು ಏಕೈಕ ಆಶ್ರಯ ಸ್ಥಾನ. ನಮ್ಮ ದೇಶದ ಬಿಡಿಸಲಾರದ ಅತಾರ್ಕಿಕ ಸಾಮಾಜಿಕ, ಸಮಸ್ಯೆಗಳೆಲ್ಲಾ ಧರ್ಮ ಮತ್ತು ಜಾತಿಗೆ ಸಂಬಂಧಿಸಿದವು. ಜಾತಿ ಇದ್ದ ಕಡೆ ಧರ್ಮ ಇಲ್ಲ. ನಮ್ಮ ದೇಶದಲ್ಲಿದ್ದಷ್ಟು

ಲಂಚ, ಮೋಸ, ಸ್ವಾರ್ಥ, ಬಡತನ, ಅಮಾನವೀಯತೆ, ನೋವು ಪ್ರಪಂಚದ ಇನ್ನಾವ ದೇಶದಲ್ಲಿಯೂ ಇಲ್ಲ. ಆದರೂ ನಮ್ಮದು ಧರ್ಮಭೂಮಿ, ಪುಣ್ಯಭೂಮಿ ಇರಬಹುದು ಕೆಲವು ಪಟ್ಟಭದ್ರ ಹಿತಗಳಿಂದ ಕೂಡಿರುವವರಿಗೆ.

ನಿನ್ನ ಮೇಲೆ ನನಗೇನೂ ಆಕ್ಷೇಪಣೆ ಇಲ್ಲ; ನಿನಗೆ ಬಂದಿರುವ ಕಾಟವೆಲ್ಲಾ ನಿನ್ನ 'ಭಕ್ತ'ರಿಂದಲೇ. ಜನರಲ್ಲಿ ವೈಜ್ಞಾನಿಕ ಮನೋಭಾವ, ತಾರ್ಕಿಕ ಮನೋಭಾವ ಹೆಚ್ಚಿದಂತೆಲ್ಲಾ ನಿನಗೆ ಅವಮಾನ ಮಾಡುತ್ತಿರುವ 'ಭಕ್ತರ' ಸಂಖ್ಯೆ ಕಡಿಮೆ ಆಗುತ್ತದೆ. ಹಲವು ದಶಕಗಳಿಂದ ಈ ದಿಕ್ಕಿನಲ್ಲಿ ನಾನು ಸತತವಾಗಿ ಪ್ರಯತ್ನ ಮಾಡುತ್ತಿದ್ದೇನೆ. ಈ ದೃಷ್ಟಿಯಿಂದ ನಾನೇ ನಿನಗೆ ನಿಜವಾದ ಭಕ್ತ.

ಕಾಗದ ಉದ್ದವಾಯಿತು. ಕ್ಷಮಿಸು. ಆದರೆ ನಾನು ಬರೆದಿರುವುದೆಲ್ಲಾ ಸುಸಂಬದ್ಧ. ಸ್ವಲ್ಪ ಯೋಚಿಸು, ಗೊತ್ತಾಗುತ್ತೆ.

ವಿಶ್ವಾಸಪೂರ್ವಕವಾದ ವಂದನೆಗಳೊಂದಿಗೆ

ಇತಿ, ನಿನ್ನ ಶ್ರೇಯೋಭಿಲಾಷಿ

■

# 3ನೇ ಸೆಮಿಸ್ಟರ್ ಬಿ.ಬಿ.ಎ. (ಎನ್.ಇ.ಪಿ. 2022–23)

# ಪದವಿ ಪರೀಕ್ಷೆಯ ಮಾದರಿ ಪ್ರಶ್ನೆಪತ್ರಿಕೆ

# ಕನ್ನಡ ಭಾಷಾ ಪಠ್ಯ

## ನಿರ್ವಹಣಾ ಸೌರಭ – 3 (Freshers Scheme)

**ಸಮಯ : 2.30 ಗಂಟೆ** **ಗರಿಷ್ಠ ಅಂಕಗಳು : 60**

**I. ಯಾವುದಾದರೂ ಐದು ಪ್ರಶ್ನೆಗಳಿಗೆ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. 5x2=10**

1. ಮರಳುತನದ ಬಗ್ಗೆ ವಸುದೇವ ಭೂಪಾಲಂ ಅವರ ಅಭಿಪ್ರಾಯ.
2. ಮಿಲಿಟರಿಗೆ ಭರತೀ ಆಗುವ ಕುರಿತ ಭೀಮಣ್ಣನ ಭಯ ಎಂಥದ್ದು ತಿಳಿಸಿ.
3. ಮನುಧರ್ಮಶಾಸ್ತ್ರದ ಕುರಿತು ಕುವೆಂಪು ತಿಳಿಸುವ ವಿಚಾರ.
4. ಜಮೀಲ ಅಣ್ಣನಲ್ಲಿ ಇಟ್ಟ ಬೇಡಿಕೆ.
5. ಜನಪದ ಮಹಿಳೆ ತಿಳಿಸುವಂತೆ ಗಂಗಾದೇವಿ ಎನ್ನಲು ಅರ್ಹರಾದವರು.
6. 'ಮಸಾಲೆದೋಸೆ'ಯ ವಿಶೇಷತೆ.
7. ಅತ್ತೆಯನ್ನು ಪಸಂದಾಗಿಡಲು ಗಂಡನಿಗೆ ಹೇಳಿ ಸೊಸೆ ಮಾಡಿದ ವ್ಯವಸ್ಥೆ.
8. "ಕನ್ನಡ ಉಳಿಯಬೇಕಾದರೆ ಕನ್ನಡ ಬೆಳೆಸಬೇಕು" ಎಂಬ ಯು.ಬಿ. ಪವನಜ ಅವರ ಮಾತನ್ನು ವಿವರಿಸಿ.

**II. ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಹತ್ತು ವಾಕ್ಯಗಳಲ್ಲಿ ಉತ್ತರಿಸಿ. 4x5=20**

1. ಪೂರ್ಣಾಹುತಿ ಕಥೆಯಲ್ಲಿ ಚರ್ಚಿತವಾಗಿರುವ ತಲೆಮಾರುಗಳ ಸಂಘರ್ಷವನ್ನು ವಿವರಿಸಿ.
2. ನಮ್ಮೂರ ನಾಯಕರು ಪಠ್ಯದ ಹಿನ್ನೆಲೆಯಲ್ಲಿ ಸ್ವಾರ್ಥ ಶೋಷಣೆಗಳನ್ನು ವಿಮರ್ಶಿಸಿ.
3. 'ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?' ಕವಿತೆಯಲ್ಲಿನ ಮಾನವೀಯತೆ ಮತ್ತು ಜೀವಪರ ಗುಣಗಳನ್ನು ಚರ್ಚಿಸಿ.
4. 'ಬೆಂಕಿಮಳೆ' ಕಥೆಯ ಸ್ವಾರಸ್ಯವನ್ನು ಬರೆಯಿರಿ.
5. ಜನಪದ ಗೀತೆಯಲ್ಲಿ ಜನಪದರು ಭೂಮಿ, ತಾಯಿ, ಕುಟುಂಬ, ಕೆಲಸ ಇವುಗಳೊಂದಿಗೆ ಹೊಂದಿರುವ ಸಂಬಂಧದ ಸ್ವರೂಪವೆಂಥದ್ದು.
6. ವಿಕಿಪೀಡಿಯವನ್ನು ಪರಿಚಯಿಸಿ.

**III. ಯಾವುದಾದರೂ ಎರಡು ಪ್ರಶ್ನೆಗಳಿಗೆ ಎರಡು ಪುಟಗಳಷ್ಟು ಉತ್ತರಿಸಿ. 2x10=20**

1. ನಲವತ್ತೇಳರ ಸ್ವಾತಂತ್ರ್ಯದ ಬಗ್ಗೆ ಕವಿ ಸಿದ್ಧಲಿಂಗಯ್ಯನವರು ತಿಳಿಸುವುದೇನು?
2. 'ಭಗವದ್ಗೀತೆ ಹಾಗೂ ಅಪರಾಧ ಮತ್ತು ಶಿಕ್ಷೆ' ಲೇಖನದಲ್ಲಿ ಬಂದಿರುವ ಹೋಲಿಕೆ ಮತ್ತು ವ್ಯತ್ಯಾಸವನ್ನು ಕುರಿತು ಚರ್ಚಿಸಿ.
3. ಬಿಡುಗಡೆ ಕಥೆಯಲ್ಲಿನ ಸರೋಜಾಳ ಕನಸಿನ ಮತ್ತು ವಾಸ್ತವ ಗಂಡನ ಗುಣಸ್ವಭಾವಗಳನ್ನು ವಿವರಿಸಿ.
4. ವ್ಯಾಪಾರೀ ಕ್ಷೇತ್ರದಲ್ಲಿ ಕಾಣಿಸಿಕೊಳ್ಳುವ ನೈತಿಕ ಬಿಕ್ಕಟ್ಟನ್ನು ಕುರಿತು ಚರ್ಚಿಸಿ.

**IV. ಯಾವುದಾದರೂ ಎರಡು ಪ್ರಶ್ನೆಗಳಿಗೆ ಹತ್ತು ವಾಕ್ಯಗಳಲ್ಲಿ ಉತ್ತರಿಸಿ. 5x2=10**

1. ಮರೆಯಾಗುತ್ತಿರುವ ಸಾಮಾಜಿಕ ಹೊಣೆಗಾರಿಕೆಯನ್ನು ವಿವರಿಸಿ.
2. 'ದೇವರು ಬೇಡ, ಮಾನವೀಯತೆ ಬೇಕು' ಲೇಖನದಲ್ಲಿನ ವೈಚಾರಿಕ ನಿಲುವನ್ನು ಸ್ಪಷ್ಟಪಡಿಸಿ.
3. 'ಮುತ್ತುಗಳನ್ನು ಆಯ್ದು ಕೊಡಲೆ?' ಪಠ್ಯದ ಹಿನ್ನೆಲೆಯಲ್ಲಿ 'ಕರ್ಣ ಮತ್ತು ದುರ್ಯೋಧನರ ಮಾದರಿ ಸ್ನೇಹ'ದ ಬಗ್ಗೆ ವಿವರಿಸಿ.
4. ಎಚ್. ನರಸಿಂಹಯ್ಯನವರು ಗಣೇಶನಿಗೆ ಬರೆದ ಪತ್ರ.

* * *